ಸಂಕಲನ

ವರ್ಷ ೫

ನವಂಬರ್ + ಡಿಸೆಂಬರ್

೨೦೦೪

ಸಂಪಾದಕರು

೧೦

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನದ ಲೇಖಕರಿಗೆ + ಓದುಗರಿಗೆ ಕೆಲವು ಸೂಚನೆಗಳು

೧. ಲೇಖನಗಳ ಕೈಬರೆಹದ / ಟೈಪ್ ಮಾಡಿದ / ಡಿಟಿಪಿ ಮಾಡಿದ ಮೂಲ ಪ್ರತಿಗಳನ್ನೇ ಕಳಿಸಬೇಕು. ಝೆರಾಕ್ಸ್ ಪ್ರತಿ ಪರಿಶೀಲಿಸಲಾಗುವುದಿಲ್ಲ.

೨. ಲೇಖನಗಳು ಪ್ರಕಟಣೆಗೆ ಸ್ವೀಕೃತವಾದರೆ ಅವು ತಲುಪಿದ ೨ ತಿಂಗಳೊಳಗೆ ತಿಳಿಸಲಾಗುವುದು.

೩. ಸಂಕಲನದ ೧ ಸಂಚಿಕೆ ಪ್ರಕಟವಾಗುವಾಗ ಅದರ ಮುಂದಿನ ೩ ಸಂಚಿಕೆಗಳಿಗಾಗಿ ಆಯ್ದ ಲೇಖನಗಳು ಡಿಟಿಪಿ ಆಗಿ ಸಿದ್ಧವಾಗಿರುವುದರಿಂದ ಯಾವುದೇ ಹೊಸ ಲೇಖನ ಕನಿಷ್ಠ ನಾಲ್ಕಾರು ತಿಂಗಳ ನಂತರ ಪ್ರಕಟವಾಗುತ್ತದೆ. ಆದ್ದರಿಂದ ಲೇಖಕರು ಅನಗತ್ಯ ಕುತೂಹಲ ಅಥವಾ ಅವಸರ ತಳೆಯದಿರಲು ಕೋರಿಕೆ.

೪. ಉತ್ತರವನ್ನು ನಿರೀಕ್ಷಿಸಿ ಯಾರೂ ಸ್ವವಿಳಾಸದ ಲಕೋಟೆ ಅಥವಾ ಅಂಚೆಚೀಟಿ ಕಳಿಸುವುದು ಬೇಡ. ಕವಿತೆಗಳನ್ನು ಹೊರತುಪಡಿಸಿ ಅಸ್ವೀಕೃತ ಲೇಖನಗಳನ್ನು ಸಂಕಲನದ ವೆಚ್ಚದಲ್ಲಿಯೇ ಆಯಾ ಲೇಖಕರಿಗೆ ಮರಳಿಸಲಾಗುವುದು.

೫. **ಪರಿಶೀಲನೆಗೆ ಪುಸ್ತಕದ ೨ ಪ್ರತಿ ಕಳಿಸಿದರೆ ಮಾತ್ರ ಪರಿಗಣಿಸಲಾಗುವುದು.** ಎರಡು ಪ್ರತಿ ಸ್ವೀಕರಿಸಿದ ಮಾತ್ರಕ್ಕೆ ಅದರ ಪರಿಶೀಲನೆ ಮಾಡಿಸಲೇಬೇಕೆಂಬುದು ಸಂಕಲನಕ್ಕೆ ಬಂಧನಕಾರಿಯಲ್ಲ. ಒಮ್ಮೊಮ್ಮೆ ಪರಿಶೀಲಿತ ವಿಮರ್ಶಾಲೇಖನ ಪ್ರಕಟಣೆಗೆ ಸಿಗುವುದು ಅತಿ ವಿಳಂಬದ್ದೂ ಕಷ್ಟದ್ದೂ ಆಗಬಹುದಾಗಿದೆ.

೬. ಜನೆವರಿ, ಮಾರ್ಚ್, ಮೇ, ಜುಲಾಯಿ, ಸಪ್ಟಂಬರ್, ನವಂಬರ್ ತಿಂಗಳಲ್ಲಿ ಪ್ರಕಟವಾಗುವ ಸಂಚಿಕೆಗಳು ಸಕಾಲದಲ್ಲಿ ಚಂದಾಹಣ ಕೊಟ್ಟ ಎಲ್ಲರಿಗೂ ಸಾಮಾನ್ಯವಾಗಿ ಆಯಾ ತಿಂಗಳ ೧೦-೧೨ ನೇ ದಿನಾಂಕದೊಳಗಾಗಿ ತಲುಪುತ್ತವೆ.

೭. ಲೇಖಕರು ತಮ್ಮ ಒಳ್ಳೆಯ ಬರೆಹಗಳನ್ನು ಕಳಿಸುವುದರೊಂದಿಗೆ ತಮ್ಮ ಗಮನಕ್ಕೆ ಬರುವ ಹೊಸ ಲೇಖಕರ ಒಳ್ಳೆಯ ಲೇಖನಗಳನ್ನೂ ಸಂಕಲನಕ್ಕೆ ಕಳಿಸಲು ಪ್ರೇರೇಪಿಸಿರಿ.

೮. ಪ್ರಕಟವಾಗುವ ಪ್ರತಿಯೊಂದು ಲೇಖನಕ್ಕೆ ಸಾಂಕೇತಿಕ ಗೌರವಧನ ರೂ. ೧೦೦/- ಲೇಖನ ಪ್ರಕಟವಾದ ಎರಡು ವಾರದೊಳಗಾಗಿ ಕಳಿಸಲಾಗುವುದು.

ಸಂಕಲನ

ನವಂಬರ್ + ಡಿಸೆಂಬರ್ ೨೦೦೬

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC

SANKALANA :

A Kannada Literary Magazine

Volume 5, Issue 6 : November + December 2006

Edited by Dr. Siddhaling Pattanshetti

Hoomane, Shridevinagar, Vidyagiri, Dharwad - 580 004

Printed by Saraswati Offset Printers, Shivaji Road, Dharwad - 580 001

•

•

•

ಸಂಕಲನ - ೩೦

ಸಂಪುಟ ೫, ಸಂಚಿಕೆ ೬ : ನವಂಬರ್ + ಡಿಸೆಂಬರ್ ೨೦೦೬

ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

✆ : ೦೮೩೬-೨೪೬ ೨೭೧೮, ಮೊಬೈಲ್ : ೯೪೪೮೬ ೩೦೬೩೭, ೯೪೪೮೮ ೬೧೬೦೪

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)

೨೦೦೫, ೨೦೦೬, ೨೦೦೭ ಈ ೩ ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-)

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಕ್ರಾಸ್, ಜೋಶಿ ಫಾರ್ಮ್, ಧಾರವಾಡ - ೫೮೦ ೦೦೮

ಮೊಬೈಲ್ : ೯೯೮೦೩ ೮೧೮೬೯

ಸಂಕಲನ-೩೦ : ಪರಿವಿಡಿ

೧. ಒನ್ನೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೫

೨. ಮಹಾನಾಟಕ ರಂಗಸಂಗೀತ – ವಸಂತ ಕವಲಿ ೬-೧೩

೩. ಅಲೀ ಸರ್‌ದಾರ್ ಜಾಫ್‌ರೀಯವರ ಆರು ಕವಿತೆಗಳು – ವಿಭಾ ೧೩-೧೫

೪. ಹವಿಗನ್ನಡದ ಆರಂಭದ ಎರಡು ಕಾದಂಬರಿಗಳು – ಹರಿಕೃಷ್ಣ ಭರಣ್ಯ ೧೫-೨೦

೫. ಜಯಂತ ಕಾಯ್ಕಿಣಿಯವರ 'ಇದ್ದಾಗ ಇದ್ದಾಂಗ' – ಅನಂತ ಹುದೆಂಗಜೆ ೨೧-೨೪

೬. 'ಗೀತೆ'ಯಲ್ಲಿ ಪುನರ್ಜನ್ಮ : ಒಂದು ತಾತ್ತ್ವಿಕ ಜಿಜ್ಞಾಸೆ
– ಸಿ. ಸೋಮಶೇಖರಯ್ಯ ೨೫-೩೩

೭. ಹಣ್ಣೆಲೆ ಚಿಗುರಿದಾಗ – ಎಸ್. ಸೀತಾರಾಮು ೩೩-೩೫

೮. ಕುಂ. ವೀ. ಅವರ 'ಅರಮನೆ' – ಪ್ರಹ್ಲಾದ ಅಗಸನಕಟ್ಟೆ ೩೬-೪೨

೯. ನನ್ನ ಶಾಲಾ ಗುರುಗಳು : *ಗೌರವ-೧೩* – ಆರ್. ತಾರಿಣಿ ಶುಭದಾಯಿನಿ ೪೩-೫೦

೧೦. ನನ್ನ ಅವ್ವ, ನನ್ನ ಅಪ್ಪ : ಕೃತಜ್ಞತೆ - ೩೦ – ಕೆ. ಉಷಾ ಪಿ. ರೈ ೫೧-೬೩

೧೧. ಪುಸ್ತಕ ಪರಿಶೀಲನೆ : ೬೪-೬೭

೧. ಕನ್ನಡ ಉಳಿಸಿ, ಬೆಳೆಸುವ ಬಗೆ : ಶಿಕಾರಿಪುರ ಕೆ. ಹರಿಹರೇಶ್ವರ
– ಶ್ಯಾಮಸುಂದರ ಬಿದರಕುಂದಿ

೨. ಛಲದಂಕಮಲ್ಲ ಲೋಕಾಯುಕ್ತ ಎನ್. ವೆಂಕಟಾ'ಛಲ' : ಸಂ.ವೆಂಕಟೇಶ ಕುಲಕರಣಿ
– ಹೆಚ್. ಎ. ಪಾರ್ಶ್ವನಾಥ್

೩. ದೇಹ ದೇಗುಲಕ್ಕೊಂದು ಪ್ರಣಾಮ : ವಸಂತ ಅ. ಕುಲಕರ್ಣಿ
– ಈಶ್ವರಚಂದ್ರ ಚಿಂತಾಮಣಿ

೪. ಭ್ರಮೆಗಳ ಮೇಲೆ ಬೆಳಕು : ಜ್ಯೋತಿ ಹೊಸೂರ – ಬಿ. ಜಿ. ಚನ್ನೇಶ್ ಹೊನ್ನಾಳಿ

೫. ಕನ್ನಡಿಯ ಮುಂದೆ : ಸಿ. ಎಂ. ಮುನಿಸ್ವಾಮಿ – ಸುಮಿತ್ರಾ ಹಲವಾಯಿ

೧೨. ಸಂಕಲನ : ಅನಿಸಿಕೆ ೬೭-೭೦

೧೩. ಸಂಕಲನ ೧೯ ರಿಂದ ೨೪ ರ ಸಮಗ್ರ ಸಾಮಗ್ರಿ ದರ್ಶನ ೭೧-೭೫

೧೪. ಸಂಕಲನ ೨೫ ರಿಂದ ೩೦ ರ ಸಮಗ್ರ ಸಾಮಗ್ರಿ ದರ್ಶನ ೭೬-೮೦

೧೫. ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ಆವರಣ ಪುಟ ೩

ಸಂಪಾದಕರ ಮಾತು

ಕನ್ನಡ ಮತ್ತು ಸಂಸ್ಕೃತ ಸಾಹಿತ್ಯದ ಶ್ರೇಷ್ಠ ವಿದ್ವಾಂಸ, ನಾಟಕಕಾರ, ನಿರ್ದೇಶಕ, ಕವಿ, 'ಕನ್ನಡ ಕನ್ನಡ ಕಸ್ತೂರೀ ಕೋಶ'ದ ಕರ್ತೃ ಪಂ. ಚೆನ್ನಬಸಪ್ಪ ಎಲ್ಲಪ್ಪ ಕವಲಿ ಅವರ ಹಿರಿಯ ಪುತ್ರ ಡಾ. ವಸಂತ ಕವಲಿ ಸಹ ಸಾಹಿತ್ಯ, ರಂಗಭೂಮಿ, ಸಂಗೀತ ಎಲ್ಲದರಲ್ಲಿಯೂ ಅಪಾರ ಪ್ರತಿಭೆ ಹೊಂದಿದ್ದರು. ಮುಂಬಯಿಯ ಒಂದು ಕಾಲೇಜಿನಲ್ಲಿ ಕೆಲವು ವರ್ಷ ಅಧ್ಯಾಪಕರಾಗಿದ್ದರು. ನಂತರ ನಾಟಕ ನಿರ್ದೇಶಕರಾಗಿ ಬೆಂಗಳೂರು ಆಕಾಶವಾಣಿಯಲ್ಲಿ ಕೆಲಸ ಮಾಡಿದರು. ಗೋವಾ, ಭದ್ರಾವತಿ ಮುಂತಾದ ಕಡೆಗೆ ನಿಲಯ ನಿರ್ದೇಶಕರಾಗಿದ್ದರು. ಮಲ್ಲಿಕಾರ್ಜುನ ಮನಸೂರ, ರಾಮರಾವ ನಾಯಕರಲ್ಲಿ ಸಂಗೀತ ಕಲಿತಿದ್ದರು. ತಂದೆಯಂತೆ ಹಲವು ಭಾಷೆಗಳಲ್ಲಿ ಪರಿಣತರಾಗಿದ್ದ ವಸಂತ ಕವಲಿ ಮರಾಠೀ ಮತ್ತು ಕನ್ನಡ ಭಾಷಾ ಬಾಂಧವ್ಯಕ್ಕೆ ಪೂರಕವಾಗುವಂಥ ಹಲವು ರಂಗಪ್ರಯೋಗಗಳನ್ನು ಮಾಡಿದ್ದರು. 'ಎನ್ನ ಮುದ್ದಿನ ಮುದ್ದಣ', 'ರಂಗರಾಗ-ಮಹಾನಾಟಕ' ಅವರಿಗೆ ತೃಪ್ತಿ ನೀಡಿದ ನಾಟಕ ಪ್ರಯೋಗಗಳು. 'ಕಮ್ಯುಕೇಶನ್ ಮತ್ತು ಇತರ ನಾಟಕಗಳು' ಅವರೇ ರಚಿಸಿ ಆಡಿಸಿದ ಏಕಾಂಕಗಳ ಸಂಗ್ರಹ. 'ನಾದಯಾತ್ರೆ', 'ನಾದೋಪಾಸನೆ', 'ಭಾರತೀಯ ಸಂಗೀತಕ್ಕೆ ಕರ್ನಾಟಕದ ಕೊಡುಗೆ' ಅವರ ವಿದ್ವತ್ ಕೃತಿಗಳು. ಸಂಗೀತದ ಹೊಸ ಹೊಸ ರಾಗಗಳನ್ನು ಸೃಷ್ಟಿಸಿ, ಅವನ್ನು ರಂಗದಲ್ಲಿ ಪ್ರಯೋಗ ಮಾಡಿ, ಹಾಡಿಯೂ ತೋರಿಸಿದ್ದರು. ಪ್ಯಾರಿಸ್‌ನಲ್ಲಿದ್ದ ತಂಗಿ ವಸುಂಧರಾ ಫಿಲಿಯೋಜಾಳ ಆಮಂತ್ರಣ ಪಡೆದು, ಅಲ್ಲಿಗೆ ಹೋಗಿ, ಸಂಗೀತ ಕಚೇರಿಗಳನ್ನು ನಡೆಸಿ, 'ರಾಗ x ತಾನ–ಸೇನ್ ದಡದಲ್ಲಿ' ಎಂಬ ಪ್ರವಾಸ ಕಥನವನ್ನೂ ಪ್ರಕಟಿಸಿದ್ದರು. ವಿದ್ವತ್ತು, ಮೌಲಿಕ ವಿಚಾರ, ಕ್ರಿಯಾಶೀಲತೆ, ಸ್ವಾಭಿಮಾನ, ಛಲಗಾರಿಕೆ ತುಂಬಿದ್ದ ವಸಂತ ಕವಲಿ ಯಾವುದಕ್ಕೂ ನಿಷ್ಠೆಯಿಂದ ಅಂಟಿಕೊಳ್ಳಲಿಲ್ಲ. ಇನ್ನೂ ಇರಬೇಕಿತ್ತು ಅನ್ನಿಸಿದಾಗಲೇ ಅಕಾಲ ಮರಣಕ್ಕೆ ಶರಣಾದರು.

ವಸಂತ ಕವಲಿಯವರ 'ಮಹಾನಾಟಕ ರಂಗಸಂಗೀತ' ಲೇಖನ ೧೯೮೮ ರ 'ಕರ್ಮವೀರ' ದೀಪಾವಳಿ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಇದರ ಮಹತ್ವವನ್ನು ಮತ್ತೆ ನೆನಪಿಸಿ ಪ್ರಕಟಿಸಲು ಸೂಚಿಸಿದ ಡಾ. ಶ್ರೀನಿವಾಸ ಹಾವನೂರ ಮತ್ತು ಆ ಪ್ರತಿ ದೊರಕಿಸಲು ನೆರವಾದ ಮನೋಜ(ಗೌಡ) ಪಾಟೀಲರಿಗೆ ಕೃತಜ್ಞತೆಗಳು.

ಸಂಕಲನ-೨೩ ರಲ್ಲಿ ಪ್ರಕಟಿತ ಡಾ. ಶ್ರೀನಿವಾಸ ಹಾವನೂರರ 'ಆದ್ಯ ಮರಾಠೀ ನಾಟಕಕಾರ ಮತ್ತು ಯಕ್ಷಗಾನ', ಹಾಗೂ **ಸಂಕಲನ-೨೪** ರಲ್ಲಿ ಪ್ರಕಟಿತ ಡಾ. ಚಂದೂಲಾಲ್ ದುಬೆಯವರ 'ಮೊದಲನೇ ಮರಾಠೀ ನಾಟಕ ಮತ್ತು ಕರ್ನಾಟಕದ ಭಾಗವತ ಮಂಡಳಿ' ಲೇಖನಗಳನ್ನು ವಸಂತ ಕವಲಿಯವರ ಪ್ರಸ್ತುತ ಲೇಖನದೊಂದಿಗೆ ಮತ್ತೊಮ್ಮೆ ಮೆಲುಕು ಹಾಕುವುದು ಹೆಚ್ಚು ಸೂಕ್ತವಾದೀತು.

ಸಂಕಲನ-೧೫ ರಲ್ಲಿ ವಿಭಾ ರಚಿಸಿದ, ಹಾಗೂ **ಸಂಕಲನ-೨೧** ರಲ್ಲಿ ಅವರು ಅನುವಾದಿಸಿದ ಕೆಲವು ಕವಿತೆ ಪ್ರಕಟಿಸಿದ್ದೆವು. ನಮ್ಮಲ್ಲಿ ಉಳಿದಿದ್ದ ಅವರ ಇನ್ನಷ್ಟು ಅನುವಾದಿತ ಕವನ ಈ ಸಂಚಿಕೆಯಲ್ಲಿವೆ.

ಸಂಕಲನ-೭ ರಲ್ಲಿ **ಸಂಕಲನ-೧** ರಿಂದ ೬ ರ, **ಸಂಕಲನ-೧೩** ರಲ್ಲಿ **ಸಂಕಲನ-೭** ರಿಂದ ೧೨ ರ ಹಾಗೂ **ಸಂಕಲನ-೧೯** ರಲ್ಲಿ **ಸಂಕಲನ-೧೩** ರಿಂದ ೧೮ ರ ಸಮಗ್ರ ಸಾಮಗ್ರಿ ದರ್ಶನ ಪ್ರಕಟಿಸಿದ್ದೆವು. ಈ ಸಂಚಿಕೆಯಲ್ಲಿ **ಸಂಕಲನ-೧೯** ರಿಂದ ೨೪ ಹಾಗೂ **ಸಂಕಲನ-೨೫** ರಿಂದ ೩೦ ರ ಎರಡು ವರ್ಷಗಳ ಸಮಗ್ರ ಸಾಮಗ್ರಿ ದರ್ಶನವಿದೆ. ಇದು ಸಾಕಷ್ಟು ಪುಟಗಳನ್ನು ತೆಗೆದುಕೊಂಡಿದ್ದರಿಂದ ಈ ಸಂಚಿಕೆಯಲ್ಲಿ ಪ್ರೊ. ಎಸ್. ಶೆಟ್ಟರ್ ಅವರ 'ಕವಿರಾಜಮಾರ್ಗಮಂಥನ' ಪ್ರಕಟಿಸಲಾಗಲಿಲ್ಲ.

ಈ ಸಂಚಿಕೆಯೊಂದಿಗೆ **ಸಂಕಲನ** ೫ ವರ್ಷಗಳನ್ನು ಪೂರೈಸಿತು. ಇದಕ್ಕಾಗಿ ಎಲ್ಲ ರೀತಿಯ ಬೆಂಬಲ, ಸಹಕಾರ ನೀಡಿದ ಲೇಖಕರು, ಚಂದಾದಾರರು, ಜಾಹೀರಾತುದಾರರು ಎಲ್ಲರಿಗೂ ಕೃತಜ್ಞತೆಗಳು.

ಮಿತ್ರರು ದಯವಿಟ್ಟು ೨೦೦೭ ರ ಚಂದಾ ರೂ. ೨೦೦/- ಆದಷ್ಟು ಬೇಗ ಕಳಿಸಿ ಸಹಕರಿಸಿರಿ.

೧ ನವಂಬರ್ ೨೦೦೬
ಹೊಮನೆ, ಧಾರವಾಡ-೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಭಾರತದ ರಾಜನೈತಿಕ ಇತಿಹಾಸದಲ್ಲಿ ೧೮ ನೆಯ ಶತಮಾನ ಅಶಾಂತಿ, ಅವ್ಯವಸ್ಥೆಗಳ ಆಗರವಾಗಿತ್ತು. ಅಂಥ ಕಾಲದಲ್ಲಿ ಯಾವುದೇ ಭಾಷೆಯ ಕಾವ್ಯ ಆತಂಕಿತಗೊಳ್ಳುತ್ತದೆ, ಹಿಂಜರಿಕ್ಕೆ ಒಳಪಡುತ್ತದೆ; ಅಥವಾ ವೀರರಸ ಇಲ್ಲವೆ ತೀವ್ರ ವ್ಯಂಗ್ಯಕ್ಕೆ ಮೈ ನೀಡುತ್ತದೆ ಅಥವಾ ಆತ್ಮಲೀನ ಶೃಂಗಾರಕ್ಕೆ ಭಕ್ತಿಭಾವದ ವೇಷ ತೊಡಿಸಿ ಹಾಡಾಗಿ ನಲಿಯುತ್ತದೆ. ಆ ಕಾಲದ ಹಿಂದೀ ಕಾವ್ಯವೂ ಇಂಥ ಸ್ವರೂಪಗಳಿಗೆ ಹೊರತಾಗಿರಲಿಲ್ಲ. ಆಗ ಮಧುರ ಬ್ರಜ ಭಾಷೆಯಲ್ಲಿ ಶೃಂಗಾರ ಪ್ರೇಮ ಭಕ್ತಿ ಪ್ರಾಮಾಣಿಕ ರಸಿಕತೆಗಳ ಮೋಹಕ ಕಾವ್ಯ ರಚಿಸಿದ ಘನಾನಂದ ಆನಂದಘನನೇ ಆಗಿದ್ದ.

ಅನೇಕ ಕವಿಗಳಂತೆ ಘನಾನಂದನ ಬದುಕಿನ ಹೆಚ್ಚಿನ ಖಚಿತ ವಿವರಗಳು ಸಿಕ್ಕಿಲ್ಲ. ಆದರೂ ಅವನ ಕಾವ್ಯ, ಭಾವ, ಭಾಷೆಗಳಲ್ಲಿ ಅವನ ವ್ಯಕ್ತಿಚಿತ್ರ ಮಾತಾಡುತ್ತದೆ. ಜಾತಿಯಿಂದ ಕಾಯಸ್ಥನಾಗಿದ್ದ ಘನಾನಂದ ಮುಹಮ್ಮದ್ ಶಾಹ್‌ನ ಮೀರ್ ಮುನ್ಶೀ— ಪ್ರಧಾನ ಕರಣಿಕ— ಆಗಿದ್ದ. ಸುಜಾನ ಎಂಬ ಹೆಸರಿನ ಮೋಹಿನಿ ವೇಶ್ಯೆಯ ಪ್ರೇಮದ ಸುಳಿಯಲ್ಲಿ ಸಿಲುಕಿದ್ದ. ಒಳ್ಳೆಯ ಗಾಯಕನೂ ಆಗಿದ್ದ ಘನಾನಂದ ಒಮ್ಮೆ ದೊರೆಯ ಅವಕೃಪೆಗೆ ಸಿಲುಕಿದ; ಆಗ ಸುಜಾನಳಿಂದ ದೂರವಾಗಬೇಕಾಯಿತು. ದಿಲ್ಲಿಯನ್ನು ತೊರೆದು ವೃಂದಾವನಕ್ಕೆ ನಡೆದ. ನಿಂಬಾರ್ಕ ಸಂಪ್ರದಾಯದಲ್ಲಿ ದೀಕ್ಷೆ ಹೊಂದಿ ತನ್ನ ತೀವ್ರತಮ ಭಾವೋದ್ವೇಗದ ಸುಜಾನ-ಪ್ರೇಮವನ್ನು ರಾಧಾ-ಕೃಷ್ಣರ ಬಣ್ಣದಲ್ಲಿ ಅದ್ದಿಬಿಟ್ಟ. ಜನಿಸಿದ ಘನಾನಂದ (ಇಸ್ವಿ ೧೬೭೩ - ೧೭೬೦) ಅಹಮದ್‌ಶಾಹ್ ಅಬ್ದಾಲಿಯ ಆಕ್ರಮಣವಾದಾಗ ತೀರಿದ.

ಸುಜಾನ್, ಜಾನ್, ಜಾನೀ ಮುಂತಾದ ವಿಶೇಷಣಗಳ ಮೊರೆಯಲ್ಲಿ ಘನಾನಂದನ ವಿಪ್ರಲಂಭವೇ ಅವನ ಪ್ರೀತಿಯ ಧ್ರುಪದ ಗಾನವಾಗಿದೆ. ಘನಾನಂದ ಎಂಬ·ಹೆಸರು ಸಹ ಆನಂದಘನ, ಆನಂದಪಯೋದ, ಆನಂದನಿಧಾನ, ಆನಂದಕಂದ, ಆನಂದಮೇಘ, ಸಚ್ಚಿದಾನಂದಘನ ಇತ್ಯಾದಿ ಆಗಿ ಬಳಕೆಯಾಗಿದೆ. ಛಂದೋನಿರ್ವಹಣೆ, ಶ್ಲೇಷ-ಪ್ರೀತಿ ಇದಕ್ಕೆ ಕಾರಣ. ಈ ವರೆಗೆ ಘನಾನಂದ ರಚಿಸಿದ ಸುಜಾನಹಿತ, ವಿಯೋಗಬೇಲಿ, ಯಮುನಾಯಶ, ಪ್ರೀತಿಪಾವಸ, ರಸವಸಂತ, ನಾಮಮಾಧುರೀ, ದಾನಘಟಾ, ಪ್ರಿಯಾಪ್ರಸಾದ ಮುಂತಾದ ೪೦ ಕ್ಕಿಂತ ಹೆಚ್ಚು ಚಿಕ್ಕಪುಟ್ಟ ಕೃತಿಗಳು ಸಿಕ್ಕಿವೆ. ಹಿಂದೀ ಛಂದಸ್ಸಿನ 'ಕವಿತ್ತ', 'ಸವೈಯಾ', 'ಪದ'ಗಳು ಅಲ್ಲಿ ಪದ್ಯಾಕಾರ ಪಡೆದಿವೆ.

ಗಾಯಕ ಕವಿ ಪ್ರೇಮಿ ರಸಿಕನಾಗಿದ್ದ ಘನಾನಂದನ ಕಾವ್ಯ ಬ್ರಜಭಾಷೆಯಷ್ಟೇ ಲಲಿತ, ಮಧುರ, ನಾದಪೂರ್ಣವಾಗಿದೆ. ಶೃಂಗಾರದ ಮಿಲನಪಕ್ಷಕ್ಕಿಂತ ವಿರಹಪಕ್ಷವೇ ಪ್ರಧಾನ ಕ್ಯಾನ್‌ವಾಸ್. ಉಕ್ತಿವೈಚಿತ್ರ್ಯ, ವಿರೋಧಾಭಾಸಗಳು ಆನಂದ ಘನವನ್ನು ಚಿತ್ರಿಸಿದ ಮುಖ್ಯ ವರ್ಣಗಳು.

ಮೋಹೀ ಮೋಹ್ ಜನಾಯ್ ಕೈ, ಅಹೇ ಅಮೋಹೀ, ಜೋಹಿ ।
ಸೋ ಹೀ ಮೋ ಹೀ ಸ್ಯೋ ಕರಿನ್ ಕ್ಯೋ ಕರಿ ಸೋಹೀ ತೋಹಿ ॥

ಹೇ ನಿರ್ಮೋಹಿಯೇ, ನನ್ನತ್ತ ನೋಡಿ, ಪ್ರೀತಿ ತೋರಿ, ನೀನು ನನ್ನ ಹೃದಯವನ್ನು ಮೋಹಿತಗೊಳಿಸಿಕೊಂಡಿ. ಅಂಥ ನಿನ್ನ ಹೃದಯ ಈಗ ನನ್ನ ಹೃದಯದ ಬಗ್ಗೆ ಇಷ್ಟೇಕೆ ಕಠೋರವಾಗಿದೆ? ಇದು ನಿನಗೆ ಶೋಭಿಸುತ್ತದೆಯೇ? ಸರಿಯೆನಿಸುತ್ತದೆಯೇ?

ಪ್ರಿಯತಮೆಯ ನಿಷ್ಠುರತೆಯನ್ನು ಪ್ರೀತಿಯ ನಿಷ್ಠೆಯಿಂದಲೇ ಚುಚ್ಚುತ್ತ ಮೆಚ್ಚುತ್ತ ಸಹಿಸುತ್ತ ವಹಿಸುತ್ತ ಬದುಕುವುದು ಪ್ರೀತಿಧರ್ಮದ ಯಮಕಾಲಂಕಾರ. ಇಂಥ ಯಮಕ, ಶ್ಲೇಷೆ, ಉಪಮೆ, ಉತ್ಪ್ರೇಕ್ಷೆಗಳನ್ನು ಅತಿಯಾಗಿ ಬಳಸಿದ್ದರಿಂದಾಗಿ ಕೆಲ ಹೊಸ ಓದುಗರಿಗೆ ಘನಾನಂದನ ಕಾವ್ಯದ ವ್ರಜಭಾಷೆ ವಜ್ರಭಾಷೆಯಾಗಿ ಪರಿಣಮಿಸಿದ್ದೂ ಸತ್ಯ. ಆದರೆ ಮನವಿಟ್ಟು ಮೆಚ್ಚಿದರೆ ಘನವಾಗಿ ಹುಚ್ಚು ಹಿಡಿಸುವ ಕವಿ ಘನಾನಂದ.

ಮಹಾನಾಟಕ ರಂಗಸಂಗೀತ

— ವಸಂತ ಕವಲಿ

ಮಹಾನಾಟಕವೆಂದರೆ ವಿಶೇಷವೇನಿಲ್ಲ. ಮಹಾರಾಷ್ಟ್ರ ಮತ್ತು ಕರ್ನಾಟಕ ಎಂಬುದಾಗಿ (ಇಂಗ್ಲಿಷ್‌ನಲ್ಲಿ ಇದಕ್ಕೆ ಹೋರ್ಟಮ್ಯಾಂಟೋ ಶಬ್ದ ಎನ್ನುತ್ತಾರೆ). ನಾನಿಲ್ಲಿ ಹೇಳ ಹೊರಟಿರುವುದು ಕರ್ನಾಟಕ-ಮಹಾರಾಷ್ಟ್ರಗಳ ರಂಗಸಂಗೀತ, ಅರ್ಥಾತ್ ನಾಟಕದ ಹಾಡುಗಳ ವಿಚಾರವಾಗಿ.

ಹಲವಾರು ವರ್ಷಗಳ ಹಿಂದೆ ನಾನು ಮುಂಬೈನಲ್ಲಿ ಕಾಲೇಜು ಉಪನ್ಯಾಸಕನಾಗಿದ್ದ ಕಾಲದಲ್ಲಿ ನನ್ನ ಸಹೋದ್ಯೋಗಿಗಳಾಗಿದ್ದ ಮರಾಠೀ ಪ್ರಾಧ್ಯಾಪಕರೊಬ್ಬರು, ಆಗಾಗ ನನ್ನನ್ನು ಕೇಳುತ್ತಿದ್ದುದುಂಟು. "ನಮ್ಮಲ್ಲಿ ನಾಟ್ಯ ಸಂಗೀತ ಜನಪ್ರಿಯವಾಗಿರುವಷ್ಟು ನಿಮ್ಮ ಕರ್ನಾಟಕದಲ್ಲಿ ಆಗಿಲ್ಲ ಅಲ್ಲವೇ? ಆದರೂ ಮಹಾರಾಷ್ಟ್ರದಲ್ಲಿ ವಿಶೇಷವಾಗಿ ಪ್ರಚಲಿತವಿರುವ, ಅದರಲ್ಲೂ ಶಾಸ್ತ್ರೀಯ ಸಂಗೀತಗಾರರು ಕೂಡಾ ಕಛೇರಿಗಳಲ್ಲಿ ಹಾಡುವ ಮರಾಠೀ ಪದಗಳು, ಎಂದರೆ 'ಚಂದ್ರಿಕಾ ಹಿ ಜಣೂಂ', 'ದೇಹಾಥಾ ಶರಣಾಗತಾ', 'ಝೂಲೇ ಯುವತಿಮನಾ' ಮತ್ತು 'ಉಗಿಚ ಕಾ ಕಾಂತಾ' ಮುಂತಾದವುಗಳಿಗೆಲ್ಲಾ ಧಾಟಿಗಳನ್ನು ನಮ್ಮವರು ತೆಗೆದುಕೊಂಡಿದ್ದು ಕರ್ನಾಟಕದಿಂದಲೇ ಎಂತೆ ಹೌದೇ? ಹಾಗಾದರೆ ಇವುಗಳಿಗೆ ಚಾಲಿಯನ್ನೊದಗಿಸಿದ ಮೂಲ ಕನ್ನಡ ಹಾಡುಗಳು ಯಾವುವು? ಸಂಗೀತಕಾರನಾದ ನಿನಗೆ ಗೊತ್ತಿರಬೇಕಲ್ಲ?" ಎಂಬುದಾಗಿ. ಅವರ ಈ ಪ್ರಶ್ನೆಗಳು ನನ್ನನ್ನು ಗೊಂದಲಕ್ಕೀಡು ಮಾಡುತ್ತಿದ್ದವು. ಏಕೆಂದರೆ ಚಿಕ್ಕಂದಿನಲ್ಲಿ ನಾಟಕ ಕಂಪನಿಗಳ ನಿಕಟ ಪರಿಚಯವೂ ಸಹವಾಸವೂ ನನಗೆ ದೊರಕಿದ್ದವು. ಆಗಿನ ಕಾಲದಲ್ಲಿ ನಾಟಕ ನೋಡುವುದಕ್ಕಿಂತ ಹೆಚ್ಚಾಗಿ, ಅಥವಾ ಅಷ್ಟೇ ಅಭಿರುಚಿಯಿಂದ, ನಟರ ರಾಗಧಾರೀ ಹಾಡುಗಳನ್ನು ಕೇಳುವುದಕ್ಕಾಗಿ ಜನರು ಟಿಕೇಟು ಕೊಂಡುಕೊಂಡು ಬರುತ್ತಿದ್ದರು – ನಮ್ಮ ಕರ್ನಾಟಕದಲ್ಲಿ ಕೂಡ, ನಲವತ್ತು, ಐವತ್ತು ವರ್ಷಗಳ ಹಿಂದೆ. ಆದರೆ ಆಗ ಹೆಚ್ಚಾಗಿ ಮರಾಠೀ ನಾಟಕ ಪದಗಳ ಧಾಟಿಗಳನ್ನು ಅನುಸರಿಸಿ ಕನ್ನಡ ಪದಗಳನ್ನು ರಚಿಸಿಕೊಳ್ಳುತ್ತಿದ್ದುದೇ ಹೆಚ್ಚು. ಅಲ್ಲದೇ ಕೆಲವು ಹಿಂದೂಸ್ಥಾನೀ ಶಾಸ್ತ್ರೀಯ ಸಂಗೀತದ ಚೀಜುಗಳ ಚಾಲಿಗಳನ್ನು ತೆಗೆದುಕೊಳ್ಳಲಾಗುತ್ತಿತ್ತು. ಅವುಗಳನ್ನು ಒದಗಿಸುವುದಕ್ಕೋಸ್ಕರ ದೊಡ್ಡ ದೊಡ್ಡ ಸಂಗೀತಗಾರರನ್ನು ಮತ್ತು ಅವರು ಕೊಟ್ಟ ಧಾಟಿಗಳಿಗೆ ಸರಿಯಾಗಿ ಕನ್ನಡ ಶಬ್ದಗಳನ್ನು ಹೊಂದಿಸಿ ಸುಂದರವಾದ ಹಾಡುಗಳನ್ನು ರಚಿಸಿ ಕೊಡಲು ನಾಟ್ಯಕವಿಗಳನ್ನು ನಾಟಕ ಕಂಪನಿಗಳವರು ಕೈ ತುಂಬಾ ಸಂಬಳ ಕೊಟ್ಟು ನಿಯಮಿಸಿ ಕೊಂಡಿರುತ್ತಿದ್ದರು. ಅಂತಹ ಕವಿಗಳಲ್ಲಿ ನನ್ನ ತಂದೆ ಪಂಡಿತ ಚೆನ್ನಬಸಪ್ಪ ಕವಲಿ ಅವರೂ ಒಬ್ಬರು. ಹೀಗಾಗಿ ನಾಟ್ಯ ಪದಗಳ ಧಾಟಿಗಳನ್ನು ಮರಾಠೀಯಿಂದ ಕನ್ನಡಕ್ಕೆ ಎರವಲಾಗಿ ತೆಗೆದುಕೊಳ್ಳುತ್ತಿದ್ದುದನ್ನು ಮಾತ್ರ ಕಂಡಿದ್ದ ನನಗೆ ನನ್ನ ಸಹೋದ್ಯೋಗಿಗಳು ಕೇಳುತ್ತಿದ್ದ ಪ್ರಶ್ನೆ ವಿಚಿತ್ರ ಎನಿಸುತ್ತಿತ್ತು. ಮಹಾರಾಷ್ಟ್ರದ ರಂಗಭೂಮಿಗೆ ಮೂಲತಃ ಕರ್ನಾಟಕವು ಸಂಗೀತವನ್ನಿತ್ತಿತೇ? ನಾನಾಗ ನಿಜವಾಗಿಯೂ ಅವಾಕ್ಕಾಗುತ್ತಿದ್ದೆ. ಏನು? ಮರಾಠೀ ರಂಗಸಂಗೀತಕ್ಕೆ– 'ಕಾನಡೀ' ಮೂಲವೇ?

ಮುಂದೆ ಆಕಾಶವಾಣಿಯ ನಾಟಕ ನಿರ್ದೇಶಕನಾಗಿ ಬೆಂಗಳೂರಿಗೆ ಬಂದ ಮೇಲೆ ನಿಧಾನವಾಗಿ ಕರ್ನಾಟಕೀ ಸಂಗೀತದ ಪರಿಚಯವಾಗತೊಡಗಿತು. ಆಗ ನನಗೆ ಸ್ವಲ್ಪ ಸ್ವಲ್ಪ ಸ್ಪಷ್ಟವಾಗಹತ್ತಿತು. ನನ್ನ ಪ್ರಾಧ್ಯಾಪಕ ಮಿತ್ರರು ಎನ್ನುತ್ತಿದ್ದ ಕಾನಡೀ ಎಂಬುದು ಕನ್ನಡ ಭಾಷೆಗಿಂತ ಹೆಚ್ಚಾಗಿ ಕರ್ನಾಟಕ ಸಂಗೀತಕ್ಕೆ ಅನ್ವಯಿಸುತ್ತದೆ ಎಂಬುದಾಗಿ. ಸರಿ. ಅಂದಿನಿಂದ ಒಂದೊಂದಾಗಿ ಮರಾಠೀ ನಾಟ್ಯಪದಗಳ ಧಾಟಿಗಳ ಮೂಲವನ್ನು ಕರ್ನಾಟಕೀ ಕೃತಿಗಳಲ್ಲಿ ಹುಡುಕತೊಡಗಿದೆ. ಯಾರೋ ಕ್ಲಾರಿಯೋನೆಟ್ಟಿನಲ್ಲಿ ನುಡಿಸಿದ ಒಂದು ಕೀರವಾಣಿ ರಾಗದ ಕೃತಿಯನ್ನು ರೇಡಿಯೋದಲ್ಲಿ ಕೇಳುವಾಗ ಒಮ್ಮೆಲೆ ನನಗೆ 'ಸುರಸುಖ ಖನಿ ತೂ ವಿಮಲಾ' ಎಂಬ ಮರಾಠೀ ಪದದ ನೆನಪಾಯಿತು. ಮರುದಿನ ಆಕಾಶವಾಣಿಯಲ್ಲಿ ಸಹೋದ್ಯೋಗಿ ಸಂಗೀತಗಾರರಲ್ಲಿ ವಿಚಾರಿಸಿದಾಗ ತಿಳಿಯಿತು : ಅದು ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್ ಅವರ 'ವರಮೂಲೋಸಗಿ ಬ್ರೋಚುಟನೀ ಕುರುದಾ ಜಗದಾಧಾರ' ಎಂಬ ತೆಲುಗು ಕೃತಿ ಎಂಬುದಾಗಿ.

ಹೀಗೆ ಮುಂದುವರಿಯಿತು ಶೋಧನೆ. ಇದರೊಂದಿಗೆ ನನ್ನ ಕಾಲೇಜಿನ ಮಿತ್ರರು ಹೇಳಿದ್ದಂತಹ ಹಾಡುಗಳಲ್ಲದೇ ಇನ್ನೂ ಯಾವ ಯಾವ ಮರಾಠೀ ನಾಟ್ಯಪದ್ಯಗಳು ಕರ್ನಾಟಕ ದಿಂದ ಸ್ಫೂರ್ತಿ ಪಡೆದವೋ! ಮಾಹಿತಿ ಸಂಗ್ರಹಣೆಗಾಗಿ ಪುಣೆಗೆ ಹೋದೆ. ಆಕಾಶವಾಣಿ ದಿಲ್ಲಿಯ ನಿಲಯದಲ್ಲಿ ರಂಗ ಸಂಗೀತದ ಟೇಪುಗಳನ್ನು ಹಾಕಿಸಿ ಕೇಳಿಕೊಂಡೆ. ಸಂಗೀತಗಾರ ನಟರಾದ ಜಯರಾಮ ಶಿಲೇದಾರ ಅವರ ಮನೆಗೆ ಹೋದೆ. ಅವರ ಪತ್ನಿ ಜಯಮಾಲಾ ಶಿಲೇದಾರ ಮತ್ತು ಮಗಳು ಕೀರ್ತಿ ಶಿಲೇದಾರ ಅವರು ಕೂಡಾ ಮರಾಠೀ ರಂಗಸಂಗೀತದಲ್ಲಿ ನಿಷ್ಣಾತೆಯರಾದ ಅಭಿನೇತ್ರಿಯರು. ಅವರೊಂದಿಗೆ ವಿಚಾರವಿನಿಮಯ ಮಾಡಿ, ಅನಂತರ ಅಪ್ಪಾ ಬಳವಂತ ಚೌಕಿಗೆ ಹೋಗಿ ಎಂಬತ್ತು, ತೊಂಬತ್ತು, ನೂರು ವರ್ಷಗಳ ಹಿಂದಿನ ಮರಾಠೀ ನಾಟಕ ಪುಸ್ತಕಗಳ ಪ್ರತಿಗಳನ್ನು ಕೊಂಡುಕೊಂಡೆ. ಅವುಗಳನ್ನು ಪುಣೆಯಲ್ಲಿಯೇ ಓದಿ ಟಿಪ್ಪಣಿಗಳನ್ನು ಬರೆದುಕೊಂಡೆ. ಅಲ್ಲಿಂದ ಹೊರಟು ಧಾರವಾಡಕ್ಕೆ ಬಂದೆ. ಅಲ್ಲಿ ಏಣಗಿ ಬಾಳಪ್ಪನವರ ನಾಟಕ ಕಂಪನಿ ಇದ್ದಿತು. ಬಾಳಪ್ಪನವರಿಂದಲೂ ವಿಷಯ ಸಂಗ್ರಹಿಸಿದೆ. ಆದರೆ ನನಗೆ ಈ ವಿಷಯದಲ್ಲಿ ವಿಶೇಷ ಮಾಹಿತಿಯನ್ನೊದಗಿಸಿ ಮಾರ್ಗದರ್ಶನ ಮಾಡಿದವರು ಗುರುರಾವ ದೇಶಪಾಂಡೆಯವರು. ಅವರಾಗ ಬೆಂಗಳೂರಿನಲ್ಲಿ ತಮ್ಮ ಬಂಧುಗಳೊಬ್ಬರ ಮನೆಯಲ್ಲಿ ಇದ್ದುಕೊಂಡು ಪಾರಮಾರ್ಥಿಕ ಗ್ರಂಥಗಳನ್ನೋದುತ್ತ ಕಾಲನ ಕರೆಗಾಗಿ ಕಾಯುತ್ತಿದ್ದರು. ಕರ್ನಾಟಕ ಮಹಾರಾಷ್ಟ್ರಗಳ ಅನೇಕ ಶಾಸ್ತ್ರೀಯ ಸಂಗೀತಗಾರರಂತೆ ಅವರೂ ಸಹ ಮೂಲತಃ ರಂಗನಟರು. ಆಗಲೇ ಎಂಬತ್ತು ದಾಟಿದ್ದಿತು. ಮಾತನಾಡುವುದಕ್ಕೂ ಕಷ್ಟ ವಾಗುತ್ತಿತ್ತು. ಅಂತಹದರಲ್ಲಿ ಆಯಾಸ ಪಟ್ಟು ಕ್ಷೀಣಧ್ವನಿಯಲ್ಲಿ ಹಾಡುತ್ತಾ ಕನ್ನಡ ಮತ್ತು ಮರಾಠೀ ನಾಟ್ಯಸಂಗೀತದ ಕೊಡುಕೊಳ್ಳುವಿಕೆಯನ್ನು ವಿವರಿಸುತ್ತಿದ್ದರು.

ಸಾಕಷ್ಟು ವಿಷಯ ಸಂಗ್ರಹವಾದ ಮೇಲೆ ಅದನ್ನೆಲ್ಲ ನಾಟ್ಯರೂಪ ಮಾಡಿ ರಂಗದ ಮೇಲೆ ಪ್ರದರ್ಶಿಸಬಹುದೆಂಬ ಧೈರ್ಯ ಬಂದಿತು. ನನಗೆ ಅತಿ ಪ್ರಿಯವಾದ ಮುದ್ದಣ ಮನೋರಮೆ ಯರ ಸಂವಾದ ಶೈಲಿಯಲ್ಲಿ ಸೂತ್ರಧಾರ ನಟಿಯರ ಸಂಭಾಷಣೆಗಳನ್ನು ರಚಿಸಿ 'ರಂಗರಾಗ' ಎಂಬ ರೂಪಕವನ್ನು ನಿರ್ಮಿಸಿ ಬೆಂಗಳೂರು ಆಕಾಶವಾಣಿಯ ಆಶ್ರಯದಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿಸಿದೆ. ನಾನೇ ಸೂತ್ರಧಾರ– ರಂಗಭೂಮಿಯಲ್ಲಿ ಕೂಡಾ.

ಹಳೆ ಕಂಪನಿ ನಾಟಕಗಳ ನಾಂದೀ ಪದ್ಯದೊಂದಿಗೆ ಪ್ರದರ್ಶನಾರಂಭ. 'ಪಾಹಿ ಶಾಂತ ಭುವನೇಶ್ವರ ಸುಮನೋಹರ ಆನಂದಸಾರ'. ಅದು ಮುಗಿದ ಮೇಲೆ ಅದಕ್ಕೆ ಮೂಲಾಧಾರ ವಾಗಿದ್ದ 'ನಾದ ಬ್ರಹ್ಮ ಪರಮೇಶ್ವರ' ಎಂಬ ಯಮನ ರಾಗದ ಧ್ರುಪದ ಒಂದನ್ನು ಸೂತ್ರಧಾರ ತನ್ನಷ್ಟಕ್ಕೆ ತಾನೇ ಹಾಡಿಕೊಳ್ಳುತ್ತಾನೆ. ಅದನ್ನು ಕೇಳಿ ಕುತೂಹಲಗೊಂಡ ನಟಿಯ ಪ್ರಶ್ನೆಗಳಿಂದಾಗಿ ಮುಂದಿನ ಮಾತುಗಳಿಗೆ ಚಾಲನೆ ದೊರೆಯುತ್ತದೆ. ಕಾಲ ಹಿಂದಕ್ಕೆ ಸರಿಯುತ್ತದೆ. ನೂರು ವರ್ಷಗಳಿಗಿಂತಲೂ ಹಿಂದೆ– ಎಂದರೆ ೧೮೮೨ ನೇ ಇಸವಿ. ಕರ್ನಾಟಕದ ಗುರ್ಲಹೊಸೂರಿ ನವರಾದ, ಮರಾಠೀ ಸಂಗೀತ ನಾಟಕದ ಕುಲಗುರು ಎನಿಸಿಕೊಂಡ ಅಣ್ಣಾಸಾಹೇಬ ಕಿರ್ಲೋಸ್ಕರ ಮತ್ತು ಅವರ ಮಿತ್ರರಾದ ಧಾರವಾಡದ ಚುರುಮುರಿ ಶೇಷಗಿರಿರಾಯರು 'ಸಂಗೀತ ಶಾಕುಂತಲ' ನಾಟಕವನ್ನು ಬರೆಯಲು ಹಮ್ಮಿಕೊಳ್ಳುತ್ತಾರೆ– ಕಿರ್ಲೋಸ್ಕರರು ಮರಾಠಿಯಲ್ಲಿ ಮತ್ತು ಶೇಷಗಿರಿರಾಯರು ಕನ್ನಡದಲ್ಲಿ. ಒಂದೇ ನಾಟಕ ಎರಡು ಭಾಷೆಗಳಲ್ಲಿ ಅವೇ ಸಂಭಾಷಣೆಗಳು, ಅವೇ ಹಾಡುಗಳು, ಭಾಷೇ ಬೇರೆ. ಆದರೆ ಧಾಟಿ ಒಂದೇ : ಕರ್ನಾಟಕದ ಜಾನಪದದ, ದೊಡ್ಡಾಟಗಳ, ಕೃಷ್ಣಪಾರಿಜಾತದ ಮತ್ತು ದೇವದಾಸಿಯರ ಹಾಡುಗಳ ಧಾಟಿಗಳು.

ಕನ್ನಡ ಶಾಲಾ ಶಿಕ್ಷಕರಾಗಿದ್ದ ಶಿವರುದ್ರಪ್ಪ ಸೋಮಪ್ಪ ಕುಲಕರಣಿ ಅವರು ರಚಿಸಿ ಮಕ್ಕಳಿಗೆ ಕಲಿಸುತ್ತಿದ್ದ 'ಚಿಕ್ಕ ಮಕ್ಕಳೇ ಕೇಳಿರಯ್ಯ ಎನ್ನ ಮುದ್ದಿನ ಮಾತನು ಚಿತ್ತವಿಟ್ಟು ಕೇಳಿರಿ' ಎಂಬ ಕವಿತೆಯ ಧಾಟಿಯನ್ನು ಅನುಸರಿಸುತ್ತ ಕನ್ನಡ ಶಾಕುಂತಲದ ದುಷ್ಯಂತ ರಂಗದ ಮೇಲೆ ಬರುತ್ತಾನೆ. 'ಮುನಿಗಳ ಮಗಳಲ್ಲ ತಿಳಿಯೋ, ದೇವಾಂಗನೆಯಿಂದ ಜನಿಸಿದ ಕನಕ ಪುತ್ಥಳಿಯೋ' ಎಂದು ಶಕುಂತಲೆಯನ್ನು ವರ್ಣಿಸುತ್ತ, ಕನ್ನಡ ರಾಜನ ನಿರ್ಗಮನವಾದ ಕೂಡಲೇ ಇನ್ನೊಂದು ಬದಿಯಿಂದ ಮರಾಠೀ ರಾಜಕುಮಾರಿಯ ಪ್ರವೇಶವಾಗುತ್ತದೆ. ಅವಳು ಅಣ್ಣಾಸಾಹೇಬ ಕಿರ್ಲೋಸ್ಕರರ 'ಸಂಗೀತ ಸೌಭದ್ರ' ನಾಟಕದ ಸುಭದ್ರೆ. 'ಅರಸಿಕ ಕಿತಿ ಹಾ ಶೇಲಾ, ತ್ಯಾ ಸುಂದರ ತನುಲಾ ಸೋಡುನೀ ಆಲಾ!' ಹಾಡು ಮರಾಠಿಯದಾದರೂ ಧಾಟಿ ಮಾತ್ರ ಶಿವರುದ್ರಪ್ಪ ಕುಲಕರಣಿಯವರ ಗೀತೆಯದೇ.

ಮೂಲ ಧಾಟಿ ಕನ್ನಡದ್ದೆಂಬುದು ಗೊತ್ತಿಲ್ಲದೇ ನಮ್ಮ ಕಂಪನಿಗಳವರು ಈ 'ಅರಸಿಕ ಕಿತಿ ಹಾ ಶೇಲಾ' ಹಾಡಿನ ಚಾಲಿಯನ್ನು ಅನುಕರಿಸಿ ಕನ್ನಡದಲ್ಲಿ ನಾಟ್ಯಪದವನ್ನು ರಚಿಸಿಕೊಂಡರು. ಅದನ್ನು ಹಾಡುತ್ತಾ ಹೇಮರೆಡ್ಡಿ ಮಲ್ಲಮ್ಮ ರಂಗದ ಮೇಲೆ ಬರುತ್ತಾಳೆ. 'ಮುತ್ತು ಪೋಣಿಸಿ ದಂತಹ ಮೂಗುತಿ, ಇದು ಎನ್ನ ಹೆತ್ತವರು ಕೊಟ್ಟಂತಹ ಮೂಗುತಿ' ಎಂದು ತನ್ನ ಉಮ್ಮಳ ವನ್ನೆಲ್ಲ ಗಾನ ರೂಪದಲ್ಲಿ ಹರಿಸಿ ಮೂಗಿನಿಂದ ನತ್ತನ್ನು ತೆಗೆದು ಮೈದುನ ವೇಮನನಿಗೆ ಕೊಟ್ಟು ಹೊರಟು ಹೋಗುತ್ತಾಳೆ. ಅದನ್ನು ತನ್ನ ವೇಶ್ಯೆಗೆ ಕೊಡಲೆಂದು ವೇಮನ ನಿರ್ಗಮಿಸುತ್ತಾನೆ.

ಸೂತ್ರಧಾರನ ಮನೆಗೆ ಕರ್ನಾಟಕೀ ಸಂಗೀತಗಾರರೊಬ್ಬರು ಆಗಮಿಸುತ್ತಾರೆ. ನಟಿಯ ಕುತೂಹಲವನ್ನು ತಣಿಸಲು ಅವರು ಪಟ್ಟಾಗಿ ಕುಳಿತುಕೊಂಡು ಶುದ್ಧ ಶಾಸ್ತ್ರೀಯ ಸಂಪ್ರದಾಯ ದಲ್ಲಿ ಕೀರ್ವಾಣಿ ರಾಗದಲ್ಲಿ ಹಾಡುತ್ತಾರೆ, ಪಟ್ಟಣಂ ಸುಬ್ರಬ್ಮಣ್ಯ ಅಯ್ಯರ್ ಅವರ ಕೃತಿ 'ವರ ಮೂಲೋಸಗಿ'. ಅವರ ಗಾಯನ ಮುಗಿಯುತ್ತಿದ್ದಂತೆಯೇ ಜಟಾಧಾರಿ ಋಷಿಕುಮಾರ ನೊಬ್ಬ 'ಸುರಸುಖ ಖನಿ ತೂ ವಿಮಲಾ' ಎಂಬ ಮರಾಠೀ ನಾಟ್ಯ ಪದವನ್ನು ಹಾಡುತ್ತಾ

ರಂಗದ ಮೇಲೆ ಬರುತ್ತಾನೆ. ಅವನು ಕಚ. ಕೃಷ್ಣಾಜೀ ಪ್ರಭಾಕರ ಖಾಡಿಲಕರರ 'ವಿದ್ಯಾಹರಣ' ನಾಟಕದ ನಾಯಕ. ಅದೇ ಕೀರವಾಣಿ ರಾಗ, ಕರ್ನಾಟಕೀ ಕೃತಿಯದೇ ಧಾತು.

ವಿಚಿತ್ರವೆಂದರೆ ಖಾಡಿಲಕರರು ತಮ್ಮ ನಾಟಕದ ಅಚ್ಚಾದ ಪುಸ್ತಕದಲ್ಲಿ ಮರಾಠೀ ಹಾಡಿನ ಮೇಲುಗಡೆಯಲ್ಲಿ 'ವರಮೂಲ ಸಖಿಯಾ ಕಾನಡೀ ಚಾಲೀವರ' ಎಂಬುದಾಗಿ ಮುದ್ರಿಸಿದ್ದಾರೆ. ಅದರ ಅರ್ಥ, 'ವರಮೂಲಸಖೀ' ಎಂಬ ಕನ್ನಡ ಪದದ ಧಾಟಿಯಂತೆ!! ಎಂದರೆ ಮರಾಠೀ ಪದಗಳನ್ನು ಅನುಕರಿಸಿ ನಾವು 'ಎಂಬಂತೆ ಪದಗಳನ್ನು' ರಚಿಸಿಕೊಂಡರೆ ಆ ಮರಾಠೀ ಹಾಡುಗಳೇ ಮೂಲತಃ ಕರ್ನಾಟಕದ ಚಾಲಿಯನ್ನು ಅನುಕರಿಸಿದ 'ಎಂಬಂತೆ' ಪದಗಳು! ಆದರೆ ಮರಾಠೀ ನಾಟಕಕಾರರು ರಾಗವನ್ನು ಸರಿಯಾಗಿ ತೆಗೆದುಕೊಂಡು ಶಬ್ದಗಳನ್ನು ತಪ್ಪಾಗಿ ತಿಳಿದುಕೊಂಡು ಮುದ್ರಿಸಿದ್ದರೂ, 'ವರಮೂಲ ಸಖಿ' ಎಂಬುದನ್ನು 'ವರ ಮೂಲೋಸಗಿ ಬ್ರೋಚುಟನೀ ಕುರುದಾ ಜಗದಾಧಾರ' ಎಂಬುದಾಗಿಯೂ, ಅವರು ಕಾನಡೀ ಎಂದಿರುವುದನ್ನು ತೆಲುಗು ಎಂಬುದಾಗಿಯೂ, ಗುರುತಿಸಿರುವುದು ಈ ಸಂಶೋಧಕನ ಒಂದು ಸಾಧನೆಯೆಂದೇ ಹೇಳಬೇಕು. ಕರ್ನಾಟಕ ಸಂಗೀತದಲ್ಲಿ ಕನ್ನಡ ಭಾಷೆಗೆ ಗೌರವದ ಸ್ಥಾನವಿಲ್ಲ. ಅದು ಗೊತ್ತಿಲ್ಲದೇ ಮರಾಠೀ ನಾಟಕಕಾರರು ತೆಲುಗನ್ನು ಕಾನಡೀ, –ಎಂದರೆ ಕನ್ನಡವೆಂದು ತಿಳಿದಿದ್ದರು.

ಆ ಕಾಲದ ಇನ್ನೊಂದು ಅತಿ ಪ್ರಸಿದ್ಧವಾದ ನಾಟಕ 'ಸಂಗೀತ ಮಾನಾಪಮಾನ'. ಆ ನಾಟಕವನ್ನು ಈಗಲೂ ಆಡುತ್ತಾರೆ. ಮರಾಠೀ ನಾಟ್ಯ ಸಂಗೀತದ ರಸಿಕರು ಈಗಲೂ ಅಷ್ಟೇ ಆಸ್ಥೆಯಿಂದ ನೋಡುತ್ತಾರೆ. ಆ ನಾಟಕದ ಕೆಲವು ಹಾಡುಗಳನ್ನು ಈಗಲೂ ಶಾಸ್ತ್ರೀಯ ಸಂಗೀತಗಾರರು ಕಛೇರಿಗಳಲ್ಲಿ ಖಯಾಲ ಸಂಗೀತದಷ್ಟೇ ರಾಗವಿಸ್ತಾರ ತಾನಗಳೊಂದಿಗೆ ಹಾಡುತ್ತಾರೆ. 'ದೇಹಾಥಾ ಶರಣಾಗತಾ' ಈ ನಾಟ್ಯಪದವನ್ನು ಹಾಡದೇ ಡಾ. ಮಲ್ಲಿಕಾರ್ಜುನ ಮನಸೂರರವರ ಯಾವ ಕಛೇರಿಯೂ ಪೂರ್ಣವಾಗುವುದಿಲ್ಲ. ಕರ್ನಾಟಕದಲ್ಲಿಯೇ ಆಗಲಿ ಮಹಾರಾಷ್ಟ್ರದಲ್ಲಿಯೇ ಆಗಲಿ ಅವರ ಈ ಹಾಡಿಗೆ ಶ್ರೋತೃಗಳ 'ಫರಮಾಯಿಶ' ಇದ್ದೇ ಇರುತ್ತದೆ. ಅದು ಮೂಲತಃ ಕರ್ನಾಟಕ ಸಂಗೀತದಿಂದ ಬಂದದ್ದೆಂದು ತೋರಿಸುವುದಕ್ಕಾಗಿ ಮನಸೂರರು ಅಲ್ಲಲ್ಲಿ ದಕ್ಷಿಣಾದಿ ಗಮಕಗಳನ್ನೂ ಫಿರಖಾಗಳನ್ನೂ ಸೇರಿಸುತ್ತಾರೆ. ಆದರೆ ಈ ಹಾಡಿನ ಮೂಲ ಮಾತ್ರ ಸ್ವಲ್ಪ ಗೊಂದಲಕ್ಕೀಡುಮಾಡುತ್ತದೆ. ಅಚ್ಚಾದ ಮರಾಠೀ ಪುಸ್ತಕದಲ್ಲಿ ಇದರ ರಾಗ ನೀಲಾಂಬರಿ ಎಂದು, ಮತ್ತು ಶಬ್ದಗಳು 'ಏರಾ ನಾ ಸಾಮಿ ಯಾ ಕಾನಡೀ ಚಾಲೀವರ' ಎಂದು ಮುದ್ರಿಸಲಾಗಿದೆ. ಆದರೆ ಆ ರಾಗದಲ್ಲಿ ಈ ರೀತಿ ಆರಂಭವಾಗುವ ಯಾವ ಕೃತಿಯೂ ದೊರೆಯುವುದಿಲ್ಲ. ಮತ್ತೆ ಖರಹರಪ್ರಿಯ ರಾಗದಲ್ಲಿ 'ರಾಮ ನೀ ಸಮಾನ ಮೇವಾರು' ಎಂಬ ಕೃತಿ ಇದೆ. ಅದು ಬಹುಶಃ ಖಾಡಿಲಕರರ ಕೈಗೆ ಬರುವಾಗ 'ಏವಾರು' ಎಂಬುದು 'ಏರಾ' ಆಗಿ 'ನೀ ಸಮಾನ' ಎಂಬುದು 'ನಾಸಾಮೀ' ಎಂದು ಪರಿವರ್ತನಗೊಂಡಿರುವುದೂ ಸಾಧ್ಯವಿದೆ. ಅಲ್ಲದೆ, 'ಶರಣಾಗತಾ' ಹಾಡಿನ ಜಾಡಿನಲ್ಲಿರುವ, ಮುಖಾರಿ ರಾಗದ ತೆಲುಗು ಕೃತಿಯೊಂದಿದೆ, 'ಏಮಂದುನೇ ಮುದ್ದು ಬಾಲಾಮಣಿ' ಎಂಬುದು. ಮತ್ತು 'ದೇಹಾಥಾ ಶರಣಾಗತ' ಎಂಬ ಹಾಡಿಗೂ 'ರಾಮ ನೀ ಸಮಾನ ಮೇವಾರು' ಎಂಬ ಕೀರ್ತನೆಗೂ ತುಂಬಾ ಸಾಮ್ಯವಿದೆ.

ಖರಹರಪ್ರಿಯ ರಾಗದಲ್ಲಿರುವ ಪಟ್ಟಣಾಂ ಸುಬ್ರಹ್ಮಣ್ಯ ಅಯ್ಯರ್ ಅವರದೊಂದು ಕೃತಿಯು 'ಸಂಕಲ್ಪ ಮೆಟ್ಟಿದೋ ಮನಸಾ' ಎಂದಾರಂಭವಾಗುತ್ತದೆ. ಇದನ್ನು ಖಾಡಿಲಕರರು ತಮ್ಮ 'ವಿದ್ಯಾಹರಣ' ನಾಟಕದಲ್ಲಿ ಉಪಯೋಗಿಸಿದ್ದಾರೆ. 'ಕಚ-ದೇವಯಾನಿ'ಯರ ಕತೆ 'ತೇಜಾನಭೀ ಜಾ ಸಾಹವೇನಾ' ಎಂದು ಕಚ ಹಾಡುತ್ತಾನೆ. ಇದು ಕರ್ನಾಟಕಿಯಿಂದ ತೆಗೆದುಕೊಂಡದ್ದೆಂಬುದಾಗಿ ನಾಟಕ ಪುಸ್ತಕದಲ್ಲಿ ಈ ಹಾಡಿನ ಮೇಲ್ಗಡೆಯಲ್ಲಿ ಮರಾಠಿಯಲ್ಲಿ ಅಚ್ಚು ಮಾಡಲಾಗಿದೆ. ನಮ್ಮ 'ರಂಗರಾಗ' ನಾಟಕದಲ್ಲಿ ಈ ಹಾಡು ಮುಗಿಸಿ ಕಚ ಪಾತ್ರಧಾರಿ ನಿರ್ಗಮಿಸುವಷ್ಟರಲ್ಲಿ ರಂಗದ ಇನ್ನೊಂದು ಬದಿಯಿಂದ ಕನ್ನಡ ನಾಟಕದ ಕಿತ್ತೂರು ರುದ್ರಮ್ಮ ಪ್ರವೇಶಿಸುತ್ತಾಳೆ, 'ನಾ ಪೇಳುವೆ ನಿನಗೊಂದುಪಾಯ' ಎಂದು ಹಾಡುತ್ತ. ಇದರ ಧಾಟಿಯು ಮೂಲತಃ ಕರ್ನಾಟಕದ್ದೆಂದು ಅರಿಯದೆ ಶಿರಹಟ್ಟಿ ವೆಂಕೋಬರಾಯರು, ಸವಣೂರ ವಾಮನರಾವ ಮಾಸ್ತರರು, ಮರಾಠೀ ನಾಟಕದ 'ತೇಜಾನಭೀ ಜಾ ಸಾಹವೇನಾ' ಹಾಡಿನ ಅನುಕರಣೆ ಮಾಡಿ ಕನ್ನಡದಲ್ಲಿ ಈ 'ಎಂಬಂತೆ' ಪದವನ್ನು ರಚಿಸಿಕೊಂಡಿದ್ದರು.

ಪಟ್ಟಣಾಂ ಅವರ ಇನ್ನೊಂದು ಕೃತಿ, 'ಮನಸು ಕರುಗದೇಮಿ ಶ್ರೀ ಜಾನಕೀ ಮನೋರಮ ನೀ'. ಇದರಿಂದ ಸ್ಫೂರ್ತಿ ಪಡೆದ ಮರಾಠೀ 'ಎಂಬಂತೆ' ಪದವು ಖಾಡಿಲಕರರ 'ಮಾನಾಪಮಾನ' ನಾಟಕದಲ್ಲಿ ಬರುತ್ತದೆ. ನಾಯಕ ಧೈರ್ಯಧರ ಹಾಡು ಹಾಡುತ್ತಾನೆ, 'ಝುಝೌಲೇ ಯುವತಿ-ಮನಾ ದಾರುಣ ರಣ ರುಚಿತ ಪ್ರೇಮಸೇ'.

ಅವನು ನಿಷ್ಕ್ರಮಿಸುವ ಸಮಯಕ್ಕೆ ಸರಿಯಾಗಿ ಅವನ ಬೆನ್ನಿಗೇ ಪ್ರವೇಶಿಸುತ್ತಾನೆ 'ಕಿತ್ತೂರು ರುದ್ರಮ್ಮ' ನಾಟಕದ ರಾಜಕುಮಾರ, 'ಮಾತೇ ರಣದಿ ಸದಾ ತೋರುವೆ ನಾ ಎನ್ನ ಶೌರ್ಯವಾ' ಎಂದು ಹಾಡುತ್ತ, ಖಡ್ಗ ಝಳಪಿಸುತ್ತ. ಕನ್ನಡ ನಾಟಕಕಾರರಿಗೆ ಇದು ಕರ್ನಾಟಕಿ ಹಂಸಧ್ವನಿ ರಾಗ ಎಂಬುದು ಗೊತ್ತಿತ್ತು. ಆದರೆ ತಾವಿದನ್ನು ಮರಾಠೀ ರಂಗಭೂಮಿಯಿಂದ ತೆಗೆದು ಕೊಂಡಿದ್ದೇವೆಂದು ತಿಳಿದಿದ್ದರವರು ಈ ವರೆಗೆ.

'ಚಂದ್ರಿಕಾ ಹೀ ಜಣೂಂ ಠೇವಿಯಾ' ಇದೊಂದು ರಂಗನಟರ ಹಾಗೂ ಶಾಸ್ತ್ರೀಯ ಸಂಗೀತಗಾರರ ಅಚ್ಚುಮೆಚ್ಚಿನ ನಾಟ್ಯಪದ. ಗಾಯಕರು ಕನ್ನಡಿಗರೇ ಆಗಲೀ ಮರಾಠಿಯವರೇ ಆಗಲಿ ಕಛೇರಿಗಳಲ್ಲಿ ಈ ಪದವನ್ನು ರಾಗವಿಸ್ತಾರ, ವಿನ್ಯಾಸಗಳೊಂದಿಗೆ ಹಾಡಿಯೇ ಹಾಡುತ್ತಾರೆ. ಇದನ್ನು ಖಾಡಿಲಕರರು 'ಮಾನಾಪಮಾನ' ನಾಟಕದ ಧೈರ್ಯಧರನಿಗಾಗಿ ಎರವಲು ತೆಗೆದು ಕೊಂಡುದು ಕರ್ನಾಟಕಿ ಪ್ರತಾಪವರಾಳೀ ರಾಗದ 'ವಿನನಾ ನಗು ನೀ ಯುನ್ನಾನುರಾ' ಎಂಬ ತ್ಯಾಗರಾಜ ಕೀರ್ತನೆಯ ಧಾಟಿಯನ್ನನುಕರಿಸಿ.

ಆದರೆ ಕನ್ನಡ ನಾಟಕಕಾರರು ಮರಾಠೀ ನಾಟ್ಯ ಪದವೇ ಮೂಲಾಧಾರವೆಂಬುದಾಗಿ ಭಾವಿಸಿದ್ದರು. ಆದ್ದರಿಂದಾಗಿ ವಾಮನರಾವ ಮಾಸ್ತರರು ತಮ್ಮ 'ಮಹಾನಂದಾ' ಎಂಬ ನಾಟಕದಲ್ಲಿ 'ಚಂದ್ರಿಕಾ ಹೀ ಜಣೂಂ' ಹಾಡಿನ ಜಾಡನ್ನನುಕರಿಸಿ, 'ರನ್ನದಾ ಮೂರ್ತಿಯೋ, ಕಾಂತೆಯೋ ಲಾವಣ್ಯದ ರಾಶಿಯೋ' ಎಂಬ ಹಾಡನ್ನು ರಚಿಸಿ ಆ ನಾಟಕದ ದೇವೇಂದ್ರನಿಂದ ಹಾಡಿಸುತ್ತಿದ್ದರು.

ಖಾಡಿಲಕರರ ಅನಂತರ ನಾಟಕಗಳನ್ನು ರಚಿಸಿದವರು ಶ್ರೀಪಾದ ಕೃಷ್ಣ ಕೋಲ್ಹಟಕರರು. ಅವರ ನಾಟಕ 'ಮೂಕನಾಯಕ' ಅಚ್ಚಾದುದು ೧೯೧೩ ರಲ್ಲಿ. ಅದರಲ್ಲಿ ಬರುವ ಹಾಡು,

'ಉಗೀಚ ಕಾ ಕಾಂತಾ' ಎಂಬುದು ರಂಗಭೂಮಿ ನಟರ ಹಾಗೂ ಶಾಸ್ತ್ರೀಯ ಸಂಗೀತಗಾರರ ಮತ್ತು ಶ್ರೋತೃಗಳ ಹೃನ್ಮನಗಳನ್ನು ಇಂದಿಗೂ ಸೂರೆಗೊಳ್ಳುತ್ತಲಿದೆ. ಇದರ ಮೂಲವನ್ನು ಮರಾಠೀ ಪುಸ್ತಕದಲ್ಲಿ ಹಾಡಿನ ಮೇಲ್ಗಡೆಯಲ್ಲಿ 'ಇಡೋ ಇಡೋ ಕರುಣಾ ನಾರಾಯಣ' ಎಂಬುದಾಗಿ ಮುದ್ರಿಸಲಾಗಿದೆ. 'ಉಗೀಚ ಕಾ ಕಾಂತಾ ಗಾಂಜಿತಾ' ನಾಟ್ಯ ಪದವನ್ನು ಉಸ್ತಾದ ಅಬ್ದುಲ್ ಕರೀಮಖಾನರು, ಎಚ್.ಎಂ.ವಿ. ಕಂಪನಿಗಾಗಿ ಹಾಡಿ ಧ್ವನಿಮುದ್ರಿಸಿದ್ದಾರೆ. ರೆಕಾರ್ಡಿನ ಮೇಲೆ ಇದರ ರಾಗವನ್ನು 'ಆನಂದ ಭೈರವಿ (ಕರ್ನಾಟಕ)' ಎಂದು ಮುದ್ರಿಸಲಾಗಿದೆ. 'ಇಡೋ ಇಡೋ ಕರುಣಾ' ಎಂಬುದು ಬಹುಶಃ ಆಗಿನ ಕಾಲದ ದೇವದಾಸಿಯರ ಹಾಡಾಗಿರ ಬಹುದು. ಅದನ್ನು ಹೋಲುವ ತ್ಯಾಗರಾಜರ ಕೃತಿಯೊಂದಿದೆ, ಶಬರಿಯ ಭಕ್ತಿಯನ್ನು ಕುರಿತಾಗಿ. ಆದರೆ ಅದು ಮುಖಾರಿ ರಾಗದಲ್ಲಿದೆ.

ಅದು ಬ್ರಿಟಿಶರು ಭಾರತವನ್ನು ಆಳುತ್ತಿದ್ದ ಕಾಲ. ನಾಟಕ ಕಂಪನಿಯವರು ರಂಗಭೂಮಿಯ ಮೇಲೆ ಖಾದೀಧಾರೀ ದೇಶಭಕ್ತನೊಬ್ಬನ ಪಾತ್ರವೊಂದನ್ನು ತಂದು ಅವನ ಬಾಯಿಯಿಂದ ಖಾದೀಪ್ರಚಾರ, ಗಾಂಧೀಮಾರ್ಗಾನುಸರಣೆ, ಪಾನಪ್ರತಿಬಂಧ ಮತ್ತು ವಿದೇಶೀ ಸರಕಾರವನ್ನು ಕಿತ್ತೊಗೆದು ದೇಶವನ್ನು ಸ್ವತಂತ್ರಗೊಳಿಸುವುದಕ್ಕಾಗಿ ಭಾರತೀಯರು ಮಾಡಬೇಕಾದ ತ್ಯಾಗ ಬಲಿದಾನಗಳ ವಿಚಾರವಾಗಿ ಸ್ಫೂರ್ತಿಮಯವಾದ ಮಾತುಗಳನ್ನು ಆಡಿಸಿ ನಾಟಕ ಪ್ರೇಕ್ಷಕರ ರಕ್ತ ಕುದಿಯುವಂತೆ ಮಾಡುತ್ತಿದ್ದರು. ಅದಕ್ಕಾಗಿ ಬ್ರಿಟಿಶ್ ಸರಕಾರದ ವಕ್ರದೃಷ್ಟಿ ಸದಾ ನಾಟಕ ಕಂಪನಿಗಳ ಮೇಲಿರುತ್ತಿತ್ತು. ರಾಜದ್ರೋಹದ ಆರೋಪದ ಮೇಲೆ ಯಾವುದೇ ನಾಟಕವನ್ನು ನಿಲ್ಲಿಸುವ ಅಧಿಕಾರ ಆ ಕಾಲದಲ್ಲಿ ಒಬ್ಬ ಸಾಮಾನ್ಯ ಮಾಮಲೇದಾರ ಅಥವಾ ಫೌಜದಾರನಿಗೂ ಇರುತ್ತಿತ್ತು.

ಆಳರಸರ ಅವಕೃಪೆಯಿಂದ ಪಾರಾಗುವುದಕ್ಕಾಗಿ ನಾಟಕ ಕಂಪನಿಯವರು ಸ್ವಾತಂತ್ರ್ಯ ಹೋರಾಟದ ಆವಶ್ಯಕತೆಯನ್ನು ಪೌರಾಣಿಕ ನಾಟಕಗಳ ಪಾತ್ರಗಳ ಮುಖಾಂತರವಾಗಿ ಮನದಟ್ಟು ಮಾಡಿಕೊಡುತ್ತಿದ್ದರು. 'ಸಂಪೂರ್ಣ ರಾಮಾಯಣ' ಇಲ್ಲವೇ 'ಲಂಕಾದಹನ' ನಾಟಕದಲ್ಲಿ ರಾಮ, ಲಕ್ಷ್ಮಣ, ಸೀತೆ ಮುಂತಾದ ಪಾತ್ರಗಳು ಉತ್ತರಾದೀ ಪದ್ಧತಿಯಲ್ಲಿ ಹಾಡುಗಳನ್ನು ಹಾಡುತ್ತಿದ್ದರು. ಏಕೆಂದರೆ ಆ ಪಾತ್ರಗಳೆಲ್ಲ ಉತ್ತರ ಹಿಂದುಸ್ಥಾನದವರು. ಮತ್ತು ಹಾಡುವ ನಟನಟಿಯರು ಉತ್ತರ ಕರ್ನಾಟಕದವರು. ದಾಕ್ಷಿಣಾತ್ಯನಾದ ಹನುಮಂತ ಮಾತ್ರ ದಕ್ಷಿಣಾದೀ ಶೈಲಿಯಲ್ಲೇ ಹಾಡುತ್ತಿದ್ದ. ಏಕೆಂದರೆ ಯಾವುದೇ ಕಂಪನಿಯಲ್ಲಿಯಾದರೂ ಆ ಪಾತ್ರವನ್ನು ವಹಿಸುತ್ತಿದ್ದವರು ಹರಿಹರದ ಬೆಳ್ಳೂರ ನಂಜುಂಡಯ್ಯನವರು. ಅವರು ಕರ್ನಾಟಕಿ ಸಂಗೀತಗಾರರು. ಆದರೆ ರಾವಣನ ಆಸ್ಥಾನದಲ್ಲಿ ಮಾತ್ರ ರಾಕ್ಷಸಗಣಗಳೆಲ್ಲ ರಾವಣನನ್ನು ಸ್ತುತಿಸುವಾಗ, 'ಶೂರಾ ಧೀರಾ ರಾವಣಾಸುರಾ' ಎಂಬುದಾಗಿ ಪಾಶ್ಚಾತ್ಯ ಸಂಗೀತವನ್ನನುಕರಿಸಿ ಬ್ರಿಟಿಶರ ಬ್ಯಾಂಡ್ ಚಾಲಿಯಲ್ಲಿ ಹಾಡುತ್ತಿದ್ದರು. ನಾಟಕದವರ ಉದ್ದೇಶವಿಷ್ಟೇ. ರಾವಣನೆಂದರೆ ಬ್ರಿಟಿಶ್ ಸರಕಾರ, ರಾಮನೆಂದರೆ ಲೋಕಮಾನ್ಯ ತಿಲಕರು ಎಂಬುದನ್ನು ಪ್ರೇಕ್ಷಕರಿಗೆ ಪರ್ಯಾಯವಾಗಿ ಸೂಚಿಸುವುದು. ಪಾತ್ರಗಳು ಪೌರಾಣಿಕವಾದ ಕಾರಣ ಅವರು ಸುಲಭವಾಗಿ ಕಾಯಿದೆಯ ಕಟ್ಟಿಗೆ ಸಿಲುಕದೆ ಪಾರಾಗುತ್ತಿದ್ದರು.

ಇದೇ ರೀತಿಯಾಗಿ ಮಹಾಭಾರತದ ಸನ್ನಿವೇಶವನ್ನು ಅಳವಡಿಸಿಕೊಂಡ ನಾಟಕ 'ಉತ್ತರ ಭೂಪ'. ಇದರಲ್ಲಿ ಅರ್ಜುನ ಎಂದರೆ ಜವಾಹರಲಾಲ ನೆಹರು. ಭೀಮ ಎಂದರೆ ಸುಭಾಸಚಂದ್ರ ಬೋಸ್ ಮತ್ತು ಧರ್ಮರಾಜನೇ ಮಹಾತ್ಮಾ ಗಾಂಧೀ ಎಂಬುದಾಗಿ ಅವರ ಮಾತು ಕೃತಿಗಳ ಮೂಲಕ ಸ್ಪಷ್ಟವಾಗಿ ಬಿಂಬಿಸಲಾಗುತ್ತಿತ್ತು. ದುರ್ಯೋಧನನೇ ಬ್ರಿಟಿಶ್ ಸರಕಾರ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಆದರೆ ಆ ಕಾಲದಲ್ಲಿ ಕೂಡಾ ಮಹಾತ್ಮಾ ಗಾಂಧಿಯವರ ಶಾಂತಿ ಮಾರ್ಗವನ್ನು ಒಪ್ಪದವರಿದ್ದರು. ಅವರಲ್ಲೊಬ್ಬರು ಸ್ವಾತಂತ್ರ್ಯವೀರ ಬ್ಯಾರಿಸ್ಟರ್ ವಿನಾಯಕ ದಾಮೋದರ ಸಾವರಕರರು. 'ಸನ್ಯಸ್ತ ಖಡ್ಗ' ಎಂಬ ತಮ್ಮ ಮರಾಠೀ ನಾಟಕದಲ್ಲಿ ಸಾವರಕರರು ಬ್ರಿಟಿಶರ ವಿರುದ್ಧವಾಗಿ ಸಶಸ್ತ್ರ ಹೋರಾಟಕ್ಕೆ ಭಾರತೀಯರು ಅಣಿಯಾಗಬೇಕೆಂಬ ಸಂದೇಶವನ್ನು ಅಡಕಗೊಳಿಸಿದ್ದರು. ಸುಲೋಚನಾ ಎಂಬ ಪಾತ್ರ ಬಿಚ್ಚುಗತ್ತಿಯೊಂದಿಗೆ ಹಾಡುತ್ತಾ ರಂಗಪ್ರವೇಶ ಮಾಡುತ್ತದೆ. 'ರತಿ ರಂಗಣೇ ಕಾಮದೇವ ಜಸಾ' ಎಂಬುದೇ ಆ ಹಾಡು. ಸಾವರಕರರ ನಾಟಕದ ಸಂಗೀತ ನಿರ್ದೇಶಕರು ಗೋವಿಂದರಾವ್ ಟೇಂಬೆಯವರು. ಅವರು ಮೈಸೂರಿನ ಯುವರಾಜರಾಗಿದ್ದ ಕಂಠೀರವ ನರಸರಾಜ ಒಡೆಯರರ ಸ್ನೇಹಿತರು. ಆಗಾಗ ಮೈಸೂರಿಗೆ ಬರುತ್ತಿದ್ದರು. ಅವರನ್ನು 'ನನ್ನು ಬ್ರೋವನೀ ಕಿಂತು ತಾಮ ಸಮಾ' ಎಂಬ ಆಭೋಗೀ ರಾಗದ ತ್ಯಾಗರಾಜ ಭಜನೆ ಆಕರ್ಷಿಸಿರಬೇಕು. ಎಂತೆಯೇ 'ಸನ್ಯಸ್ತ ಖಡ್ಗ' ನಾಟಕದಲ್ಲಿ 'ರತಿರಂಗಣೇ ಕಾಮದೇವ ಜಸಾ' ಎಂಬ ಹಾಡಿನ ಮೇಲ್ಗಡೆಯಲ್ಲಿ 'ನನ್ನು ಭ್ರೂವನೀ ಯಾ ಕರ್ನಾಟಕೀ ಚಾಲೀವರ' ಎಂದು ಮುದ್ರಿಸಲಾಗಿದೆ. ಶಬ್ದಗಳು ತಪ್ಪಾಗಿದ್ದರೂ ರಾಗ ಆಭೋಗಿ ಎಂದಿದ್ದುದರಿಂದ ಅದರ ಮೂಲವನ್ನು ಹುಡುಕುವುದು ಈ ಲೇಖಕನಿಗೆ ಅಷ್ಟೊಂದು ಕಷ್ಟವಾಗಲಿಲ್ಲ.

ಮರಾಠೀ ರಂಗಭೂಮಿಯು ಕರ್ನಾಟಕದ ಜಾನಪದ ಹಾಡುಗಳಿಂದ ಕೂಡ ಸಾಕಷ್ಟು ಧಾಟಿಗಳನ್ನು ತೆಗೆದುಕೊಂಡಿದೆ. 'ಸಂಗೀತ ಶಾರದಾ' ಎಂಬ ನಾಟಕದಲ್ಲಿ ಬರುವ 'ಕಾಯಮೀ ಅಭಾಗಿನೀ' ಎಂಬ ಹಾಡು ಅದೇ ಆಗ ಬೆಳಕಿಗೆ ಬರುತ್ತಲಿದ್ದ ಮನಸೂರರು ಹಾಡಿ ಧ್ವನಿ ಮುದ್ರಣಗೊಳಿಸಿದ್ದ 'ತೇರನೆಳೆಯುತಾರ ತಂಗೀ' ಎಂಬ ಶರೀಫ ಸಾಹೇಬರ ಹಾಡಿನ ಅನುಕರಣೆ. ಕಿರ್ಲೋಸ್ಕರರ 'ಸಂಗೀತ ಸೌಭದ್ರ' ನಾಟಕದಲ್ಲಿ ಬರುವ 'ನಚಸುಂದರಿ ಕರಿಕೋಪಾ ಅತಧರೀ ಮಜವರೀ ಅನುಕಂಪಾ' ಎಂಬ ಹಾಡು ಕರ್ನಾಟಕದ ಭಜನಮೇಳಗಳಲ್ಲಿ ಹಾಡಲಾಗುತ್ತಿದ್ದ, 'ಎಂಥವನೀ ಗುರುರಾಯಾ ಶಾಂತಿ ಸದ್ಗುಣ ನಿಲಯಾ' ಎಂಬ ಭಜನೆಯ ಪದ್ಯದ ಅನುಕರಣೆ. ಅದೇ ನಾಟಕದಲ್ಲಿ ಬರುವ, 'ಪಾಂಡುನೃಪತಿ ಜನಕ ಜಯಾ' ಎಂಬ ಹಾಡಿನ ಮೂಲವನ್ನು 'ಕ್ಷೀರಸಾಗರ ನಮ್ಮನೀ ಯಾ ಕಾನಡೀ ಚಾಲೀವರ' ಎಂದು ಅಚ್ಚಿಸಲಾಗಿದೆ. ಅದು ಅಶುದ್ಧ ಪಾಠ. ಆ ಹಾಡಿರುವುದು ಕನ್ನಡ 'ಕೃಷ್ಣ ಪಾರಿಜಾತ'ದಲ್ಲಿ. ಹೀಗೆ : 'ಕ್ಷೀರಸಾಗರ ತವರಮನಿ, ದ್ವಾರಕಾ ನಮ್ಮ ಅತ್ತೀಮನಿ, ಈಗ ವಾಸವಾಗಿರುವುದು ವೈಕುಂಠಪುರವಮ್ಮಾ'.

ಹೀಗೆ ಮರಾಠೀ ರಂಗಭೂಮಿ ಕರ್ನಾಟಕದಿಂದ ನಾಟ್ಯಸಂಗೀತವನ್ನು ಎರವಲು ಪಡೆಯಿತು. ತಾನೂ ಶ್ರೀಮಂತವಾಯಿತು. ತೆಗೆದುಕೊಂಡ ಸಂಗೀತವನ್ನೂ ಸಮೃದ್ಧಗೊಳಿಸಿತು.

ಕರ್ನಾಟಕ ಸಂಗೀತಗಾರರ ಕಲ್ಪನೆಗೂ ಮೀರಿ ಆ ಹಾಡುಗಳಲ್ಲಿ ಮಾಧುರ್ಯವನ್ನೂ ಶ್ರುತಿ ಶುದ್ಧತೆಯನ್ನೂ ರಾಗವಿಸ್ತಾರವನ್ನೂ ತಾನಗಳ ವೈಭವವನ್ನೂ ತುಂಬಿ ನಾಟ್ಯ ಸಂಗೀತ ವೆಂಬುದನ್ನು ಒಂದು ನಿಸ್ಸೀಮ ಕಲೆಯಾಗಿ ರೂಪಿಸಿಕೊಂಡಿತು. ಚಿನ್ನವನ್ನು ತೆಗೆದುಕೊಂಡು ಆಭರಣಗಳನ್ನು ಮಾಡಿ ಅವನ್ನು ಪುನಃ ಚಿನ್ನ ಕೊಟ್ಟವರಿಗೇ ಮಾರಿದಂತೆ. ಕರ್ನಾಟಕಿ ಧಾಟಿಗಳನ್ನು ತನ್ನದಾಗಿಸಿಕೊಂಡು ಪರಿಷ್ಕಾರವಾದ ಮರಾಠೀ ಪದಗಳ ಧಾಟಿಗಳನ್ನು ಪುನಃ ಕನ್ನಡ ರಂಗಭೂಮಿಗೆ ಅರ್ಪಿಸಿತು. ಈ ಕೊಡುಕೊಳ್ಳುವಿಕೆಯಿಂದ ಕನ್ನಡ-ಮರಾಠೀ ರಂಗಭೂಮಿಗಳು ಸಮೃದ್ಧಿ ಪಡೆದು ವೈಭವಶಾಲಿಗಳಾದವು.

ಆದರೆ ದುರ್ದೈವದಿಂದ ಸಿನಿಮಾ ಸಂಗೀತದ ಹಾವಳಿಯನ್ನು ಎದುರಿಸಲಾರದೆ ಮತ್ತು ಐವತ್ತು ವರ್ಷಗಳ ಹಿಂದೆ ಅಂದಿನ ಆಧುನಿಕ ನಾಟಕಕಾರರಾದ ಶ್ರೀರಂಗ, ಕೈಲಾಸಂ, ಕಾರಂತರ ನಿಂದೆ, ಟೀಕೆ ವಿಡಂಬನೆಗಳನ್ನು ತಾಳಿಕೊಳ್ಳಲಾರದೆ ಕನ್ನಡ ನಾಟ್ಯ ಸಂಗೀತವು ಕ್ಷೀಣಿಸುತ್ತ ಹೋಗಿ ಕೊನೆಗೆ ಭಾರತದ ಸ್ವಾತಂತ್ರ್ಯಾನಂತರ ಕೊನೆಯುಸಿರೆಳೆಯಿತು. ಮಹಾರಾಷ್ಟ್ರದಲ್ಲಿ ಮಾತ್ರ ಸಿನಿಮಾ ಪ್ರಪಂಚ ಬೆಳೆಯಲಿಲ್ಲ. ವರ್ಷಕ್ಕೆ ನಾಲ್ಕಾರಕ್ಕಿಂತ ಈಗಲೂ ಹೆಚ್ಚು ಮರಾಠೀ ಚಿತ್ರಪಟಗಳು ನಿರ್ಮಾಣಗೊಳ್ಳುತ್ತಲಿಲ್ಲ. ಪ್ರತಿಯಾಗಿ ವರ್ಷಕ್ಕೆ ಮುನ್ನೂರಕ್ಕಿಂತ ಹೆಚ್ಚು ಹೊಸ ಹೊಸ ನಾಟಕಗಳು ರೂಪುಗೊಂಡು ಮರಾಠೀ ರಂಗಮಂಚವನ್ನೇರುತ್ತವೆ. ಆಧುನಿಕ ಮರಾಠೀ ನಾಟಕಕಾರರಾಗಲೀ ನಟರಾಗಲೀ ಪ್ರೇಕ್ಷಕ ವಿಮರ್ಶಕರಾಗಲೀ ಎಂದೂ ಹಳೇ ಕಂಪನೀ ನಾಟಕಗಳ ನಟರನ್ನಾಗಲೀ ಅಭಿನಯರಂಗತಂತ್ರವನ್ನಾಗಲೀ ಅಗೌರವದಿಂದ ಕಾಣಲಿಲ್ಲ. ಈಗಲೂ ಕಾಣುವುದಿಲ್ಲ. ಹಾಗಾಗಿ ಮರಾಠೀ ರಂಗಭೂಮಿಯೂ ಮತ್ತು ಅವರ ನಾಟ್ಯ ಸಂಗೀತವೂ ಇಂದಿಗೂ ಜೀವಂತವಾಗಿ ಉಳಿದಿವೆ, ಬೆಳೆದಿವೆ, ಬೆಳೆಯುತ್ತಲೇ ಇವೆ.

■ ಕೃಪೆ : ಕರ್ಮವೀರ : ದೀಪಾವಳಿ ವಿಶೇಷಾಂಕ : ೧೯೮೮ ■

ಅಲೀ ಸರ್‌ದಾರ್ ಜಾಫ್‌ರೀಯವರ ಆರು ಕವಿತೆಗಳು —ವಿಭಾ

೧. ಒಂದು ಕ್ಷಣ-ದರ್ಶನ

ಕೇವಲ ಆಕೆಯ ಸೆರಗು ಅಲ್ಲಾಡಿತು
ಕಾಮನಬಿಲ್ಲಿನ ಬಣ್ಣಗಳು ಆಗಸವನ್ನೆ ಮುತ್ತಿದವು
ನನ್ನ ಧಮನಿಯಲ್ಲಿ ರಕ್ತ ವೇಗವಾಗಿ ಸಂಚರಿಸಿತು.
ಈಗಷ್ಟೇ ಯಾರೋ ನನ್ನ ಹೃದಯ ತಟ್ಟಿದರು
ಕನಸಿನ ಗುಲಾಬಿ ಅರಳಿತು
ನನ್ನ ಬಯಕೆಯ ಮಡಿಲು ತುಂಬಿ ತುಳುಕಿತು.

೨. ಬೆಂಕಿ ಮತ್ತು ಇಬ್ಬನಿ

ಒಂದು ಕ್ಷಣ, ನೀನು ಬೆಂಕಿ
ಮರುಗಳಿಗೆಯೇ ಇಬ್ಬನಿ
ನೀನು ಸಾವಿರ ಮುಖಗಳಿರುವ
ಒಂದು ರತ್ನ
ಕೆಲವೊಮ್ಮೆ, ನೀನು ಅಪ್ಸರೆ
ಮರುಗಳಿಗೆಯೇ ಕಲ್ಲಿನ ದೇವತೆ,
ನೀನೇ ನನ್ನ ಕೊಲೆಗಾರ್ತಿ
ನೀನೇ ನನ್ನ ಹಡೆದಾಕಿ.

೩. ನಿದ್ದೆ (ನನ್ನ ಮಗನ ಮೊದಲ ಹುಟ್ಟುಹಬ್ಬದ ದಿನ)

ರಾತ್ರಿ ಸುಂದರವಾಗಿದೆ
ಎಲ್ಲಿ ನನ್ನ
ಹಗಲಿನ ಕ್ರೂರ ಕಂಗಳು
ಕತ್ತಲಲ್ಲಿ ಕರಗಿವೆ
ಕಬ್ಬಿಣ ಕಟೆಯುವ ಸಪ್ಪಳ
ಸುತ್ತುವರಿದ ಬೇಡಿಗಳು
ಕೈದಿಗಳ ಭಾರ-ಉಸಿರು
ಘೋರ, ತೀಕ್ಷ್ಣ ದನಿಗಳು
ಪ್ರಮಾಣ ಮಾಡುವ ಜೈಲು-ಗಾರ್ಡುಗಳು
ಶಾಪಗಳ ಮಳೆ.
ಅಸಹಾಯಕತೆಯ ಮೌನ
ಮೌನದ ಅಳಲು
ಎಲ್ಲವನ್ನೂ ಕತ್ತಲೊಳಗೆ
ಹೂಳಲಾಗಿದೆ.
ರಾತ್ರಿ-ಕನ್ಯೆ ಮುಳ್ಳು
ತಂತಿಗಳನ್ನು
ಮತ್ತು ಉಕ್ಕಿನ ಚೀಲಗಳನ್ನು
ಕ್ರಮಿಸಿದ್ದಾಳೆ ನನ್ನ
ಬಳಿ ಬರಲು
ಅವಳ ಉಡಿಯ ತುಂಬ
ಕಾಡಿನ ಪರಿಮಳ
ಪರ್ವತಗಳ ಶಾಂತಿ
ಈ ರಾತ್ರಿ ಸುಂದರವಾಗಿದೆ
ಎಲ್ಲಿ ನನ್ನ ನಿದ್ರೆ

ನೀಲಿಗಟ್ಟಿವೆ ಎಳೆಯ ಮನಸು
ನೀಲಿಗಟ್ಟಿವೆ ತರುಣ ತೋಳುಗಳು
ಆಕಾಶಗಂಗೆಯ ಹಣೆ
ಅರ್ಧಚಂದ್ರನಿಂದ ಹೊಳೆವ ಕೂದಲು
ರಾತ್ರಿಯ ಮಖಮಲ್ಲಿನ ನಿಲುವಂಗಿ
ಸಮಯ ಕಪ್ಪು ಕೂದಲು
ಶಾಂತ ಬಾಹುಗಳನ್ನು ಸುಗಂಧಿತಗೊಳಿಸಿವೆ
ಭುವಿಯ ತುಟಿಯ ಮೇಲಿನ
ಮೃದು ಮಂಜಿನ ಮುತ್ತುಗಳು
ನಗೆಯಲ್ಲರಳಿವೆ
ಈ ರಾತ್ರಿ ಸುಂದರವಾಗಿದೆ
ಎಲ್ಲಿ ನನ್ನ ನಿದ್ರೆ?

ಚಂದ್ರನ ತೊಟ್ಟಿಲಲ್ಲಿ ರಾತ್ರಿ
ಎತ್ತರೆತ್ತರ ಜೀಕುತ್ತಿವೆ
ಆಕಾಶದಲ್ಲಿ ಪುಟ್ಟ ನಕ್ಷತ್ರಗಳು
ಮಾಯೆಯ ಕತೆಯ ಹೆಣೆಯುತ್ತಿವೆ
ಜಿರಲೆಯ ಸದ್ದು
ಇನ್ನೊಂದು ಕತೆ ಹೇಳುತ್ತಿದೆ
ದೂರ, ಜೈಲಿನಾಚೆಗೆ
ಶಹನಾಯಿಯ ಸದ್ದು
ರೈಲು ತನ್ನ ಉಕ್ಕಿನ
ಬೋಗಿಗಳಿಗೆ ಜೋಗುಳ
ಹಾಡುತ್ತಿದೆ
ಈ ರಾತ್ರಿ ಸುಂದರವಾಗಿದೆ
ಎಲ್ಲಿ ನನ್ನ ನಿದ್ರೆ.

೪. ಒಂದು ಕವಿತೆ

ಕತ್ತಲು
ಮನುಷ್ಯನ ರಕ್ತದ
ನಿಲುವಂಗಿ ತೊಟ್ಟು
ಕಣ್ಣು ಕಾಣದವರಿಗೆ
ಭರವಸೆಯ ಮರೀಚಿಕೆ ಧಾರೆಯೆರೆದಿದೆ.

೫. ಸೃಷ್ಟಿಯ ವೇದನೆ

ನನ್ನ ಎಚ್ಚರಿಕೆಯ ಕಂಗಳು ಈಗಷ್ಟೆ
ಕಂಡಿವೆ
ನಕ್ಷತ್ರಗಳ ಕೊನೆಯ ನಿಲುಗಡೆಯನ್ನು
ಕಗ್ಗತ್ತಲ ರಾತ್ರಿಯ ಹುಲ್ಲುಗಾವಲಲ್ಲಿ.
ಇದು ಕತ್ತಲೆಯ
ಎದೆ ಬಡಿತವೊ?
ನನಗೆ ಹೇಳಲಾಗದು.
ಹಾಡಿನ ವ್ಯಥೆ
ಶಬ್ದಗಳಿಗೆ ನಿಲುಕದ್ದು
ನನ್ನೆದೆಯ ವೀಣೆಯಿಂದ
ರಕ್ತ ಹನಿಯುತ್ತಿದೆ.

೬. ಗೈರು ಹಾಜರಿ

ನೀನು ಬರದೆ ಇರುವಾಗಲೂ
ನೀನಿಲ್ಲೆ ಇರುತ್ತಿ
ನನ್ನ ಕಣ್ಣ ನೋಟದ ಹಾಗೆ
ನನ್ನ ಹೃದಯ ಬಡಿತದ ಹಾಗೆ
ನನ್ನ ನೋವಿನುರಿಯ ಹಾಗೆ
ಪ್ರೀತಿಯ ಪರಿಮಳದ ಹಾಗೆ
ನಿನ್ನೊಡನೆ ಮುರಿದ ಭಾಷೆ
ಪ್ರಮಾಣಗಳ ತಣ್ಣನೆಯ
ಸಮಾಧಾನ ತಂದಿರುತ್ತಿ.

ನೀನು ಬರದೆ ಇರುವಾಗಲೂ
ನೀನಿಲ್ಲೆ ಇರುತ್ತಿ
ರಾತ್ರಿಯ ಹೃದಯದೊಳಗೆ
ಇರಿಸಿದ ಚಂದ್ರನ ಚೂರಿಯ ಹಾಗೆ
ನಸುಕಿನ ಕೈಗಳು ಸೂರ್ಯನ
ಬಟ್ಟಲು ಹಿಡಿದ ಹಾಗೆ
ಬಯಕೆಯ ರಕ್ತ-ಸಿಕ್ತ ಬಳ್ಳಿಯಲ್ಲಿ
ಅರಳಿದ ಹೂವಿನ ಹಾಗೆ

ನೀನು ಬರದೆ ಇರುವಾಗಲೂ
ನೀನಿಲ್ಲೆ ಇರುತ್ತಿ
ನೆನಪಿನ ಹಾಗೆ
ಹೃದಯದ ಕಂಪನದ ಹಾಗೆ
ದುಃಖದ ಬಟ್ಟಲು ಚೆಲ್ಲಿದ ಹಾಗೆ
ತುಟಿ-ಗಲ್ಲಗಳ ಎಸಳುಗಳು ಪರಿಮಳಿಸಿದ ಹಾಗೆ
ಅರೆಸತ್ತ ಬಯಕೆಗಳ ಬೂದಿಯ ಎಚ್ಚರಿಸಿದ ಹಾಗೆ

ರಾತ್ರಿಯ ಬಣ್ಣ
ಜಡೆಯಿಂದ ಜಡೆಗೆ ಹರಡುತ್ತಿದೆ
ಅಗಲಿಕೆಯ ರಾತ್ರಿ
ಒಂದಾಗುವ ರಾತ್ರಿಯಂತೆ ಭಾಸವಾಗುತ್ತದೆ
ಪ್ರತಿ ಮುಂಜಾವು ಪ್ರೀತಿಯ ನೆಲದಿಂದ
ಗಾಳಿ ಸಂದೇಶ ತರುತ್ತದೆ
ಪ್ರತಿ ನಸುಕು ಅಗಲಿಕೆಯ
ಮಂತ್ರ ಹಾಡುತ್ತದೆ
ಈಗ ನೀನು ಬಂದಿರುವೆ
ಬರುವ ಮಾತನ್ನಷ್ಟೆ ಆಡೋಣ
ನೀನೀಗ ಬಂದಿರುವೆ
ನಾ ನಿನಗೇನು ಕೊಡಲಿ
ನನ್ನ ಬಳಿ ಇರುವುದೆಲ್ಲ ಬರಿ ಪ್ರೀತಿ ವಿಶ್ವಾಸ
ನನ್ನ ಬಳಿ ಇರುವುದೆಲ್ಲ ಬರಿ
ಒಂದು ಅನಾಥ ಭರವಸೆ.

ಹವಿಗನ್ನಡದ ಆರಂಭದ ಎರಡು ಕಾದಂಬರಿಗಳು —ಹರಿಕೃಷ್ಣ ಭರಣ್ಯ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಹಳಷ್ಟು ಮಂದಿ ಹವ್ಯಕರು ಖ್ಯಾತರಾಗಿದ್ದರೂ, ಹವ್ಯಕ ಜನ-ಜೀವನ-ಸಂಸ್ಕೃತಿಗಳ ಬಗೆಗೆ ರಚಿಸಲಾದ ಕೃತಿಗಳು ತೀರಾ ಕಡಿಮೆ ಎನ್ನಬಹುದು. ಹವ್ಯಕೇತರರೂ ಕೆಲವು ರಚನೆಗಳಲ್ಲಿ ಹವ್ಯಕರ ಬಗೆಗೆ ಚಿತ್ರಿಸಿದ್ದು ಕಂಡುಬರುತ್ತದೆ. ಶಿವರಾಮ ಕಾರಂತರು ತಮ್ಮ 'ಬೆಟ್ಟದ ಜೀವ' ಮುಂತಾದ ಕೆಲವು ಕೃತಿಗಳಲ್ಲಿ ಹವ್ಯಕ ಕುಟುಂಬದ ಬಗೆಗೆ ಚಿತ್ರಿಸಿದ್ದನ್ನು ನೋಡುತ್ತೇವೆ. ಅನಂತರ, ಹವ್ಯಕ ಬರಹಗಾರರು ಅಲ್ಲೊಮ್ಮೆ ಇಲ್ಲೊಮ್ಮೆ ತಮ್ಮ ಕತೆ ಕಾದಂಬರಿಗಳಲ್ಲಿ ಸಾಂದರ್ಭಿಕವಾಗಿ ಹವಿಗನ್ನಡ ನುಡಿಗಳನ್ನು ಅಲ್ಲಲ್ಲಿ ತುಂಬಿಕೊಂಡವರಿದ್ದಾರೆ. ಡಾ. ನಾ. ಮೊಗಸಾಲೆ, ಭಾರತೀಸುತ, ಗಂಗಾ ಪಾದೇಕಲ್ಲು ಮೊದಲಾಗಿ ಕೆಲ ಮಂದಿ ಖ್ಯಾತ ಕತೆಗಾರರು ಹವ್ಯಕತನವನ್ನು ಚಿತ್ರಿಸುತ್ತಾ, ಹವಿಗನ್ನಡ ನುಡಿಗಳನ್ನೂ ಬಳಸಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ, ಬಹುಶಃ ಸಂಭಾಷಣೆಯ ಹಂತದಲ್ಲಿ ಹವಿಗನ್ನಡವನ್ನು ಬಳಸಿಕೊಂಡ ಮೊದಲ ಲೇಖಕರನ್ನಾಗಿ ಡಾ. ಮೊಗಸಾಲೆಯವರನ್ನು ಗುರುತಿಸಬಹುದು. ಅವರು

೧೯೬೮ ರಲ್ಲಿ ರಚಿಸಿದ 'ಅನಂತ' ಕಾದಂಬರಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಸೀಮೆಯ ಹವಿಗನ್ನಡವು ರಾರಾಜಿಸಿದೆ. ೧೯೭೧ ರಲ್ಲಿ ಭಾರತೀಸುತರು ರಚಿಸಿದ 'ವಕ್ರರೇಖೆ'ಯು ಈ ಸಾಲಿನಲ್ಲಿ ಎರಡನೆಯ ಮುಖ್ಯ ಕೃತಿಯಾಗಿದೆ. ಮುಂದೆ, ೧೯೯೬ ರಿಂದ ಈಚೆಗೆ ಹವಿಗನ್ನಡದಲ್ಲಿ ರಚಿಸಲಾದ ಪೂರ್ಣಪ್ರಮಾಣದ ಕಾದಂಬರಿಗಳು ಬಂದಿವೆ. ಪ್ರಸ್ತುತ ಲೇಖನದಲ್ಲಿ ಹವಿಗನ್ನಡ ವನ್ನು ಸಂಭಾಷಣೆಯ ಹಂತದಲ್ಲಿ ಬಳಸಿಕೊಂಡ ಆರಂಭದ ಎರಡು ಕಾದಂಬರಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅನಂತ

ಡಾ. ನಾ. ಮೊಗಸಾಲೆಯವರು 'ಅನಂತ' ಎಂಬ ಕಾದಂಬರಿ(೧೯೬೮)ಯನ್ನು (ಪುರೋಗಾಮಿ ಸಾಹಿತ್ಯ ಸಂಘ, ಬೆಂಗಳೂರು) ರಚಿಸಿದ್ದಾರೆ. ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ-ಕೋಳ್ಯೂರು ಸೀಮೆಯ ಹವ್ಯಕ ಮನೆಯೊಂದರ ಕತೆಯಿದೆ. ದಕ್ಷಿಣ ಕನ್ನಡದ ಹವ್ಯಕರಲ್ಲಿ ಸೋದರ ಸೊಸೆಯನ್ನು ಮಾವನು ವಿವಾಹವಾಗುವ ರೂಢಿಯಿಲ್ಲ. ಈ ಕಾದಂಬರಿಯ ನಾಯಕ ಅನಂತನು ಡಾಕ್ಟರಿಕೆ ಓದನ್ನು ಮುಗಿಸಿ ಊರಿಗೆ ಬಂದಿರುತ್ತಾನೆ. ತನ್ನ ಅಕ್ಕ ಪಾರ್ವತಿಯ ಮಗಳು ಭಾರತಿಯನ್ನು ಚಿಕ್ಕಂದಿನಿಂದಲೇ ಪ್ರೀತಿಸಿರುತ್ತಾನೆ. ಈ ವಿಚಾರವು ಆತನ ಮನೆಯವರಿಗಾಗಲೀ, ಅಕ್ಕ-ಭಾವನವರಿಗಾಗಲೀ ನೇರವಾಗಿ ತಿಳಿದಿರುವುದಿಲ್ಲ. ಅನಂತನದ್ದು ಈ ಸಂಪ್ರದಾಯದ ಬಗೆಗಿನ ಜಿಜ್ಞಾಸೆ. ಹಾಗೆಯೇ ಅಕ್ಕ-ಭಾವ, ಅಪ್ಪ-ಅಮ್ಮಂದಿರನ್ನು ಹೇಗೆ ಒಪ್ಪಿಸುವುದೆಂಬ ಚೋದ್ಯ. ಇದಕ್ಕಾಗಿ ಮಿತ್ರ ವೆಂಕಟರಮಣನ ಸಹಾಯವನ್ನು ಯಾಚಿಸುತ್ತಾನೆ. ಈ ನಡುವೆ, ಹೆತ್ತವರು, ಭಾರತಿಗೆ ಬೇರೆಯ ವರನೊಂದಿಗೆ ಮದುವೆಯನ್ನು ನಿಶ್ಚಯಿಸುತ್ತಾರೆ. ಈ ಹಂತದಲ್ಲಿ ಅನಂತನ ವಿಚಾರವು ಭಾರತಿಗೆ ತಿಳಿದಿರುತ್ತದೆ, ಮಾತ್ರವಲ್ಲ ಈಗ ಭಾರತಿಗೆ ಏನೊಂದೂ ತೋಚದೇ, ಮಾನಸಿಕ ತುಮುಲಕ್ಕೊಳಗಾಗಿ ಅಸಹಾಯಕಳಾಗುತ್ತಾಳೆ, ಆತ್ಮಹತ್ಯೆ ಯೊಂದೇ ದಾರಿ ಎಂಬಂತೆ ತೀರ್ಮಾನಿಸಿ ಹಾಗೆ ಮಾಡುತ್ತಾಳೆ. ಕಾದಂಬರಿ ದುರಂತದಲ್ಲಿ ಮುಕ್ತಾಯಗೊಳ್ಳುತ್ತದೆ.

ಕಾದಂಬರಿಕಾರರು ಕೃತಿಯೊಳಗೆ ವಿಟ್ಲ ಸೀಮೆಯ ಹವಿಗನ್ನಡ ಆಡುನುಡಿಯಲ್ಲಿ ಸಂಭಾಷಣೆ ಗಳನ್ನು ಕೊಟ್ಟಿದ್ದಾರೆ. ಹವೀಕ ಸಮಾಜದ, ತೋಟ, ಕೃಷಿ, ಹಸು-ಕರುಗಳು, ಹುಲಿಗಳ ಕಾಟ, ಪುತ್ತೂರು ಸಂತೆ, ಆತಿಥ್ಯ, ಮಕ್ಕಳ ಆಟಗಳು ಇತ್ಯಾದಿಯಾಗಿ ಅನೇಕ ವಿಚಾರಗಳನ್ನು ದಾಖಲಿಸುತ್ತಾರೆ. ಭಾಷೆಯ ದೃಷ್ಟಿಯಿಂದ ನೋಡಿದರೆ, ಸಹಜವಾದ ಮಾತಿನ ಶೈಲಿ, ಪಡೆನುಡಿ, ಬೈಗಳು, ಗಾದೆಗಳ ಬಳಕೆಯನ್ನು ನಿರಾಯಾಸವಾಗಿ ಮಾಡಿದ್ದಾರೆ. ಎಲ್ಲರಿಗೂ ಅರ್ಥವಾಗುವಂತೆ ಕಾದಂಬರಿಯ ಕೊನೆಯಲ್ಲಿ ಅರ್ಥಕೋಶವನ್ನು ಕೊಟ್ಟಿದ್ದಾರೆ. ಇದರಲ್ಲಿ ಒಟ್ಟು ಹನ್ನೆರಡು ಅಧ್ಯಾಯಗಳಿದ್ದು ೧೨೭ ಪುಟಗಳಿವೆ. ಬಹುಶಃ ಕಾದಂಬರಿಯ ಮಟ್ಟದಲ್ಲಿ ಹವಿಗನ್ನಡದಲ್ಲಿ ಸಂಭಾಷಣೆಗಳನ್ನು ಕೊಟ್ಟ ಮೊದಲ ಕೃತಿ ಇದಾಗಿದೆ. ಹವಿಗನ್ನಡ ರಚನೆಗಳ ಚರಿತ್ರೆಯಲ್ಲಿ ಇದಕ್ಕೆ ವಿಶಿಷ್ಟವಾದ ಸ್ಥಾನವಿದೆ.

ಸಾಹಿತ್ಯ ಕೃತಿಯೊಳಗೆ ಸಾಂದರ್ಭಿಕವಾಗಿ ಆಡುನುಡಿಯನ್ನು ಬಳಸಿಕೊಳ್ಳುತ್ತಿರುವುದು ಇಮು ಸುರುವೇನಲ್ಲವಾದರೂ, ಇಲ್ಲಿನ ಪಾತ್ರಗಳು-ವಾತಾವರಣಗಳೆಲ್ಲವೂ ಹವ್ಯಕ ಸಮುದಾಯದ್ದೇ

ಆದುದರಿಂದ ಆ ನುಡಿಯನ್ನು ಸಂಭಾಷಣೆಗಳಲ್ಲಿ ಹೆಚ್ಚಿನೆಡೆಗಳಲ್ಲಿ ಬಳಸಿಕೊಂಡಿರುವುದು ಉಚಿತವೆನ್ನಿಸಿದೆ. ಹೀಗಾಗಿ, ಓದುಗರ ಪ್ರತಿಕ್ರಿಯೆಗಳು ಹೇಗಿರಬಹುದೆಂಬುದರ ಎಚ್ಚರ ಇಲ್ಲಿ ಚೆನ್ನಾಗಿ ಕಂಡುಬಂದಿದೆ. ಈ ಕೃತಿಗೆ ಮೊದಲ ಮಾತನ್ನು ಬರೆದ ಪ್ರಕಾಶಕ, ಸಂಪಾದಕರಲ್ಲಿ ಒಬ್ಬರಾದ ಬಿ. ಜಿ. ಸತ್ಯಮೂರ್ತಿಯವರು, "ಕೃತಿಯಲ್ಲಿನ ಆಡುಭಾಷೆಯ ಭಾಗವೆಲ್ಲ ಹವ್ಯಕ ಭಾಷೆಯಲ್ಲಿಯೇ ಇರುವುದರಿಂದ ಓದುಗರ ರಸಾಸ್ವಾದಕ್ಕೆ ಅಡ್ಡಿಯುಂಟಾಗಬಹುದು, ಸಾಮಾನ್ಯ ಜನಕ್ಕೆ ರಂಜಿಸಲಿಕ್ಕಿಲ್ಲ– ಎಂಬ ಅಪವಾದಕ್ಕೆ ಹತ್ತಿರವಾಗಿದ್ದರೂ ಉಳಿದ, ವಸ್ತುವಿನ ಆಯ್ಕೆ, ಪಾತ್ರಪೋಷಣೆ, ಮಲೆನಾಡಿನ ಪ್ರಕೃತಿ ವರ್ಣನೆ, ಆಕರ್ಷಕವಾಗಿವೆ..." (ಪು. ೭) ಎಂದಿದ್ದಾರೆ.

ಕರ್ನಾಟಕದಲ್ಲಿ ಕನ್ನಡದ ಅನೇಕ ಪ್ರಭೇದಗಳಿವೆ. ಆಯಾ ಪ್ರದೇಶದ ಭಾಷೆ, ಪ್ರಧಾನ ಭಾಷೆಗಿಂತ ಅಲ್ಪಸ್ವಲ್ಪ ಭಿನ್ನವಾಗಿದ್ದರೂ, ಅವೆಲ್ಲವೂ ಪ್ರಧಾನ ಭಾಷೆಯ ಅವಿಭಾಜ್ಯ ಘಟಕಗಳೇ ಆಗಿವೆ. ವಿವಿಧ ಪ್ರಾದೇಶಿಕ ಭಾಷೆಗಳು ಸೇರಿಯೇ, ಸಮಗ್ರವಾದ ಭಾಷೆ-ಸಂಸ್ಕೃತಿಗಳ ಕಲ್ಪನೆ ಇರುತ್ತದೆ. ಹೀಗಿರುವುದರಿಂದ ವಿವಿಧ ಸಂಸ್ಕೃತಿಗಳ ದರ್ಶನವಾಗಬೇಕಾದರೆ ವಿವಿಧ ನುಡಿಗಳ ದರ್ಶನವೂ ಆಗಬೇಕು. ಈ ನಿಟ್ಟಿನಲ್ಲಿ ಇದೊಂದು ಪ್ರಯತ್ನ ಎಂಬ ಅರ್ಥಪೂರ್ಣವಾದ ಮಾತನ್ನು ಇಲ್ಲಿ ಅವರು ಹೇಳುತ್ತಾರೆ : "...ನಮ್ಮ ದೇಶ ಕರ್ನಾಟಕ ಎಂಬ ವಿಶಾಲ ಮನೋಭಾವನೆ ಮೂಡುವುದು ಅವಶ್ಯ. ಹೀಗಾಗಬೇಕಾದರೆ ಪರಸ್ಪರರಿಗೆ ವಿವಿಧ ಪ್ರಾದೇಶಿಕ ಭಾಷೆಯ ಪರಿಚಯವಾಗಬೇಕು. ಜನಜೀವನ, ಸಂಸ್ಕೃತಿಗಳ ದರ್ಶನವಾಗಬೇಕು. ಈ ಬಗ್ಗೆ ಈಗಾಗಲೇ ಅನೇಕ ಹೆಸರಾಂತ ಲೇಖಕರ ನೂರಾರು ಪ್ರಯತ್ನಗಳಾಗಿವೆ. ಈ ಸಾಲಿಗೆ ನಮ್ಮ ಮಾಲಿಕೆ ಮತ್ತೊಂದು ಪುಷ್ಪವನ್ನು ಸೇರಿಸುವ ಪ್ರಯತ್ನವೇ ಈ ಕೃತಿಯ ಪ್ರಕಟಣೆ..." (ಅದೇ. ಪು. ೮).

ಲೇಖಕ ಮೊಗಸಾಲೆಯವರು ತಮ್ಮ ನುಡಿಯಲ್ಲಿ ಹೇಳಿಕೊಂಡಂತೆ, ಇದು ೧೯೩೫-೪೦ ರ ಸಮಯದ ಹವ್ಯಕ ಸಮಾಜದ ಚಿತ್ರಣವಾಗಿದ್ದು. ಆ ಕಾಲದ ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಗಳು, ವ್ಯವಹಾರಗಳು ಜನಜೀವನ– ಇತ್ಯಾದಿಗಳು ಇಲ್ಲಿ ಮೂಡಿಬಂದಿವೆ. ಒಂದು ರೀತಿಯಲ್ಲಿ, ಇದೊಂದು ಸಾಂಸ್ಕೃತಿಕ ದಾಖಲೆಯೂ ಆಗುತ್ತದೆ. ಮಕ್ಕಳು ಆಗಿನ ಕಾಲದಲ್ಲಿ ಆಡುತ್ತಿದ್ದ ಆಟಗಳು, ಎರಡಾಣೆ ಪಾವಲಿ(೩೯), ಮುಕ್ಕಾಲಿಗೆ ಎರಡು(೭೮), ಕೋಳ್ಯೂರು ಮಂಡಲ ಪೂಜೆ(೪೦)– ಇತ್ಯಾದಿಗಳೊಂದಿಗೆ ಭಾಷೆಯ ಸಹಜ ಸೊಗಡು ನೋಡಿ : ಲೂಟಿ ಮಾಡು(೨೦) ರೈಸು(೨೮), ಸಮ್ಮಾನ ಮಾಡು(೩೪), ಕೂಸೆ(೩೯), ನಾಲ್ಕು ಕೂಸು ಹೆತ್ತೋನಿಂಗೆ ಕೊರಳಿಂಗೆ ಉರುಳೇ ಗತಿ(೪೦), ಬಲಗ್ಯೆ ಮುರುದ ಹಾಂಗೆ(೫೮), ಬೆತ್ತ ತರೆಕ್ಕಾ?(೭೫), ಲಾಮುಕಟ್ಟಿ(೧೧೯), ಸತ್ತ ಸೂತಕ(೧೨೫) ಇತ್ಯಾದಿ, ಎಲ್ಲವೂ ಸಾಂಸ್ಕೃತಿಕ ಅಧ್ಯಯನವನ್ನು ನಡೆಸುವವರಿಗೆ ಅಮೂಲ್ಯವಾದ ದಾಖಲೆಗಳೂ ಆಗುತ್ತವೆ.

ಆ ಕಾಲಕ್ಕೆ, ಸಮಾಜದಲ್ಲಿದ್ದ ಕೆಲವು ಅರ್ಥಹೀನ ಸಂಪ್ರದಾಯಗಳನ್ನೂ ಪ್ರಶ್ನಿಸುವುದರೊಂದಿಗೆ, ಹವ್ಯಕ ಸಮುದಾಯದಲ್ಲಿ ಇಲ್ಲದ, ಸೋದರ ಸೊಸೆಯನ್ನು ಮದುವೆಯಾಗುವ ಬಗ್ಗೆ ಲೇಖಕರು ತರುವ ಒಂದು ಸನ್ನಿವೇಶ ಹೀಗಿದೆ : ನಾಯಕ ಅನಂತನು ನಾಯಕಿ ಭಾರತಿಗೆ

ಹೇಳುವ ವಿಚಾರ : "... ಮಾವ-ಸೊಸೆಯ ಮದುವೆ ಅಪ್ಪ ಸಂಪ್ರದಾಯ ಇಲ್ಲೆ ಅಲ್ಲದಾ? ಅದರನ್ನೇ ಕುರಿತು ಆನು ಬರದ್ದು. ಸೊಸೆಯ ಮದುವೆ ಅಪ್ಪದು ಪಾಪದ ಕೆಲಸ, ಅಧರ್ಮ, ಹೀಂಗೆಲ್ಲಾ ನಮ್ಮ ಮೂಢನಂಬಿಕೆಯೇ ಹೊರತು ಈ ಪಾಪ ಪುಣ್ಯ ಇಲ್ಲೆ ಅದರಲ್ಲಿ. ಮೈಸೂರಿನ ಕಡೆ ಮದುವೆ ಅಪ್ಪಲೆ ಅಕ್ಕು ಹೇಳಿ ಆದರೆ ದಕ್ಷಿಣ ಕನ್ನಡಲ್ಲಿ ಅದೂ ಹವ್ಯಕರಲ್ಲಿ ಎಂತಕೆ ಅಪ್ಪಲೆ ಆಗ? ಇದೆಲ್ಲಾ ರೂಢಿ ಮೂಢ್ಯಂಗ. ಈ ಸಂಕುಚಿತ ಮನೋಭಾವ, ಅತಿ ಭಾವುಕತೆ, ಅತಿ ಧರ್ಮಶ್ರದ್ಧೆ - ತೊಡೆದು ಹಾಕೆಕ್ಕು..." (ಪು. ೫೩).

ಕಥಾನಾಯಕನ ಈ ಕನಸು ಕೊನೆಗೂ ಕನಸಾಗಿಯೇ ಉಳಿಯುತ್ತದಾದರೂ, ಕತೆಯು ಕುತೂಹಲಕರವಾಗಿ ಓದಿಸಿಕೊಂಡು ಹೋಗುತ್ತದೆ. ಹವ್ಯಕರ ಸಂಪ್ರದಾಯ - ರೂಢಿಗಳ ಬಗ್ಗೆ ಬರೆಯಲಾದ ಮೊದಲ ಕಾದಂಬರಿ ಇದಾಗಿರುವಂತೆಯೇ, ಹವಿಗನ್ನಡ ಆಡುನುಡಿಯನ್ನೂ ಮೊದಮೊದಲಿಗೆ ಬಳಸಿಕೊಂಡ ಕೃತಿಯೂ ಇದುವೇ ಆಗಿದೆ.

ವಕ್ರರೇಖೆ

ಭಾರತೀಸುತರು ರಚಿಸಿದ 'ವಕ್ರರೇಖೆ' (೧೯೭೧) ಕಾದಂಬರಿಯು (ಉಷಾ ಸಾಹಿತ್ಯ ಮಾಲೆ, ಮೈಸೂರು) ಉತ್ತರ ಕನ್ನಡ ಜಿಲ್ಲೆಯ ಹಳ್ಳಿಯೊಂದರಲ್ಲಿನ ಹವ್ಯಕ ಕುಟುಂಬದ ಕತೆ. ಇದರಲ್ಲಿ ಬಾಲ್ಯವಿವಾಹದ ದುಷ್ಪರಿಣಾಮಗಳು, ವಿವಾಹಿತ ಬಾಲ ದಂಪತಿಗಳ ಇನ್ನೂ ಬಿಡದ ಹುಡುಗಾಟಿಕೆಗಳು– ಇತ್ಯಾದಿಗಳ ಸ್ಪಷ್ಟ ಚಿತ್ರಣವನ್ನು ನೋಡಬಹುದು. ಇದು ಇಂದಿಗೆ ಸುಮಾರು ನೂರು-ನೂರೈವತ್ತು ವರ್ಷಗಳ ಹಿಂದಿನ ಹವ್ಯಕ ಸಮಾಜವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಮಾತ್ರವಲ್ಲ, ಹವ್ಯಕ ಸಮಾಜದ ಪಾತ್ರಗಳೆಲ್ಲವೂ ಆಯಾ ಪ್ರದೇಶದ ಹವಿಗನ್ನಡ ನುಡಿಯನ್ನೇ ಆಡುತ್ತವೆ. ಇದು ಈ ಕಾದಂಬರಿಯ ಇನ್ನೊಂದು ವಿಶೇಷತೆಯೆನ್ನಿಸುತ್ತದೆ. ಬಹುಶಃ ಕಾದಂಬರಿಯುದ್ದಕ್ಕೂ ಹವಿಗನ್ನಡದಲ್ಲೇ ಸಂಭಾಷಣೆಗಳನ್ನು ನೀಡಿದ ಎರಡನೆಯ ಕಾದಂಬರಿ ಇದುವೇ ಆಗಿದೆ.

ಇಬ್ಬರು ವಿಧವೆಯರ ಬಾಳಿನ ಕತೆಯೇ ಇದರಲ್ಲಿನ ಮುಖ್ಯ ಕಥಾವಸ್ತು. ಪರಮತ್ತೆಯು ಬಾಲವಿವಾಹವಾಗಿ ಎಳವೆಯಲ್ಲೇ ಗಂಡನನ್ನು ಕಳೆದುಕೊಂಡು ಬಾಲವಿಧವೆಯಾದರೆ, ಈ ತಲೆಮಾರಿನ, ಆಕೆಯ ಸೋದರ ಸೊಸೆ (ತಮ್ಮನ ಮಗಳು) ಕೃಷ್ಣವೇಣಿಯು, ವಿವಾಹವಾಗಿ ಆಗ ತಾನೆ ವಿಧವೆಯಾಗುವ ಸನ್ನಿವೇಶದೊಂದಿಗೆ ಕತೆಯು ಕೊನೆಯಾಗುತ್ತದೆ. ಇದರಲ್ಲಿನ ಮುಖ್ಯ ಕಥಾಹಂದರವು ತೀರಾ ಸರಳವಾಗಿದ್ದು ಜಟಿಲವಾದ ವಿಚಾರಗಳತ್ತ ಮುಖ ಮಾಡಿ ನಡೆಯುತ್ತದೆ. ದಾಯಾದಿ ಕ್ಲೇಶ-ಮನಸ್ತಾಪಗಳು ಒಂದೆಡೆ, ಹವ್ಯಕ ಆಚಾರ ವಿಚಾರಗಳ ವರ್ಣನೆಗಳಿನ್ನೊಂದೆಡೆ, ವಿಧವೆಯರ ಮಾನಸಿಕ ತೊಳಲಾಟಗಳ ಚಿತ್ರಣವಿನ್ನೊಂದೆಡೆ.

ಕಾದಂಬರಿಯುದ್ದಕ್ಕೂ ಹವೀಕ ಸಮಾಜದ ಪರ್ಯಾವರಣವನ್ನು ಮನೆತನಗಳ ಚಿತ್ರಣದ ಹಿನ್ನೆಲೆಯಿಂದ ಲೇಖಕರು ಕೊಡುತ್ತಾರೆ. ದೇವಣ್ಣ ಹೆಗಡೆ ಹಾಗೂ ದಾಯಾದಿ ಕೇಶವರೊಳಗಿನ ಮತ್ಸರ, ಜಗಳ, ಕೋರ್ಟು-ತಗಾದೆ, ವ್ಯವಹಾರ, ಪರಂಪರೆಯಿಂದ ಬೆಳೆದುಬಂದ ಬಗೆಯನ್ನು ಹಂತಹಂತವಾಗಿ ಚಿತ್ರಿಸುತ್ತದೆ. ಕೇಶವನು ಮಾಡುವ ಕುತಂತ್ರಗಳು, ದೇವಣ್ಣ ಹೆಗಡೆಯು ಇವನ್ನು ಚಾಣಾಕ್ಷತನದಿಂದ ಸಂಭಾಳಿಸುವ ರೀತಿ, ವೇಣಿಯ ಮದುವೆಯಲ್ಲಿ ದಾಗಿನೀ

ವಿಷಯವಾಗಿ ನಡೆದ ಜಗಳ ರಂಪ, ಇವೆಲ್ಲವನ್ನೂ ಮೀರಿ ಮದುವೆಯು ಸಾಂಗವಾಗಿ ನಡೆದುದು, ಕೇಶವನು ದೇವಣ್ಣನ ಪಿತ್ರಾರ್ಜಿತ ಜಾಗವನ್ನು ಒತ್ತುವರಿ ಮಾಡಿ ಸೋತು ಹೋಗುವುದು, ಈ ಸೇಡಿಗಾಗಿ ಕೇಶವನು ದೇವಣ್ಣನ ಮನೆಗೆ ಬೆಂಕಿಯಿಡುವುದು. ದಿಬ್ಬಣದ ಗಾಡಿಯನ್ನು ಲೂಟಿ ಮಾಡುವುದು ಇತ್ಯಾದಿಗಳು ಹಂತಹಂತವಾಗಿ ಒಂದಕ್ಕೊಂದು ಪೂರಕ ವೆಂಬಂತೆ ಚಿತ್ರಿತವಾಗಿವೆ. ಜೊತೆಜೊತೆಯಲ್ಲಿ ಎಳೆಯ ಹುಡುಗಿ ವೇಣಿಗೆ ಮದುವೆಯೆಂದ ರೇನೆಂಬುದೇ ತಿಳಿಯದ ವಯಸ್ಸಿನಲ್ಲಿ, ಆಕೆಯು ಮದುವೆಗೆ ಸಿದ್ಧವಾಗುವುದು; ದೀಪಾವಳಿಯ ಎಣ್ಣೆ ಹಬ್ಬದ ಹಿಂದಿನ ರಾತ್ರಿ ವೇಣಿಯು ಶಿವರಾಮ, ಶೀನ(ವೇಣಿಯ ಗಂಡನಾಗುವ ಮದುಮಗ), ಗಜಾನನ ಮೊದಲಾದವರ ಹುಡುಗಾಟಗಳು, ಆಯಾ ವಯಸ್ಸಿಗೆ ಸಹಜವಾದ ಆಟಗಳು, ಮಾತುಗಾರಿಕೆಗಳು; ವೇಣಿಯ ಹಟವಾದಿತನ, ತನ್ನ ಗಂಡನಾಗುವವನನ್ನು ಸಿಂಬಳಸುರುಕನೆಂದು ಲೇವಡಿ ಮಾಡುವುದು ಮುಂತಾದುವು ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿವೆ.

ದಿಬ್ಬಣದ ಬಂಡಿಯನ್ನು ದರೋಡೆ ಮಾಡುತ್ತಿರುವಾಗ ಶೀನ(ಮದುಮಗ)ನು ಸಾವನ್ನಪ್ಪುತ್ತಾನೆ. ದರೋಡೆಕೋರರ ಗುಂಪಿನವನೊಬ್ಬನೂ ಸಾಯುತ್ತಾನೆ. ದುರಂತದಲ್ಲಿ ಕೊನೆಗೊಳ್ಳುವ ಈ ಕಾದಂಬರಿಯು ಬಾಲವಿವಾಹದ ಹಲವಾರು ಮುಖಗಳನ್ನು ಚಿತ್ರಿಸುತ್ತದೆ. ಈಗಾಗಲೇ ಜೀವನದುದ್ದಕ್ಕೂ ವಿಧವೆಯಾಗಿ ಜೀವ ಸವೆದ ಪರಮತ್ತೆಯ ಬಾಳಿನೊಂದಿಗೆ ತಮ್ಮನ ಮಗಳಾದ ವೇಣಿಯೂ ಬಾಲವಿಧವೆಯಾಗುವ ಸನ್ನಿವೇಶವನ್ನು ಆಕೆಯು ಅನಿವಾರ್ಯವಾಗಿ ಬರಮಾಡಿಕೊಳ್ಳುವ ಬಗೆಯನ್ನು ಲೇಖಕರು ಹೀಗೆ ಚಿತ್ರಿಸಿದ್ದಾರೆ : "ವೇಣೀ, ಯಂತಾ ಕೆಟ್ಟ ಅದೃಷ್ಟ ನಿಂದು! ಬ್ರಹ್ಮ ನಿನ್ನ ಹಣೇಲಿ ವಕ್ರರೇಖೆ ಬರೆದನಲಿ" (ಪು. ೨೮೩) ಎಂದು ಪರಮತ್ತೆ ಉದ್ಗರಿಸುತ್ತಾಳೆ. ತನಗೊದಗಿದ ವಿಪತ್ತು ಈಕೆಗೂ ಬಡಿಯಿತಲ್ಲಾ ಅಯ್ಯೋ ಹಣೆಬರಹವೇ ಎಂದು ಕೊರಗುತ್ತಾಳೆ.

ಪರಮತ್ತೆಯೆಂಬ ಈ ಪಾತ್ರವನ್ನು ಕಾದಂಬರಿಕಾರರು ವಿಶ್ಲೇಷಿಸುವ ರೀತಿಯನ್ನು ನೋಡಿ : "...ಪರಮತ್ತೆಯ ಪ್ರಾಯ ಹದಿನಾಲ್ಕಕ್ಕೇರಿ ಆಕೆ ಮೈನೆರೆದಾಗ ಅವಳ ವೇಣೀಸಂಹಾರ ನಡೆದು ಅಪ್ಪನ ಒತ್ತಾಯಕ್ಕೆ ಮಡಿ ಹಿಡಿದಳು. ಜೀವನದ ಸುಂದರ ಸ್ವಪ್ನ ಚಿಗುರಿ ಕವಲೊಡೆದು ದಾಂಗುಡಿಗಳನ್ನು ಚಾಚುವ ಮುನ್ನ ವಿಧಿಯ ಕರಾಳ ಹಸ್ತ ಸುರಿದ ಕಣಲುಗಳ ಮಳೆಯಲ್ಲಿ ಆ ಮೊಳಕೆ ಹೊಗೆದು ಹೊತ್ತಿ ಬೂದಿಯಾಗಿ ಹೋಯಿತು. ನಲಿವು ಸೊಗಗಳಿಗೆ ಆಸ್ಪದವಿಲ್ಲದ ನೀರಸ ರೂಕ್ಷ ಬಾಳು ಅವಳ ಮುಂದೆ ಬಾಯ್ದೆರೆದು ನಿಂತಿತು... ತಾನು ಕಳೆದುಕೊಂಡುದೇನು ಎಂಬುದನ್ನು ಈಗ ಪರಮತ್ತೆ ಬಲ್ಲಳು. ಅವಳ ಎದೆಯಲ್ಲಿ ಸಿಡಿದೆದ್ದು ಉಬ್ಬೆಗ ಪೇರುಸಿರ ರೂಪ ತಾಳಿ ಹೊರಬಂತು. ತನ್ನ ನೀರಸ ಶುಷ್ಕ ಜೀವನಕ್ಕಿಂತಲೂ ಕಲಾವಂತೆ ಜಾಜಿಯ ಬದುಕು ನೂರು ಪಾಲು ಮೇಲೆಂದು ಅವಳು ತನ್ನಲ್ಲಿಯೇ ಹೇಳಿಕೊಂಡಳು..." (ಪು. ೩೨)

ಚಿಕ್ಕ ಹುಡುಗಿ ವೇಣಿಯ ಮುಗ್ಧತೆ, ಎಳೆಯ ವಯಸ್ಸಿನ ಮಾನಸಿಕ ನೆಲೆಗಳು, ಮದುವೆ ಯೆಂದರೇನೆಂಬ ಕಲ್ಪನೆಯೇ ಇಲ್ಲದ ವಯಸ್ಸಿನ ಆ ಹುಡುಗಿಯ ಮಾತುಗಳು, ನಡವಳಿಕೆ, ಮುಗ್ಧವಾದ ಪ್ರಶ್ನೆಗಳು– ಇವ್ಯಾವುವೂ ಅರ್ಥವೇ ಆಗದ ಆ ವಯಸ್ಸಿನ ನಿಲುವುಗಳು ಬೆಳೆದಂತೆ ಪರಮತ್ತೆಯ ಮನಸ್ಸಿಗೆ ಸಹಜವಾದ ಬೇಕು ಬೇಡಗಳು ಯಾವ ರೀತಿಯ ಪಾತ್ರವನ್ನು ವಹಿಸುತ್ತಿದ್ದುವೆಂಬುದು : "ಮೈಯೇನೋ ವೈರಾಗ್ಯದ ಲಾಂಛನಗಳನ್ನು ಹೊರಬಲ್ಲುದು,

ಆದರೆ, ಆದರೆ, ಮನಸ್ಸಿಗೂ ಎದೆಯೊಳಗೆ ಚಿನ್ನಾಟವೆಸಗುವ ಬಯಕೆಗಳಿಗೂ ವಿರಕ್ತಿಯ ಬೇಡಿಗಳನ್ನು ತೊಡಿಸಲಾದೀತೇ? ಸಂಪ್ರದಾಯ ಅವಳ ಜೀವಕ್ಕೆ ಪಾಪ ನರಕಗಳ ಕುಂಟೆಯನ್ನು ಬಿಗಿದು ಅದು ಬಯಕೆಗಳ ಬಟ್ಟೆಯಲ್ಲಿ ಸರಿಯದಂತೆ ಎಚ್ಚರಿಕೆ ವಹಿಸಿತ್ತು" (ಪು. ೨೭೯)– ಎಂದರೆ, ಯೌವನವು ಸ್ವಾಭಾವಿಕವೇ ಆಗಿದೆ, ಸಂಪ್ರದಾಯದ ಕಟ್ಟುಗಳನ್ನು ಮಾನವನೇ ಮಾಡಿಕೊಂಡದ್ದು, ಇವುಗಳ ನಡುವಿನ ಸಂಕೀರ್ಣತೆಯನ್ನು ಕಾದಂಬರಿಕಾರರು ಚಿತ್ರಿಸಿದ ರೀತಿ ತುಂಬ ಅರ್ಥಪೂರ್ಣವೆನಿಸುತ್ತದೆ.

ಆಗ ತಾನೇ ಆಂಗ್ಲ ವಿದ್ಯಾಭ್ಯಾಸ ಪದ್ಧತಿಯು ಹವೀಕ ಸಮಾಜದಲ್ಲಿ ಅಡಿಯಿಡುತ್ತಿರುವುದನ್ನು ಲೇಖಕರು ಗಮನಿಸಿದ್ದಾರೆ, 'ಭಟ್ರೇ, ನೀವು ಜಾಣತನ ಮಾಡಿದ್ರಿ, ಅಂಗ್ರೇಜಿ ಕಲ್ತವ್ರ ಗತ್ತೂ ಬರಮು ಈ ವೈದಿಕ ವಿದ್ಯೆ ಕಲ್ತವ್ರಿಗೆಲ್ಲಿ ಬಕ್ಕು. ನಾಳೇ ದಿನ ಅನ್ನ ಒದಗಿಸೋ ವಿದ್ಯೆ ಅದು ಅಂತ ಹೇಳಿದ್ರು" (ಪು. ೧೪). ಹವ್ಯಕ ಸಮಾಜದಲ್ಲಿ ಘಟ್ಟದ ಮೇಲಿನವರು, ಘಟ್ಟದ ಕೆಳಗಿನವರು– ಮುಂತಾದ ಪ್ರಾದೇಶಿಕ ವ್ಯತ್ಯಾಸಗಳನ್ನು ಹಾಡುಗಳಲ್ಲಿ ತೋರಿಸಿಕೊಡಲಾಗಿದೆ (ಪು. ೧೧೩). ಈ ಸಮಾಜದಲ್ಲಿರುವ ತಾಂಬೂಲ ಚರ್ವಣದ ಕುರಿತು : "ತಾಂಬೂಲ ಚರ್ವಣ ಹವ್ಯಕ ಬ್ರಾಹ್ಮಣರಿಗೆಲ್ಲ ರಕ್ತಗತವಾಗಿ ಬಂದ ಒಂದು ಚಟ. ಕೂಸುಗಳು ತಾಯಿ ಮೊಲೆ ಹಾಲು ತಪ್ಪಿದ ಮೇಲೆ ಉಣ್ಣುವುದಕ್ಕೆ ಕಲಿಯುವ ಮುನ್ನ ತಾಂಬೂಲ ಜಗಿಯುವುದನ್ನು ಕಲಿಯುತ್ತವೆ. ಹವ್ಯಕನಾಗಿದ್ದುಕೊಂಡು ಕವಳ ಹಾಕುವುದಿಲ್ಲವೆಂದರೆ ಅದೊಂದು ವಿಸ್ಮಯದ ಸಂಗತಿ" (ಪು. ೨೨೫). ಇವುಗಳ ಜೊತೆಗೆ, ಹವ್ಯಕರ ಅತಿಥಿ ಸತ್ಕಾರ, ಕಾಲಿಗೆ ನೀರು, ಆಸರಿಗೆ, ಊಟ ಉಪಚಾರ, ಕ್ಷೇಮ ಕುಶಲೋಪರಿ– ಹವ್ಯಕರ ಮದುವೆಯ ವರ್ಣನೆ ಚೆಂಡಾಟಗಳು, ಇತರ ಆಟಗಳ ವರ್ಣನೆ(ಪು.೧೭೬-೧೮೩) ಮೊದಲಾದವು ಸಂದರ್ಭೋಚಿತವಾಗಿ ಮೂಡಿಬಂದಿವೆ.

ಉತ್ತರ ಕನ್ನಡ ಹವಿಗನ್ನಡದಲ್ಲಿ ಸಹಜವಾಗಿ ಬಳಕೆಯಾಗುವ ಪಡೆನುಡಿ - ಗಾದೆಗಳು, ಉದಾ : ಬೆನ್ನಿಗೆ ಹಾಳೆ ಕೊಟ್ಟೆ ಕಟ್ಟಿಕೊಳ್ಳೆಕಕ್ಕು(೧), ಸೊಂಟ ಸಿಡಿದು ತಮಟೆ ಬಾರಸ್ತು(೧೮), ಏಳು ಕೂರು ಮಾಡಸ್ತು(೯೮), ಕಳ್ಳಂಗೊಂದು ಹಿಳ್ಳೆನೆಪ(೧೨೦), ಕೊಂಕಣೇರ ಯಮ್ಮೆಗೆ ಕೊರಡೇ ಮದ್ದು(೨೦೦), ಆನೇ ಕೊಟ್ಟವಂಗೆ ಅಣ್ಕೆ ಮೇಲಣ ಆಸೆಯೆಂತಕ್ಕೆ?(೨೭೪)... ಇತ್ಯಾದಿ ಇತ್ಯಾದಿ. ಹಾಗೆಯೇ ಸಹಜವಾಗಿ ಬಳಕೆಯಾದ ಬೈಗಳು ಪದಗಳು : ಸುಂಬಳ ಸುರುಕ(೩೭), ಆಸೆಯ ಪೀನಾರಿ(೪೯), ಬೂರ್ನಾಸು(೬೯), ಸೂಟೆ(೧೧೧), ಕರಟಕಾಳಿ (೨೦೭) ಇತ್ಯಾದಿ ಇತ್ಯಾದಿ.

ಒಟ್ಟಿನಲ್ಲಿ, ಕಾದಂಬರಿಯಲ್ಲಿ ಸಾಮಾಜಿಕ ಸಮಸ್ಯೆಯ ಚಿತ್ರಣವಿದೆ, ಪರಿಹಾರವಿಲ್ಲ. ಸಾಮಾಜಿಕ ವ್ಯವಸ್ಥೆಯ ಚಿತ್ರಣವಿದೆ. ಎಲ್ಲದಕ್ಕೂ ಮಿಗಿಲಾಗಿ, ಆಯಾ ಸಮಾಜದ ನೈಜವಾದ ಆಡುಮಾತಿನ ಸೊಗಡು, ಗಾಂಭೀರ್ಯಗಳನ್ನು ಇದರ ಉದ್ದಕ್ಕೂ ಗಮನಿಸಬಹುದು. ಕನ್ನಡಕ್ಕೆ ಹೇಗೋ ಹಾಗೆ, ಹವಿಗನ್ನಡ ಸಾಹಿತ್ಯಕೃತಿಗಳಲ್ಲೂ ಈ ಕಾದಂಬರಿಗಳು ಮುಖ್ಯವಾದ ಸ್ಥಾನವನ್ನು ಪಡೆದಿವೆ.

■ ಡಾ. ಹರಿಕೃಷ್ಣ ಭರಣ್ಯ : ಮುಖ್ಯಸ್ಥರು, ಕನ್ನಡ ವಿಭಾಗ, ಮದುರೈ ಕಾಮರಾಜ ವಿಶ್ವವಿದ್ಯಾನಿಲಯ. ಪಲ್‌ಕಲೈನಗರ, ಮದುರೈ-೬೨೫ ೦೨೧ (ತಮಿಳುನಾಡು) ■

ಜಯಂತ ಕಾಯ್ಕಿಣಿಯವರ 'ಇದ್ವಾಗ ಇದ್ವಾಂಗ'

ಅನಂತ ಹುದೆಂಗಜೆ

ನಮ್ಮ ಕಾಲದ ಗಮನಾರ್ಹ ಕತೆಗಾರರಾಗಿರುವ ಜಯಂತ ಕಾಯ್ಕಿಣಿಯವರ ಎಲ್ಲ ಕತೆಗಳೂ ಆಪ್ತವೆನಿಸುತ್ತವೆ. ಕತೆ ಬರೆಯುವುದನ್ನು ಅವರು 'ಒಳ' ಕಸುಬೆಂದೇ ತಿಳಿದವರು. ಕತೆ ಪ್ರಕಟವಾಗುವುದೆಂದರೆ ಅದಕ್ಕೆ 'ಹೊರ' ಸ್ಥಿರತೆ ಒದಗಿದಂತೆ. ಜಯಂತರ ಕತೆಗಳು ಅವರಿಗೇ ಉಲ್ಲಾಸವನ್ನೂ, ಅರೆ ಬರೆ ಅತೃಪ್ತಿಯನ್ನೂ ತಂದಿವೆ! ಅವರ 'ತೆರೆದಷ್ಟೇ ಬಾಗಿಲು' ಸಂಕಲನದ 'ಇದ್ವಾಗ ಇದ್ವಾಂಗ' ಕತೆ ಜಯಂತರಿಗೆ ಬಹಳಷ್ಟು ಕೀರ್ತಿಯನ್ನು ತಂದುಕೊಟ್ಟಿದೆ.

ಒಂದನ್ನು ಕೆಡವದೆ ಇನ್ನೊಂದರ ನಿರ್ಮಾಣ ಸಾಧ್ಯವೇ ಇಲ್ಲವೆಂಬ ಭ್ರಮೆಯನ್ನು ಇತಿಹಾಸ ನಿರ್ಮಿಸಿದೆ. ನಗರೀಕರಣದ ಹೆಸರಿನಲ್ಲಿ ಗ್ರಾಮೀಣ ಸೊಗಡು ಬಲಿಯಾಯಿತು. ಕಾಡು ನಶಿಸಿ ಕಾಂಕ್ರೀಟ್ ಕಾಡು ಬೆಳೆಯಿತು. ಒಂದರ ಸಮಾಧಿಯ ಮೇಲೆ ಇನ್ನೊಂದು ಸಾಮ್ರಾಜ್ಯ ಕಟ್ಟುವ ಪರಂಪರೆ ಹೊಸದಲ್ಲ. ಪೇಟೆಗಳು ಹಳೆ ಪೇಟೆಗಳಾಗುವುದು ಸಹಜ ಪ್ರಕ್ರಿಯೆ. ಹೇಗೆ ಸೇತುವೆಯ ರೂಪದಲ್ಲಿ ಬೀಸಿದ ಆಧುನಿಕತೆಯ ಗಾಳಿ ದೀವಗಿಯಂಥ ಒಂದು ಹಳ್ಳಿಯನ್ನೇ ಬಲಿ ತೆಗೆದುಕೊಳ್ಳುತ್ತದೆ ಎಂಬುದರ ಚಿತ್ರಣವೇ 'ಇದ್ವಾಗ ಇದ್ವಾಂಗ.'

ಶಾಲೆಯಲ್ಲಿ ಕಥಾ ನಿರೂಪಕ ಆನಂದನ ಸಹಪಾಠಿ ಪಬ್ಬೂ ಯಾನೆ ಪ್ರಭಾಕರ ದಂಡೂ ಹರಿಕಾಂತ ನಾಪತ್ತೆಯಾಗಿದ್ದವನು ಊರಿಗೆ ಮರಳಿದ ಸುದ್ದಿಯೊಂದಿಗೆ ಕತೆ ಬಿಚ್ಚಿಕೊಳ್ಳುತ್ತದೆ. ದೀವಗಿಯ ಹೊಸ ಬ್ರಿಜ್ಜಿನ ಮೇಲೆ ಓಡುವ ಬಸ್ಸಿನಷ್ಟೇ ವೇಗವಾಗಿ ಸಾಗುವ ಕತೆ ಕುತೂಹಲವನ್ನು ಉಳಿಸಿಕೊಂಡು ಓದಿಸಿಕೊಳ್ಳುತ್ತದೆ.

ಈ ಪಬ್ಬೂ ಅಡ್ಡದಾರಿ ತುಳಿದರೂ ವಾಸ್ತವವಾದಿ. ಸಮಾಜದ ಎಲ್ಲ ನೈತಿಕ ಎಲ್ಲೆಗಳನ್ನು ಧಿಕ್ಕರಿಸಿದವನು. ಉಡಾಳ ಹುಡುಗ, ಬಡವ. ಅವನ ಸ್ನೇಹಕ್ಕೆ ಬಿದ್ದು ಆನಂದ ಎಲ್ಲಿ ಹಾಳಾಗುತ್ತಾನೋ ಎಂಬ ಆತಂಕ ಮಾಂಶಿಗೆ ಹಾಗೂ ಮಾಸ್ತರರಿಗೆ. ತಪ್ಪಿದಾಗ ತಿದ್ದಿ, ಬುದ್ಧಿ ಹೇಳುವವರಿದ್ದರೆ ಪಬ್ಬು ಕೂಡ ಹಾಳಾಗುತ್ತಿರಲಿಲ್ಲ ಎಂಬುದು ಕತೆಯ ಗಮನಾರ್ಹ ಅಂಶ.

ಕುಮಟೆ ತೇರಿಗೆ ಆನಂದ ಮಾಂಶಿಯೊಂದಿಗೆ ಜಂಗಲ್‌ನಲ್ಲಿ ಹೋದಾಗ ಬಿದಿರಿನ ರಮೆಕೋಲು ಹಿಡಿದು ಹುಟ್ಟು ಹಾಕುತ್ತಿದ್ದ ಪಬ್ಬೂನ ಅಪ್ಪ ದಂಡೂ, "ನಮ್ಮ ಪಬ್ಬು ಈಗ ಬ್ರಿಜ್ ಕಟ್ಟುವಲ್ಲಿ ಸಿಮೆಂಟ್ ಕೆಲಸಕ್ಕೆ ಹೋಗ್ತಾನೆ" ಎಂದಿದ್ದ. ಆದರೆ, ಬ್ರಿಜ್ ಕಟ್ಟುವಲ್ಲಿ ಹೋಗಬಾರದು. ಬ್ರಿಜ್ಜು ಬಲಿಷ್ಠವಾಗಲಿ ಅಂತ ಮನುಷ್ಯರನ್ನು ಬಲಿ ಕೊಡುತ್ತಾರೆ ಎಂಬ ಸಾರ್ವತ್ರಿಕ ಮೂಢನಂಬಿಕೆಯ ಮೂಲಕವೇ ಮಾಂಶಿ ಆನಂದನನ್ನು ಹೆದರಿಸಿದ್ದರು. ಬ್ರಿಜ್ ಕಟ್ಟುವಲ್ಲಿ ಸುಂದರಿಯಾದ ಗುಲಾಬಿಯ ಹೆಣ ಅಸ್ತವ್ಯಸ್ತ ಸ್ಥಿತಿಯಲ್ಲಿ ಸಿಗುವುದು ಅದು ಅಪಾಯಕಾರಿ ಜಾಗವೆಂಬುದನ್ನು ಸೂಚಿಸುತ್ತದೆ.

ತೇರಿಗೆ ಹೋಗಿ ತನ್ನ ಐದಾರು ಮಂದಿ ಸರೀಕರೊಂದಿಗೆ ನಾಪತ್ತೆಯಾಗುವ ಪಬ್ಬೂ ಹಳದಿ ಟೆರಿಲಿನ್ ಅಂಗಿ, ಪ್ಯಾಂಟ್ ತೊಟ್ಟು, ಮಾತು ಮಾತಿಗೆ ಬಹುವಚನ ಬಳಸಿ ಕಸಿವಿಸಿ ಉಂಟು ಮಾಡುವ ಪಿ. ಡಿ. ಹರಿಕಾಂತ್ ರೂಪದಲ್ಲಿ ಊರಿಗೆ ಮರಳುತ್ತಾನೆ. ಕೆಲಸದ ಆಮಿಷಕ್ಕೆ

ಬಲಿಯಾಗಿ ಮಹಾನಗರಿಗಳಿಗೆ, ವಿದೇಶಗಳಿಗೆ ಹಾರಬಯಸುವ ಇಂದಿನ ಯುವ ಜನಾಂಗ ಈ ಕತೆಯನ್ನೊಮ್ಮೆ ಅವಶ್ಯ ಓದಬೇಕು.

ದಾರಿಯಲ್ಲಿ, ಜನರ ಗುಂಪಿನಲ್ಲಿ ದೊಡ್ಡ ದನಿಯಲ್ಲಿ, 'ನಾವೆಲ್ಲ ಹೋರಾಡಬೇಕು. ಇಲ್ಲವಾದರೆ ಊರು ಹಾಳಾಗುತ್ತದೆ' ಎಂದು ಕ್ರಾಂತಿಕಾರಿಯ ಗಂಭೀರ ನಿಲುವಿನಲ್ಲಿ ಹೇಳುವ ಪಬ್ಲೂ ಹೊಸದೊಂದು ಅವತಾರದಲ್ಲಿ ಗೋಚರಿಸುತ್ತಾನೆ. ಆದರೆ ಆತ ವಾಸ್ತವವಾದಿ : "ಈಗ ಆಗಲಿರುವ ಬ್ರಿಜ್ಜು ದೀವಗಿಯನ್ನು ಮೂಸಿ ಕೂಡ ನೋಡುವುದಿಲ್ಲ. ಆ ರಾಷ್ಟ್ರೀಯ ಹೆದ್ದಾರಿ ಆ ಕಡೆಯೇ ಹೋಗುತ್ತದೆ. ಇಷ್ಟು ದಿನ ಇಲ್ಲಿ ನಿಲ್ಲುವ ಬಸ್ಸುಗಳು, ಅವುಗಳ ಪ್ರಯಾಣಿಕರು - ಇವರನ್ನೆಲ್ಲ ನಂಬಿಕೊಂಡು ಬದುಕಿದ ಇಲ್ಲಿನ ಜನಗಳಿಗೇನಾಗಬೇಕು? ಜಂಗಲ್‌ಗಳನ್ನು ನೂಕಿದ, ಲಾಂಚುಗಳನ್ನು ನಡೆಸಿದ, ಅಲ್ಲಿ ಸೋಡಾ ಮಾರಿದ ಜನಗಳ ಗತಿಯೇನು? ನಾಳೆಯ ಕಲ್ಪನೆ ಇಲ್ಲದ ಇದೇ ಜನ ಅಲ್ಲಿ ಬ್ರಿಜ್ಜು, ಬ್ರಿಜ್ಜು ಅಂತ ಸಾಯಲು ಹೋಗುತ್ತವೆ, ಗೇಯುತ್ತವೆ. ಇವರನ್ನೆಲ್ಲ ಬ್ರಿಜ್ಜು ಸಂಪೂರ್ಣವಾದ ಮೇಲೆ ಯಾರು ಕೇಳುತ್ತಾರೆ?"

ಕಳೆದ ಬಾರಿ ಪುಸ್ತಕ ತೆಗೆದುಕೊಂಡು ಹೋಗಲು ಬಂದಾಗಿನ ಪಬ್ಲುನ ಮನೆಯೇ ಈಗ ಚಿಕ್ಕದಾಗಿರುವಂತೆ, ಕತ್ತಲೆ ಬಿಕೋ ವಾಸನೆ ಹೊಡೆಯುತ್ತಿತ್ತು– ಎಂಬ ವರ್ಣನೆಯೇ ನಾಶವಾಗಲಿರುವ ರೋಗಗ್ರಸ್ತ ದೀವಗಿಯ ಮುನ್ಸೂಚನೆಯಾಗಿದೆ. ಗಂಗೆಯ 'ದಂಧೆ' ಬಗ್ಗೆ ಆನಂದ ಮಾಂಶಿಯಿಂದ ಕೇಳಿದ್ದ. ಮಾಸಲು ಬಣ್ಣದ, ಎಣ್ಣೆ ಹಿಡಿದ ಕಾಗದದಲ್ಲಿ 'ಇಲ್ಲಿನ ಜಂಗಲ್‌ದಾರರಿಗೆ, ದೋಣಿ ಹಾಕುವವರಿಗೆ, ಲಾಂಚಿನವರಿಗೆ, ಚಾ ಅಂಗಡಿಯವರಿಗೆ, ಧಕ್ಕೆಯಲ್ಲಿ ಬಿಕ್ಕೆ ಬೇಡುತ್ತಿದ್ದವರಿಗೆ ಬೇರೆ ಉದ್ಯೋಗ ಕೊಡಬೇಕು' ಎಂಬ ಅರ್ಜಿಯನ್ನು ಪಬ್ಲೂನ ಬೇಡಿಕೆಯಂತೆ ಆನಂದ ಬರೆದುಕೊಡುವಾಗ ಗಂಗೆಯ ವರ್ತನೆ ಆನಂದನನ್ನು ಗಾಬರಿಗೊಳಿಸಿತ್ತು. ಮಲಯಾಳಿ ಮೇಸ್ತ್ರಿ ಜೊತೆ ತಾಯಿಗಿದ್ದ ಸಂಬಂಧವನ್ನು ಪಬ್ಲೂ ನಿರ್ವಿಕಾರ ವಾಗಿ ಹೇಳಿದಾಗ ಆನಂದನಿಗೆ ಒಪ್ಪಿಕೊಳ್ಳುವುದು ಕಷ್ಟವಾಯಿತು.

'ಪಬ್ಲೂ ಕುಡಿಯುವುದನ್ನು ಕಲಿತಿದ್ದಾನಂತೋ. ಬೊಂಬಾಯಲ್ಲಿ ಇಲ್ಲದ ಚಾಳಿಯೂ ಇತ್ತಂತೆ' ಅಂತ 'ಅವನ ಜಾಸ್ತಿ ವೈವಾಟು ಬೇಡ ನಿನಗೆ' ಅನ್ನೋ ಧಾಟಿಯಲ್ಲಿ ಹೇಳಿದ ಮಾಂಶಿ ಪಬ್ಲೂನ ಇನ್ನೊಂದು ರೂಪವನ್ನು ಪರಿಚಯಿಸಿದರು.

ತೋಟಕ್ಕೆ ಬಂದ ಮುರ್ಕುಂಡಿ ಬ್ರಿಜ್ ಆದ ಮೇಲೆ ಶ್ರೀಧರ ಕಮ್ತೀರು ಚಾ ಅಂಗಡಿಯನ್ನು ಕುಮಟೆಗೆ ಒಯ್ಯುತ್ತಾರೆಂದೂ, ದಾಮೋದರ ಪ್ರಭುಗಳು ಶಿರಸಿಗೋ ಮತ್ತೆಲ್ಲಿಗೋ ಹೋಗುತ್ತಾರೆಂದೂ ಗೊಣೊ ಗೊಣೊ ಮಾಡಿದ. ಆದರೆ, ಶೆರೆ ಅಂಗಡಿಯ ಶಕೂರ ಸ್ಯಾಬ ಮಾತ್ರ ಇಲ್ಲಿಯೇ ಇರ್ತಾನಂತೆ– ಅಂತ 'ಧನ್ಯತೆ'ಯಿಂದ ಹೇಳಿ ಕೃತಾರ್ಥನಾದ. ಕತೆಯಲ್ಲಿ ಬರುವ ವಿಘ್ನಸಂತೋಷಿ ಮಾಸ್ತರರು, ಅನ್ಯರನ್ನು ಕುರಿತ ಕಾಳಜಿ ಹಾಗೂ ಸ್ವಾರ್ಥ ಬೆರೆತ ಮುರ್ಕುಂಡಿ, ಮಂಕಾಳಿ ಮುಂತಾದ ಪುಟ್ಟ ಪಾತ್ರಗಳು ಕೂಡ ಕತೆಯ ಪೋಷಣೆಗೆ ನೆರವಾಗುವುದು ಸೋಜಿಗ ಹುಟ್ಟಿಸುತ್ತದೆ.

ಮಂಕಾಳಿ ಹಾಲಿನೊಂದಿಗೆ ಗಂಗೆ ಸತ್ತ ಸುದ್ದಿಯನ್ನೂ ತಂದ. 'ಮೊನ್ನೆ ಮೊನ್ನೆ ನಾ ಕಂಡ ಗಂಗೆಯ ನಗೆಯ ಹಿಂದೆ ಎಂಥ ದಿಕ್ಕೆಟ್ಟ ಪರದೇಶಿ ಸಾವು ಹೊಂಚು ಹಾಕಿತ್ತಲ್ಲ. ನಿನ್ನೆ

ರಾತ್ರಿ ಕನಸಿಗೆ ತಿನಿಸಾಗುತ್ತಿದ್ದವಳೇ ಅಲ್ಲಿ ಸತ್ತೇ ಹೋದಳಲ್ಲ, ಪಾಪ!'– ಅನಿಸಿತು ಆನಂದನಿಗೆ.

"ಖರೇ ಹೇಳು. ಆ ದಿನ ನೀನು ನಮ್ಮನೆಗೆ ಬಂದಾಗ ನಾನೂ ಇಲ್ಲ, ಅವ್ವಿನೂ ಇಲ್ಲ. ಬರೀ ನೀನು, ಗಂಗೆ ಅಂತಿಟ್ಕೋ. ಆಗ ಏನು ಆಗುತ್ತಿತ್ತು?" ಎಂಬ ಪಬ್ಲೂನ ಪ್ರಶ್ನೆಗೆ ಆನಂದ ಉತ್ತರ ಹೇಳಬೇಕಿರಲಿಲ್ಲ.

ಪಬ್ಲೂನೇ ಮುಂದುವರಿಸಿದ– "ಊರಲ್ಲೆಲ್ಲ ಏನು ಸುದ್ದಿ ಗೊತ್ತೋ? ನಾನೇ ಗಂಗೆ ಮೈ ಮೇಲೆ ಕೈ ಹಾಕಿದ್ನಂತೆ. ಅದಕ್ಕವಳು 'ಅಣ್ಣನೇ ಮೈ ಮೇಲೆ ಕೈ ಹಾಕ್ದಾ'– ಅಂತ ವಿಷಾ ತಗಂಡು ಸತ್ತಳಂತೆ. ಅದು ಮಳ್ಳು ಅಂತ ನಿನಗನ್ನೂಸಿಲ್ವೇ? ಡ್ರೈವರ್ ಡಿಸೋಜ ಆಗ್ತದೆ, ಪ್ರಭುಗಳು ಆಗ್ತದೆ, ನಾನು ಯಾಕೆ ಅವಳಿಗೆ ಆಗಬಾರದು?" ಪಬ್ಲೂನ ಈ ಗಂಭೀರ ತರ್ಕವನ್ನು ಒಪ್ಪಿಕೊಳ್ಳುವುದು ಹೇಗೆ? ವೇಶ್ಯೆಯಾದರೂ ಸೋದರನೊಡನೆ, ಅಪ್ಪನೊಡನೆ ಸಂಬಂಧ ಹೊಂದಲಾರಳು. ಊರೆಲ್ಲ ಕೇಳಿಬಂದ ಸುದ್ದಿಯನ್ನು ಪಬ್ಲೂ ಸಮರ್ಥಿಸುವ ಧಾಟಿಯಲ್ಲಿ ಹೇಳಿದಾಗ, ಗಂಗೆಯ ಸಾವಿಗೆ ಅವನೇ ಕಾರಣನೋ? ಎಂಬ ಗುಮಾನಿ ಹುಟ್ಟುತ್ತದೆ.

ಊರು ಬಿಟ್ಟು ಮತ್ತೆ ಬೊಂಬಾಯಿಗೆ ಹೋಗಲು, ಜತೆಗೆ ಕೆಲವು ಹುಡುಗಿಯರನ್ನು ಕರೆದೊಯ್ಯಲು ಪಬ್ಲು ನಿರ್ಧರಿಸಿದ್ದ. ಆನಂದನಲ್ಲಿ ಐನೂರು ರೂಪಾಯಿ ಕೇಳಿದ್ದ. "ಅವನು ಬಹಳ ಮಂದಿಗೆ ಟೊಪ್ಪಿ ಹಾಕಿದ್ದಾನಂತೆ. ದಗಾಕೋರನಂತೆ. ಪೊಲೀಸರು ಅವನ ಹಿಂದೆ ತಿರುಗುತ್ತಿದ್ದಾರಂತೆ" ಅಂತ ಮಾಂಶಿ ಹೇಳಿದ್ದರೂ ಆನಂದ ಯಾಕೆ ದುಡ್ಡು ಕೊಟ್ಟ? ವಿಚಿತ್ರವೆಂದರೆ, ಪಬ್ಲುನ ಒಂದೊಂದು ಮುಖಕ್ಕೂ ಮೊದಲು ಮಾತಿನ ರೂಪ ಸಿಗುವುದು ಮಾಂಶಿಯಿಂದಲೇ. ಕೆಟ್ಟವನಾಗಿದ್ದರೂ ಪಬ್ಲೂವನ್ನೂ ಆನಂದನೇಕೆ ದೂರ ಮಾಡಲಿಲ್ಲ? ಆತನ ನಡವಳಿಕೆಯನ್ನೇಕೆ ವಿರೋಧಿಸಲಿಲ್ಲ? ಕತೆಯುದ್ದಕ್ಕೂ ಸಂಯಮ ಮೀರದೆ ಅನಿವಾರ್ಯವೆನಿಸಿದಾಗ ಮಾತ್ರ ಮಾತನಾಡುವ ಆನಂದನ ವ್ಯಕ್ತಿತ್ವದ ಇನ್ನೊಂದು ತುದಿಯೇ ಆಗಿರುವ ಪಬ್ಲುವನ್ನು ಆತ ಇಷ್ಟೊಂದು ಹಚ್ಚಿಕೊಳ್ಳಲು ಕಾರಣವೇ? ಇಬ್ಬರ ದೌರ್ಬಲ್ಯಗಳೂ ಗೆಳೆತನವಾಗಿ ವಿನಿಮಯಗೊಂಡು ವ್ಯಕ್ತಿತ್ವಗಳಾದವೇ? ಇಲ್ಲದಿದ್ದರೆ ಈ ಅವಲಂಬನವೇಕೆ? ಪಬ್ಲೂ ಹೊರಟು ಹೋದಮೇಲೆ ಆನಂದನನ್ನು ಒಂಟಿತನ ಕಾಡಿದ್ದೇಕೆ? ಕತೆಯ ಕೊನೆಯಲ್ಲಿ 'ಪಬ್ಲೂನಿಗೆ ರೂಪಾಯಿ ಕೊಟ್ಟು ಎಷ್ಟು ಚಲೋ ಕೆಲಸ ಮಾಡಿದೆನಲ್ಲ!' ಅಂತ ಯಾಕೆ ಅಂದುಕೊಳ್ಳಬೇಕು? ಅವನನ್ನು ಹುಡುಕಲು ಆನಂದನೇಕೆ ಪ್ರಯತ್ನಿಸಬೇಕು? ಇನ್ನೊಮ್ಮೆ ಅವನನ್ನು ಹುಡುಕುವ ಚಾನ್ಸ್ ತೆಗೆದುಕೊಳ್ಳುವ ನಿರ್ಧಾರವೇ ಆನಂದನಿಗೆ ನೆಮ್ಮದಿ ನೀಡಿತಲ್ಲವೇ?

ದುಡ್ಡು ತೆಗೆದುಕೊಂಡು ಹೋಗಲು ಬಂದ ಪಬ್ಲೂ ಮಾಂಶಿಯ 'ಸೊಂಟದ ಕೆಳಗಿನ ವ್ಯವಹಾರಗಳ' ಪ್ರಸ್ತಾಪ ಮಾಡಿದ್ದ. "ಇದನ್ನು ತಪ್ಪು ಎಂದರೆ ನನ್ನ ಬಾಯಲ್ಲಿ ಹುಳಾ ಬೀಳಲಿ. ನನ್ನ ತಂಗಿ ಗಂಗೆಯನ್ನೂ ಬೊಂಬಾಯಿಗೆ ಆ ಹುಡುಗೀರ ಸಂತಿಗೆ ತಗೊಂಡು ಹೋಗಬೇಕು ಅಂತಿದ್ದವ ನಾನು. ನಿನ್ನ ಮಾಂಶಿಯದು ತಪ್ಪು ಅಂತ ಖಂಡಿತ ಹೇಳುವುದಿಲ್ಲ. ಇವತ್ತು ನಾನು ಡ್ರಿಂಕ್ ಮಾಡಿ ಬಂದಿಲ್ಲ. ಕುಡಿದು ಮಾತಾಡ್ತೇನೆ ಅಂತ ತಿಳೀಬೇಡ. ಮತ್ತೆ ನೀನು ನನಗೆ ರೂಪಾಯಿ ಕೊಟ್ಟೆ ಅಂತಲೂ ನಾನು ಮೆಚ್ಚಿಸಲು ಹೇಳುತ್ತಿಲ್ಲ. ನಿನ್ನ ಹತ್ತಿರ

ನಾನು ಸುಳ್ಳು ಮಾತನಾಡಲಾರೆ" ಅಂತ ಪಬ್ಲು ಹೇಳಿದರೂ ಮಾಂಶಿಯ ನಡತೆಯ ಮೇಲೆ ಸಂಶಯಪಡಬಹುದಾದ ಒಂದೇ ಒಂದು ಕಾರಣವೂ ಕತೆಯಲ್ಲಿ ದೊರೆಯುವುದಿಲ್ಲ.

ಮುಂಬೈ ಸೇರಿದ ಹುಡುಗಿಯರು ಸುಖವಾಗಿರುತ್ತಾರೆಂದು ಭ್ರಮಿಸಿ ಪಬ್ಲೂ ನಾಶವಾಗುತ್ತಿರುವ ದೀವಗಿಯ ಯುವತಿಯರನ್ನು ಮುಂಬೈಗೆ ಕರೆದೊಯ್ದನೇ? ಅಥವಾ ಗಂಗೆಯ ಗತಿ ಅವರಿಗೆ ಬರದಿರಲಿ– ಎಂಬ ಆಸೆಯೇ? ಅದೇ ಅವನ ವ್ಯಾಪಾರವೇ? ಇಲ್ಲಿನ ಹುಡುಗಿಯರನ್ನು ನಂಬಿಸಲಿಕ್ಕಾಗಿಯೇ ಆತ ಕ್ರಾಂತಿಕಾರಿಯಂತೆ ನಟಿಸಿದನೇ? ಹಾಗಿದ್ದಲ್ಲಿ ಅವನನ್ನು ಕಳ್ಳಸಾಗಣೆಗೆ ಒಪ್ಪಿಸಿದ ಕುರಿಯನ್ ಮೇಸ್ತ್ರೀಗೂ, ಪಬ್ಲೂಗೂ ಏನು ವ್ಯತ್ಯಾಸ?

ಗಂಗೆಯ ಸಾವಿನ ಬಳಿಕ ಕಥೆ ದುರಂತಗಳ ಸರಣಿಯಾಗುತ್ತದೆ. 'ವರದಿ ವಾಚನ'ದಂತೆ ವಿವರಗಳು ಬಂದರೂ ಅವು ಕಥೆಯನ್ನು ಸಶಕ್ತವಾಗಿ ಕಟ್ಟಲು ನೆರವಾಗಿ, ಕೊನೆಯಲ್ಲಿ ಮಡುಗಟ್ಟುವ ವಿಷಾದದ ಮೂಲಕ ಈ ತಂತ್ರವು ಪರಿಣಾಮಕಾರಿಯಾಗಿದೆ. ನಾಪತ್ತೆಯಾದ ಹುಡುಗಿಯರಲ್ಲಿ ತಮ್ಮ ಮಗಳು ಸರೋಜಾ ಕೂಡ ಸೇರಿದ್ದರಿಂದ ಶ್ರೀಧರ ಕಮ್ತಿಯವರಿಗೆ ಹುಚ್ಚು ಹಿಡಿದು, ದೀವಗಿಯ ಬ್ರಿಜ್ಜಿನಿಂದ ಹೊಳೆಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಬ್ರಿಜ್ಜಿನ ಸಿಮೆಂಟಿನ ಅಪರಾತಪರಾದಲ್ಲಿ ಭಾಗಿಯಾದ ದಂಡೂ ಮತ್ತಿತರ ಕೆಲವು ಬಡಪಾಯಿಗಳು ಧಕ್ಕೆಯಲ್ಲೇ ಪೊಲೀಸರ ಲಾಠಿ ರುಚಿ ನೋಡುತ್ತಾರೆ. ಸಿಂಗಾರಿ ಹುಚ್ಚು ಅತಿಯಾಗಿ ಮೈಮೇಲೆ ನೂಲಿನ ತುಂಡೂ ಇಲ್ಲದೆ ಭಿಕ್ಷುಕಿಯಾಗುತ್ತಾಳೆ– ಮುಂತಾದ ವಿವರಗಳು ದುರಂತಗಳ ಸರಮಾಲೆಯನ್ನೇ ಹೆಣೆಯುತ್ತವೆ. ಮಾಂಶಿಯ ನಿಧನದ ಬಳಿಕ ಆನಂದನಿಗೂ ಆಸ್ತಿ ಬೇಡವಾಗಿ ಹೆಂಡತಿ - ಮಗನೊಂದಿಗೆ ಮುಂಬೈಯಲ್ಲಿ ಉದ್ಯೋಗ ಹಿಡಿಯುವುದು ಇನ್ನೊಂದು ಚೋದ್ಯ.

ಸೇತುವೆ ಎರಡೂ ದಡಗಳನ್ನು ಬೆಸೆಯಿತು. ಬದುಕನ್ನು ಒಡೆಯಿತು. ಕಟ್ಟುವ ಹೊತ್ತಿನಲ್ಲಿ ಅನೇಕರಿಗೆ ತುತ್ತಾಯಿತು. ಮತ್ತೆ ಕುತ್ತಾಯಿತು. ದೀವಗಿಯನ್ನು ಅದು ಎಷ್ಟರ ಮಟ್ಟಿಗೆ ನಿರ್ನಾಮ ಮಾಡಿತೆಂದರೆ :

ಬ್ರಿಜ್ ಆಗಿದ್ದೇ ಗಿರಾಕಿಗಳೇ ಇರದೆ ದೀವಗಿಯ ಎಲ್ಲ ಚಾ ಅಂಗಡಿಗಳೂ ಕುಸಿದವು. ಧಕ್ಕೆ ಬೋಳಾಯಿತು. ಶೆರೆ ಅಂಗಡಿಯ ಕ್ಯಾಲೆಂಡರ್‌ಗಳು ಮಾಸಿದವು. ಇದನ್ನೆಲ್ಲ ನೋಡಿದ ಆನಂದ ತನ್ನ ಮಗ ಕಿಶೋರನಿಗೆ, "ಇದು ನಾನು ಬೆಳೆದ ದೀವಗಿ" ಎಂದು ಹೇಳುವುದಕ್ಕೂ ಸಾಧ್ಯವಾಗದಂತೆ ಬಾಯಿಕಟ್ಟಿತು.

ಹೇಳಿ ಕೇಳಿ ಇದು ಯಾರ ಕತೆ?
ಬ್ರಿಜ್ ಓಪನ್ ಆದಂತೆಯೇ ಸಾಫ್ ಆದ ದೀವಗಿ ಊರಿನದೊ?
ಉಡಾಳ, ಶೋಕಿ, ಕಾಳಜಿಯಿಲ್ಲದ ಹುಡುಗ ಪಬ್ಲೂನದೋ?
ಗಂಗೆಯದೋ? ಗಂಗೆಯಂಥ ಅಮಾಯಕ ಹುಡುಗಿಯರದೋ?
ಅಥವಾ ಎಲ್ಲ ಘಟನೆಗಳಿಗೆ ಸಾಕ್ಷಿಯಾದ ಆನಂದನದೋ?

ಎಲ್ಲರದ್ದೂ ಒಂದೊಂದು ಕಥೆ, ಒಂದೊಂದು ವ್ಯಥೆ– ಎಂದರೆ ಹೆಚ್ಚು ಸಮಂಜಸವಾದೀತು.

■ ಅನಂತ ಹುದೆಂಗಜೆ : ಸಹಸಂಪಾದಕ, 'ಮಂಜುವಾಣಿ' ಮಾಸಪತ್ರಿಕೆ
ಉಜಿರೆ-೫೭೪ ೨೪೦ ತಾ. ಬೆಳ್ತಂಗಡಿ (ದ.ಕ.) ■

'ಗೀತೆ'ಯಲ್ಲಿ ಪುನರ್ಜನ್ಮ : ಒಂದು ತಾತ್ವಿಕ ಜಿಜ್ಞಾಸೆ

ಸಿ. ಸೋಮಶೇಖರಯ್ಯ

ಈ ಜಗತ್ತಿನಲ್ಲಿ ಮಾನವ ಪ್ರಜ್ಞೆಯನ್ನು ಅಪಾರವಾದ ಗೊಂದಲದಲ್ಲಿ ಕೆಡವಿರುವ ಎರಡು ವಿಚಾರಗಳೆಂದರೆ ಒಂದು ದೇವರು! ಇನ್ನೊಂದು ಪುನರ್ಜನ್ಮ. ಮಾನವನ ಮನಸ್ಸನ್ನು ಅನುಕ್ಷಣವೂ ಕಾಡುತ್ತಿರುವ, ಈ ದೇವರ ಕುರಿತಾದ ಶೇಷಪ್ರಶ್ನೆ ಬಹುಶಃ ಮನುಷ್ಯನ ಅಸ್ತಿತ್ವ ಇರುವ ವರೆಗೆ, 'ಬಿಟ್ಟೆನೆಂದರೆ ಬಿಡದೀ ಮಾಯೆ' ಎನ್ನುವಂತೆ ಬೆಂಬತ್ತಿಯೇ ಇರುತ್ತದೆ.

ಪುನರ್ಜನ್ಮ ಸತ್ಯವೇ? ಮಿಥ್ಯೆಯೇ? ಎಂಬ ಪ್ರಶ್ನೆ ಕೂಡಾ ಅನಾದಿ ಕಾಲದ್ದು. ಅದಕ್ಕೆ ಮನುಷ್ಯ ಕೊಟ್ಟುಕೊಂಡ ಉತ್ತರ ಕೂಡಾ ಅಷ್ಟೇ ವೈವಿಧ್ಯಪೂರ್ಣ, ಜಗತ್ತಿನ ಸಕಲ ಜನಾಂಗ ಗಳೂ ಎಲ್ಲ ಕಾಲಗಳಲ್ಲಿಯ ತಮ್ಮ ಸ್ಮರಣೆಗಳಲ್ಲಿ, ಸಾಹಿತ್ಯಗಳಲ್ಲಿ, ಸಾವಿನಾಚಿನ ಬದುಕಿನ ಬಗ್ಗೆ ತೀವ್ರವಾಗಿ ಜಿಜ್ಞಾಸೆಗೊಳಗಾಗಿವೆ.

ಪುನರ್ಜನ್ಮವನ್ನು ಮತ್ತು ಆತ್ಮದ ಅಸ್ತಿತ್ವವನ್ನು ಪ್ರತಿಪಾದಿಸುವ ಗ್ರಂಥಗಳಲ್ಲಿ 'ಭಗವದ್ಗೀತೆ' ಮಹತ್ವಪೂರ್ಣವಾದುದು, ಬಹುಶ್ರುತವಾಗಿರುವ ಭಗವದ್ಗೀತೆಯ ಈ ಶ್ಲೋಕದಿಂದ ಆರಂಭವಾಗುವ.ಪುನರ್ಜನ್ಮ ಜಿಜ್ಞಾಸೆ ಇಡೀ ಗೀತೆಯಲ್ಲಿ ಬೇರೆ ಬೇರೆ ಉದಾಹರಣೆಗಳೊಡನೆ ವಿಸ್ತರಿಸಿಕೊಳ್ಳುತ್ತಾ, ಅನುರಣಿತವಾಗುತ್ತಾ, ಪುನರ್ಜನ್ಮ ಸಿದ್ಧಾಂತವನ್ನು, ಮಾನವನ ಭಾವಕೋಶ ದೊಡನೆ ಸಂವಾದಿಯಾಗಿಸುವಲ್ಲಿ ಯಶಸ್ವಿಯಾಗಿದೆ :

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನಿರೋऽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥(೨-೨೨)

ಮನುಷ್ಯನು ಜೀರ್ಣ ವಸ್ತ್ರಗಳನ್ನು ತ್ಯಜಿಸಿ ಹೊಸ ವಸ್ತ್ರಗಳನ್ನು ಧರಿಸುವಂತೆ, ಆತ್ಮನು ಜೀರ್ಣ ಶರೀರಗಳನ್ನು ವಿಸರ್ಜಿಸಿ ಹೊಸ ಶರೀರಗಳನ್ನು ಹೊಂದುವನು ಎಂಬ ಪೀಠಿಕೆ ಯೊಡನೆ ಪ್ರಾರಂಭವಾಗುವ ಪುನರ್ಜನ್ಮ ಸಿದ್ಧಾಂತದ ಪ್ರತಿಪಾದನೆ, ಗೀತೆಯ ಅನೇಕ ಭಾಗ ಗಳಲ್ಲಿ, ಬೇರೆ ಬೇರೆ ಆಯಾಮಗಳನ್ನು ಪಡೆದುಕೊಳ್ಳುತ್ತಲೇ ಹೋಗುತ್ತದೆ.

ಇಪ್ಪತ್ತೊಂದನೆಯ ಶತಮಾನದಲ್ಲಿ ಜೀವಿಸುತ್ತಿರುವ ಆಧುನಿಕ ಮಾನವನು ತನ್ನ ಅಸ್ತಿತ್ವದ ಬಗ್ಗೆ ಸಂದೇಹಿಸುವಂತಿಲ್ಲ, ಏಕೆಂದರೆ ಅವನು ಜೀವಂತನಾಗಿದ್ದಾನೆ; ವಿಚಾರಶೀಲನಾಗಿದ್ದಾನೆ, ಮತ್ತು ಆಧುನಿಕನಾಗಿದ್ದಾನೆ! ಆಧುನಿಕ ಶಬ್ದ ತುಂಬಾ ಸಾಪೇಕ್ಷವಾದುದು. ಯಾವುದು ಯಾವುದಕ್ಕೆ ಆಧುನಿಕ, ಹೇಗೆ ಆಧುನಿಕ, ಯಾವುದು ಪುರಾತನ? ಯಾವುದು ಅಧುನಾತನ? ಎಂಬಿತ್ಯಾದಿ ಪ್ರಶ್ನೆಗಳು ಎದುರಾಗಿಯೇ ಆಗುತ್ತವೆ.

ಈ ಆಧುನಿಕ ಮಾನವ ಶರೀರದಲ್ಲಿ ಹರಿಯುತ್ತಿರುವ ರಕ್ತ, ಅನೇಕ ಕೋಟಿ ವರ್ಷಗಳ ಹಿಂದೆ ಸಮುದ್ರ ತಳದಲ್ಲಿಯೋ ಇನ್ನೆಲ್ಲಿಯೋ ರೂಪುಗೊಂಡುದು ಮತ್ತು ಜೀವಪ್ರವಾಹದ ಜೊತೆ ಪರಿವರ್ತನೆಗೊಳಗಾಗುತ್ತಾ, ವಿಕಾಸದ ಹಾದಿಯಲ್ಲಿ ಸಾಗಿ, ಮಾನವನಲ್ಲಿ ಜೀವದ್ರವ್ಯ ವಾಗಿ ಮುಂದುವರಿಯುತ್ತಿರುವಂಥದು. ಆ ಅನೂಹ್ಯ ಪುರಾತನ ಕಾಲದಿಂದ ಇಂದಿನ ವರೆಗೆ, ಎಡೆಬಿಡದೆ ಹರಿದು ಬಂದ ಪ್ರವಾಹ ಅದು. ಅಂದರೆ ಮಾನವರು, ಅನೇಕ ಕೋಟಿ ವರ್ಷಗಳ

ಹಿಂದಿನ ರಕ್ತದೊಡನೆ ಜೀವಿಸುತ್ತಿರುವ ಆಧುನಿಕರು. ಮನುಷ್ಯರಲ್ಲಿರುವ ಜೀವಕಣಗಳೂ ಸಹ ಇಂದಿನವಲ್ಲ. ರಕ್ತದಂತೆ ಅವೂ ಸಹ ಅನೇಕ ಕೋಟಿ ವರ್ಷಗಳ ಎಡೆಬಿಡದ ಪ್ರಯಾಣದಲ್ಲಿ, ಮನುಷ್ಯರಲ್ಲಿ ರೂಪುಗೊಳ್ಳುತ್ತಲೇ ಮುಂದಿನ ಕೋಟ್ಯಂತರ ವರ್ಷಗಳ ಪ್ರಯಾಣಗಳತ್ತ ಸಿದ್ಧತೆ ನಡೆಸುತ್ತಿವೆ.

ತಮ್ಮ ಪಯಣದ ಹಾದಿಯಲ್ಲಿ ಕಂಡುಂಡ ಘಟನೆಗಳನ್ನು; ಎದುರಿಸಿದ ಸಮಸ್ಯೆಗಳನ್ನು, ಮತ್ತು ಅವುಗಳನ್ನು ಪರಿಹರಿಸಿಕೊಂಡ ಮಾರ್ಗಗಳನ್ನು, ಮಾತ್ರವಲ್ಲದೆ ಮಾನವನೆದೆಯ ಜೀವಭಾವಗಳನ್ನು ಸಮಗ್ರವಾಗಿ ಮತ್ತು ಸೂಕ್ಷ್ಮಾತಿಸೂಕ್ಷ್ಮವಾಗಿ ಈ ಜೀವಕಣಗಳು ಮುದ್ರಿಸಿಕೊಂಡಿರುತ್ತವೆಂದು ಜೀವವಿಜ್ಞಾನಿಗಳು ಕಂಡುಕೊಂಡಿದ್ದಾರೆ.

ಈ ದೃಷ್ಟಿಯಿಂದ ಜೀವಿಗಳು, ಕಾಲಾತೀತವಾಗಿ ಹರಿಯುತ್ತಿರುವ ಜೀವಪ್ರವಾಹದ ವಾಹಕರು. ಜೀವಿಗಳ ಮೂಲಕ ಈ ಪುರಾತನ ಜೀವಪ್ರವಾಹ, ಕಾಲವನ್ನು ಉತ್ತರಿಸಿ ಮುಂದೆ ಹರಿದು ಹೋಗಬೇಕಾಗಿದೆ.

ಈ ತಾತ್ವಿಕ ವಿಚಾರಗಳ ಹೊರತಾಗಿ, ಮನುಷ್ಯನಿಗೆ ವೈಯಕ್ತಿಕವಾಗಿ ಪುನರ್ಜನ್ಮಗಳಿವೆಯೇ? ಇದ್ದರೆ ಅವುಗಳಿಂದ ಮನುಷ್ಯನಿಗೆ ಆಗಬೇಕಾದುದು ಏನಾದರೂ ಇದೆಯೇ? ಎಂಬ ಪ್ರಶ್ನೆಗೆ ಗೊಂದಲಮಯವಾದ ಉತ್ತರಗಳಿವೆ.

ಮನುಷ್ಯ ಒಂದು ಜೀವಮಾನದಲ್ಲಿಯೇ ಕಾಲ ಗತಿಸಿದಂತೆ, ಅಗಾಧ ಬದಲಾವಣೆಗೆ ಒಳಗಾಗುತ್ತಾನೆ. ದೈಹಿಕವಾಗಿ, ಮಾನಸಿಕವಾಗಿ, ವೈಚಾರಿಕವಾಗಿ, ಸುತ್ತಣ ಸಂಬಂಧಗಳ ವಿಚಾರವಾಗಿ ಮನುಷ್ಯನಲ್ಲಾಗುವ ಬದಲಾವಣೆಗಳು ಅಪಾರ; ಹೆಚ್ಚೂ ಕಡಿಮೆ ಇನ್ನೊಂದೇ ವ್ಯಕ್ತಿತ್ವ ಎನ್ನುವಷ್ಟು.

ಬಾಲ್ಯದಿಂದ ವೃದ್ಧಾಪ್ಯದ ವರೆಗೆ ಒಬ್ಬನೇ ವ್ಯಕ್ತಿಯಲ್ಲಿ ಅನೇಕ ವ್ಯಕ್ತಿತ್ವಗಳು ರೂಪುಗೊಳ್ಳುತ್ತವೆ, ಅನೇಕ ಅನುಭವಗಳು ವ್ಯಕ್ತಿಯನ್ನು ಸಂಸ್ಕರಿಸುತ್ತವೆ, ಅನೇಕ ಅಭಿಪ್ರಾಯಗಳು ಬುಡಮೇಲಾಗುತ್ತವೆ. ಹೀಗೆ ಒಂದೇ ಜೀವಮಾನದಲ್ಲಿ ಮನುಷ್ಯ ಅನೇಕ ಜೀವಮಾನಗಳನ್ನು ಬದುಕುತ್ತಾನೆ.

ಮನುಷ್ಯನ ಬಾಲ್ಯದಲ್ಲಿ ಶಾಶ್ವತವೆಂಬಂತಿದ್ದ, ಆಸರೆಯಾಗಿದ್ದ, ಅವನನ್ನು ಅಪಾರವಾಗಿ ಪ್ರೀತಿಸುತ್ತಿದ್ದ, ತಂದೆ ತಾಯಿಗಳು ಕಾಲ ಗತಿಸಿದಂತೆ ಕಣ್ಮರೆಯಾಗಿ ಹೋಗುತ್ತಾರೆ. ಪ್ರೀತಿಸಿ ಕೈ ಹಿಡಿದ ಮುದ್ದಿನ ಮಡದಿ(ಅಥವಾ ಪತಿ) ನೋಡುನೋಡುತ್ತಲೇ(ಮುದುಕ) ಮುದುಕಿಯಾಗತೊಡಗುತ್ತಾಳೆ, 'ನಾನು ಮುದುಕ ನೀನು ಮುದುಕಿ ಒಲವೆ ನಮ್ಮ ಬದುಕು' ಎಂಬಂತಹ ಸ್ಥಿತಿ ನಿರ್ಮಾಣವಾಗುತ್ತದೆ!

ಬಾಲ್ಯದಲ್ಲಿ ನಮ್ಮೊಡನಿರದ, ಜೀವನದ ದಾರಿಯಲ್ಲಿ ಎಲ್ಲಿಯೋ ನಮ್ಮನ್ನು ಕೂಡಿಕೊಳ್ಳುವ, ಮಕ್ಕಳು, ಮೊಮ್ಮಕ್ಕಳು ಬದುಕಿನ ಭಾಗವಾಗುತ್ತಾರೆ. ಮುಂದೆ ಅವರು ಆಸರೆಯೂ ಆಗಬಹುದು; ಪಿಡುಗೂ ಆಗಬಹುದು! ಹೀಗೆ ಒಬ್ಬ ವ್ಯಕ್ತಿಯ ಜೀವಮಾನವೆಂಬುದು, ಅನೇಕ ಮಜಲುಗಳಿಂದ ಕೂಡಿದ; ವೈಚಿತ್ರ್ಯಗಳಿಂದ ಪೂರಿತವಾದ ಒಂದು ವೈಶಿಷ್ಟ್ಯಪೂರ್ಣವಾದ ಸಂಘಟನೆ.

ಈ ಬೃಹತ್ ವಿಸ್ತಾರದಲ್ಲಿ ಹೀಗೆ ನಮಗರಿವಾಗದ ಕಾರಣಗಳಿಂದ ಒಂದುಗೂಡಿದ ಗುಂಪು, ನಮ್ಮರಿವಿಗೆ ಬಾರದ ರೀತಿಯಲ್ಲಿಯೇ ಚೆದುರಿಹೋಗುತ್ತದೆ. ಅಪಾರ ವಿಸ್ತಾರದ ಸಮುದ್ರದಲ್ಲಿ, ಪಯಣಿಸುವ ದೋಣಿಗಳ ಗುಂಪುಗಳು, ಬಿರುಗಾಳಿಗೆ ಸಿಕ್ಕಿ ದಿಕ್ಕಾಪಾಲಾಗಿ ಚೆದುರಿಹೋಗುವಂತೆ ನಾನು ನನ್ನವರು ಎಂಬುದೆಲ್ಲಾ ನಮಗರಿವಾಗದಂತೆಯೇ ದಿಕ್ಕಾಪಾಲಾಗಿ ಹೋಗಿರುತ್ತದೆ.

ನಮ್ಮ ಪರಿಚಿತ ವಲಯದಲ್ಲಿ, ನಮ್ಮ ಮೇಲೆ ಪ್ರಭಾವ ಬೀರಿದ ಅನೇಕ ವ್ಯಕ್ತಿತ್ವಗಳು ನಿಷ್ಠುರವಾದ ಕಾಲಗತಿಯಲ್ಲಿ ನಿಧಾನ ಗತಿಯಲ್ಲಿ ಕಣ್ಮರೆಯಾಗುತ್ತವೆ. ನೋಡನೋಡುತ್ತಲೇ ಸಮಸ್ತವೂ ಸರ್ವನಾಶದ ಹಾದಿಯಲ್ಲಿ ಸಾಗುತ್ತಿರುತ್ತದೆ.

ಕಾಲೋಽಸ್ಮಿ ಲೋಕಕ್ಷಯಕೃತ್ಪ್ರವೃದ್ಧೋ ಲೋಕಾನ್ಸಮಾಹರ್ತುಮಿಹ ಪ್ರವೃತ್ತಃ ।
ಋತೇಽಪಿ ತ್ವಾಂ ನ ಭವಿಷ್ಯಂತಿ ಸರ್ವೇ ಯೇಽವಸ್ಥಿತಾಃ ಪ್ರತ್ಯನೀಕೇಷು ಯೋಧಾಃ ॥
(೧೧-೩೨)

ನಾನು ಲೋಕಗಳನ್ನು ಕ್ಷಯ ಮಾಡಲಿಕ್ಕಾಗಿಯೇ ಇರುವ ಮಹಾಕಾಲನು, ಈ ಲೋಕಗಳನ್ನು ನಾಶಗೊಳಿಸುವುದಕ್ಕಾಗಿಯೇ ಕಾರ್ಯಪ್ರವೃತ್ತನಾಗಿದ್ದೇನೆ.

ಯಥಾ ಪ್ರದೀಪ್ತಂ ಜ್ವಲನಂ ಪತಂಗಾ ವಿಶಂತಿ ನಾಶಾಯ ಸಮೃದ್ಧವೇಗಾಃ ।
ತಥೈವ ನಾಶಾಯ ವಿಶಂತಿ ಲೋಕಸ್ತವಾಪಿ ವಕ್ತ್ರಾಣಿ ಸಮೃದ್ಧವೇಗಾಃ ॥ (೧೧-೨೯)

ಈ ಅದ್ಭುತ ಭಯಾನಕ ಪ್ರವೃತ್ತಿಯ, ನಿಷ್ಠುರ ಕಾಲನ ಮುಖದ ಕಡೆಗೆ, ಪತಂಗಗಳು ಬೆಂಕಿಯತ್ತ ನಡೆಯುವಂತೆ ಎಲ್ಲ ಜನರೂ ಅಪಾರ ವೇಗದಿಂದ ಧಾವಿಸುವರು.

ಇದು ತೋರುವ ಜಗತ್ತು, ಮಹತ್ತರವಾದ ಕಾಲನೆಡೆಗೆ ಅಪಾರ ವೇಗದಿಂದ ಚಲಿಸುತ್ತಾ, ತನ್ನ ಗಮ್ಯವನ್ನು ಗುರುತಿಸಿಕೊಳ್ಳುವ ರೀತಿ.

ವೈಯಕ್ತಿಕವಾಗಿ ಇನ್ನೊಂದು ಬದುಕು ಎನ್ನುವುದಿದ್ದರೆ, ಅಲ್ಲಿ ಹೊಸ ತಂದೆ ತಾಯಿಗಳು, ಹೊಸಬಳಾದ ಮಡದಿ(ಗಂಡ) ಮಕ್ಕಳು. ಇರುವ ಜನ್ಮದಲ್ಲಿ ಪ್ರಾಣಸಮಾನವಾಗಿ ಪ್ರೀತಿಸಿದ ಮಡದಿ, ಅವಳೆಲ್ಲಿ ಹೋದಳೋ? ಈ ಹೊಸಬಳು ಯಾರೋ? ಇವಳೆಲ್ಲಿಯವಳೋ? ಈ ಬಂಧುಗಳು ಯಾರೋ? ಈ ಎಲ್ಲ ಸಂಬಂಧಗಳು ಸಹ ಕಾಲ ಗತಿಸಿದಂತೆ ಕ್ಷಣಿಕವಾದವುಗಳೇ! ಈಗ ಯೋಚಿಸಿ; ಈ ಪುನರ್ಜನ್ಮ ಯಾರಿಗೆ ಬೇಕು?

ಪುನರ್ಜನ್ಮದ ಪರಿಕಲ್ಪನೆಗಳ ಇನ್ನೂ ಕೆಲವು ವೈಶಿಷ್ಟ್ಯಗಳೆಂದರೆ, ಮನುಷ್ಯರು ಮನುಷ್ಯರಾಗೇ ಹುಟ್ಟಬೇಕೆಂದಿಲ್ಲದಿರುವುದು; ಇತರ ಜೀವಿಗಳೂ ಮನುಷ್ಯರಾಗಬಾರದೆಂದೇನೂ ಇಲ್ಲದಿರುವುದು, ಈ ರೀತಿಯ ಅನೇಕ ದೃಷ್ಟಾಂತಗಳಿವೆ. ಅಷ್ಟೇ ಅಲ್ಲದೆ ಒಂದು ಜನ್ಮದ ಹೆಣ್ಣು ಗಂಡುಗಳು, ಮರುಜನ್ಮದಲ್ಲಿ ಬದಲಾಗಬಾರದೆಂಬ ನಿಯಮಗಳೂ ಇಲ್ಲ.(ಇರುವ ಜನ್ಮದಲ್ಲಿಯೇ ಲಿಂಗ ಬದಲಾವಣೆಯಾದ ಉದಾಹರಣೆ ಇಲ್ಲವೇ?) ಹಾಗೆಯೇ ದೇಶ, ಭಾಷೆ, ಧರ್ಮ ಎಲ್ಲವೂ ಮರುಜನ್ಮದಲ್ಲಿ ಬದಲಾಗಿ ಹೋಗಬಹುದು. ಹೀಗೆ ಪುನರ್ಜನ್ಮವೆಂಬುದು ಒಂದು ಗೊಂದಲದ ಗೂಡು.

ಇದೆಲ್ಲವನ್ನು ಯೋಚಿಸತೊಡಗಿದಾಗ ಜನ್ಮಾಂತರಗಳೇ ಅತಾರ್ತಿಕ, ಅಥವಾ ಬೇಡವೆನ್ನಿಸಬಹುದು. ಆದರೆ ಮನುಷ್ಯರೆಷ್ಟು ಸ್ವತಂತ್ರರು? ಹಾಲಿ ಇರುವ ಈಗಿನ ಜನ್ಮ ಬೇಕೆಂದು ಯಾರಾದರೂ ಅರ್ಜಿ ಹಾಕಿದ್ದರೆ? ಇಲ್ಲಿ ಅನುಭವಿಸುತ್ತಿರುವ ಜೀವಿಕ ಸಂಬಂಧಗಳು, ಅನುಕೂಲ ಅನನುಕೂಲತೆಗಳ ಪಟ್ಟಿ ಹಾಕಿ ಕೊಟ್ಟಿದ್ದರೆ? ಯಾವುದು ಮಾನವನ ಇಷ್ಟದಂತೆ ನಡೆದಿದೆ? ಮರಣವಾದರೂ ಅವನ ಇಷ್ಟದಂತೆ ನಡೆಯಬಲ್ಲದೇ?

ಭೂತಗ್ರಾಮಃ ಸ ಏವಾಯಂ ಭೂತ್ವಾ ಭೂತ್ವಾ ಪ್ರಲೀಯತೇ ।

ರಾತ್ರ್ಯಾಗಮೇಽವಶಃ ಪಾರ್ಥ ಪ್ರಭವತ್ಯಹರಾಗಮೇ ॥ (೮-೧೯)

ಅಸ್ವತಂತ್ರವಾದ ಭೂತಸಮೂಹವು, ಬ್ರಹ್ಮನ ಹಗಲಿನಲ್ಲಿ ವ್ಯಕ್ತವಾಗಿ, ಬ್ರಹ್ಮನ ರಾತ್ರಿಯಲ್ಲಿ ಲೀನವಾಗಿ ಹೋಗುತ್ತವೆ.

ಬಹಳ ಕಾಲದಿಂದ ವಿಜ್ಞಾನಿಗಳು ಈ ಜೀವ ಎಂಬುದು ಒಂದು ಆಕಸ್ಮಿಕ ಎಂದು ಭಾವಿಸಿದ್ದರು; ವಿಶ್ವದಲ್ಲಿ ಎಲ್ಲಿಯೂ ಇಲ್ಲದ, ಪೃಥ್ವಿಯ ಅಪೂರ್ವ ರೀತಿಯ ವ್ಯವಸ್ಥೆಯಿಂದಾಗಿ, ಆಕಸ್ಮಿಕವಾಗಿ ರೂಪುಗೊಂಡ, ಈ ಜೀವ, ವಿಕಾಸದ ಗತಿಯಲ್ಲಿ ಮನುಷ್ಯನಾಗಿ ರೂಪುಗೊಂಡು ಮುಂದುವರಿಯುತ್ತಿದೆ, ಎನ್ನುವ ತತ್ವನ್ನು ನಂಬಿದ್ದರು.

ಈ ವಿಶ್ವದಲ್ಲಿ ಅಸ್ತಿತ್ವದಲ್ಲಿರುವ, ವಸ್ತು ಮತ್ತು ಶಕ್ತಿಗಳೇ ವಿಶೇಷವಾಗಿ ಸಂಯೋಜನೆಗೊಂಡು; ಅನೇಕ ಘಟಕಗಳು ವ್ಯವಸ್ಥಿತವಾಗಿ ಒಗ್ಗೂಡಿ ಈ ವಿಸ್ಮಯಕಾರಿ ಮನುಷ್ಯ ಶರೀರ ರೂಪುಗೊಂಡಿರುವ ಬಗ್ಗೆ ಅರಿತುಕೊಂಡಿದ್ದರು.

ಅಪರಂಪಾರವಾದ, ಅನೂಹ್ಯ ವಿಸ್ತಾರಗಳಿಂದ ಕೂಡಿದ, ಈ ಅಗಾಧ ಜಗತ್ತಿನಲ್ಲಿ ಕೇವಲ ಪೃಥ್ವಿಯ ಮೇಲೆ ಮಾತ್ರ ಜೀವಾಂಕುರವಾಗಿದ್ದರೆ, ಇಲ್ಲಿ ಮಾತ್ರ ಮನುಷ್ಯ ವಿಕಾಸವಾಗಿದ್ದರೆ, ಅದು ಅತ್ಯಂತ ಅಸಹನೀಯ ಅನಾಥತೆಯೇ ಹೌದು. ಆದರೆ ಇತ್ತೀಚಿನ ಸಂಶೋಧನೆಗಳು, ಈ ಜೀವ ಎಂಬುದು ಆಕಸ್ಮಿಕವಲ್ಲ ಎಂಬುದನ್ನು ಕಂಡುಕೊಂಡಿವೆ! ಈ ಜಗತ್ತು ಹೇಗೆ ಅಸ್ತಿತ್ವದಲ್ಲಿದೆಯೋ, ಹಾಗೆಯೇ ಈ ಜಗತ್ತಿನಲ್ಲಿ ಜೀವದ್ರವ್ಯ ಸಹ, ಈ ಅನಂತ ವಿಸ್ತಾರದಲ್ಲೆಲ್ಲಾ ಹರಡಿಕೊಂಡಿದೆ, ಎಂಬ ಸತ್ಯ ಸಹ ವಿಜ್ಞಾನಿಗಳ ಅರಿವಿಗೆ ಬರುತ್ತಿದೆ. ಹಾಗಾಗಿ ಈ ಬೃಹತ್ ವಿಶ್ವದಲ್ಲಿ ಇನ್ನೆಲ್ಲಾದರೂ ಇರಬಹುದಾದ ನಾಗರಿಕತೆಗಳಿಗಾಗಿ ನಕ್ಷತ್ರಮಂಡಲಗಳನ್ನೆಲ್ಲಾ ಜಾಲಾಡಲಾಗುತ್ತಿದೆ.

ಇವೆಲ್ಲ ಜಗತ್ತಿನ ಸಮಗ್ರತೆಯ, ಜೀವದ ಸಮಗ್ರತೆಯ ಅಸಾಮಾನ್ಯ ಪರಿಕಲ್ಪನೆಗಳು. ಜಗತ್ತು ಮತ್ತು ಜೀವದ ಅಸ್ತಿತ್ವದ ಅನುಭಾವದ ಮೇಲೆ ಕಟ್ಟಿಕೊಂಡ ತಾತ್ವಿಕ ಜಿಜ್ಞಾಸೆಗಳು. ಒಂದು ಹಂತದ ವರೆಗೆ ಮಾತ್ರ ಮಾನವನ ಬೌದ್ಧಿಕ ನಿಲುಕಿಗೆ ಈ ವಿಷಯಗಳು ನಿಲುಕಬಲ್ಲವು. ಆದರೆ ಜೈವಿಕ ಸಾಮೂಹಿಕ ಪರಿಭ್ರಮಣದ ಪರಿಕಲ್ಪನೆಯಿಂದ, ವೈಯಕ್ತಿಕತೆಯ ನೆಲೆಗೆ ಈ ವಿಷಯವನ್ನು ತಂದಾಗ ಅತಾರ್ಕಿಕವಾಗುತ್ತದೆ, ಮಾನವನ ತರ್ಕದ ನೆಲೆಗೆ ಈ ವಿಷಯಗಳು ನಿಲುಕುವುದಿಲ್ಲ.

ಗೀತೆಯ ನಾಲ್ಕನೇ ಅಧ್ಯಾಯದ ಪ್ರಾರಂಭಿಕ ಶ್ಲೋಕಗಳು ಸಾಂಕೇತಿಕವಾಗಿ ಈ ವಿಷಯವನ್ನು ಮಂಡಿಸುತ್ತವೆ. ಜಗತ್ತು ಮತ್ತು ಜೀವದ ಜೊತೆಗೆ ಯೋಗವನ್ನೂ ಸಮೀಕರಿಸುತ್ತಾ

ಯೋಗವೆಂಬ ಶಬ್ದವನ್ನು ಅತ್ಯಂತ ವ್ಯಾಪಕವಾದ ಅರ್ಥದಲ್ಲಿ ಸಮರ್ಥವಾಗಿ ಇಲ್ಲಿ ಬಿಂಬಿಸಲಾಗಿದೆ. ಈ ಜಗತ್ತಿನ ಉಗಮವೇ ಒಂದು ಯೋಗ; ಪರಬ್ರಹ್ಮದ ಅಸ್ತಿತ್ವವೇ ಒಂದು ಯೋಗ; ಜೀವಿಯ ಜನನ ಮರಣ ಚಕ್ರವೂ ಒಂದು ಯೋಗ; ಇದೆಲ್ಲವನ್ನು ಅರಿಯಬೇಕಾದರೆ ಅನುಸರಿಸಬೇಕಾದುದು ಸಹ ಯೋಗಮಾರ್ಗ. ಹಾಗಾಗಿ ಯೋಗವೆಂಬ ಶಬ್ದದ ಅನಂತ ಅರ್ಥಗಳ ಸಂಗಮವನ್ನು ಈ ಶ್ಲೋಕಗಳು ಪರಿಣಾಮಕಾರಿಯಾಗಿ ವಿವೇಚಿಸುತ್ತವೆ.

ಸಹಜವಾಗಿ ಇಲ್ಲಿ ಗೀತಾಕಾರನು, ವೈಯಕ್ತಿಕ ವ್ಯಕ್ತಿಗತ ನೆಲೆಯಿಂದ ಅನಂತತೆಯ ನಿಲುವಿನಲ್ಲಿ ನಿಂತು ಮಾತಾಡುತ್ತಾನೆ.

ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಮ್ ।
ವಿವಸ್ವಾನ್ಮನವೇ ಪ್ರಾಹ ಮನುರಿಕ್ಷ್ವಾಕವೇಽಬ್ರವೀತ್ ॥ (೪-೧)

ಇಲ್ಲಿ ವಿವಸ್ವಾನನು ಅಖಿಲ ಜಗತ್ತನ್ನು ಬೆಳಗುವ ಬೆಳಕು, ಆ ಬೆಳಕು ಜಗತ್ತಿನ ಅಂಧಕಾರವನ್ನು ಕಳೆದು ಜ್ಞಾನವು ಹರಡಲೆಂದು ಪರಾತ್ಪರ ವಸ್ತುವೇ ಬೆಳಗಿಸಿದಂಥದು, ಆ ಬೆಳಕಿನ ಆಧಾರದಲ್ಲಿ ಇಕ್ಷ್ವಾಕುವೆಂಬ ಮಾನವ ಪ್ರಜ್ಞೆ ಮನಸ್ಸೆಂಬ ಶಕ್ತಿಯ ಮೂಲಕ ಜ್ಞಾನವನ್ನು ಆಕರ್ಷಿಸುವುದು, ಮತ್ತು ಸಹಮಾನವರಿಗೆ ಹಂಚುವುದು.

ಆದರೆ ಮಾನವರ ತಾಮಸಜನಿತ ಬುದ್ಧಿಯಿಂದ, ಈ ಯೋಗವೆಂಬ ಜ್ಞಾನವು ಮಸುಕಾಗುವುದು, ಮತ್ತೆ ಮತ್ತೆ ಇದನ್ನು ಪ್ರಜ್ವಲಿಸುವ ಕೆಲಸವೇ, 'ಪುರುಷ ಪ್ರಜ್ಞೆ' ಎಂಬ ಅವತಾರಿಯ ಕರ್ತವ್ಯ. ಹೀಗೆ ಸಾಮೂಹಿಕ ನೆಲೆಯಲ್ಲಿ ಅಖಂಡ ಸತ್ಯವನ್ನು ವಿವರಿಸುವ ಕರ್ತವ್ಯದೊಡನೆ, ಅದನ್ನು ವೈಯಕ್ತಿಕ ನೆಲೆಗಟ್ಟಿಗೆ ಪರಿಣಾಮಕಾರಿಯಾಗಿ ಮುಟ್ಟಿಸುವ ಪ್ರಯತ್ನವೇ ಈ ಕೆಳಗಿನ ಶ್ಲೋಕ :

ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ ।
ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ ॥ (೪-೫)

ನನ್ನವೂ, ನಿನ್ನವೂ ಅನೇಕ ಜನ್ಮಗಳು. ಅವುಗಳನ್ನು ನಾನು ಬಲ್ಲೆ, ನೀನು ಅರಿಯೆ– ಇದು ಈ ಶ್ಲೋಕದ ಅರ್ಥ.

ಈ ಶ್ಲೋಕಗಳಲ್ಲಿ, ಜೀವ ಮತ್ತು ಜಗತ್ತಿನ ನಿರಂತರತೆಯ ಪ್ರಭಾವಶಾಲಿ ಪ್ರತಿಪಾದನೆ ಇದೆ. ಇದನ್ನು ವೈಯಕ್ತಿಕ ನೆಲೆಯಲ್ಲಿ ಸ್ವೀಕರಿಸುವುದು ಹೇಗೆ? ಅದು ತಾರ್ಕಿಕವೇ? ಎಂಬ ಪ್ರಶ್ನೆ ಸಹಜವಾದುದು.

ಇಲ್ಲಿ ವೈಯಕ್ತಿಕ ನೆಲೆಗೆ ಬಂದಾಗ, ಜೀವಿಗಳ ನಾನು ಮತ್ತು ನನ್ನ ಅಸ್ತಿತ್ವ ಪ್ರಮುಖ ವಿಷಯಗಳಾಗುತ್ತವೆ. ಇರುವೆಯಿಂದ ಆನೆಯ ವರೆಗೆ, ಈ ನಾನು ಎಂಬ ಪ್ರಜ್ಞೆ ಅಸ್ತಿತ್ವದಲ್ಲಿದೆ. ಮತ್ಸ್ಯದಿಂದ ಮಾನವನ ವರೆಗೂ ಸಮಸ್ತ ಜೀವಜಾತಗಳಲ್ಲಿ ಈ ನಾನು ಎಂಬ ಅರಿವು ವಿಸ್ತರಿಸಿಕೊಂಡಿದೆ.

ಈ ನಾನು, ಈ ವಿಶ್ವದ ಮೂಲ ಕಾರಣದಿಂದಲೇ ಸಿಡಿದ ಕಿಡಿ, ಅದೇ ಆತ್ಮ, ಅದು ತಾಳುವ ಅವತಾರಗಳೇ ಜನ್ಮಗಳು ಎನ್ನುವುದು ಗೀತೆಯ ಪ್ರತಿಪಾದನೆ.

ಶರೀರ ಶಾಸ್ತ್ರಜ್ಞರು ಮಾನವ ಶರೀರವನ್ನು ಆಮೂಲಾಗ್ರವಾಗಿ ಅಭ್ಯಸಿಸಿದ್ದಾರೆ. ರಕ್ತ, ರಕ್ತನಾಳಗಳು, ಮಾಂಸ, ಮೂಳೆ, ಜೀವಕೋಶಗಳು, ನರವ್ಯೂಹಗಳು, ಹೃದಯ, ಮೆದುಳು ಹೀಗೆ ಸಮಸ್ತ ಅಂಗಾಂಗಗಳ ಕೂಲಂಕಷ ತಪಾಸಣೆ ನಡೆದಿದೆ; ಭೌತಿಕವಾಗಿ ಅವುಗಳ ಸಕಲ ಕಾರ್ಯಭಾರಗಳ ಪರಿಚಯವಾಗಿದೆ; ಆದರೆ ಈ ಎಲ್ಲವನ್ನೂ ಸಮಗ್ರವಾಗಿ ಹಿಡಿದಿಟ್ಟಿರುವ ಶಕ್ತಿಯ ಪರಿಚಯವಿಲ್ಲ. ಅದೆ ಜಗದ ಮುಂದಿರುವ ತೊಡರು.

ಈ ನಾನು, ಬಂತಾದರೂ ಎಲ್ಲಿಂದ? ಹೋಗುವುದಾದರೂ ಎಲ್ಲಿಗೆ? ಈ ಕುತೂಹಲಕರ ಪ್ರಶ್ನೆಗಳನ್ನು ಬಿಡಿಸಲು, ಗೀತೆ ನಮ್ಮ ನೆರವಿಗೆ ಬರುತ್ತದೆ. ಇಲ್ಲಿ ಹೇಳುವವನೂ ಮತ್ತು ಕೇಳುವವನೂ ಇಬ್ಬರೂ ಬಂದಿರುವುದು, ಮತ್ತು ಅವರು ಅರಿಯಬೇಕಾಗಿರುವುದು, ಮತ್ತು ಸೇರಬೇಕಾದ ಗಮ್ಯ ಸಹ, ಈ ಸಮಸ್ತವನ್ನೂ ಒಳಗೊಂಡಿರುವ ಶಕ್ತಿಯನ್ನೇ. ಅದನ್ನು ಅರಿಯಬೇಕಾದರೆ ಕ್ರಮಿಸಬೇಕಾದ ದಾರಿ ಮಾತ್ರ ಅನಂತ ಕಾಲದ್ದು. ಈ ಕಾಲದ ಪರಿಧಿಯನ್ನು ದಾಟಬೇಕಾಗಿರುವುದೇ, ಅನಂತ ಜನ್ಮಗಳೆಂಬ ವ್ಯೂಹಗಳ ಮೂಲಕ, ಇದೇ ಇಲ್ಲಿನ ತತ್ವದ ತಿರುಳು. ಈ ಅಗಾಧವಾದ ಜ್ಞಾನರಾಶಿಯನ್ನು, ಮನುಷ್ಯನ ಬುದ್ಧಿಯ ಅಳವಿಗೆ ತರಲು ಗೀತೆ ತೀವ್ರ ರೀತಿಯ ಪ್ರಯತ್ನಗಳನ್ನು ಮಾಡುತ್ತದೆ.

ಜೀವದ ನಾನು ಎಂಬ ಪ್ರಜ್ಞೆ, ಖಚಿತವಾಗಿ ಎಲ್ಲಿಯ ವರೆಗೆ ಇರಬಲ್ಲುದು? ದೇಹಾತ್ಮವಾದ, ಈ ದೇಹದ ನಾಶದೊಂದಿಗೆ ಎಲ್ಲವೂ ನಾಶವಾಗುವುದು, ಉಳಿಯುವುದು ಎಂಬುದೇ ಒಂದು ಭ್ರಮೆ ಎಂದು ವಿವರಿಸುತ್ತದೆ. ಏಕೆಂದರೆ ಮನಸ್ಸು, ಇಂದ್ರಿಯಗಳು ಎಲ್ಲವೂ ಆಧಾರಿತವಾಗಿರುವುದು, ಈ ದೇಹವನ್ನು! ಅಂತಹ ಈ ದೇಹವೇ ನಾಶವಾದ ಬಳಿಕ ಉಳಿಯುವುದಾದರೂ ಏನು? ಎಂಬ ತಾರ್ಕಿಕ ಪ್ರಶ್ನೆ ಸಹಜವಾದುದೇ ಆಗಿದೆ.

ಆದರೆ ಈ ತರ್ಕ ಎಲ್ಲ ಸಮಸ್ಯೆಗಳಿಗೆ ಪರಿಹಾರವಲ್ಲ, ಈ ತರ್ಕದ ಆಧಾರದಿಂದ, ಈ ಜಗತ್ತನ್ನು ಅರ್ಥ ಮಾಡಿಕೊಳ್ಳಲು ಹೊರಟರೆ, ಬಗೆಹರಿಯದ ನೂರೆಂಟು ಪ್ರಶ್ನೆಗಳ ಸುಳಿಯಲ್ಲಿ ಸಿಲುಕಿ ಉತ್ತರಿಸಲಾರದ ಸ್ಥಿತಿಯನ್ನು ತಲುಪುತ್ತೇವೆ. ಆದುದರಿಂದ ಸತ್ಯವೆಂಬುದು, ಮನುಷ್ಯನ ತಾರ್ಕಿಕ ಬೌದ್ಧಿಕ ಕಸರತ್ತಿನಾಚೆಗೆ, ಅನುಭಾವದ ಸೀಮೆಯಲ್ಲೆಲ್ಲೋ ಮಾಯಾಮೃಗದಂತೆ ಅವಿತಿರುವಂತಿದೆ.

ದೇಹಾತ್ಮವಾದವೂ ಸಹ, ವಿಶ್ವ ಶಕ್ತಿಗಳ ಸೂಕ್ಷ್ಮವಾದ ಜಟಿಲ ಒಗ್ಗೂಡುವಿಕೆಯೇ, ಮಾನವ ದೇಹದ ಅಸ್ತಿತ್ವ ಎಂಬ ವಾದವನ್ನು ಒಪ್ಪುತ್ತದೆ. ಆದರೆ ಈ ವಿಶ್ವ ಶಕ್ತಿಗಳ ಜಟಿಲ ಒಗ್ಗೂಡುವಿಕೆಯೆಂಬುದು ಯಾವ ಪ್ರೇರಣೆಯಿಂದ ಪ್ರಾರಂಭವಾಯಿತು? ಎಂಬ ಪ್ರಶ್ನೆ ಬಿಡಿಸಲಾಗದ್ದು; ಈ ವಿಶ್ವ ಶಕ್ತಿಗಳೇ ಏನು? ಎಂಬ ಪ್ರಶ್ನೆ ಇನ್ನೂ ಜಟಿಲವಾದುದು. ಇವೆಲ್ಲವುಗಳ ಕೇವಲ ಭೌತಿಕ ವಿಶ್ಲೇಷಣೆ ಪೂರ್ಣ ಜ್ಞಾನವನ್ನು ನೀಡಲು ಸಮರ್ಥವಿರುವಂತೆ ಕಾಣಿಸದು, ಅದರ ಸಹಾಯಕ್ಕೆ ಯೋಗ, ಅನುಭಾವಗಳ ಆವಶ್ಯಕತೆ ಇದೆ.

ನಮ್ಮ ಜೀವಿತ ಕಾಲದಲ್ಲಿಯೇ, ನಮ್ಮ ಕಣ್ಣೆದುರಿನಲ್ಲಿಯೇ ಘಟಿಸುವ ಅನೇಕ ಘಟನೆಗಳಿಗೆ ನಿಖರವಾದ ಉತ್ತರಗಳಿಲ್ಲ. ಅನೇಕ ವರ್ಷಗಳ ಪರಿಶ್ರಮದಿಂದ ಗಳಿಸ ಬೇಕಾಗಿರುವ, ಕಷ್ಟತಮ ವಿದ್ಯೆಗಳನ್ನು, ಎರಡು ಮೂರು ವರ್ಷಗಳ ಪುಟ್ಟ ಮಗುವೊಂದು.

ಲೀಲಾಜಾಲವಾಗಿ ನಿರ್ವಹಿಸುವ ರೀತಿ ಕಣ್ಣೆದುರು ಕಂಡಾಗ ನಮ್ಮ ತಾರ್ಕಿಕ ಬುದ್ಧಿ ನಿಬ್ಬೆರಗಾಗುತ್ತದೆ.

ಪುನರ್ಜನ್ಮ ಹೊಂದಿದ ವ್ಯಕ್ತಿಗಳ ಬಗ್ಗೆ ಸಾವಿರಾರು ಮಾಹಿತಿಗಳಿವೆ, ಇವುಗಳಲ್ಲಿ ಬಹಳಷ್ಟು ಸುಳ್ಳು, ವಂಚನೆಯ ಪ್ರಕರಣಗಳಲ್ಲದೆ, ಮೌಢ್ಯ, ಮತ್ತು ಪ್ರಚಾರಪ್ರಿಯತೆಯಿಂದ ಕೂಡಿರುವುದರಿಂದ, ಬಹುತೇಕ ಪ್ರಕರಣಗಳು ತಳ್ಳಿಹಾಕಲು ಯೋಗ್ಯವಾದವುಗಳು. ಉಳಿಯುವ ಕೆಲವೇ ಪ್ರಕರಣಗಳನ್ನು ವಿವರಿಸಲು, ಸದ್ಯದ ನಮ್ಮ ಜ್ಞಾನ ವಿಸ್ತಾರ ಏನೇನೂ ಸಾಲದು.

ಈ ಲೇಖಕನ ಗಮನಕ್ಕೆ ಬಂದ ಒಂದು ವಿಷಯವನ್ನು ಇಲ್ಲಿ ತಿಳಿಸುವುದು ಅಪ್ರಸ್ತುತ ವಾಗಲಾರದು. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ (೧೯೮೧ ರಲ್ಲಿ) ಮನೆ ಕೆಲಸಕ್ಕೆಂದು ಹೆಣ್ಣುಮಗಳೊಬ್ಬಳು ನಮ್ಮ ಮನೆಗೆ ಬರುತ್ತಿದ್ದಳು. ಆ ತಾಯಿ ಚಿತ್ರದುರ್ಗದ ಸಮೀಪದ ಮಠದ ಕುರುಬರ ಹಟ್ಟಿಯ ನಿವಾಸಿಯಾಗಿದ್ದಳು. ಅವಳು ತನ್ನ ಆರು ವರ್ಷದ ಮಗಳನ್ನು ಜೊತೆಗೆ ಕರೆತರುತ್ತಿದ್ದಳು. ಇಲ್ಲಿ ಕೆಲವು ವಿಚಿತ್ರಗಳಿದ್ದವು, ನನ್ನ ಮನೆಯಾಕೆ ಅವುಗಳನ್ನು ಸೂಕ್ಷ್ಮವಾಗಿ ಗ್ರಹಿಸಿ, ನನ್ನ ಗಮನಕ್ಕೆ ತರಲು ಪ್ರಯತ್ನಿಸುತ್ತಿದ್ದಳು ಈ ವಿಷಯದಲ್ಲಿ ನಾನು ಮೊದಮೊದಲು ಉದಾಸೀನನಾಗಿದ್ದೆ, ನಂತರ ಆ ಮಗುವನ್ನು ಗಮನಿಸಿದಾಗ ಕುತೂಹಲಕಾರಿ ಅಂಶಗಳು ತಿಳಿದು ಬಂದವು. ಮುಗ್ಧಳಾದ ಆ ಮಗುವಿನ ತಾಯಿಗೆ ಇವು ಕೇವಲ 'ಶಿವನಾಟ', ಆಕೆ ಅವನ್ನು ಹಚ್ಚಿಕೊಳ್ಳುತ್ತಲೂ ಇರಲಿಲ್ಲ.

ಈ ಮಗು ಹುಟ್ಟುತ್ತಲೇ ಕಿವಿಗಳಲ್ಲಿ ಓಲೆಗಳನ್ನು ಹಾಕುವ ಜಾಗದಲ್ಲಿ ಊರಿಸಿದ ತೂತುಗಳು ಸಹಜವಾಗೇ ಇದ್ದವು, ಮತ್ತು ಹಿಂದಿನ ಕಾಲದ ರೀತಿಯಲ್ಲಿ ಕಿವಿಯ ಮೇಲ್ಭಾಗದ ಆಲೆಯಲ್ಲಿ ಸಹ ಬುಗುಡಿಗಳನ್ನು ಹಾಕುತ್ತಿದ್ದ ಜಾಗದಲ್ಲಿ ಊರಿಸಿದ ತೂತುಗಳು ಹಾಗೆಯೇ ಇದ್ದವು. ಹುಡುಗಿಯ ಹಿಂಭಾಗದ ಕೂದಲುಗಳು ಮುದುಕಿಯ ಕೂದಲುಗಳಂತೆ ಬೆಳ್ಳಂಬೆಳ್ಳಗಾಗಿದ್ದವು. ಇದಿಷ್ಟೇ ಆಗಿದ್ದರೆ ಇದೊಂದು ನೈಸರ್ಗಿಕ ಆಕಸ್ಮಿಕ ಎಂದು ಭಾವಿಸಬಹುದಾಗಿತ್ತು. ಆದರೆ ಹುಡುಗಿಯೊಡನೆ ಮಾತನಾಡಿದರೆ ನೂರು ವರ್ಷ ಬಾಳಿದ ಮುದುಕಿಯೊಬ್ಬಳ ಅನುಭವಗಳು ಅವಳಿಗರಿವಿಲ್ಲದಂತೆ ಅವಳ ಬಾಯಿಂದ ಹೊರಬಂದು ಬಿಡುತ್ತಿದ್ದವು! ಆ ಪುಟ್ಟ ಮಗು ಹೇಳುತ್ತಿದ್ದ, ಬಾಣಂತನದ ಸಮಸ್ಯೆಗಳು, ಮನೆ ಮದ್ದಿನ ಅನೇಕ ಸಲಹೆಗಳು ಇಂಥವುಗಳನ್ನು ಕೇಳಿ ನನ್ನ ಮಡದಿ ಬೆಕ್ಕಸ ಬೆರಗಾಗಿದ್ದಳು. ಇಂಥವಕ್ಕೆ ಯಾವ ರೀತಿಯ ವಿವರಣೆಗಳನ್ನು ಕೊಡುವುದು? ಇಲ್ಲಿ ಯಾವುದೋ ಅಸಾಂಗತ್ಯದಿಂದಾಗಿ ಜನ್ಮವೊಂದು ಮರುಜನ್ಮದಲ್ಲೂ ಯಥಾವತ್ತಾಗಿ ಮುಂದುವರಿದಿದೆಯೇ?

ಭಗವದ್ಗೀತೆ ತನ್ನ ಒಂದು ಶ್ಲೋಕದಲ್ಲಿ ಆತ್ಮ ಮಾತ್ರ ಈ ಶರೀರದಿಂದ ಬೇರೆಯಾಗುವು ದಲ್ಲ, ಸುಳಿ ಗಾಳಿಯು ಸುಗಂಧವನ್ನು ಸೆಳೆದೊಯ್ಯುವಂತೆ, ಮನಾದಿ ಇಂದ್ರಿಯ ತನ್ಮಾತ್ರೆ ಗಳನ್ನು ತನ್ನೊಡನೆ ಸೆಳೆದೊಯ್ಯುತ್ತದೆ ಎಂಬ ವಿವರಣೆಯನ್ನು ನೀಡುತ್ತದೆ. ಇದು ಜೀವಿಯ ವ್ಯಕ್ತಿತ್ವ ದೇಹಾನಂತರದಲ್ಲಿಯೂ ಸಹ ಯಾವುದೋ ಒಂದು ರೂಪದಲ್ಲಿ ಅಸ್ತಿತ್ವದಲ್ಲಿರುತ್ತದೆ ಎಂಬುದರ ಸೂಚನೆ.

ಶರೀರಂ ಯದವಾಪ್ನೋತಿ ಯಚ್ಚಾಪ್ಯುತ್ಕ್ರಾಮತೀಶ್ವರಃ ।
ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾಶಯಾತ್ ॥ (೧೫-೮)

ಮಾನವನಲ್ಲಿರುವ ವಂಶವಾಹಿನಿಗಳು, ಪ್ರತಿ ವ್ಯಕ್ತಿಯ ಬಣ್ಣ, ರೂಪ, ಎತ್ತರ, ಸ್ವಭಾವ, ಹೀಗೆ ಅಡಿಯಿಂದ ಮುಡಿಯ ವರೆಗೆ ಅವನ ಸಮಸ್ತ ವ್ಯಕ್ತಿತ್ವದ ಮುದ್ರಣಗಳನ್ನೊಳಗೊಂಡಿರುತ್ತವೆ; ಹಾಗೆಯೇ ಜೀವ ವಿಕಾಸದ ಗತಿಯ ಸಮಸ್ತ ಹಂತಗಳು ಸೂಕ್ಷ್ಮಾತಿಸೂಕ್ಷ್ಮವಾಗಿ ಸಂರಚನೆಗೊಂಡಿರುತ್ತವೆ. ಇಷ್ಟು ವಿಸ್ತೃತ ಮಾಹಿತಿಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಳ್ಳಬಲ್ಲ ವಂಶವಾಹಿಗಳಿಗೆ, ಒಂದು ಜೀವಮಾನದ ಅನುಭವ, ಸಂವೇದನೆಗಳನ್ನು, ಅಳವಡಿಸಿಕೊಂಡು ಸೂಕ್ಷ್ಮರೂಪದಲ್ಲಿ ಸಂಗ್ರಹಿಸಿಟ್ಟುಕೊಳ್ಳುವುದು, ಅಸಾಧ್ಯದ ಮಾತಲ್ಲ. ವಂಶವಾಹಿಗಳು ಜೀವಪ್ರವಾಹದಲ್ಲಿ ಮುಂದುವರಿಯುತ್ತಿರುವ ಕಣಗಳು ಎಂದಾದರೆ, ಅವು ತನ್ನಲ್ಲಿ ಹುದುಗಿಕೊಂಡಿರುವ ವ್ಯಕ್ತಿತ್ವವನ್ನು, ಪ್ರವಾಹದ ಇನ್ನೊಂದು ಘಟ್ಟದಲ್ಲಿ ಹೊರಹಾಕಬಹುದಾದ ಸಾಧ್ಯತೆ ಕೂಡಾ ಅಸಂಭಾವ್ಯವಲ್ಲ.

ಈ ರೀತಿಯ ವಿವರಣೆ ತುಂಬಾ ತೆಳುವಾದುದು ಎಂಬ ಮಾತು ನಿಜ, ಆದರೆ ಭೌತಿಕವಾಗಿ ಇಂಥ ವಿಷಯಗಳನ್ನು ವಿವರಣೆಗೆ ಸಿಲುಕಿಸಲು ಇದು ಒಂದು ತಾರ್ಕಿಕ ಪ್ರಯತ್ನ ಮಾತ್ರ. ಇಲ್ಲಿನ ವಿವರಣೆಯಂತೆ ಜೀವಪ್ರವಾಹವೆಂಬುದು ಸಮಾನಾಂತರ ರೇಖೆಗಳಂತೆ ಪರಸ್ಪರ ಸಂಪರ್ಕವಿಲ್ಲದ ಒಂದು ಪಯಣ, ವಿಶ್ವದಲ್ಲಿ ಜೀವ ಈ ರೀತಿಯದೋ? ಅಥವಾ ಸೂಕ್ಷ್ಮವಾಗಿ ಅವಕಾಶವನ್ನೆಲ್ಲಾ ವ್ಯಾಪಿಸಿರುವ ಒಂದು ಅಖಂಡ ಶಕ್ತಿಯೋ? ಅರಿಯಲು ಬರಿಯ ತರ್ಕ ಮತ್ತು ಭೌತ ವಿಶ್ವದ ಜ್ಞಾನ ಮಾತ್ರ ಸಾಕಾಗಲಾರದು, ಇದಕ್ಕೆ ಅನುಭಾವಿಕ ಜ್ಞಾನದ ಆವಶ್ಯಕತೆಯೂ ಇದೆ ಎನಿಸುತ್ತದೆ.

ಈ ರೀತಿಯಾಗಿ ನಮಗೆ ಬೇಕಿರಲಿ ಬೇಡದಿರಲಿ ನಮ್ಮ ಭೂತ ನಮ್ಮ ಬೆಂಬತ್ತಿದೆ. ಭವಿಷ್ಯತ್ತಿನೆಡೆಗೆ ನಡೆಯಲು ಪ್ರಯತ್ನಿಸುತ್ತಿರುವ ಮಾನವ, ಭೂತವನ್ನು ಹೊತ್ತೇ ನಡೆಯಬೇಕು. ಇಲ್ಲಿ ಇನ್ನೊಂದು ಸೂಕ್ಷ್ಮವೂ ಇದೆ, ಮೇಲು ನೋಟಕ್ಕೆ ಏನೇನೂ ಉಪಯೋಗವಿಲ್ಲದಂತೆ ಕಾಣುತ್ತಿರುವ, ತಾರ್ಕಿಕವೆಂಬಂತೆ ತೋರುತ್ತಿರುವ, ಅಸಂಬದ್ಧವೆನಿಸುವಂತಿರುವ ಈ ವಿಚಿತ್ರಗಳಿಗೆ ಯಾವುದೋ ಅಸ್ಪಷ್ಟವಾದ ಅಂತರ್ನಿಹಿತ ಸೂತ್ರಗಳಿರುವಂತಿದೆ.

ನ್ಯೂಟನ್ನನಿಗೆ ಆಕಸ್ಮಿಕವಾಗಿ ಗಮನಕ್ಕೆ ಬಂದ ಗುರುತ್ವಾಕರ್ಷಣ ತತ್ವ, ನಿಜವಾಗಿಯೂ ಆಕಸ್ಮಿಕವಾಗಿತ್ತೇ? ಅಥವಾ ಶಕ್ತಿಯ ಸ್ವರೂಪಗಳನ್ನು ಅರಿಯಬೇಕೆನ್ನುವ, ಮಾನವ ಪ್ರಜ್ಞೆಯ ಅವ್ಯಾಹತ ಶೋಧನೆಯ ಫಲಶ್ರುತಿಯಾಗಿತ್ತೇ? ಅನೇಕ ತಲೆಮಾರುಗಳ ಪ್ರಶ್ನೆ ನ್ಯೂಟನ್ನನ ಮಿದುಳಿನಲ್ಲಿ ಕೇಂದ್ರೀಕೃತಗೊಂಡು ಅದು ಬೌದ್ಧಿಕ ಆಸ್ಫೋಟವಾದಾಗ ಉತ್ತರ ಹೊರಬಿತ್ತೇ? ಇದು ವಿವೇಚಿಸಬೇಕಾದುದು.

ಐನ್‌ಸ್ಟೀನರು ಗ್ರಹಿಸಿದ ಸಾಪೇಕ್ಷ ಸಿದ್ಧಾಂತ, ಮಾನವ ಪ್ರಜ್ಞೆ ವಿಶ್ವ ರಹಸ್ಯಗಳನ್ನು ಎಟುಕಿಸಿಕೊಳ್ಳಲು, ನಡೆಸಿದ ನಿರಂತರ ಪ್ರಯತ್ನಗಳ ಫಲ ಮಾತ್ರವಲ್ಲದೆ ಮತ್ತೇನು? ಐನ್‌ಸ್ಟೀನರ ಪೂರ್ವದಲ್ಲಿ ನೂರಾರು ತಲೆಮಾರುಗಳನ್ನು ಕಾಡಿದ ಪ್ರಶ್ನೆಗಳು, ಅನೇಕ ತಲೆಮಾರುಗಳ ಅನ್ವೇಷಣೆಯ ಪರಿಣಾಮಗಳು, ಇವುಗಳ ಒಟ್ಟು ಮೊತ್ತವೇ ಐನ್‌ಸ್ಟೀನ್ ಎಂಬ ವಿದ್ಯುತ್ ಸದೃಶ ಪ್ರತಿಭೆಯು ಮೈದಳೆಯುವಿಕೆಗೆ ಪ್ರೇರಣೆಗಳಲ್ಲವೇ?

ಬುದ್ಧನಂತಹ ಒಂದು ವ್ಯಕ್ತಿತ್ವದ ನಿರ್ಮಾಣಕ್ಕೆ, ಪ್ರಾಕೃತಿಕ ಅಡಿಪಾಯ ಸಾವಿರಾರು ವರ್ಷಗಳ ಹಿಂದೆಯೇ ನಿರ್ಮಾಣವಾಗಿರುತ್ತದೆ. ಸಾಮಾನ್ಯ ಜೀವಿಯ ಒಂದು ಜನ್ಮದಲ್ಲಿನ

ಪ್ರಯತ್ನ ಬುದ್ಧತ್ವಕ್ಕೇರಲು ಏನೇನೂ ಸಾಲದು! ಅದು ಪ್ರಯತ್ನಗಳ ಸರಮಾಲೆ. ಈ ಸತ್ಯವನ್ನು ಸಾಂಕೇತಿಕವಾಗಿ ತಿಳಿಸುವುದಕ್ಕಾಗಿಯೇ ಜಾತಕ ಕತೆಗಳು ರೂಪುಗೊಂಡಿರಬಹುದು. ಗಾಂಧಿಯಂತಹ ಒಂದು ಚೇತನವನ್ನು ರೂಪಿಸಲು ಒಂದು ನಾಡಿನ ಇಡೀ ಸಾಂಸ್ಕೃತಿಕ ಪರಂಪರೆ ಪಡುವ ಶ್ರಮ ಅಗಾಧ ಕಾಲಮಾನದ್ದು, ಒಂದು ನಾಡು ತಾನು ಎತ್ತಿ ಹಿಡಿದ ಸಮಸ್ತ ಮೌಲ್ಯಗಳನ್ನು ಏಕೀಭವಿಸುತ್ತ, ಅದನ್ನು ಹುರಿಗೊಳಿಸಿ ಒಂದು ವ್ಯಕ್ತಿತ್ವವನ್ನು ನಿರ್ಮಾಣ ಮಾಡಲು ಪಡುವ ಶ್ರಮ ಕಲ್ಪನಾತೀತವಾದುದು.

ಈ ಸತ್ಯಗಳನ್ನೇ ಗೀತೆ ವಿವರಿಸಲು ಬಯಸುವುದು. ಗೀತೆಯ ಜನನ ಮರಣದ ಚಕ್ರ ಅನಂತವಾದುದು, ಮಾನವನ ಕಾಲದ ಗಣನೆಯಲ್ಲಂತೂ ತೀರಾ ಅನಂತವಾದುದು! ಮಾನವನ ಅರಿವಿನ ಪರಿಧಿಯಲ್ಲಿ ಅದನ್ನು ವಿಶ್ಲೇಷಿಸಲು ಮನಸ್ಸು ಪ್ರಯತ್ನಿಸುತ್ತದೆ, ಆದರೆ ಗ್ರಹಿಸುವ ಮನಸ್ಸಿನ ಶಕ್ತಿ ಮಾತ್ರ ತುಂಬಾ ಕಡಿಮೆ. ಮನುಷ್ಯನ ಅರಿವಿಗೆ ನಿಲುಕದ ಅನೇಕ ತತ್ವಗಳೂ; ಅನಂತ ಪ್ರಕ್ರಿಯೆಗಳೂ ಈ ಅಗಾಧ ಅವರ್ಣನೀಯ ವಿಶ್ವದಲ್ಲಿರುವ ಸಕಲ ಸಾಧ್ಯತೆಗಳೂ ಇವೆ. ತನ್ನ ರಹಸ್ಯಗಳನ್ನು ತಾನೇ ಅರಿಯಲು ಮಾನವನಂತಹ ಮೇಧಾವಿ ಜೀವಿಯನ್ನು ಸೃಷ್ಟಿಸಿಕೊಂಡಿರುವ ಅಗಾಧ ವಿಶ್ವಶಕ್ತಿಗೆ ಯಾವುದು ತಡೆ?

ಪ್ರಕೃತಿಯ ವಶರಾಗಿ ಪ್ರಾಕೃತಿಕವಾಗಿ ಬದುಕುತ್ತಿರುವ ಮನುಷ್ಯರಿಗೆ, ಪ್ರಾಕೃತಿಕ ದಿಶೆಯಲ್ಲಿ ಮಾತ್ರ ಯೋಚಿಸಲು ಸಾಧ್ಯವಿದೆ. ಪ್ರಾಕೃತಿಕ ಮತ್ತು ಅಪ್ರಾಕೃತಿಕಗಳ ನಡುವಣ ಸಂಬಂಧಗಳ ಸೂಕ್ಷ್ಮತೆ, ಮಾನವನ ತರ್ಕಶಕ್ತಿಯಿಂದ ಆಚೆಗಿನದು. ಮಾನವನ ಮನಸ್ಸು ಸ್ವಚ್ಛವಾಗತೊಡಗಿದರೆ, ತನ್ನ ಮೂಲ ಸ್ವರೂಪದ ಅರಿವು ಅದರಲ್ಲಿ ಮಿಂಚಂತೆ ಮೈದೋರಬಹುದು; ಮನಸ್ಸು ಮತ್ತು ಆತ್ಮಗಳ ಲೋಕಾತೀತವಾದ ಅರಿವೆಯ ಪರಿವೆ ಮೊಳೆದೋರಬಹುದು! ಅದನ್ನೇ ಗೀತೆ ತನ್ನ ಪರಿಭಾಷೆಯಲ್ಲಿ, ಸಂಕೇತಗಳ ಮೂಲಕ ತಿಳಿಸಿಕೊಡುವ ಪ್ರಯತ್ನಗಳನ್ನು ಮಾಡುತ್ತಾ, ಮಾನವ ಕುಲದ ಜ್ಞಾನತೃಷೆಯನ್ನು ಹಿಂಗಿಸಲು ತನ್ನದೇ ದಾರಿಯಲ್ಲಿ ಪ್ರಯತ್ನಿಸಿದೆ.

■ ಸಿ. ಸೋಮಶೇಖರಯ್ಯ :
'ಅರಿವು', ಸೊಸಾಯಿಟಿ ಹಿಂಭಾಗ, ಚೋಳಗುಡ್ಡ, ಚಿತ್ರದುರ್ಗ-೫೭೭ ೫೦೧ ■

ಹಣ್ಣೆಲೆ ಚಿಗುರಿದಾಗ

ಎಸ್. ಸೀತಾರಾಮು

ಸತಿ ಸಕ್ಕೂಬಾಯಿ ಸತ್ತು ಸಂದಿಹುದು ವರುಷ ಆರು
ಪುಣ್ಯವತಿ, ಅನುಕೂಲೆ, ರಾಯರ ಮಾತನ್ನೆಂದೂ ಮೀರದ ಸುಶೀಲೆ.
ಅವಳ ನೆನಪೇ ಇಂದು ರಾಯರಿಗಾಧಾರ,
ಮಠದಲ್ಲಿ ದೇವರ ದರುಶನ, ಪ್ರವಚನ
ಅವರಿಗೆ ಜೀವಿತ ಕಳೆವ ಸಾಧನ.

ಪಿಂಚಣೀದಾರರ ಪಾಳಿ ಹಿಡಿದಾಗಿತ್ತು, ರಾಯರಿಗೆ ಹತ್ತು ವರುಷ
ಮಗ ಸೊಸೆಯರೇನು ಕೆಟ್ಟವರಲ್ಲ, ಇತ್ತಿದ್ದರು ರಾಯರಿಗೆ ಇನಿತು ಹರುಷ
ತಮ್ಮ ವೃತ್ತಿಯಲ್ಲೇ ಮಗ್ನರು, ರಾಯರ
ವಿಶೇಷ ಉಪಚರಿಸಲು, ಅಕ್ಕರಿಸಲು ಕಾಲವಿಲ್ಲದವರು.

ಶಾಂತಿನಿಲಯ ಪಕ್ಕದಲ್ಲಿ ಶುರುವಾಯಿತು ಯುವತಿಯರ ಹಾಸ್ಟೆಲ್
ರಾಯರ ಮನಸ್ಸಾಯಿತು ಅಶಾಂತಿಯ ಹಾಸ್ಪಿಟಲ್.
ಸಂಜೆ ಗಾಳಿಗೆ ಹೊರಗೆ ಕುಳಿತಾಗ, ಭಗವದ್ಗೀತೆ ತೆರೆದಾಗ,
ಕಿವಿಗೆ ಬೀಳಲು ಶುರುವಾಯಿತು, ಕೇಕೆ, ಶುಕಪಿಕಗಳ ಉಲಿತ,
ಕಾಣತೊಡಗಿತ್ತು ಕಾಮನ ಬಿಲ್ಲಿನ ಕುಣಿತ.

ನುಡಿದಿತ್ತು ರಾಯರ ಮನ ನಮ್ಮ ಕಾಲದಲ್ಲಿರಲಿಲ್ಲ ಹೀಗೆ
ಯುವತಿಯರು ತೊಟ್ಟು ಲಂಗ ದಾವಣಿ, ಸೀರೆ
ನುಡಿಯುತ್ತಿದ್ದರು, ನಡೆಯುತ್ತಿದ್ದರು ಮೆಲ್ಲಗೆ.

ಕಾಲ ಕಳೆದಂತೆ ಆಗಿತ್ತು ಬಹಳ ಯುವತಿಯರ ಪರಿಚಯ
ಕಂಡಿತ್ತು ಅವರ ಅಂದ ಚೆಂದ, ಹಾವ ಭಾವ
ಒಮ್ಮೆಯೂ ಮಾತನಾಡಿಸದಿದ್ದರೂ, ರಾಯರೇ ಇಟ್ಟ ಹೆಸರಿಂದ.
ಸುಂದರ ಕಣ್ಣುಗಳ ಸುನಯನ, ಕಪ್ಪು ಗುಂಡು ಮುಖದ ಕೃಷ್ಣ ಸುಂದರಿ,
ಉದ್ದ ಜಡೆಯ ನಾಗವೇಣಿ, ಎದೆ ಮುಂದೆ ಮಾಡಿ ನಡೆವ ಸತ್ಯಭಾಮ,
ಸ್ಕೂಟರಿಂದಿಳಿವಾಗ ಕಾಂಬ ಗಜಗಮನೆ ದಮಯಂತಿ
ಸಕ್ಕುವಿನದೇ ತದ್ರೂಪ, ಹಲ್ಲುಬ್ಬು ಸ್ವಲ್ಪ.

ಸರಿದಿತ್ತು ಒಂದು ಘಂಟೆ ಮುಂದಕ್ಕೆ,
ರಾಯರು ಹೋಗುವ ವೇಳೆ ಮಠಕ್ಕೆ,
ಮುದ್ದಾದ ಹಕ್ಕಿಗಳು ಮನೆಗೆ ಮರಳುವಾಗ
ಇರಬೇಡವೆ ಪಾಪ ಎದುರುಗೊಳ್ಳಲು
ಬಾಡಿದ ಈ ತಾವರೆಗಳ ನೋಡುವುದೇ ಕಷ್ಟ.

ಬಹಳ ಸೆಖೆಯೆಂದೊಂದು ರಾತ್ರಿ ಕಿಟಕಿ ತೆರೆದಾಗ ರಾಯರು
ಹಾಸ್ಟೆಲಿನ ಕಿಟಕಿಯಲ್ಲಿನ ದೃಶ್ಯ ಕಂಡು, ಹೌಹಾರಿ ತಕ್ಷಣ ಮುಚ್ಚಿದ್ದರು
ಆದರೂ ಒಳಗಿನ ಸೆಖೆ ಹೆಚ್ಚಾದಾಗ, ಕಿಟಕಿ ತೆಗೆದಿರಲಿ,
ನೋಡುವುದು ಸಲ್ಲ ಎಂದು ತುಸು ಮಾತ್ರ ತೆಗೆದಿರಿಸಿಟ್ಟರು,
ಹಾಳಾದ್ದು ಏಕೋ ಈ ವರುಷ ಸೆಖೆಗಾಲ ಮುಗಿಯುತ್ತಲೇ ಇಲ್ಲ.

ವಾರ ಕಳೆದರೂ ಕಾಣದಿದ್ದಾಗ ಕೃಷ್ಣ ಸುಂದರಿ
ರಾಯರ ಚಿಂತೆ, ಅವಳಲ್ಲ ಸೋಮಾರಿ, ಮಲಗಿರಬಹುದೇ ನಂಜೇರಿ

ಯಾರ ಕೇಳುವುದು ಯಾವ ಪರಿ?
ಹಾಸ್ಪೆಲ್ಲಿನಲ್ಲಿ ವಿಚಾರಿಸುವುದೇ ಸರಿ.

ಮಾವ ಕೊಟ್ಟ ಮದುವೆ ಸೂಟಿನ ಕೋಟು ಧರಿಸಿ,
ಬಿಳಿಮೀಸೆಯ ಕಪ್ಪಾಗಿಸಿ, ಮಗನ ಆಫ್ಟರ್ ಶೇವ್ ಲೋಶನ್ ಸಿಂಪಡಿಸಿ,
ರಾಯರು ನಡೆದೇ ಬಿಟ್ಟರು ಹಾಸ್ಟೆಲ್ಲಿಗೆ,
ನೆರೆಮನೆಯಾತನ ಪ್ರೀತಿ, ಸ್ನೇಹ ತೋರುವುದಕ್ಕೆ.

ಗೇಟ್ ದಾಟಿ ಒಳಹೋಗುವಾಗ,
ಬಹುದಿನದ ಪರಿಚಯದ ಸುನಯನ ಎದುರು ಬಂದಾಗ
ಪರಿಚಯದ ದೊಡ್ಡ ಮಂದಹಾಸ ರಾಯರು ಕೊಟ್ಟಾಗ,
ಅವಳು ಅಪರಿಚಿತನ ನೋಡುವಂತೆ ದುರುಗುಟ್ಟಿ ನೋಡಿದ್ದು ಅಕ್ಷಮ್ಯ ಅಪರಾಧ.
ಛೇ, ಈ ಯುವತಿಯರಿಗೇಕೆ ಗೊತ್ತಿಲ್ಲ ಸಜ್ಜನಿಕೆಯ ವ್ಯವಹಾರ?

ಸುಧಾರಿಸಿ ಮುನ್ನುಗ್ಗಿದ ರಾಯರು ಮೇಲ್ವಿಚಾರಕಿಯ ಕಂಡರು,
ಸ್ವಪರಿಚಯ ಹೇಳಿ ಸಜ್ಜನ ನೆರೆಹೊರೆಯ ಹಸ್ತ ಚಾಚಿದರು,
ಬಿಗಿಹಿಡಿದ ಕೈಯ ಬಿಸಿ ತಟ್ಟಿತ್ತು ರಾಯರಿಗೆ,
ಹರಿದಾಡಿತ್ತು ಪ್ರೇಮತರಂಗ ಕಣ್ಣಿಂದ ಕಣ್ಣಿಗೆ.

ರಾಯರ ಬಿಟ್ಟೋಡಿತ್ತವರ ಐದು ಘಂಟೆಗಳ ಸುಖ ನಿದ್ರೆ,
ಬಾಡ ಹತ್ತಿತ್ತು ಮುಖ ಮುದ್ರೆ
ಕುಂದಿತ್ತು ಕಣ್ಣ ಕಾಂತಿ, ತಪ್ಪಿತ್ತು ನಡಿಗೆಯ ಸ್ಫೂರ್ತಿ
ಹೊಟ್ಟೆಯಲೇನೋ ತಳಮಳ ಅರಿಯಲಾಗದ ಕಳವಳ,
ವಿರಹವಲ್ಲವೀ ತರಹದ ಖಾಯಿಲೆಗೆ ಕಾರಣ.

ಸುತನ ಮನ ನೊಂದಿತ್ತು ಪಿತನ ಸ್ಥಿತಿ ಕಂಡು,
ಅವರಾರೈಕೆಯಲಿ ಸಂದಿಹುದೆ ಏನಾದರೂ ಕುಂದು?
ಸತಿಪತಿಯರು ತೋರಿದ್ದರು ಇನ್ನೂ ಅಕ್ಕರೆ
ಹಾಕಿದರು ಹಾಲಿನಲಿ ಹೆಚ್ಚು ಸಕ್ಕರೆ.

ಕಾಣುವ ಗಾಯಕ್ಕೆ ಹಚ್ಚಬಹುದು, ಕಟ್ಟಬಹುದು ಓಷಧಿ ಪಟ್ಟಿ,
ಕಾಣದ್ದಕ್ಕೆ ಮಾಡುವುದು ಹೇಗೆ ದವ ದುರಸ್ತಿ?
ಬಾಡವಾನಲಕ್ಕೆ ಸಿಕ್ಕ ಬಾಳೆ ಕಂದಿದಂದದಿ ಕಂದಿದರು ರಾಯರು
ಒಡಲ ಬಿಸಿಗೆ ಎರಡು ಒಲವ ಹನಿ ಸಿಂಪಡಿಸಿ ಸಂತೈಸುವವರಾರೂ ಕಾಣದಾದರು.

ಕೊನೆಗೂ ತಾನಾಡಿಸಿದಾಟಕ್ಕೆ ತೆರೆ ಎಳೆದ ದೇವರು,
ಬಂದಿತ್ತು ಪರ ಊರಿಗೆ ಮಗನ ಟ್ರಾನ್ಸ್‌ಫರ್ ಆರ್ಡರು.

■ ಎಸ್. ಸೀತಾರಾಮು : ಪ್ರಧಾನ ವ್ಯವಸ್ಥಾಪಕರು ಹಾಗೂ ಮುಖ್ಯ ಜಾಗೃತ ಅಧಿಕಾರಿ
ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು-೫೬೦ ೦೦೯ ■

ಕುಂ. ವೀ. ಅವರ 'ಅರಮನೆ' — ಪ್ರಹ್ಲಾದ ಅಗಸನಕಟ್ಟೆ

ಬಂಡಾಯ-ದಲಿತ ಪರಂಪರೆಯಲ್ಲಿ ವಾಸ್ತವವೇ ಪರಮ ಸತ್ಯ ಎಂದು ಪರಿಭಾವಿಸಿ ಬರೆಯುತ್ತಿದ್ದ ಕುಂ. ವೀರಭದ್ರಪ್ಪನವರು ತಮ್ಮ ಈಚಿನ ಹೊಸ ಕಾದಂಬರಿ 'ಅರಮನೆ'ಯಲ್ಲಿ ಸತ್ಯ ಅನ್ನುವುದು ಹಲವು ಸ್ತರಗಳಲ್ಲಿ,ಹಲವು ಜೀವನ ಶೈಲಿಗಳಲ್ಲಿ, ಹಲವು ಮುಖಗಳಲ್ಲಿ ಅಂತಃಸ್ಥವಾಗಿ ಅಡಗಿರುತ್ತದೆ; ಒಬ್ಬ ಪ್ರತಿಭಾನ್ವಿತ ಲೇಖಕನಾದವನು ಅದನ್ನು ಸಮಗ್ರವಾಗಿ, ಇಡಿಯಾಗಿ ಹಿಡಿಯಬೇಕಾಗುತ್ತದೆ ಎಂಬ ನಿಲುವಿಗೆ ಬಂದಿರುವುದನ್ನ ತೋರುತ್ತಿದೆ. ಕಳೆದ ದಶಕದಿಂದ ನಮ್ಮ ಸಾಹಿತ್ಯದ ಒಟ್ಟು ಬರವಣಿಗೆ ಈ ಬಗೆಯ ಬಹುಮುಖೀ ಸ್ವೀಕರಣ ಕೇಂದ್ರದ ಕಡೆ ತುಡಿಯತೊಡಗಿದೆ. ದೇವನೂರು ಮಹಾದೇವ ಅವರ 'ಕುಸುಮಬಾಲೆ'ಯಿಂದ ಶುರುವಾದ ಈ ಬಗೆಯ ವಿಶಿಷ್ಟ ಬಗೆಯ ಕಟ್ಟುವಿಕೆ ಮತ್ತು ಕಾಣುವಿಕೆಗಳು ರಾಘವೇಂದ್ರ ಪಾಟೀಲರ 'ತೇರು' ಹಾಗೂ ಕುಂ. ವಿ. ಅವರ 'ಶಾಮಣ್ಣ' ಹಾಗೂ, ಈಗ ಅವರದೇ ಆದ ಹೊಸ ಕಾದಂಬರಿ 'ಅರಮನೆ'ಯಲ್ಲಿ ಈ ಬಗೆಯ ಸಾಧ್ಯತೆಗಳು ಮತ್ತಷ್ಟು ಸ್ಪಷ್ಟಗೊಳ್ಳ ತೊಡಗಿವೆ. ಈ ಹಿಂದಿನ ಕಾದಂಬರಿಗಳ ಆಶಯ ಮತ್ತು ಆಕೃತಿಗಳನ್ನು ಮುರಿದು ಹೊಸ ಬಗೆಯ 'ದೇಸಿ' ಮಾದರಿಗಳನ್ನ ತಮ್ಮ ಆಕೃತಿಗಳಿಗಾಗಿ ಈ ಹೊಸ ಬಗೆಯ ಕಾದಂಬರಿಗಳು ಆಶ್ರಯಿಸುತ್ತಿವೆ. ಕಥೆಯನ್ನ ಕೇಳುವ–ವಾಚಕನ ಗ್ರಹಣ ಮಾದರಿಗೆ ರೂಪಿತವಾಗಿದ್ದ ನಮ್ಮ ದೇಸಿಯ ಕಥಾನಕ ಮಾದರಿಗಳನ್ನ ಆಧುನಿಕ ಓದುಗನಿಗೆ ಕಾದಂಬರಿ ಪ್ರಕಾರದಲ್ಲಿ ಈ ಲೇಖಕರು ಮುಂದಿಡುತ್ತಿರುವುದರಿಂದ ಮತ್ತೆ ಮತ್ತೆ 'ಸಂವಹನ'ದ ಪ್ರಶ್ನೆಯನ್ನು ಎತ್ತಲಾಗುತ್ತಿದೆ.

ಕುಂ. ವೀ. ಈ ಕಾಲದ ಮಹಾಶಕ್ತ ಲೇಖಕ. ಈ ವರೆಗೂ ಹನ್ನೊಂದು ಕಾದಂಬರಿ, ಲ ಎಂಟು ಕಥಾ ಸಂಕಲನಗಳನ್ನು ಪ್ರಕಟಿಸಿರುವ ಅವರು ಇದುವರೆಗೂ ಒಟ್ಟು ಮುವ್ವತ್ತು ಕೃತಿಗಳನ್ನು ರಚಿಸಿ ಏಕಕಾಲಕ್ಕೆ ವಿಮರ್ಶಕರನ್ನೂ ಜನರನ್ನೂ ತಲುಪಿರುವ ಅಪರೂಪದ ಲೇಖಕ. ಅವರ ಜೀವನಾನುಭವ ಮತ್ತು ಲೋಕಗ್ರಹಿಕೆ ಅಸಾಮಾನ್ಯವಾದದ್ದು. ಇಂಥ ವಿಸ್ತಾರವಾದ ಜೀವನಾನುಭವ ಹಾಗೂ ಲೋಕಗ್ರಹಿಕೆ ಇರುವ ಕಾರಣಕ್ಕೆ ಅವರಿಗೆ ಈಗ ರಚಿಸಿರುವ 'ಅರಮನೆ'ಯಂಥ ಬೃಹತ್ ಕಾದಂಬರಿ ರಚಿಸಲು ಸಾಧ್ಯವಾಗಿರುವುದು.

ಈಗಾಗಲೆ 'ಅರಮನೆ' ಕಾದಂಬರಿ ಕುರಿತು ಅಲ್ಲಲ್ಲಿ ಬಿಡಿ ಬಿಡಿ ಪತ್ರಿಕಾ ವಿಮರ್ಶೆಗಳು, ಅಭಿಪ್ರಾಯಗಳು, ಚರ್ಚೆಗಳು ಮತ್ತು ಖಾಸಗಿಯಾದ ಸಂವಹನಗಳು ನಡೆದಿವೆ. ಐನೂರ ನಲ್ವತ್ಮೂರು ಪುಟಗಳಿರುವ, ವಿಶಿಷ್ಟ ಕಥನ ಕ್ರಮ ಮತ್ತು ತೀರಾ ಆಡುನುಡಿ ನಿರೂಪಣೆಯನ್ನ ಆಧರಿಸಿ ರಚಿಸಲ್ಪಟ್ಟ ಈ ಕಾದಂಬರಿಯನ್ನ ಒಂದೇ ಓದಿಗೆ ಓದುವುದು, ಗ್ರಹಿಸುವುದು, ಅದಕ್ಕಿರುವ ಬಹುಮುಖೀ ನೆಲೆಗಳನ್ನ ಅರಿಯುವುದು ತುಸು ಕಷ್ಟ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ಇದನ್ನು ಕಾದಂಬರಿ ಎಂದು ಓದುವುದು, ಮತ್ತು ಸಾಂಪ್ರದಾಯಿಕವಾಗಿ ಕಾದಂಬರಿಯನ್ನ ಪುಟ ಮಗಚುತ್ತಾ ಓದುವ ಕ್ರಮದಲ್ಲಿ ಇದನ್ನ ಓದುವುದು ಕೂಡ ಸುಲಭವಲ್ಲ. ಈ ಕಾದಂಬರಿ ಕಥನ ಮಂಡನ ಕ್ರಮದಲ್ಲೇ ನೂತನ ವಿಧಾನ ಮತ್ತು ಈ ನೂತನ ವಿಧಾನಕ್ಕೆ ಬಳಸಿಕೊಂಡಿರುವ ದೇಸಿ-ಭಾಷಾ-ಶೈಲಿಗಳು ಹೊಸ ನಿರ್ವಚನಕ್ಕೆ

ಕಾರಣವಾಗಿರುವುದರಿಂದ ಈ ಬಗೆಯ ಅಭಿಪ್ರಾಯಗಳು ವ್ಯಕ್ತವಾಗಿರುವುದು ಸಹಜವೇ ಆಗಿದೆ.

ಈ ಕಾದಂಬರಿಯ ನಾಯಕ ಥಾಮಸ್ ಮನ್ರೋ. ಈತನ ಕಾಲ ೧೭೬೧-೧೮೨೭. ಹಾಗೆ ನೋಡಿದರೆ ಥಾಮಸ್ ಮನ್ರೋನಿಗಿಂತ ಅವನು ಜೀವಿಸಿದ್ದ ಕಾಲಾವಧಿಯ ಸಮಾಜವೇ ಈ ಕಾದಂಬರಿಯ ನಾಯಕ ಸ್ಥಾನ ಪಡಕೊಂಡಿದೆ. ಇಂಥ ಸಮಾಜವನ್ನ ನಿಯಂತ್ರಿಸುತ್ತಿದ್ದ, ನಿರ್ದೇಶಿಸುತ್ತಿದ್ದ 'ಅರಮನೆ'ಯೇ ಒಂದರ್ಥದಲ್ಲಿ ನಾಯಕ. ಈ ಅವಧಿಯಲ್ಲಿ ಒಂದು ಅರಮನೆಗಳಿರಲಿಲ್ಲ. ತಮ್ಮ ಸಣ್ಣ - ಪುಟ್ಟ ವಾಡೆಗಳನ್ನೂ ಭವ್ಯ ಅರಮನೆಗಳೆಂದು ಭಾವಿಸು ತ್ತಿದ್ದ– "ಸವರೀ ವಿಸ್ತಾರವಾದ ಭೂ ಪ್ರದೇಸದೊಳಗ ಯಿನ್ನೂರನ್ನೂ ಮಿಕ್ಕು ಪಾಳೆಗಾರರು"– ತಾವು ರಾಜರೆಂದು ಭಾವಿಸುತ್ತಿದ್ದ ಜನರಿದ್ದರು. ಇಂಥೆಲ್ಲಾ ಅರಮನೆಗಳ ಕುರಿತು ಜನರೆಲ್ಲರ ಒಟ್ಟಾಭಿಪ್ರಾಯವೆಂದರೆ... "ಅಲಲಾ ಕಾಟನಾಯಕಾ... ಅಲಲಲಾ ಭಯ್ಯಮಾಂಬೇ... ಅಲಲಲಾ ಪುವ್ವಲ ರಾಜ ವಮುಸಸ್ಕಾರಾ... ಅಲಲಲಾ... ನಮ್ಮನ್ನು ನಮ್ಮ ಪಾಡಿಗೆ ಸುಮಕ ಬಿಡಿರಿ ಯಜಮಾನುಗಳಿರಾ... ನಮ್ಮ ಕಷ್ಟ ನಷ್ಟಕ್ಕಾಗದ ಯೀ ಅರಮನೆಯಿದ್ದರೆಷ್ಟು ಹ್ವಾದರೆಷ್ಟು?" (ಪು. ೮೪)– ಎಂಬ ನಿರಂತರ ರೋದನ ಮತ್ತು ಅರಮನೆಗಳ ವಿರುದ್ಧ ಶಾಪವೇ ಆಗಿತ್ತು. ಈ ಅರಮನೆಗಳಾದರೂ ತಮ್ಮ ವೈಭವದ ದಿನಗಳನ್ನ ಕಳಕೊಂಡು ವಿನಾಶದ ಕಡೆ ಅಂಚಿಗೆ ತಲುಪಿ; ಹಿಂದಣ ಗತ ವೈಭವದ ಹಳಹಳಿಕೆಯಲ್ಲಿ ದಿನಗಳ ದೂಡುವ ಹಂತಕ್ಕೆ ಬಂದ ಸ್ಥಿತಿಯನ್ನ ಈ ಕಾದಂಬರಿ ನಮ್ಮೆದುರು ತೆರೆದಿಡುತ್ತದೆ.

ಈ ಕಾದಂಬರಿಯಲ್ಲಿ ಹೀಗೆ ಕುಸಿಯುತ್ತಿರುವ ರಾಜ ವ್ಯವಸ್ಥೆಗೆ ಪರ್ಯಾಯವಾಗಿ ಹೊಸ ವ್ಯವಸ್ಥೆಗಳು ಉದಯವಾಗಲಿರುವ ಸಂಧಿಕಾಲದ ತುಡಿತಗಳನ್ನ ಮತ್ತು ಸಂಕಟಗಳನ್ನ ಇಡೀ ಕಾದಂಬರಿ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಹಲವು ನದಿಗಳು ನಾನಾ ಮಾರ್ಗವಾಗಿ ಕ್ರಮಿಸಿ ಅಂತ್ಯದಲ್ಲಿ ಸಮುದ್ರದಲ್ಲಿ ಐಕ್ಯವಾಗುವ ಹಾಗೆ ಈ ಕಾದಂಬರಿ ಹಲವು ಮಾರ್ಗಗಳನ್ನು ಏಕಕಾಲಕ್ಕೆ ಕ್ರಮಿಸುವ ಪ್ರಯತ್ನ ಮಾಡುತ್ತದೆ. ಕುಸಿಯುತ್ತಿರುವ ರಾಜ ವ್ಯವಸ್ಥೆಗೆ ಪರ್ಯಾಯ ವಾಗಿ ಜನಸತ್ತೆ, ಹಾಗೂ ವಸಾಹತು ವ್ಯವಸ್ಥೆಗಳು ತಮ್ಮ ಯಜಮಾನ್ಯವನ್ನ ಸ್ಥಾಪಿಸಲು ಆ ಮೂಲಕ ಅಧಿಕಾರ ಗ್ರಹಣಕ್ಕೆ ಮುಂದಾಗುವ ಸಂಘರ್ಷ ಮತ್ತು ಚಲನೆಯನ್ನು ಕಾದಂಬರಿ ಬಹು ಸೂಕ್ಷ್ಮವಾಗಿ ಗಮನಿಸುತ್ತದೆ. ಜನಸತ್ತೆಯ ಸಾಮುದಾಯಿಕ ಶಕ್ತಿಯು ತನ್ನ ಅಲೌಕಿಕ ಪ್ರಭೆಯನ್ನ ಮತ್ತು ಅಸಾಧಾರಣ ಕ್ರಿಯಾಗತಿಯನ್ನ ಇಡೀ ಕಾದಂಬರಿಯಲ್ಲಿ ಪ್ರಕಟಿಸಿದೆ. ಈ ಕಾದಂಬರಿಯ ಸಶಕ್ತವಾದ ಮತ್ತು ಕಲಾತ್ಮಕವಾದ ಭಾಗಗಳೆಂದರೆ ಇವು. ಈ ಭಾಗಗಳು ಇಡೀ ಜನಾಂಗದ ಆಶೋತ್ತರದ ಪ್ರತೀಕಗಳಾಗಿವೆ. ಜನತೆಯ ನಂಬಿಕೆ, ಆಚರಣೆ, ಜೀವನ ಪದ್ಧತಿ, ದೈವಾಚರಣೆ, ನಿಸರ್ಗಾರಾಧನೆ, ಅಲೌಕಿಕ ಶಕ್ತಿಯೊಂದಿಗಿನ ಅವರ ಮುಖಾಮುಖಿ, ಎಡೆಯಿಲ್ಲದ ಶರಣಾಗುವಿಕೆ ಮತ್ತು ಎಂಥ ದಯನೀಯ ಸ್ಥಿತಿಯಲ್ಲೂ ಧೃತಿಗೆಡದ ಅವರ ಜೀವನ ಪ್ರೀತಿ– ಎಲ್ಲವನ್ನೂ ಈ ಕಾದಂಬರಿ ಅಪಾರ ವಿಶ್ವಾಸ, ಮತ್ತು ಜನಪರ ಕಳಕಳಿ ಯೊಂದಿಗೆ ಸಮಗ್ರವಾಗಿ ಗ್ರಹಿಸಲೆತ್ನಿಸಿದೆ.

'ಕುದರೆಡವು' ಅರಮನೆಯ ಪತನ ಸ್ಥಿತಿಯಿಂದ ಶುರುವಾಗುವ ಕಾದಂಬರಿ ಆ ಅರಮನೆಯಲ್ಲಿ ಪಿಕದಾನಿ ಹಿಡಿಯುತ್ತಿದ್ದ ವೊಬಯ್ಯ ಇಂಥ ಅರಮನೆ ಪ್ರವೇಶಿಸಿ ಅರಮನೆಯ

ಸಿಂಹಾಸನವೇರುವ ಮಟ್ಟಿಗೆ ಬೆಳೆಯುವುದನ್ನ ಚಿತ್ರಿಸುತ್ತದೆ. ವೊಬಯ್ಯ ಅರಮನೆಯಲ್ಲಿ ಯಕಶ್ಚಿತ್ ಆಳಾದರೂ ಅವನೊಳಗೆ 'ಸಾಂಬವಿ' ಪ್ರವೇಶ ಪಡೆಯುವುದರಿಂದ ಅವನು ಅಸಾಮಾನ್ಯನಾಗುತ್ತಾನೆ. ಜನಶಕ್ತಿಯ ಸಂಕೇತವಾಗುತ್ತಾನೆ. ಇಡೀ ಸಮುದಾಯ ಈ ಸಾಂಬವಿಯಲ್ಲಿ ತಮ್ಮ ಬಿಡುಗಡೆಯ ಮಾರ್ಗಗಳನ್ನು ಮತ್ತು ಅರಮನೆ ಕುರಿತು ಅವರಲ್ಲಿ ಮಡುಗಟ್ಟಿದ ತಿರಸ್ಕಾರಕ್ಕೆ ಹೊರಚಾಲನೆಗಳನ್ನು (out lets) ಕಂಡುಕೊಳ್ಳುತ್ತದೆ. ಆಳಾದ ವೊಬಯ್ಯ ಜನಸತ್ತೆಯ ಪ್ರತೀಕವೆಂದು ಬಗೆದು ಕುದರೆಡವು ಅರಮನೆಯ ರಾಣಿ ಭಯ್ರಮಾಂಬ ಅವನಿಗೆ ಶರಣು ಹೋಗುತ್ತಾಳೆ. ಅವನ ಶಕ್ತಿಯನ್ನು ಒಪ್ಪಿಕೊಳ್ಳುತ್ತಾಳೆ.

ಒಟ್ಟಾರೆ ಜನಸತ್ತೆಯ ಈ ಚಲನೆ ಮುಂಬರುವ ದಿನಗಳ ಕಾಲದ ಮುನ್ಸೂಚನೆಯಾಗಿ ಕಾದಂಬರಿಯಲ್ಲಿ ಪ್ರಕಟಗೊಳ್ಳುತ್ತದೆ. ರಾಜಸತ್ತೆ ಪ್ರಜಾಸತ್ತೆಯಾಗುವ, ಪ್ರಜೆಯೇ ಪ್ರಭು ವಾಗುವ, ಸಾಮಾನ್ಯರು ಅಸಾಮಾನ್ಯರಾಗುವ ಅಧಿಕಾರ ಗ್ರಹಣಕ್ಕೆ ಮುಂದಾಗುತ್ತಾರೆಂಬ ಪೂರ್ವ ಸೂಚನೆಯನ್ನ ಕಾದಂಬರಿ ತನ್ನ ರಚನಾ ಕಟ್ಟಿನೊಳಗೆ ಬಹು ಸೂಕ್ಷ್ಮವಾಗಿ ನೇಯ್ದಿದೆ. ಮುಂದೆ ಕಾಣಿಸಿಕೊಂಡ ಗಾಂಧಿಯವರು ತಮ್ಮ ಹೋರಾಟ ಬಲಕ್ಕೆ ನೆಚ್ಚಿಕೊಂಡಿದ್ದು ಇಂಥ ಸಾಮಾನ್ಯರ ಅಸಾಮಾನ್ಯ ಶಕ್ತಿಯನ್ನ; ಮತ್ತು ಅವರೊಳಗೆ ಅಡಗಿರುವ ಒಂದು ಆಧ್ಯಾತ್ಮಿಕ ಶಕ್ತಿಯನ್ನ– ಎಂಬುದನ್ನು ಇಲ್ಲಿ ನೆನೆಯಬೇಕು.

ಈ ಕಾದಂಬರಿಗೆ ಒಂದು ಅಲೌಕಿಕ ಮಾಂತ್ರಿಕ ಶಕ್ತಿ ಪ್ರಾಪ್ತವಾಗಿರುವುದೆ ಜನಸತ್ತೆಯ ಚಲನೆಯಲ್ಲಿ ತೆರಕೊಳ್ಳುವ ತಳ ಸಮುದಾಯಗಳ ಅನುಭವ ಶ್ರೀಮಂತಿಕೆ ಹಾಗೂ ರೂಕ್ಷವೆನ್ನ ಬಹುದಾದ ಜೀವನ ವಿಧಾನದಲ್ಲೂ ಅರಳುವ ಅಪೂರ್ವ ಸೊಬಗು ಮತ್ತು ಜೀವನ ಪ್ರೀತಿ ಯಲ್ಲಿ. ಈ ಜೀವನಪ್ರೀತಿಯ ವಿಸ್ತಾರ ಎಷ್ಟಿದೆಯೆಂದರೆ– ಅದಕ್ಕೆ ಜಡ-ಚೇತನ ಎಂಬ ಭೇದವೇ ಇಲ್ಲ. ಕಣ್ಣೆದುರಿನ ಗುಡ್ಡ, ಕೆರೆ, ಹಳ್ಳ, ಪ್ರಾಣಿ-ಪಶು-ಪಕ್ಷಿ– ಏನೆಲ್ಲವೂ ಜೀವ ಪವಾಡಗಳಾಗಿ ಬಿಡಬಲ್ಲವು. ಪುರಾಣಗಳಾಗಬಲ್ಲವು... ಮಾತಾಡಬಲ್ಲವು... ಮುನಿದುಕೊಳ್ಳಬಲ್ಲವು.

ಜಗಲೂರವ್ವ ಹಾಗೂ ಆಕೆ ಸಾಕಿದ 'ಸೂರ' ಎಂಬ ಕೋಣದ ನಡುವಿನ ಸಂಬಂಧಗಳು ಈ ಬಗೆಯವು. 'ಕೋಣ' ಜಗಲೂರವ್ವನ ದೃಷ್ಟಿಯಲ್ಲಿ ಆಕೆಯ ಒಡಲಲ್ಲುಟ್ಟಿದ ಮಗನಿಗಿಂತ ಶ್ರೇಷ್ಠ. ಅವರಿಬ್ಬರ ನಡುವಣ ಬಾಂಧವ್ಯ ಯಾವುದೇ ತಾಯಿ-ಮಗನ ನಡುವೆ ಇರಬಹುದಾದ ವಾತ್ಸಲ್ಯಕ್ಕಿಂತ ಮಿಗಿಲಾಗಿದೆ. ಇಂಥ ಹಲವು ಸಂಬಂಧಗಳು ಈ ಕಾದಂಬರಿಯ ಒಡಲೊಳಗೆ ಪುನರುಕ್ತಗೊಳ್ಳುತ್ತಾ ಸಾಮಾನ್ಯ ಜನರು ಭೀಕರ ಶೋಷಣೆ, ಬಡತನ, ದಾರಿದ್ರ್ಯಗಳ ನಡುವೆಯೂ ಹೇಗೆ ಬಂದು ಸ್ವಾರಸ್ಯಕರ ಬದುಕಿನ ವಲಯವನ್ನ ನಿರ್ಮಿಸಿಕೊಳ್ಳಬಲ್ಲರು ಎಂಬುದನ್ನ ಈ ಕಾದಂಬರಿ ಮನಗಾಣಿಸುತ್ತದೆ.

ಇಂಥ ಜನಸತ್ತೆಯ ಮಾನಸಿಕ ಲೋಕವನ್ನ ಅರ್ಥ ಮಾಡಿಕೊಂಡು ನಿರ್ದಯವಾದ ವಸಾಹತು ಸತ್ತೆಗೆ ಒಂದು ಮಾನವೀಯ ನೆಲೆಯನ್ನ ಪ್ರಾಪ್ತಗೊಳಿಸಲು ಅಹರ್ನಿಶಿ ದುಡಿಯುವ ಅಪರೂಪದ ಬ್ರಿಟಿಶ್ ಕಲೆಕ್ಟರ್ ಥಾಮಸ್ ಮನ್ರೋ ಕುಸಿಯುತ್ತಿರುವ ರಾಜಸತ್ತೆಗೆ ಪರ್ಯಾಯ ವಾಗಿ ವಸಾಹತು ಸತ್ತೆಯನ್ನ ಮುಂದಿಡುತ್ತಿರುವ ಒಂದು ಶಕ್ತಿ ಕೇಂದ್ರವಾಗಿ ಈ ಕಾದಂಬರಿಯಲ್ಲಿ ಪ್ರಕಟಗೊಂಡಿದ್ದಾನೆ. ಜನತೆ ಹೇಗೆ 'ಸಾಂಬವಿ'ಯಲ್ಲಿ ಒಂದು ಪರ್ಯಾಯ ಬಿಡುಗಡೆಯನ್ನ

ಬಯಸುತ್ತಿದ್ದಾರೋ ಹಾಗೆಯೇ ಥಾಮಸ್ ಮನ್ರೋ ಕಡೆಗೂ ಒಂದು ಬಿಡುಗಡೆಯ ಆಶೆಯನ್ನ ಇಟ್ಟುಕೊಂಡಿದ್ದಾರೆ. ಅವನನ್ನೂ ಒಂದು ಅಲೌಕಿಕ ಶಕ್ತಿಯ ಪ್ರತೀಕವೆಂಬ ಭಾವನೆಯನ್ನ ತಮ್ಮ ಒಡಲೊಳಗೆ ಇಟ್ಟುಕೊಂಡಿದ್ದಾರೆ.

ಆದರೆ ಥಾಮಸ್ ಮನ್ರೋ ಪೂರ್ಣ ಸ್ವತಂತ್ರನಲ್ಲ. ಅವನಿಗೆ ತಾನು ಆಳುತ್ತಿರುವ ಪ್ರದೇಶದ ಸಣ್ಣ-ಪುಟ್ಟ ಪಾಳೆಯಗಾರರು ಹೇಗೆ ವೈರಿಗಳೋ ಹಾಗೆಯೇ ತನ್ನಂತೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಆಡಳಿತ ನಡೆಸುತ್ತಿರುವ ಇನ್ನಿತರ ಬ್ರಿಟಿಶ್ ಕಲೆಕ್ಟರ್‌ಗಳೂ ವೈರಿಗಳೇ. ಹಾಗೆಯೇ ತನ್ನನ್ನ ಇಲ್ಲಿ ಕೆಲಸ ಮಾಡಲು ನಿಯೋಜಿಸಿರುವ ಬ್ರಿಟಿಶ್ ಚಕ್ರಾಧಿಪತ್ಯವೂ ಒಂದು ಸಂಕೋಲೆಯೇ. ಇಂಥೆಲ್ಲಾ ಬಂಧನಗಳ ನಡುವೆಯೂ ಅವನು ಸಾಮಾನ್ಯರ ಬವಣೆ ಬಗೆಹರಿಸಲು ನಡೆಸುವ ಪ್ರಾಮಾಣಿಕ ಪ್ರಯತ್ನ, ಹೋರಾಟ, ತಹತಹ ಮತ್ತು ಅವನ ಜನಪರ ಕಾಳಜಿಯನ್ನ ಈ ಕಾದಂಬರಿ ಎತ್ತಿ ಹಿಡಿಯುತ್ತದೆ. ಅವನ ಮರಣದ ಸಂದರ್ಭದಲ್ಲಿ ಜನತೆ ಆಲಾಪಿಸುವ ಪರಿಯೇ ಅವನ ವ್ಯಕ್ತಿತ್ವ ಎಂತಹದ್ದಿತ್ತು ಎಂಬುದನ್ನು ನಮ್ಮ ಅರಿವಿಗೆ ತರುತ್ತದೆ.

ಸಮಾಜವೊಂದು ಸಂಕ್ರಮಣ ಸ್ಥಿತಿಯಲ್ಲಿ ಸಂಕಟ ಪಡುತ್ತಿರುವಾಗ ಆಸ್ಥಾನ ಆಶ್ರಿತ ಕವಿಗಳು, ಚಿಂತಕರು ಹೇಗಿದ್ದರೆಂಬ ಮತ್ತೊಂದು ಆಯಾಮವನ್ನು ಈ ಕಾದಂಬರಿ ತನ್ನ ನಡಿಗೆಯೊಳಕ್ಕೆ ಬೆಸೆದುಕೊಳ್ಳುತ್ತದೆ. 'ರಾಮರಾಜು ಭಟ್ರಾಜು', 'ಅಯ್ಯಾಳೇಶ್ವರ ಮಹಾಕವಿ', 'ದೀಕ್ಷಿತರು' ಎಂಬ ಕವಿ ಪುಂಗವರನ್ನೂ– ಸಂಸ್ಕೃತ ಶ್ರೇಷ್ಠ ಎಂದು ಅದನ್ನು ಸಮರ್ಥಿಸುವ ಅಗ್ರಹಾರಗಳನ್ನು; ಆಧುನಿಕ ಜೀವನ ಪದ್ಧತಿ, ಆಧುನಿಕ ಶಿಕ್ಷಣ, ಆಧುನಿಕ ಪಠ್ಯಕ್ರಮಗಳನ್ನ ವಿರೋಧಿಸುವ ಪುರೋಹಿತಶಾಹಿಯನ್ನು ಕಾದಂಬರಿ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ, ಮತ್ತು ವ್ಯಂಗ್ಯ ದನಿಯಲ್ಲಿ ಇಂಥ ನಿಲುವುಗಳನ್ನ ಲೇವಡಿ ಮಾಡುತ್ತದೆ.

ಇಡೀ ಕಾದಂಬರಿಯಲ್ಲಿ "ಅರಮನೆಯಿಂದ ಬಿಡುಗಡೆ" ಮತ್ತು "ಅರಮನೆಯ ಆಕ್ರಮಣ" ಎರಡೂ ಧಾರೆಗಳು ಕಾದಂಬರಿಯಲ್ಲಿ ಸಮಾನಾಂತರವಾಗಿ ಘಟಿಸುತ್ತಾ ಹೋಗುವುದನ್ನ ಸೂಕ್ಷ್ಮ ಓದಿನಿಂದ ಗಮನಿಸಬಹುದು. ವಸಾಹತು ಸತ್ತೆಯು ಅರಮನೆಗಳನ್ನ ಆಕ್ರಮಿಸಿಕೊಂಡು ಏಕ ಸಾರ್ವಭೌಮತ್ವ ಸಾಮ್ರಾಜ್ಯದ ಸ್ಥಾಪನೆಯ ಕಡೆ ಚಲಿಸುವುದು ಕಂಡರೆ ಜನತೆ ಇಂಥ ಅರಮನೆಗಳಿಂದ ಒಟ್ಟಾರೆ ಮುಕ್ತಿ ಪಡೆಯಬೇಕೆಂಬ ಧಾವಂತವನ್ನ ವ್ಯಕ್ತಪಡಿಸುತ್ತದೆ. ಈ ರಾಜಸತ್ತೆ ಎಂಥೆಂಥ ಅಮಾನುಷ ಕೃತ್ಯಗಳಲ್ಲಿ ತೊಡಗಿತ್ತೆಂಬುದನ್ನು ಕಾದಂಬರಿ ಆಯಾಸವಿಲ್ಲದೆ ನಮ್ಮೆದುರು ಮುಂದಿಡುತ್ತದೆ. ತಂತ್ರ, ಕುತಂತ್ರ, ಪ್ರತಿ ತಂತ್ರ, ನಿರ್ದಯ ತೆರಿಗೆ, ಕೊಲೆ, ಸುಲಿಗೆ, ಹಾದರ, ಐಷಾರಾಮ ಇತ್ಯಾದಿಗಳೆಲ್ಲ ನಾಚಿಕೆಯಿಲ್ಲದೆ ತೊಡಗಿತ್ತೆಂಬುದನ್ನು ಈ ಕಾದಂಬರಿ ಜರುಮಲಿಯ ರಾಜ, ನಿಚ್ಚಾಪುರದ ರಾಜ ಇವರ ಸಂಸ್ಥಾನಗಳ ಕಾರ್ಯಭಾರದ ವೈಖರಿಯ ಮೂಲಕ ಅನಾವರಣ ಮಾಡುತ್ತದೆ. ಇಂಥ ವಿಷಯ ಲಂಪಟ ಪಾಳೆಗಾರರು ಈ ಕಾದಂಬರಿಯ ತುಂಬೆಲ್ಲಾ ತುಂಬಿಕೊಂಡಿದ್ದಾರೆ.

ಶೂನ್ಯವಾಗುತ್ತಿರುವ ರಾಜಸತ್ತೆಯನ್ನು ಆಕ್ರಮಿಸಲು ಜನಸತ್ತೆ ಹಾಗೂ ವಸಾಹತುಶಾಹಿಗಳು ಘರ್ಷಣೆ ನಡೆಸುತ್ತಿರುವ ಸಂದರ್ಭದಲ್ಲಿಯೇ ಈ ಕೃತಿ ಈ ಸಂಘರ್ಷದ ಇನ್ನೊಂದು ಹಾದಿಯನ್ನೂ ತನ್ನ ಎಳೆಗೆ ಸೇರಿಸಿಕೊಂಡಿದೆ. ಅದು ಬೊಬ್ಬಿಲಿ ನಾಗಿರೆಡ್ಡಿಯ ಕತೆ. ಬೊಬ್ಬಿಲಿ

ನಾಗಿರೆಡ್ಡಿ ಅಧಿಕಾರ ಸತ್ತೆಯ ವಿರುದ್ಧ ನಡೆಸುವ ಭೂಗತ ಸಮರಕ್ಕೆ ಒಂದು ರೋಚಕವಾದ, ವಿಸ್ಮಯಗೊಳಿಸುವ ಛಾಪು ಈ ಕಾದಂಬರಿಯೊಳಗಿದೆ. ಇಂಥ ಪಾತ್ರ ಅಥವ ಶಕ್ತಿ ಸೃಷ್ಟಿಯ ಮೂಲಕ ಇಂಥದ್ದೊಂದು ಹೋರಾಟದ ಕವಲು ಭಾರತದ ಚರಿತ್ರೆಯ ಉದ್ದಕ್ಕೂ ಸಜೀವ ವಾಗಿರುವುದನ್ನೂ ಹಾಗೂ ಮುಂದೊಂದು ದಿನ ವಸಾಹತುಶಾಹಿಯ ವಿರುದ್ಧ ನಡೆಯಲಿರುವ ಹೋರಾಟದ ಸಂದರ್ಭದಲ್ಲಿ ಮುಂಚೂಣಿಗೆ ಬರುವ ಸಾಧ್ಯತೆಯನ್ನೂ ಈ ಕೃತಿ ಗರ್ಭೀಕರಿಸಿ ಕೊಂಡಿದೆ. ಬೊಬ್ಬಿಲಿ ನಾಗಿರೆಡ್ಡಿ– ಸಾಂಬವಿ– ಥಾಮಸ್ ಮನ್ರೋ– ಜನ ಕಲ್ಯಾಣಕ್ಕೆ ಹಿಡಿದ ಹಾದಿಗಳ ಬಗ್ಗೆ ಜನರಿಗೊಂದು ಸಮಾನವಾದ ಗೌರವ ಹಾಗೂ ಅಲೌಕಿಕ ನಂಬಿಕೆಗಳು ಇರುವುದನ್ನ ಈ ಕಾದಂಬರಿ ಬಹು ಉತ್ಸಾಹದಿಂದ ವರ್ಣಿಸುತ್ತದೆ. ಈ ವಾಸ್ತವಿಕ ವ್ಯಕ್ತಿಗಳು ತಾವಿರುವ ವರ್ತಮಾನದಲ್ಲಿಯೇ ಅದ್ಭುತ ಐತಿಹ್ಯ ಸ್ವರೂಪದ ಮಟ್ಟಕ್ಕೇರಿದ್ದಾರೆ. ವರ್ತಮಾನವನ್ನ ಮಾಂತ್ರಿಕಗೊಳಿಸಿ ಬರೆಯಲು ಕಾದಂಬರಿಕಾರರಿಗೆ ಈ ತಂತ್ರ ಬಹು ಪ್ರಯೋಜನಕಾರಿಯಾಗಿಯೇ ಒದಗಿ ಬಂದಿದೆ.

ಬೊಬ್ಬಿಲಿ ನಾಗಿರೆಡ್ಡಿ ಹಿಡಿದಿರುವ ಹಾದಿ ಸ್ವತಃ ಮನ್ರೋಗೂ ಇಷ್ಟವಿಲ್ಲದಿದ್ದರೂ ನಾಗಿರೆಡ್ಡಿ ಬಗ್ಗೆ ಅವನಿಗೆ ಅಪಾರ ಗೌರವ ಮತ್ತು ಪ್ರೀತಿ ಇದೆ. ಅವನನ್ನು ಒಲಿಸಿ ಸಹಜ ದಾರಿಗೆ ತರುವ ಪ್ರಯತ್ನವನ್ನು ಅವನು ಮಾಡುತ್ತಾನಾದರೂ ಅದರಲ್ಲಿ ಅವನು ಯಶಸ್ವಿಯಾಗುವುದಿಲ್ಲ.

ಈ ಕಾದಂಬರಿಗೆ ದೀರ್ಘ ಮುನ್ನುಡಿ ಬರೆದಿರುವ ಕನ್ನಡದ ಖ್ಯಾತ ವಿಮರ್ಶಕರಾದ ಡಾ. ಸಿ. ಎನ್. ರಾಮಚಂದ್ರನ್ ಅವರು ಈ ಕೃತಿಯನ್ನ ಚಾರಿತ್ರಿಕ ಆಯಾಮ, ಧಾರ್ಮಿಕ ಆಯಾಮ ಎಂದು ವಿಂಗಡಿಸಿ, ವಿಭಜಿಸಿ ವಿಶ್ಲೇಷಿಸಿದ್ದಾರೆ. ಹಾಗೆ ನೋಡಿದರೆ ಇದಕ್ಕಿರುವ ಸಾಮಾಜಿಕ ಆಯಾಮವೇ ಮೇಲಿನ ಎರಡೂ ಆಯಾಮಗಳನ್ನ ಒಂದು ಕೇಂದ್ರಕ್ಕೆ ಸೆಳೆದು ಈ ಕಾದಂಬರಿಗೊಂದು social relevance ನ್ನು ಕೊಟ್ಟು ಈ ಕಾಲದ, ಈ ಕ್ಷಣದ ಪ್ರಸ್ತುತತೆ ಪಡೆಕೊಳ್ಳಲು ಮುಖ್ಯ ಕಾರಣವಾಗಿದೆ. ಥಾಮಸ್ ಮನ್ರೋನ ಸಾಮಾಜಿಕ ಕಳಕಳಿ, ಬದ್ಧತೆ, ಮಾನವೀಯ ಗುಣಗಳೇ ಈ ಕಾದಂಬರಿಯ ರಚನೆಗೆ ಪ್ರೇರಕ ಎಂದು ಸ್ವತಃ ಕಾದಂಬರಿಕಾರರೇ ತಮ್ಮ ಮಾತುಗಳಲ್ಲಿ ದಾಖಲಿಸಿರುವುದನ್ನ ಈ ಹಿನ್ನೆಲೆಯಲ್ಲಿಯೇ ನೋಡಬಹುದು. ಹೀಗಾಗಿ ಥಾಮಸ್ ಮನ್ರೋ ಮಾಡಲು ಉಪಕ್ರಮಿಸಿದ ಸುಧಾರಣೆಗಳು ಮತ್ತು ಜನತೆಯ ನಡುವೆ ಆತ ಬಿಟ್ಟು ಹೋಗಿರುವ ಐತಿಹ್ಯಗಳು ಕಾದಂಬರಿಯ ರಚನೆಗೆ ಒಂದು ಚೋದಕ ಅಂಶಗಳಾಗಿಯೇ ನೋಡಬೇಕೇ ವಿನಃ ಅವೇ ಕಾದಂಬರಿಯ ಇಡಿಯಾದ ಗುರಿಗಳಲ್ಲ.

ಈ ಕಾರಣಕ್ಕೆ ಪ್ರಸ್ತುತ ಕಾದಂಬರಿ ಒಂದು ಚಾರಿತ್ರಿಕ ಕಾದಂಬರಿ ಎಂಬ ಹಣೆಪಟ್ಟಿಯಿಂದ ಮುಕ್ತವಾಗಿದೆ. ಕಾದಂಬರಿಯೊಳಗೆ ತೆರಕೊಳ್ಳುವ ಬದುಕು– ಸಮಾಜ– ತಳ ಸಮುದಾಯಗಳ ಜೀವನ ವಿಧಾನ ಅವೆಲ್ಲವೂ ಈ ಕ್ಷಣದ ಸತ್ಯಗಳಂತೆ ಹಾಗೂ ಇವೊತ್ತಿನ ಪ್ರಶ್ನೆಗಳಂತೆ ನಮ್ಮೆದುರು ತೆರಕೊಂಡು ಈ ಕಾದಂಬರಿ ವರ್ತಮಾನದ ಕಾದಂಬರಿಯಾಗಿಯೂ ನಮ್ಮನ್ನ ಗಾಢವಾಗಿ ತಬ್ಬುತ್ತದೆ. ಸಮಾಜದ ಅಂಚಿಗೆ ತಳ್ಳಲ್ಪಟ್ಟ ಅನೇಕ ಆಚರಣೆ, ದೇಸಿ ಸಂಸ್ಕೃತಿಗಳು ಅಂದೂಇದ್ದಂತೆ ಇಂದೂಇವೆ ಎಂಬ 'ಸಂಗತತೆ' ಈ ಕಾದಂಬರಿಯ ಯಶಸ್ಸಿಗೆ ಕಾರಣವಾಗಿದೆ.

ಈಗಾಗಲೆ ಈ ಕಾದಂಬರಿ ಹಲವು ಹರಹುಗಳಲ್ಲಿ ಚಲಿಸುತ್ತದೆ ಎಂದು ಉಲ್ಲೇಖಿಸಿದ ಹಾಗೆ ಪ್ರೇಮ ಮೀಮಾಂಸೆಯ ಧಾರೆಯೊಂದನ್ನು ತನ್ನ ಪರಿಧಿಗೆ ಆಹ್ವಾನಿಸಿಕೊಂಡಿದೆ. ತಿಲ್ಲಾನ ತಾಯಮ್ಮ, ಅವಳ ಮಗಳಾದ ಅಪರೂಪದ ಸುಂದರಿ ಚಿನ್ನಸಾನಿ, ಅವಳ ಮತ್ತು ಹೆನ್ರಿಯ ಪ್ರೇಮ ಮತ್ತು ಜೆನ್ನಿಫರಳ ಕಲಾಪ್ರೇಮ, ಬುಗುಡಿ ನೀಲಕಂಠಪ್ಪ ಮತ್ತು ತಿಲ್ಲಾನ ತಾಯಮ್ಮ ಇವರ ನಡುವೆ ಸಂಭವಿಸುವ ಪ್ರೇಮ-ವಿರಹ-ಕಲಹ ಇತ್ಯಾದಿಗಳೂ ಸೇರಿಕೊಂಡು ಕಾದಂಬರಿ ತೀರಾ ವಾಸ್ತವದಲ್ಲಿ ಮುಳುಗಿ ಹೋಗದೆ ಅದಕ್ಕೊಂದು ಶೃಂಗಾರ ಮೀಮಾಂಸೆಯನ್ನ ನೀಡಿದೆ. ಇಡೀ ಕಾದಂಬರಿಗೊಂದು ಮಾಯೆಯ ಮುಸುಕನ್ನು, ಪ್ರೇಮದ ಆಲಾಪವನ್ನು ಕೂಡಿಸಿದೆ. ಚಿನ್ನಸಾನಿಯ ಸೌಂದರ್ಯದ ವರ್ಣನೆ ನಮ್ಮ ಮಹಾಕಾವ್ಯಗಳ ಶೃಂಗಾರ ರಸವನ್ನ ನೆನಪಿಸುವಂತಿದೆ.

ಒಂದು ನಿಟ್ಟಿನಿಂದ ನೋಡಿದರೆ ಇದು ಯಾವ ನಾಯಕನನ್ನೂ ಕೇಂದ್ರವಾಗಿಟ್ಟುಕೊಂಡು ಬರೆದ ಕಾದಂಬರಿಯಲ್ಲ. ಒಂದು ಕಾಲಖಂಡದ ದನಿಯನ್ನ ಇಡಿಯಾಗಿ ಹಿಡಿಯುವ ಒಂದು ಅಸಾಮಾನ್ಯ ಪ್ರಯತ್ನ ಈ ಕಾದಂಬರಿ. ಒಂದು ಕಾಲಖಂಡ ಕಟ್ಟಿಕೊಂಡಿರುವ ಬದುಕು, ಆ ಬದುಕನ್ನ ರೂಪಿಸುವ ಮೌಲ್ಯಗಳು, ಆ ಕಾಲವನ್ನ ಪ್ರಭಾವಿಸುವ ಮತ್ತು ಮುನ್ನಡೆಸುವ ಹಾಗೂ ನಿಗ್ರಹಿಸುವ ಶಕ್ತಿಗಳನ್ನು ಒಬ್ಬ ಪ್ರತಿಭಾನ್ವಿತ ಲೇಖಕ ಸಮಗ್ರವಾಗಿ ಗ್ರಹಿಸಲು ಸಾಧ್ಯವೇ ಎಂದು ನೋಡುವ ಮಹತ್ವಾಕಾಂಕ್ಷಿ ಪ್ರಯತ್ನ ಈ ಕಾದಂಬರಿ.

ಹೀಗಾಗಿ ಕಾಲವೊಂದರ ಮರುಸೃಷ್ಟಿ ಲೇಖಕನಿಗೆ ಒಂದು ದೊಡ್ಡ ಸವಾಲು. ಕಾಲ ಎಂದೂ ಒಂದು ಸರಳಾತ್ಮಕ ಚಲನೆಯಲ್ಲಿ ಪ್ರವಹಿಸುವುದಿಲ್ಲ. ಅದು ತೀರಾ ಸಂಕೀರ್ಣವಾದ ಏಕ ಕಾಲಕ್ಕೆ ಸಾದೃಶ್ಯ-ವೈದೃಶ್ಯಗಳನ್ನು, ವಿಸ್ಮಯ-ವಿಷಾದಗಳನ್ನು, ಅವನತಿ-ಉನ್ನತಿಗಳನ್ನು ತನ್ನೊಟ್ಟಿಗೆ ಕವುಚಿಕೊಂಡಿರುವ ಒಂದು ನಿಗೂಢವಾದ, ಅಮೂರ್ತವಾದ ಮಾಯಾಜಾಲ. ಇಂಥ ಮಾಯಾಜಾಲದೊಳಕ್ಕೆ ಇಣುಕುವ, ಧುಮುಕುವ ಚಪಲ, ಕುತೂಹಲ ಎಲ್ಲಾ ಕಾಲದಲ್ಲೂ ಲೇಖಕರನ್ನು ಸೆಳೆದಿದೆ. ಸಲ್ಮಾನ್ ರಶ್ಮಿ, ಮಾರ್ಕ್ವೆಜ್, ಖುಶವಂತ್‌ಸಿಂಗ್ ಹಾಗೂ ನಮ್ಮಲ್ಲಿನ ಅನೇಕ ಗಂಭೀರ ಲೇಖಕರು ಈ ಸವಾಲನ್ನು ಸ್ವೀಕರಿಸಿದ್ದಾರೆ. ಅಂಥ ಮಹತ್ವಾಕಾಂಕ್ಷಿ ಪ್ರಯತ್ನದ ಸಾಲಿಗೆ 'ಅರಮನೆ'ಯೂ ಸೇರುತ್ತದೆ.

ಈ ಕಾದಂಬರಿಯಲ್ಲಿ ಎಲ್ಲಕ್ಕಿಂತ ಒಡೆದು ಕಾಣುವುದು ಅದರ ರಚನಾ ಸಂವಿಧಾನ ಹಾಗೂ ಅದರ ಭಾಷಿಕ ಸಂರಚನೆ. ವಿಶಿಷ್ಟ ಆಕೃತಿ ಮತ್ತು ವಿಶಿಷ್ಟವಾದ ಒಂದು ಪ್ರಾದೇಶಿಕ ಭಾಷೆಯನ್ನ, ಅದರೆಲ್ಲ ಶ್ರೀಮಂತಿಕೆ ಹಾಗೂ ಶಕ್ತಿಯೊಂದಿಗೆ ಬಳಸಿರುವುದು. ಮಿಡಿಯಂ ಹಾಗೂ ಮ್ಯಾಟರ್‌ಗಳ ಗೆರೆ ತೀರಾ ಅಳಿಸಿ ಹೋಗಿದೆ ಎನ್ನುವ ಮಟ್ಟಿಗೆ ಅವೆರಡೂ ಒಂದರೊಳಗೊಂದು ಬೆರೆತು ಹೋಗಿಬಿಟ್ಟಿವೆ. ಆಕೃತಿ ಕುರಿತಂತೆ ಕುಂ. ವೀ. ತಮ್ಮದೆ ಆದ ಒಂದು ಹೊಸ ಬಗೆಯ ಸಂರಚನೆಗೆ ಮುಂದಾಗಿದ್ದಾರೆ. ಹೀಗಾಗಿ ಈ ಕಾದಂಬರಿಗೊಂದು ಏಕಾಕಾರದ ಆಕೃತಿ ಇಲ್ಲ. ಆದಿ-ಅಂತ್ಯಗಳ ವಿಧಾನಗಳಿಲ್ಲ. ಕಥೆಯೊಂದು ಹುಟ್ಟಿ ಆ ಕಥೆ ಮತ್ತೆ ಹಲವು ಕತೆಗೆ ಅನುವು ಮಾಡಿ ಸರಪಳಿಯಂತೆ ಒಳಗೊಳ್ಳುತ್ತ, ಹಿಂದೆ ಬಿಟ್ಟ ಕತೆಯನ್ನ ಮತ್ತೆಲ್ಲೋ ಎತ್ತಿಕೊಳ್ಳುತ್ತೇವೆ. ಎಲ್ಲೋ ಕಂಡು ಮರೆಯಾದ ಪಾತ್ರ ಮತ್ತೆಲ್ಲೋ ಧುತ್ತನೆ ಎದುರಾಗುತ್ತದೆ. ಏಕಕಾಲಕ್ಕೆ ಕಾದಂಬರಿ ಹಲವು ಪ್ರದೇಶ, ಹಲವು ವಿದ್ಯಮಾನ, ಹಲವು ಐತಿಹ್ಯ, ಹಲವು ಪ್ರಸಂಗಗಳಲ್ಲಿ ಚಲಿಸುವುದರಿಂದ ವಸ್ತುವಿಗೆ vertical ನಡಿಗೆ ಇರದೆ

ಒಂದು ರೀತಿಯ criss-cross ಓಘವಿದೆ. ನಮ್ಮ ಜನಪದ ಕತೆಗಳಲ್ಲಿ, ದೇಸಿ ಕಾವ್ಯಗಳಲ್ಲಿ, ಮೌಖಿಕ ಪರಂಪರೆಗಳಲ್ಲಿ ಕಾಣಬಹುದಾದ ಇಂಥ ಕತೆ ಕಟ್ಟುವ ವಿಧಾನವನ್ನ ಈ ಕಾದಂಬರಿ ಆಧರಿಸಿದೆ. ಹೀಗಾಗಿ ಇದನ್ನೊಂದು ಕಾದಂಬರಿ ಎಂದು ಓದುವುದಕ್ಕಿಂತ ಜಾನಪದ ಸಂಕಥನ ಎಂದು ಓದುವುದು ಇದರ ಅರ್ಥಗ್ರಹಿಕೆಗೆ ಹೆಚ್ಚು ಅನುಕೂಲವಾದೀತು.

ಬಳ್ಳಾರಿ ಸೀಮೆಯ ಅದರಲ್ಲೂ ಕೊಟ್ಟೂರು, ಕೂಡ್ಲಿಗೆ, ಹರಪನಹಳ್ಳಿ– ಒಟ್ಟಾರೆ ಮಧ್ಯ ಕರ್ನಾಟಕದ ದೇಸಿ ಭಾಷೆಯನ್ನ ಕುಂ. ವೀ. ತಮ್ಮ ಈ ಕಾದಂಬರಿಯ ಕಥನದ ನೇಯ್ಗೆಗೆ ಬಳಸಿಕೊಂಡಿದ್ದಾರೆ. ಈ ಹಿಂದೆ ಈ ಭಾಷೆಯನ್ನ ವಿಡಂಬನೆಗೂ ಅತಿಶಯೋಕ್ತಿ ಹಾಗೂ ವ್ಯಂಗ್ಯಕ್ಕೂ ಅವರು ಬಳಸುತ್ತಿದ್ದರು. ಎಷ್ಟೋ ಬಾರಿ ಈ ಭಾಷಾ ವಿಜೃಂಭಣೆ ಅವರ ಕಥೆಗಳ ಮೇಲೆ ಸವಾರಿ ಮಾಡುವ ಅಪಾಯಕ್ಕೂ ಹೋಗುತ್ತಿತ್ತು. ಆದರೆ ಈ ಕಾದಂಬರಿಯಲ್ಲಿ ಆ ಭಾಷೆ ಒಂದು ಕಾವ್ಯಾತ್ಮಕ ಪರಿವೇಶ ತಾಳಿದೆ. ಗದ್ಯ ಈ ಬಗೆಯ ವಿಶಿಷ್ಟ ಲಯ, ದನಿಯನ್ನ ಸಾಧಿಸಬಹುದೇ ಅನ್ನುವ ಮಟ್ಟಿಗೆ ಕಾದಂಬರಿಗೆ ಅದು ಹೊಂದಿಕೊಂಡಿದೆ.

"ಯಿದ್ದದ್ದು ಯಿದ್ದಂಗೆ ಹೇಳಿದರೆ ಕೇಳುಗರನ್ನೆಲ್ಲಿ ತರೋದು? ಮಾತಂದರ ಮಾಮೂಲಿ ಮಾತೇನು? ದಯವಕ್ಕ, ಅಲವುಕಿಕ್ಕ, ಅಸ್ತೀಕಕ್ಕ ಸಂಬಂಧಿಸಿದ್ದ ಯೇ... ಮಾತಿಗೆ ಬೆಲೆ ಬರೋದು ವಾಸ್ತವನ ಮೆಟ್ಟಿದಾಗ ಮಾತ್ರ...

ಆಗ ಮಾತ್ರ ಕಣ್ಣ ಮುಚ್ಚಿ ನೋಡಲಕಾಯ್ತದ... ಕಿವಿ ಮುಚ್ಚಿ ಕೇಳಲಕಾಯ್ತದ... ಮೂಗಿನ ಹಂಗು ತೊರೆದು ವಾಸಣೆ ಹಿಡಿಲಕಾಯ್ತದ..." (ಪು. ೪೩೬)

ಈ ಮೇಲಿನ ಮಾತುಗಳನ್ನ ಹಿಡಿದು ಈ ಕಾದಂಬರಿಗೆ ಪ್ರಮೇಯದ ನಾಲ್ಕು ಮಾತುಗಳನ್ನ ಆಡಬಹುದಾದರೆ ಇಡೀ 'ಅರಮನೆ' ಕಾದಂಬರಿ ಇಂದ್ರಿಯ ಗ್ರಹಿಕೆಯಾಚೆಯ ಗಡಿಗಳನ್ನ, ದೃಗ್ಗೋಚರವಲ್ಲದ ಸತ್ಯಗಳನ್ನ, ಭಾಷಿಕ ಗಡಿಯಾಚೆಯ ದನಿಗಳನ್ನ, ನಿಶ್ಚಿತ ಅರ್ಥದಾಚೆಯ ಅರ್ಥಗಳನ್ನ ಸೆರೆ ಹಿಡಿಯುವ ಅವಿರತ ಪ್ರಯತ್ನ ತನ್ನ ಒಟ್ಟೂ ನಡಿಗೆಯಲ್ಲಿ ಮತ್ತೆ ಮತ್ತೆ ಮಾಡುವ ಸಾಹಸವನ್ನ ಪ್ರಕಟಿಸುತ್ತದೆ. ಕಾದಂಬರಿಯನ್ನ ಓದಿ ಮುಗಿಸಿ ಬಳಿಕ ಈ ಕಾದಂಬರಿಕಾರನ ಒಂದು ಅಸೀಮ ಸಾಹಸ, ಶ್ರಮ, ಮಹತ್ವಾಕಾಂಕ್ಷೆ ಕುರಿತು ತನ್ನಿಂದ ತಾನೆ ಬೆರಗು, ವಿಸ್ಮಯ ಹುಟ್ಟಿಕೊಳ್ಳುತ್ತದೆ.

ಕಾದಂಬರಿಗಳಲ್ಲಿ ಎರಡು ಪ್ರಕಾರವಾಗಿವೆ. ಓದಿಸಿಕೊಂಡು ಹೋಗುವ ಕಾದಂಬರಿಗಳು ಮತ್ತು ನಾವು ಓದುವ ಕಾದಂಬರಿಗಳು. ಈ ಕಾದಂಬರಿ ಮತ್ತೊಂದು ಆಯಾಮ ತೆರೆದಿದೆ. ಅದು ಓದುಗ ಗಟ್ಟಿಯಾಗಿ ವಾಚಿಸುತ್ತಾ, ತಾನೇ ವಾಚಿಸಿ, ತಾನೇ ಆಲಿಸಿಕೊಂಡು ಮುಂದುವರಿಯ ಬೇಕಾದ ದಾರಿ. ಹಾಗೆ ಮಾಡಿದಾಗ ಮಾತ್ರ ಈ ಕಾದಂಬರಿಯ ಓದು ಅಷ್ಟೊಂದು ಶ್ರಮದಾಯಕವಾಗದು.

ಕುಂ. ವೀ. ತಮ್ಮ 'ಅರಮನೆ'ಯಲ್ಲಿ ಭಾಷೆಯನ್ನ, ಕಾಲವನ್ನ ಹಾಗೂ ಆ ಕಾಲದ ಸಮಾಜದ ಚಲನಶೀಲ ಗುಣಗಳನ್ನ ಸೆರೆಹಿಡಿದಿದ್ದಾರೆ. ಕನ್ನಡ ಕಾದಂಬರಿ ಪ್ರಪಂಚದ ಗಡಿಗಳನ್ನ ಅವರು ಈ 'ಅರಮನೆ' ಮೂಲಕ ಹಲವು ನೆಲೆಗಳಲ್ಲಿ ವಿಸ್ತರಿಸಿದ್ದಾರೆ.

■ ಡಾ. ಪ್ರಹ್ಲಾದ ಅಗಸನಕಟ್ಟೆ : ಸಾರ್ವಜನಿಕ ಸಂಪರ್ಕಾಧಿಕಾರಿ, ಕಿಮ್ಸ್, ಹುಬ್ಬಳ್ಳಿ-೫೮೦ ೦೨೨

ನನ್ನ ಶಾಲಾ ಗುರುಗಳು — ಆರ್. ತಾರಿಣಿ ಶುಭದಾಯಿನಿ

'ವರ್ಣಮಾತ್ರಂ ಕಲಿಸಿದಾತಂ ಗುರುವಲ್ತೆ!' ಎಂದು ಪಾಲ್ಕುರಿಕೆ ಸೋಮನಾಥನೇನೊ ಹೇಳಿದ್ದಾನೆ, ನಿಜ. ಅಕ್ಷರ ಕಲಿಸಿದವರು ಮಾತ್ರವಲ್ಲದೆ ಬೇರೆ ಮಹಾನುಭಾವರೂ ನಮಗೆ ಅಕ್ಷರದ ಮೂಲಕವಲ್ಲದಿದ್ದರೂ ಪಾಠ ಕಲಿಸಿರುತ್ತಾರೆ. ಶಾಲಾ ದಿನಗಳ ನೆನಪುಗಳ ಬೆನ್ನುಹತ್ತಿ ಹೋಗುವುದಾದರೆ, ಶಾಲೆಯಲ್ಲಿ ಟೀಚರುಗಳು ಹೇಳಿಕೊಟ್ಟ ಪಾಠ, ಅವರ ನಡೆನುಡಿಯೆಲ್ಲವು ಬಾಲ್ಯಕಾಲದ ಗ್ರಹಿಕೆಯಲ್ಲಿ ಬಹುಮುಖ್ಯವಾಗಿ ಬಿಂಬಿತವಾಗಿರುತ್ತವೆ.

ನಮ್ಮಮ್ಮ ಮೈಸೂರಿನ ಖಾಸಗಿ ಕಾಲೇಜೊಂದರಲ್ಲಿ ಉಪನ್ಯಾಸಕಿಯಾಗಿದ್ದುದರಿಂದ ಮೈಸೂರಿನಲ್ಲಿದ್ದರು. ನಾನು ಮೂರು ವರ್ಷದ ಹುಡುಗಿಯಾಗಿರುವಾಗ ಅಮ್ಮ ಕಾಲೇಜಿನಿಂದ ಬರುವುದನ್ನೇ ಕಾಯುತ್ತ ಕಟ್ಟೆ ಮೇಲೆ ಒಬ್ಬಳೇ ಕುಳಿತಿರುತ್ತಿದ್ದೆನಂತೆ. (ಈಗಿನಂತೆ ಆಗ ಬೇಬಿ ಸಿಟಿಂಗ್‌ಗಳ ಕಾಲ ಅಲ್ಲವಲ್ಲ!) ಆಗೊಮ್ಮೆ ಮೈಸೂರಿಗೆ ಬಂದ ಅಣ್ಣ ಕಟ್ಟೆ ಮೇಲೆ ಅಳುತ್ತಾ ಕೂತಿದ್ದ ಮಗುವನ್ನು ನೋಡಿ ಒಂಥರಾ ಅನ್ನಿಸಿ, ಆ ಕೂಡಲೇ ನನ್ನನ್ನ ತಮ್ಮೊಡನೆ ಚಿತ್ರದುರ್ಗಕ್ಕೆ ಕರಕೊಂಡು ಬಂದರಂತೆ. ಆಮೇಲೆ ಉಳಿದಿದ್ದೆಲ್ಲ ನನಗೆ ನಮ್ಮಜ್ಜಿ ಮನೆ ವಾಸ. ಅಜ್ಜಿಗಂತೂ 'ಇಷ್ಟು ಸಣ್ಣ ಮಗು ಅದರ ಅಮ್ಮನ್ನ ಬಿಟ್ಟು ನನ್ನ ಹತ್ರ ಇದ್ದೀತೆ?' ಎಂಬ ಭಯ ಇತ್ತಂತೆ. ಹಾಗಾಗಿ ಕಥೆ ಹೇಳುತ್ತಾ, ಆಡಿಸುತ್ತಾ, ಅವರ ಬಳಿ ಸುತ್ತಾಡಿಸಿಕೊಂಡು ಇರುತ್ತಿದ್ದರು. ಅವರು ಹೇಳುತ್ತಿದ್ದ ಕಥೆ ಒಂದೇ– ಕಾಗಕ್ಕ ಗುಬ್ಬಕ್ಕನದು. ಅದನ್ನು ಎಷ್ಟು ಬಾರಿ ಕೇಳಿದರೂ ನನಗೆ ಬೇಸರವಾಗುತ್ತಿರಲಿಲ್ಲ. ಪದೇಪದೇ 'ಕಥೆ ಹೇಳು ಕಥೆ ಹೇಳು' ಎಂದು ಪೀಡಿಸುತ್ತಿದ್ದೆ. ಆಗ ಅವರು ಕಾಗಕ್ಕ ಗುಬ್ಬಕ್ಕನ ಕಥೆಯನ್ನೇ ಬೈಯುವ ಟೋನ್‌ನಲ್ಲಿ ಹೇಳಿ, 'ಅಷ್ಟೇ ಕಥೆ, ಇನ್ನು ಆಡ್ಕೊ ಹೋಗು, ನನಗೆ ಕೈ ತುಂಬಾ ಕೆಲಸ' ಎಂದುಬಿಡುತ್ತಿದ್ದರು. ನಮ್ಮಣ್ಣ ಕೆಲಸ ಮುಗಿಸಿ ನನಗೆ ಸಿಗುತ್ತಿದ್ದುದು ರಾತ್ರಿಯೇ. ಆಗ ಬಿಡುವಾದರೆ ಅವರೂ ನನಗೆ ಕಥೆ ಹೇಳುತ್ತಿದ್ದರು.

ನಮ್ಮ ಅಜ್ಜಿಮನೆ ಎದುರಲ್ಲಿ ಅಜ್ಜಿಯ ತಮ್ಮನ ಮನೆ ಇತ್ತು. ಅವರ ಮನೆಗೆ ಜಯಮ್ಮ ಎಂಬ ಮೇಡಂ ಒಬ್ಬರು ಬಾಡಿಗೆಗೆ ಬಂದರು. ಈಗ ಅವರನ್ನು ಜ್ಞಾಪಿಸಿಕೊಂಡರೆ ಹಣೆಗೆ ಕುಂಕುಮವಿರದೆ, ಕರಿಬಿಳಿ ಕೂದಲನ್ನೆಲ್ಲ ಸೇರಿಸಿ ಒಟ್ಟು ಗಂಟು ಕಟ್ಟಿದ ಒಂದು ಸೌಮ್ಯ ಆಕೃತಿಯು ಮೂಡುತ್ತದೆ. ಅವರು ಮಕ್ಕಳ ಟೀಚರ್ ಎಂದು ಗೊತ್ತಾದ ಮೇಲೆ ನನ್ನನ್ನು ಅವರ ಮನೆಗೆ ಆಡಲು ಕಳಿಸುತ್ತಿದ್ದರು. ಅಲ್ಲಿ ಆಟವಾಡುತ್ತ, ಕಥೆ ಕೇಳುತ್ತ ಹೊತ್ತು ಹೋದದ್ದೆ ತಿಳಿಯುತ್ತಿರಲಿಲ್ಲ. ಎಷ್ಟೋ ಬಾರಿ ಅವರ ಮನೆ ಸೇರಿದರೆ ಹೊರಗಡೆಯಿಂದ ನಮ್ಮಜ್ಜಿ ಕೂಗಿದರೂ ಗೊತ್ತೇ ಆಗುತ್ತಿರಲಿಲ್ಲ. ಹೀಗಾಗಿ ಎಷ್ಟೋ ಬಾರಿ ನಮ್ಮಜ್ಜನಿಂದ ನನಗೆ ಏಟುಗಳು ಬಿದ್ದಿದ್ದವು.

ಜಯಮ್ಮ ಮೇಡಂ ನಿಧಾನವಾಗಿ ನಮ್ಮನ್ನೆಲ್ಲ 'ಸಮಾಜಕ್ಕೆ ಕರಕೊಂಡು ಹೋಗ್ತೀನಿ' ಎಂದು ತಮ್ಮ ಜೊತೆ ಕರೆದೊಯ್ಯುತ್ತಿದ್ದರು. ಅವರು ನಡಿಗೆಯಲ್ಲಿ ತುಂಬಾ ಫಾಸ್ಟು. ಅವರ ಜೊತೆಗೆ ನಮಗೆ ನಡೆಯೋಕೆ ಇರಲಿ, ಓಡೋಕೂ ಆಗ್ತಾ ಇರಲಿಲ್ಲ. ಅವರು ಮನೆಯಿಂದ

ಹೊರಟರೆ ರಂಗಯ್ಯನ ಬಾಗಿಲ ಬಳಿ ಒಂದು ಸ್ಟಾಪು ಕೊಡುತ್ತಿದ್ದರು. ಅಲ್ಲಿರುವ ರಾಮದೇವರ ಗುಡಿಗೆ ಒಂದು ನಮಸ್ಕಾರ ಹಾಕುವುದನ್ನು ಅವರು ತಪ್ಪಿಸುತ್ತಲೇ ಇರಲಿಲ್ಲ. ಅದಾದ ನಂತರ ಓಡುನಡಿಗೆಯಲ್ಲಿ ಮಹಿಳಾ ಸಮಾಜ ತಲುಪುವುದು. ಮಹಿಳಾ ಸಮಾಜದಲ್ಲಿ ಶಿಶುವಿಹಾರ ನಡೆಸುತ್ತಿದ್ದರು. ಅದೇನು ಕಡ್ಡಾಯ ಅಲ್ಲ. ಒಂದು ಕೈಯನ್ನು ಎತ್ತಿ ಕಿವಿ ಮುಟ್ಟಿಸುವಂತೆ ಹೇಳುತ್ತಿದ್ದರು. ಆ ಕೈ ಕಿವಿ ಮುಟ್ಟಿದರೆ ಐದು ವರ್ಷ ಆಗ್ತಾ ಇದೆ, ಶಾಲೆಗೆ ಸೇರಬಹುದು ಎಂದು ಅನುಮತಿ ಸಿಗುತ್ತಿತ್ತು. ಅಲ್ಲಿಯ ವರೆಗು ಕಾಲ ಕಳೆಯಲು ಶಿಶುವಿಹಾರಗಳಿದ್ದವು. ಅಲ್ಲಿ ನಮಗೇನು ಪಾಠ ಹೇಳಿಕೊಡುತ್ತಿರಲಿಲ್ಲ. ಬಣ್ಣಬಣ್ಣದ ಘನಾಕೃತಿಗಳನ್ನು ಜೋಡಿಸುವುದು, ಕುದುರೆ ಆಡುವುದು ಇತ್ಯಾದಿ ಆಟಗಳಿರುತ್ತಿತ್ತು. ಜಯಮ್ಮ ಮೇಡಂ ದಾರಿಯಲ್ಲೇ ನಮಗೆ ಕೆಲವು ಹಾಡುಗಳನ್ನೂ ಕಥೆಗಳನ್ನೂ ಹೇಳ್ಕೊಂಡು ಬರ್ತಾ ಇದ್ರು. ನನಗೇನೊ ರಾತ್ರಿ ಅವರ ಮನೆಯಲ್ಲಿ ಕೂತು ಕಥೆ ಕೇಳುವುದೇ ಹಿತ ಅನ್ನಿಸುತ್ತಿತ್ತು. ಏಕೆಂದರೆ ಆ ಓಡುನಡಿಗೆಯ ಜೋರಲ್ಲಿ ಏದುಸಿರು ಬಿಟ್ಟು ಅವರನ್ನು ಹಿಂಬಾಲಿಸುವುದೇ ಕಷ್ಟ ಆಗಿರುವಾಗ, ಅವರ ಕಥೆ/ ಹಾಡು ಅನುಭವಿಸುವುದು ಹೇಗೆ?

ಜಯಮ್ಮ ಮೇಡಂ ಮೂಲಕವೇ ಹೊರ ಪ್ರಪಂಚದ ದಾರಿ ತೆರೆದುಕೊಳ್ಳುತ್ತಾ ಹೋಯಿತು. ಶಾಲೆಯಲ್ಲಿ ಎಲ್ಲರಿಗು ದಪ್ಪ ಗೋಧಿ ರವೆಯ ಉಪ್ಪಿಟ್ಟು ಕೊಡುತ್ತಿದ್ದರು. ಬಹುಶಃ ಬಡಮಕ್ಕಳಿಗೆಂದು ಇಲಾಖೆಯವರು ಕೊಡುತ್ತಿದ್ದಿರಬೇಕು. ಸುಮಾರು ೧೨ ಗಂಟೆ ಹೊತ್ತಿಗೆ ಬೆಲ್ ಮಾಡುತ್ತಿದ್ದರು. ಆ ಬೆಲ್ ಕೇಳಿದ ತಕ್ಷಣ ಎಲ್ಲ ಮಕ್ಕಳು ನೂಕಾಡಿಕೊಂಡು ಸ್ಲೇಟು, ಪುಸ್ತಕದ ಹಾಳೆಯೊಡ್ಡಿ ಸಾಲಲ್ಲಿ ನಿಂತು ಉಪ್ಪಿಟ್ಟು ಇಸಿದುಕೊಳ್ಳುತ್ತಿದ್ದರು. ಅದು ಮುಗಿದ ಮೇಲೆ ಮತ್ತೆ ಕೈಯೊಡ್ಡುವುದು. 'ಯಾರ ಮನೆಯಲ್ಲೂ ತಿನ್ನಲಿಕ್ಕೆ ಕೊಡಿ ಎಂದು ಕೇಳಬಾರದು, ಯಾರು ಏನು ಕೊಟ್ಟರೂ ತೆಗೆದುಕೊಳ್ಳಬಾರದೆಂ'ದು ನಮ್ಮ ಮನೆಯಲ್ಲಿ ಹೇಳಿಕೊಡುತ್ತಿದ್ದರು. ಹಾಗಾಗಿ ನಾನು ಉಪ್ಪಿಟ್ಟಿಗೆ ಕೈಯೊಡ್ಡದೆ ಮೂಲೆಯಲ್ಲಿ ನಿಂತಿರುತ್ತಿದ್ದೆ. ೨-೩ ದಿನಗಳಾದ ಮೇಲೆ, ಜಯಮ್ಮ ಮೇಡಂ ಬಂದು, 'ಯಾಕೇ ಮಗು ಏನೂ ತಿನ್ತಾ ಇಲ್ಲ. ತಿನ್ನೋ ಪದಾರ್ಥಕ್ಕೆ ಅಸಹ್ಯ ಪಡಬಾರದು. ಇವ್ರೆಲ್ಲಾ ನೋಡು ಎಲ್ಲ ಎಷ್ಟು ಚೆನ್ನಾಗಿ ತಿನ್ತಾ ಇದಾರೆ' ಎಂದು ತಾವೇ ಒಂದು ಹಾಳೆ ಹರಿದು ಉಪ್ಪಿಟ್ಟು ಹಾಕಿಸಿ ಕೊಟ್ಟಿದ್ದರು. ಜಾತಿ ಭೇದ ಇತ್ಯಾದಿ ಗೊತ್ತಿಲ್ಲದ ನಾನು ಆಗ ಸಂಕೋಚದಿಂದ ದೂರ ನಿಂತಿದ್ದೆನಾದರೂ, ಜಯಮ್ಮ ಮೇಡಂ ನನಗೆ ಆಗಲೇ ಎಲ್ಲರ ಜೊತೆ ಬೆರೆಯುವ ಪಾಠ ಹೇಳಿಕೊಟ್ಟಿದ್ದರು ಎನಿಸುತ್ತದೆ. ಮುಂದೆ ನಾನು ಓದಿದ ಶಾಲೆಯಲ್ಲೂ ಭೇದ ಭಾವದ ಪಾಠ ಹೇಳಿಕೊಡಲಿಲ್ಲ. ಹಾಗಾಗಿ ಊಟಕ್ಕೆ ಕೂತಾಗ ಎಲ್ಲರ ಡಬ್ಬಿಯ ತಿಂಡಿಯನ್ನು ಎಲ್ಲರು ಹಂಚಿ ತಿನ್ನಬೇಕಿತ್ತು. ಎಷ್ಟೋ ದಿನ ಜಾತಿಗೀತಿಯೆಲ್ಲ ನನಗೆ ಗೊತ್ತೇ ಇರಲಿಲ್ಲ.

ಅಲ್ಲಿಂದ ಮುಂದೆ ನಾನು ಕಾನ್ವೆಂಟ್ ಶಾಲೆ ಸೇರಿದೆ. ಕನ್ನಡ ಮಾಧ್ಯಮದಲ್ಲಿ ನನ್ನನ್ನು ಓದಿಸಬೇಕೆಂದು ನನ್ನ ತಂದೆಯ ಆಸೆಯಾಗಿತ್ತು. ಕನ್ನಡ ಪ್ರಾಥಮಿಕ ಬೋಧನೆಯಲ್ಲಿ ಒಳ್ಳೆಯದೆಂದು ಅವರ ನಂಬಿಕೆಯಾಗಿತ್ತು. ಹೀಗಾಗಿ ನನ್ನನ್ನು ಕನ್ನಡ ಮಾಧ್ಯಮದ ಪ್ರಾಥಮಿಕ ತರಗತಿಗೆ ಸೇರಿಸಿದ್ದರು. ಅಲ್ಲಿದ್ದ ನಮ್ಮ ಟೀಚರುಗಳೆಲ್ಲ ಕೊಂಕಣಿ ಹಾಗೂ ಮಂಗಳೂರು

ಮೂಲದವರು. ಅವರದು ಗ್ರಾಂಥಿಕ ಕನ್ನಡ; ಆದರೆ ಅಪ್ಪಟ ಕನ್ನಡದಲ್ಲಿ ನಮಗೆ ಬೋಧಿಸುತ್ತಿದ್ದರು. ಈಗೇನಾದರು ನನಗೆ ಕನ್ನಡ ಸ್ಪಷ್ಟವಾಗಿ ಓದಲು ಬರೆಯಲು ಬಂದಿದ್ದರೆ ಅದು ಈ ನಮ್ಮ ಟೀಚರುಗಳು ಹೇಳಿಕೊಟ್ಟ ಕನ್ನಡದಿಂದಲೇ. ನನ್ನ ಪ್ರಾಥಮಿಕ ಶಾಲಾ ಟೀಚರುಗಳ ಅಕ್ಷರಗಳು ಮುತ್ತು ಪೋಣಿಸಿದಂತೆ ಇರುತ್ತಿದ್ದವು. ಬೋರ್ಡ್ ಮೇಲಾಗಲಿ, ನೋಟ್‌ಬುಕ್ಕಿನಲ್ಲಾಗಲಿ ಚೊಕ್ಕವಾದ ಬರವಣಿಗೆ ಇರುತ್ತಿತ್ತು. ಬೆನಿಡಿಕ್ಟಾ, ಮೆಟಿಲ್ಡಾ ಟೀಚರುಗಳು ಕ್ರಮವಾಗಿ ಎರಡು ಮೂರನೇ ಕ್ಲಾಸಿಗೆ ಬರುತ್ತಿದ್ದರು. ಒಂದಕ್ಷರವೂ ಇಂಗ್ಲಿಷ್ ಬಳಸದೆ ಸುಸ್ಪಷ್ಟವಾದ ಕನ್ನಡದಲ್ಲಿ ಪಾಠ ಮಾಡುತ್ತಿದ್ದರು ಈ ನಮ್ಮ ಗುರುಗಳು. ಅದೇ ಅವರವರು ಸೇರಿಕೊಂಡಾಗ ನಮಗರ್ಥವಾಗದ ಕೊಂಕಣಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರೆ, ಮುಂದೆ ನಾನು ಟೀಚರಾಗುವ ಸಂದರ್ಭ ಬಂದರೆ ಈ ಕೇಳದ ಭಾಷೆಯನ್ನೂ ಕಲಿಯಬೇಕೇನೊ ಎಂದು ದಿಗಿಲು ಪಡುತ್ತಿದ್ದೆ.

ಮರ್ಲಿನ್ ಟೀಚರ್ ಕಾಲು ಕುಂಟುತ್ತಿದ್ದರು. ಸ್ವಲ್ಪ ಕಾಲು ಎತ್ತಿ ಹಾಕುತ್ತಿದ್ದರು. ಅದು ಅವರ ಊನ ಎಂದು ತಿಳಿಯದೆ ನಾವೂ ಹಾಗೇ ಕುಂಟಿದರೆ great ಆಗುತ್ತೇವೆ ಎಂದುಕೊಂಡು ಕಾಲನ್ನು ಎತ್ತಿ ಹಾಕುತ್ತಿದ್ದುದುಂಟು. ಅವರನ್ನು ಅನುಕರಿಸಿದರೆ ಮಾತ್ರ ಮೊದಲನೇ ತರಗತಿಯ ಟೀಚರಾಗಲು ಸಾಧ್ಯವಿತ್ತು, ಆಗಿನ ನಮ್ಮ ಭಾವನೆಯಲ್ಲಿ. ಎರಡನೇ ಕ್ಲಾಸಿನ ಬೆನ್ನಿ ಟೀಚರ್‌ಗೆ ಉದ್ದವಾದ ಗುಂಗುರು ಕೂದಲಿತ್ತು. ಅವರು ಬೋರ್ಡ್ ಮೇಲೆ ಬರೆಯುವಾಗ ಜಡೆ ಜಾರಿ ಮುಂದೆ ಬೀಳುತ್ತಿತ್ತು. ಅದು ನನಗೆ ಆಗ ಬಹಳ ಚಂದ ಎನಿಸುತ್ತಿತ್ತು. ಹಾಗಾಗಿ ನಾವೆಲ್ಲ ಟೀಚರ್ ಆಟ ಆಡುವಾಗ ತಲೆಯಲ್ಲಿ ಕೂದಲಿರದಿದ್ದರೂ ಕೂದಲಿನ ಬದಲು ಟವೆಲ್ ಕಟ್ಟಿಕೊಂಡು ಅದು ಮುಂದೆ ಬೀಳುವಂತೆ ನಟಿಸಿ, ಸಂತೋಷ, ಪುಳಕ ಅನುಭವಿಸುತ್ತಿದ್ದುದು ನನಗೆ ನೆನಪಿದೆ. ಮೆಟಿಲ್ಡಾ ಟೀಚರ್‌ಗೆ ಸ್ವಲ್ಪ ಸೀಳುತುಟಿಯಿತ್ತು. ತುಟಿ ಹರಿದಿದ್ದರಿಂದ ಹಲ್ಲು ಸ್ವಲ್ಪ ಹೊರಗೆ ಕಾಣುತ್ತಿತ್ತು. ಇದನ್ನೂ ನಾವು ಟೀಚರ್ ಆಟ ಆಡುವಾಗ ಅನುಕರಿಸುತ್ತಿದ್ದೆವು. ಇದೆಲ್ಲವೂ ನಮಗೆ ಟೀಚರ್‌ಗಳ ಮೇಲಿನ ಅತೀ ಭಕ್ತಿಯಿಂದ ಮೂಡಿದ ಅನುಕರಣೀಯ ಮಾದರಿಗಳಾಗಿದ್ದವೇ ಹೊರತು, ಅವರ ನ್ಯೂನತೆ ಎಂದು ಎಂದೂ ಅನ್ನಿಸಿರಲಿಲ್ಲ. ಅವರ ಚೆಲುವಿನ ಸ್ಪೆಷಲ್ ಟಚ್ ಅಪ್ ಅದು ಎಂದೇ ನಾವು ಭಾವಿಸಿದ್ದೆವು.

ಮಿಡ್ಲ್‌ಸ್ಕೂಲಿಗೆ ಹೋಗುವ ಮೊದಲೇ ನಮಗೆ ನಮ್ಮ ಸೀನಿಯರ್ಸ್ ಗಾಬರಿ ಹುಟ್ಟಿಸಿಬಿಟ್ಟಿದ್ದರು. ಅಲ್ಲಿರುವ ಟೀಚರ್ಸ್ ತುಂಬಾ ಹೊಡೆಯುತ್ತಾರೆ ಎಂದೂ, ಅದ್ರಲ್ಲೂ ಒಬ್ಬ ಟೀಚರ್‌ಗೆ ಮಕ್ಕಳೇ ದಿನವೂ ಒಂದೊಂದು ಬೆತ್ತ ತಂದುಕೊಡಬೇಕಂತೆ, ದಿನವೂ ಅವರು ಒಂದೊಂದು ಬೆತ್ತ ಮುರಿದು ಹಾಕುತ್ತಾರಂತೆ, ಹೀಗೆ ಇನ್ನೂ ಏನೇನೋ. ಸ್ಟೆಲ್ಲಾ ಮೇರಿ ಸಿಸ್ಟರ್ ಇಂಗ್ಲಿಷ್‌ಗೆ ಬರುತ್ತಾರಂತೆ. ಎಲ್ಲಾ ಇಂಗ್ಲಿಷ್‌ನಲ್ಲೇ ಮಾತನಾಡುತ್ತಾರಂತೆ. ಸರಿಯಾಗಿ ಉತ್ತರ ಹೇಳದಿದ್ದರೆ ರೂಲುದೊಣ್ಣೆಯಲ್ಲಿ ಬಿಗಿಯುತ್ತಾರೆಂದು ಕಥೆಗಳನ್ನು ಕೇಳುತ್ತಿದ್ದಾಗ ಯಾವುದೋ ಕ್ರೂರಲೋಕಕ್ಕೆ ಹೋಗುತ್ತಿದ್ದೇವೆ ಎಂಬ ಭಾವನೆ ನಮಗೆ. ಮಿಡ್ಲ್‌ಸ್ಕೂಲು ಮೆಟ್ಟಿಲು ಹತ್ತುವ ಮುನ್ನವೇ ಈ ಹೊಡೆತದ ಪೂಜೆಗಳ ಬಗ್ಗೆ ಕೇಳಿದರೆ ಯಾರಿಗೆ ತಾನೆ ಭಯ ಆಗುವುದಿಲ್ಲ?

ಪೌಲಿನ್ ಟೀಚರ್ ನನ್ನ ಮೆಚ್ಚಿನ ಟೀಚರಾಗಿದ್ದರು. ಅವರು ನಮಗೆ ಸಮಾಜಶಾಸ್ತ್ರ ತೆಗೆದುಕೊಳ್ಳುತ್ತಿದ್ದರು. ಮೇಲೆ ಹೇಳಿದ 'ಬೆತ್ತದ ಟೀಚರ್' ಅವರೇ! ಮೊದಲ ದಿವಸ

ಅವರನ್ನು ನೋಡುವಾಗ ಅವರ ಮುಖದ ತುಂಬ ಬೆತ್ತವೇ ಕುಣಿಯುತ್ತಿತ್ತು. ಅಥವಾ ನನಗೆ ಹಾಗೆನ್ನಿಸಿತೋ ಗೊತ್ತಿಲ್ಲ. ಟೀಚರ್ ಮಾತ್ರ ಪಠ್ಯಕ್ರಮ ಹೇಳಿದ್ರು, ನಾನು ಬರೆಸುವ ನೋಟ್ಸ್ ಹೀಗೆ ಬರೆಯಬೇಕು ಎಂದೆಲ್ಲ ತಿಳಿಸಿ ಪಾಠ ಶುರು ಮಾಡಿದರು. ಆಮೇಲೆ ನನಗೆ ತಿಳಿಯಿತು ಅವರೆಷ್ಟು ಒಳ್ಳೆಯ ಟೀಚರ್ ಎಂದು. ಸಮಾಜಶಾಸ್ತ್ರ ಅವರ ಕೈಯಲ್ಲಿ ಎಂದೂ ನೀರಸ ವಿಷಯ ಆಗಿರಲಿಲ್ಲ. ಎಲ್ಲವನ್ನು ಬಿಡಿಸಿ ಹೇಳಿ, ಕುತೂಹಲ ಹುಟ್ಟಿಸುವಂತೆ ಪಾಠ ಮಾಡುತ್ತಿದ್ದರು. ಕ್ಲಾಸ್‌ರೂಮಿನೊಳಗೆ ಬರುವಾಗ ಅವರೆಂದೂ ಖಾಲಿ ಕೈಯಲ್ಲಿ ಬರುತ್ತಿರಲಿಲ್ಲ. ಯಾವಾಗಲೂ ಒಂದು ಬಾಕ್ಸ್ ತರುತ್ತಿದ್ದರು. ಅದರಲ್ಲೊಂದು ಇಂಕ್‌ಪೆನ್ನು, ಇಂಕು ಅಳಿಸುವ ರಬ್ಬರು, ಪೆನ್ಸಿಲ್, ಪುಟ್ಟ ಸ್ಕೇಲು ಇರುತ್ತಿದ್ದವು. ಕ್ಲಾಸ್‌ರೂಮಿನೊಳಕ್ಕೆ ಬಂದಾದ ಮೇಲೆ ಮ್ಯಾಪು, ಜೊತೆಗೆ ಬೆತ್ತ ತರಲು ಹೇಳಿ ಕಳಿಸುತ್ತಿದ್ದರು. ಅಟ್ಲಾಸ್ ಇಲ್ಲದೇ ಇದ್ದವರನ್ನು ನಿರ್ದಾಕ್ಷಿಣ್ಯವಾಗಿ ದಂಡಿಸುತ್ತಿದ್ದರು. ಅವರ ಮೇಲಿನ ಹೆದರಿಕೆಯಿಂದಾದರೂ ನಮಗೆ ಅಟ್ಲಾಸ್ ನೋಡಿ ಸ್ಥಳಗಳನ್ನು ಗುರುತಿಸುವುದು ರೂಢಿಯಾಯ್ತು. ಎಲ್ಲಾ ಪಾಠ ಆದ ನಂತರ, ಪುನರಾವರ್ತನೆ ಮಾಡಿ, ಪ್ರಶ್ನೆ ಕೇಳುತ್ತಿದ್ದರು. ಆಗ ಉತ್ತರಿಸದೇ ಇದ್ದರೆ ಮಾತ್ರ ಅವರಿಗೆ ಭಯಂಕರ ಕೋಪ ಬಂದುಬಿಡುತ್ತಿತ್ತು. ಆಗ ಸರಿಯಾಗಿ ಬೆತ್ತದ ಪೂಜೆಯಾಗುತ್ತಿತ್ತು. 'ನನಗೆ ಹೆದ್ರುವುದಿಲ್ಲ ನೀವು, ಇಲ್ಲಿ ನಿಮ್ಮ ಸಿದ್ರಾಮಣ್ಣನ್ನ ಮಾತನಾಡಿಸುತ್ತೇನೆ ನೋಡಿ' ಎಂದು ಹೇಳಿ ಸರಿಯಾಗಿ ಬಿಗಿಯುತ್ತಿದ್ದರು.

ಒಮ್ಮೆ ನರೇಂದ್ರ ರೆಡ್ಡಿ ಎನ್ನುವ ಹುಡುಗ ಟೀಚರ್ ಬರೆಸಿದ ನೋಟ್ಸ್‌ಅನ್ನು ಒಂದು ಚೂರೂ ಬರೆದಿರಲಿಲ್ಲ. ನೋಟ್‌ಬುಕ್‌ಅನ್ನು ತಿಂಗಳಿಗೆ ಒಮ್ಮೆ ನೋಡಿ ರುಜು ಮಾಡುವುದು ಟೀಚರ್ ಪಾಲಿಸಿಕೊಂಡು ಬಂದಿದ್ದ ರೂಢಿ. ಅಕ್ಷರ ದುಂಡಾಗಿ ಬರೆದವರಿಗೆ 'ಗುಡ್' ಎಂದು ಹಾಕುತ್ತಿದ್ದುದುಂಟು. ಅಂಥಾದ್ದರಲ್ಲಿ ಈ ನರೇಂದ್ರ ಏನೂ ಬರೆದಿಲ್ಲ ಅಂದ್ರೆ! ಪಾಠದ ಭಯ ಬೇಡ ಬೆತ್ತದ ಭಯವೂ ಬೇಡವೇ ಅವನಿಗೆ; ಇನ್ನೇನು ಗತಿ ಎಂದು ನಾವೆಲ್ಲ ಭಯದಿಂದ ನೋಡುತ್ತಿದ್ದೆವು. ಟೀಚರ್ ಹಾಳೆ ತಿರುಗಿಸಿಯೇ ತಿರುಗಿಸುತ್ತಾರೆ, ಎಲ್ಲೂ ಒಂದಕ್ಷರದ ಸುಳಿವಿಲ್ಲ. ಭೂಗೋಳ ವಿಭಾಗದಲ್ಲಿ ಮಾತ್ರ ಎರಡು ಹಾಳೆ ಖಾಲಿ ಬಿಟ್ಟು ೩೨೦ ಡಿಗ್ರಿ ಅಕ್ಷಾಂಶ ಎಂದಷ್ಟೆ ಬರೆದಿಟ್ಟಿದ್ದಾನೆ. ಟೀಚರ್‌ಗಂತು ಸಕತ್ ಕೋಪ ಬಂತು. 'ಏನಿದು ಅಕ್ಷಾಂಶ? ಈಗ ನೋಡ್ತಾ ಇರು, ಎಲ್ಲಾ ನಿನ್ನ ಬೆನ್ನ ಮೇಲೆ ಮೂಡುತ್ತೆ' ಎಂದು ಸರಿಯಾಗಿ ಬಾರಿಸುತ್ತಾ ಹೋದರು. ಮಾರನೆಯ ದಿನ ಅವನ ತಂದೆ ಬಂದು ಗಲಾಟೆ ಮಾಡಿದಾಗ, ನಮ್ಮ ಹೆಡ್‌ಮಿಸ್, 'ನಿಮ್ಮ ಹುಡುಗ ಓದದಿದ್ದರೆ ನಾವು ಹಾಗೇ ಕೊಡುವುದು. ಬೇಕಾದರೆ ಟಿ.ಸಿ. ತೆಗೆದುಕೊಂಡು ಹೋಗಿ' ಎಂದು ಸ್ಕೂಲು ಬಿಟ್ಟು ಕಳಿಸಿದರು. ತುಂಟತನ, ಗಲಾಟೆ ಮಾಡುವವರೆಲ್ಲ ಹುಡುಗರೇ ಎಂದು ಟೀಚರ್‌ಗೆ ಅನ್ನಿಸಿತ್ತೋ ಏನೋ, ಆಗಾಗ ಹುಡುಗಿಯರನ್ನೆಲ್ಲ ಹೊರಗೆ ಕಳಿಸಿ, ಹುಡುಗರಿಗೆಲ್ಲ ಸರಿಯಾಗಿ 'ಪೂಜೆ' ಮಾಡುತ್ತಿದ್ದರು. ಆದರೆ ಈ ನಮ್ಮ ಟೀಚರ್‌ನ ಹುಡುಕಿಕೊಂಡು ಬರುತ್ತಿದ್ದವರು ಗಂಡು ಹುಡುಗರೇ ಆಗಿರುತ್ತಿದ್ದರು. ಹಳೆಯ ವಿದ್ಯಾರ್ಥಿಗಳಾಗಿ ಟೀಚರ್ ಅವರನ್ನು ಅತೀ ಪ್ರೀತಿಯಿಂದ ಮಾತನಾಡಿಸಲು ಅವರೆಲ್ಲ ಬರುತ್ತಿದ್ದುದನ್ನು ನೋಡಿದರೆ, ಟೀಚರ್ ಬಗ್ಗೆ ಇದ್ದ ಅನಾವಶ್ಯಕ ಭಯವೆಲ್ಲ ಹೋಯಿತೆಂದು ಹೇಳಬೇಕು.

ಪೌಲೀನ್ ಟೀಚರ್ ಅವರ ಒಂದು ಮುಖ ಎಷ್ಟು ಸ್ಟ್ರಿಕ್ಟ್ ಎನಿಸುತ್ತಿತ್ತೊ ಅದಕ್ಕೆ ವಿರುದ್ಧವಾದ ಇನ್ನೊಂದು ಮುಖವೂ ಇತ್ತು. ಟೀಚರ್ ಒಳಗೆ ಒಂದು ಸೌಮ್ಯ, ಮಾನವೀಯ ಮೂರ್ತಿಯೊಂದು ಇತ್ತು. ಹುಟ್ಟುಹಬ್ಬ ಆಚರಣೆ ಮಾಡಿಕೊಳ್ಳುವ ಮಕ್ಕಳು ಚಾಕಲೇಟ್/ಸ್ವೀಟ್ಸ್ ಹಂಚುತ್ತಿದ್ದುದನ್ನು ಟೀಚರ್ ವಿದ್ಯಾರ್ಥಿಗಳನ್ನು ಕರೆದು ಹಂಚಿಬಿಡುತ್ತಿದ್ದರು. ಅವರಿಗೆ ಅಸ್ತಮಾ ಇತ್ತು. ಹಾಗಾಗಿ ಅವರ ಕೈಯಲ್ಲಿ ಯಾವಾಗಲೂ ಕರ್ಚೀಫು ಇರುತ್ತಿತ್ತು. ಧೂಳು ಅವರಿಗೆ ಆಗದಿದ್ದರೂ, ಅವರೆಂದೂ ಬೋರ್ಡ್ ಮೇಲೆ ಬರೆಯದೆ ಪಾಠ ಮಾಡಿದವರೇ ಅಲ್ಲ. ಅಂಥ ಟೀಚರ್ ಒಬ್ಬಂಟಿಯಾಗಿದ್ದರು ಅನ್ನಿಸುತ್ತೆ. ಶಾಲೆಯ ಬೋರ್ಡಿಂಗ್‌ನಲ್ಲಿ ಅವರ ವಾಸ. ಒಮ್ಮೆ ಅಸ್ತಮಾ ಜಾಸ್ತಿಯಾಗಿ ಆಸ್ಪತ್ರೆ ಸೇರಿದ್ದಾರೆಂದು ಸುದ್ದಿ ಕೇಳಿ ನಾವೆಲ್ಲಾ ಅವರ ಪರವಾಗಿ ಪ್ರಾರ್ಥನೆ ಮಾಡಿದ್ದೆವು. ಅವರನ್ನು ನೋಡಲು ದೊಡ್ಡಾಸ್ಪತ್ರೆಗೂ ಹೋಗಿದ್ದೆವು. ಅಲ್ಲಿ ಟೀಚರ್ ಹಾಸಿಗೆಗೆ ಅಂಟಿಕೊಂಡು ಮಲಗಿದ್ದ ರೀತಿ, ಸೋತ ಅವರ ಕಣ್ಣುಗಳನ್ನು ನನಗಿನ್ನೂ ಮರೆಯಲಾಗಿಲ್ಲ. ಆಗ ಸರ್ಕಾರಿ ಆಸ್ಪತ್ರೆಯಲ್ಲಿ ಮಾರುತಿ ಎಂಬ ಬೆನ್ನು ಡುಬ್ಬ ಇರುವ ಒಬ್ಬ ಅನಾಥ ಹುಡುಗ ಇದ್ದ. ಅವನ ಕೈಲಿ ತಮಗೆ ಬ್ರೆಡ್ ತರಲು ಹೇಳಿದರು ಟೀಚರ್. ಅವನು ತಂದುಕೊಟ್ಟ ಬ್ರೆಡ್‌ನಲ್ಲಿ ಅರ್ಧ ಪಾಲು ಅವನಿಗೆ ಕೊಟ್ಟು, ನಮಗೆಲ್ಲ ಬ್ರೆಡ್ ತಿನ್ನಿಸಿ ಕಳಿಸಿದ್ದ ಅಂತಃಕರಣ ಮರೆಯುವಂಥದ್ದಲ್ಲ. ಓದಿನಲ್ಲಿ ಹಿಂದೆ ಬಿದ್ದವರನ್ನು ಒಂದು ಗುಂಪು ಮಾಡಿಕೊಂಡು ಶಾಲೆ ಮುಗಿದ ಮೇಲೆ ಅವರಿಗೆ ಕಷ್ಟವಾದ ಪಾಠಗಳನ್ನೆಲ್ಲ ಹೇಳಿಕೊಡುತ್ತಿದ್ದರು. ಈಗಿನ ಟ್ಯೂಷನ್ ಲೆಕ್ಕಾಚಾರದ ಗುರುವೃಂದ ಗಂಟೆಗೊಮ್ಮೆ ಗಳಿಗೆಗೊಮ್ಮೆ ದುಡ್ಡು ಲೆಕ್ಕಹಾಕುತ್ತದೆ. ಅವರಿಗೆ ಹೋಲಿಸಿದರೆ ನಮ್ಮ ಟೀಚರ್ ಎಷ್ಟು ಗ್ರೇಟ್ ಅನ್ನಿಸುತ್ತೆ. ಪದವಿ ಪರೀಕ್ಷೆಯಲ್ಲಿ ಇತಿಹಾಸವನ್ನು ಬರೆಯುವಾಗ ಪೌಲೀನ್ ಟೀಚರ್ ಹೇಳಿಕೊಟ್ಟ ಪಾಠದ ಸ್ಫೂರ್ತಿಯಿಂದಲೇ ಹೆಚ್ಚು ಅಂಕ ಬರಲು ಸಾಧ್ಯವಾಯಿತೆಂದು ನನ್ನ ನಂಬಿಕೆ.

ವಿಜ್ಞಾನ ಕಲಿಸುತ್ತಿದ್ದ ಬೆನಿಡಿಕ್ಟಾ ಟೀಚರ್ ತುಂಬಾ ಆಸಕ್ತಿ ವಹಿಸಿ ಪಾಠ ಮಾಡುತ್ತಿದ್ದರು. ವಜ್ರಗಳ ಬಗ್ಗೆ ಪಾಠ ಮಾಡುವಾಗ ಲ್ಯಾಬ್‌ನಿಂದ ಒಂದು ಸಣ್ಣ ವಜ್ರ ತರಿಸಿ, ಗ್ಲಾಸ್ ಹಲಗೆಗಳನ್ನು ಕತ್ತರಿಸಿ ತೋರಿಸಿದ್ದರು. ಅಯಸ್ಕಾಂತದ ಬಗ್ಗೆ ಹೇಳುವಾಗ ನಾನಾ ರೀತಿಯ ಅಯಸ್ಕಾಂತ ತಂದು ತೋರಿಸಿ ಅವುಗಳ ಕಾಂತೀಯ ಗುಣ ವಿವರಿಸಿದ್ದರು. ತಲೆಕೂದಲು ಒಂದೇ ದಿಕ್ಕಿನಲ್ಲಿ ಬಾಚಿದರೆ, ಬಟ್ಟೆಯನ್ನು ಒಂದೇ ಕಡೆ ಉಜ್ಜಿದರೆ ಕಾಂತೀಯ ಗುಣವುಂಟಾಗುತ್ತದೆ ಎಂದು ಒಬ್ಬ ಹುಡುಗನಿಗೆ ತಲೆಬಾಚಿ ಬಾಚಣಿಗೆ 'ಚಟಚಟ' ಎನ್ನುವುದನ್ನು ತೋರಿಸಿದ್ದರು. ಅವರು ಹೇಳಿಕೊಟ್ಟ ಪಾಠದ ಆಧಾರದ ಮೇಲೆ ನಾವು ಒಂದು ಚಿಕ್ಕ ಅಯಸ್ಕಾಂತ ಸಂಪಾದಿಸಿ, ಅದನ್ನು ಮಣ್ಣಿನಲ್ಲಿ ಆಡಿಸಿ, ಅದಕ್ಕೆ ಮಣ್ಣಿನಲ್ಲಿರುವ ಕಬ್ಬಿಣ ಹೇಗೆ ಅಂಟಿಕೊಳ್ಳುತ್ತದೆಯೆಂದು ನೋಡುತ್ತಾ ಆಶ್ಚರ್ಯಪಡುತ್ತಿದ್ದೆವು. ವಿಜ್ಞಾನದ ಅದ್ಭುತ ಪ್ರಪಂಚವನ್ನು ಆಗ ತಾನೇ ಪರಿಚಯಿಸುತ್ತಿದ್ದ ಟೀಚರ್ ಕಿನ್ನರಿಯಂತೆ ಕಂಡರೆ, ವಿಜ್ಞಾನದ ಪ್ರಪಂಚ ನಾವು ಹಿಂದೆಂದೋ ಕೇಳಿದ್ದ ಜಾನಪದ ಕತೆಗಳ ಮಾಯಾಲೋಕದಂತೆ ಕಾಣುತ್ತಿತ್ತು. ಒಮ್ಮೆಯಂತೂ ಅಮೀಬಾದ ಪಾಠ ಕೇಳಿ ಆಕಾರವೇ ಇರದ ಅಮೀಬಾ ನಮ್ಮ ಮನೆ ಮುಂದಿನ ಚರಂಡಿಯಲ್ಲಿಯೇ ಇವೆ

ಎಂದು ತಿಳಿದಾಗ, ಅಷ್ಟು ಸುಲಭದಲ್ಲಿ ಸಿಗುವ ಅದನ್ನು ನೋಡಬೇಕು ಎಂದು ಕೊಚ್ಚೆ ನೀರನ್ನು ಕೈಯಲ್ಲಿ ಹಿಡಿದುಕೊಂಡಿದ್ದರಿಂದ ಮನೆಯವರ ಕೈಲಿ ಹೊಡೆತ ತಿನ್ನಬೇಕಾಯಿತು.

ನಮಗೆ ಹಿಂದೀ ಹಾಗೂ ಕನ್ನಡ ಕಲಿಸುತ್ತಿದ್ದ ಚೂಡಾಮಣಿ ಟೀಚರ್ ತುಂಬಾ ಚೆನ್ನಾಗಿ ಹಾಡುತ್ತಿದ್ದರು. ನಮಗೂ ಸಾಕಷ್ಟು ಹಿಂದೀ ಮತ್ತು ಕನ್ನಡ ಹಾಡು ಕ್ಲಾಸಿನಲ್ಲಿ ಹೇಳಿಕೊಡುತ್ತಿದ್ದರು. ಸ್ವಂತ ರಾಗ ಹಾಕಿ ಹಾಡುಗಳನ್ನು ಹಾಡುತ್ತಿದ್ದರು ಈ ಟೀಚರ್. 'ಕೆರೆಗೆ ಹಾರ' ನಾಟಕವನ್ನು ನಮ್ಮ ಶಾಲೆಯಲ್ಲಿ ಆಡಿಸುತ್ತಿದ್ದಾಗ, ಅಲ್ಲಿನ ಪದಗಳಿಗೆ ರಾಗ ಹಾಕಿ ಹಾಡಿ ಎಲ್ಲರನ್ನು ಅಳಿಸಿಬಿಟ್ಟಿದ್ದರು. ಇವರು ಹೊಡೆಯುತ್ತಿದ್ದುದು ಕಮ್ಮಿ. ತೀರ ತರಲೆಗಳನ್ನು ಹತ್ತಿರ ಕರೆದು ಹೆಗಲ ಮೇಲೆ ಕೈ ಹಾಕಿ ಸಣ್ಣಗಿನ ಸುಂಟಿಗಾಲಿ ಕೊಟ್ಟುಬಿಡುತ್ತಿದ್ದರು.

ಹೈಸ್ಕೂಲು ಕಲಿಯುವಾಗಿನ ನೆನಪೆಂದರೆ ನಮ್ಮ ಮೂರು ಜನ ಮೇಷ್ಟ್ರುಗಳದು. ಶೇಷಗಿರಿ, ಉಮಾಪತಿ ಹಾಗೂ ಸ್ವತಃ ನನ್ನ ತಂದೆಯೂ ಆದ ರಾಧಾಕೃಷ್ಣ– ಇವರುಗಳು ಒಂದಲ್ಲ ಒಂದು ರೀತಿ ನನ್ನ ಮೇಲೆ ಪ್ರಭಾವ ಬೀರಿದ್ದಾರೆ; ನನ್ನ ಮನಸ್ಸಲ್ಲಿ ನಿಂತಿದ್ದಾರೆ.

ಶೇಷಗಿರಿ ಮೇಷ್ಟ್ರು ತಮಾಷೆಗೆ ಹೆಸರಾದವರು. ಅವರು ಎಲ್ಲೆಲ್ಲಿ ಇದ್ದಾರೋ ಅಲ್ಲೆಲ್ಲ ನಗೆಯ ಅಲೆಯಿರುತ್ತಿತ್ತು. ಉಡಾಫೆ ಸ್ವಭಾವದ ಈ ಮೇಷ್ಟ್ರು ಮನಸ್ಸು ಮಾಡಿದರೆ ಅತ್ಯುತ್ತಮ ಪಾಠ ನಮಗೆ ಸಿಗುತ್ತಿತ್ತು. ಇವರಿಗೆ ನಾಟಕ ಗೊತ್ತು, ಸಾಹಿತ್ಯ ಗೊತ್ತು, ಮನಶ್ಶಾಸ್ತ್ರ ಗೊತ್ತು, ಇಂಗ್ಲಿಷ್ ಕಾನ್ವೆಂಟ್‌ನವರಿಗಿಂತ ಹೆಚ್ಚು ಗೊತ್ತು. ಆದರೆ ಏನೋ ನಿರಾಶೆ ಅವರನ್ನು ಕಾಡಿದಂತಿತ್ತು. ಹಾಗಾಗಿಯೋ ಏನೋ ಅವರ ಪೂರ್ಣಜ್ಞಾನ ಪರಿಚಯವಾದದ್ದು ಕಡಿಮೆ. ಕ್ಷಣಕ್ಷಣಕ್ಕೂ ಜೋಕ್ ಮಾಡುತ್ತಿದ್ದರು. ಅವರು ಹರಿಸುತ್ತಿದ್ದ ನಗೆಯ ಹೊನಲು ಕ್ಲಾಸಿಗೆ ಕ್ಲಾಸನ್ನೇ ಕೊಚ್ಚಿಕೊಂಡು ಹೋಗುತ್ತಿತ್ತು. ಉದಾಹರಣೆಗೆ, ನೋಟ್ಸು ಬರೆಸುವಾಗ ಹುಡುಗಿಯೊಬ್ಬಳು 'ತಾಳಿ ಸಾರ್ ತಾಳಿ ಸಾರ್' ಎಂದಳು. ಅಂದರೆ ನಿಧಾನವಾಗಿ ಹೇಳಿ ಎಂದು. ಆದರೆ ಅವರು ತಕ್ಷಣ, 'ತಾಳಿಗೀಳಿಯೆಲ್ಲ ನಾವು ಕಟ್ಟೋಹಂಗಿಲ್ಲಮ್ಮ, ನೀನು ಕಟ್ಟಿಸ್ಕೊಂಡ್ರೆ ಬರ್ತೀವಿ' ಎಂದು ಹೇಳಿ ನಗೆಕತ್ತರಿ ಹಾಕಿದ್ದರು. ನೀನಾ ಎಂಬ ಹೆಸರಿನ ಹುಡುಗಿಗೆ 'ಓಹೋ ನೀನಾ?' ಎಂದು ಹೇಳಿ ಕೂಡಿಸುತ್ತಿದ್ದರು. ಅವರು ಸಹ್ಯಾದ್ರಿ ಕಾಲೇಜಿನಲ್ಲಿ ಓದುವಾಗ ದೇಜಗೌ ಕ್ಲಾಸಿನಲ್ಲಿ ಅತೀ ಭಕ್ತಿಯಿಂದ ಕುವೆಂಪು ಪದ್ಯಗಳನ್ನು ಮಾಡುತ್ತಾ, ತುಂಬಾ ಭಾವುಕರಾಗಿ 'ಕನ್ನಡವೇ ಸತ್ಯ, ಕನ್ನಡವೇ ಸತ್ಯ' ಎಂದಿದ್ದನ್ನು ಇವರೆಲ್ಲಾ ತಮಾಷೆಯಾಗಿ 'ಕನ್ನಡವೇ ಈ ದೇಜಗೌ ಕೈಲಿ ಸತ್ತೆಯಾ?' ಎಂದು pun ಮಾಡಿ ಹುಯಿಲೆಬ್ಬಿಸುತ್ತಿದ್ದರಂತೆ. ಅದನ್ನು ನಮಗೂ ಕ್ಲಾಸಿನಲ್ಲಿ ಹೇಳಿ ಜನಪ್ರಿಯ ವ್ಯಕ್ತಿಗಳನ್ನೆಲ್ಲ ಒಂದ್ರೀತಿ 'demythify' ಮಾಡಿಬಿಡುತ್ತಿದ್ದರು. ಅವರು ಗಾಂಧಿಯನ್ನು ಗೇಲಿ ಮಾಡುತ್ತಿದ್ದುದು ಹೀಗೆ. ಕ್ಲಾಸಿನಲ್ಲಿ ಬಂದು, 'ನೀವೆಲ್ಲ ಮೇಷ್ಟ್ರು ಮಾತು ಕೇಳ್ತಿರಲ್ವಾ' ಎಂದಾಗ ಹುಡುಗಿಯರ ಅಷ್ಟೂ ಸಮೂಹ 'ಹೌದು' ಎಂದು ಕೂಗಿತು. 'ಗಾಂಧಿ ನೋಡಿ ಮೇಷ್ಟ್ರ ಮಾತು ಕೇಳ್ತಿರಲಿಲ್ಲ. ಅವರು ಕಾಪಿ ಹೊಡಿ ಅಂದರೆ ಹೊಡೆಯುತ್ತಿರಲಿಲ್ಲ. ಆದ್ದರಿಂದ ಗಾಂಧಿಗಿಂತ ನೀವೇ ಒಳ್ಳೆಯವರು' ಎಂದಾಗ ಹುಡುಗಿಯರ ನಗು ಹೇಳಬಾರದು.

ಆಗಾಗ್ಗೆ ನಮ್ಮನ್ನೆಲ್ಲ ರಸಾಯನಶಾಸ್ತ್ರದ ಪ್ರಯೋಗಾಲಯಕ್ಕೆ ಕರೆದೊಯ್ದು ಪ್ರಯೋಗಗಳನ್ನು ತೋರಿಸುತ್ತಿದ್ದ ಶೇಷಗಿರಿ ಮೇಷ್ಟ್ರು, ಇಂಗ್ಲಿಷ್ ಪಾಠವನ್ನೂ ಚೆನ್ನಾಗಿ

ಮಾಡುತ್ತಿದ್ದರು. ಹುಡುಗಿಯರ ಶಾಲೆಯಲ್ಲಿ ಮೇಷ್ಟ್ರಾಗಿದ್ದರೂ ಇವರಿಗೆ ಹುಡುಗಿಯರನ್ನು ಕಂಡರೆ ಭಯಂಕರ ತಾತ್ಸಾರ. 'ನಿಮಗ್ಯಾಕೆ ಕಷ್ಟ ತಗೊಂಡು ಪಾಠ ಮಾಡಬೇಕು ಹೇಳಿ? ಎಸ್‌ಎಸ್‌ಎಲ್‌ಸಿ ಮುಗಿದ ತಕ್ಷಣ ಕೈಯಲ್ಲೊಂದು ಮದುವೆ ಇನ್ವಿಟೇಶನ್ ಹಿಡ್ಕೊಂಡು ಬರ್ತೀರ' ಅಂತ ಯಾವಾಗಲೂ ಹೇಳುತ್ತಿದ್ದರು. ಬಹಳಷ್ಟು ಜನ ನಮ್ಮ ಟೀಚರ್ಸ್ ಹುಡುಗಿಯರ ಬಗ್ಗೆ ಬೇಸರ ಇಟ್ಟುಕೊಂಡಿರುತ್ತಿದ್ದರು. ಎಷ್ಟು ಜಾಣೆಯರಾದರೂ ಓದು ಮುಂದುವರಿಸುವುದಿಲ್ಲ, ಸ್ಕೂಲು ಮುಗಿಸಿಕೊಂಡು ಹೊರಗೆ ಬೀಳುತ್ತಿದ್ದಂತೆ ಟೀಚರ್‌ಗಳನ್ನು ಮಾತನಾಡಿಸುವ, ವಿಶ್ ಮಾಡುವ ಸೌಜನ್ಯವೂ ಇರದಂತೆ ವರ್ತಿಸುತ್ತಾರೆ ಎಂದು. ಎಷ್ಟೋ ಸಂದರ್ಭಗಳಲ್ಲಿ ಇದು ನಿಜವೂ ಆಗಿರುತ್ತಿತ್ತು, ಕೆಲವರು ಅಹಂಕಾರದಿಂದ ವರ್ತಿಸಿದರೆ, ಇನ್ನು ಕೆಲವರು ಗಂಡ ಮಕ್ಕಳ ಜೊತೆ ಇದ್ದಾಗ ಸಂಕೋಚದಿಂದ ಸರಿದು ಹೋಗುತ್ತಿದ್ದರು.

ಆಗ ಏಳನೇ ತರಗತಿ ಮುಗಿಸಿ ಎಂಟನೇ ತರಗತಿಗೆ ಹೋಗಬೇಕಾಗಿತ್ತು. ಅಲ್ಲಿಯವರೆಗು ಕನ್ನಡ ಮಾಧ್ಯಮದಲ್ಲಿ ಓದಿದ ನಮಗೆ ಇಂಗ್ಲಿಷ್ ಬಾರದೆ ತಾಪತ್ರಯ ಪಡಬೇಕಿತ್ತು. ಇಂಗ್ಲಿಷ್ ಪೂರ್ತಿ ಅರ್ಥವಾಗುತ್ತಿರಲಿಲ್ಲ. ವಿಜ್ಞಾನ, ಗಣಿತಕ್ಕೆ ಪೂರಕವಾದ ಚಿತ್ರ, ಅಂಕೆಗಳಿದ್ದುದರಿಂದ ಅಷ್ಟು ಕಷ್ಟವಾಗಲಿಲ್ಲ. ಸಮಾಜ ಮಾತ್ರ ತಲೆ ತಿನ್ನುತ್ತಿತ್ತು. ನಮ್ಮ ಸೋಶಿಯಲ್ಸ್ ಮೇಷ್ಟ್ರು ಇಂಗ್ಲಿಷ್‌ನಲ್ಲೇನೊ ಪಾಠ ಮಾಡುತ್ತಿದ್ದರು, ಆದರೆ ಅವರ ಇಂಗ್ಲಿಷನ್ನು ನಾವು ಅನುಕರಿಸಿದರೆ ಬೇರೆಯವರು ನಮ್ಮನ್ನು ನೋಡಿ ನಗುತ್ತಿದ್ದರು. ಯಾಕೆಂದರೆ ಆ ಮೇಷ್ಟ್ರ ಇಂಗ್ಲಿಷ್ ಅಷ್ಟು ಬೇಜವಾಬ್ದಾರಿಯಿಂದ ಕೂಡಿರುತ್ತಿತ್ತು. Sculpture ಅನ್ನು 'ಸ್ಕಲ್ಪ್ಚರ್' ಎಂದೂ, plague ಅನ್ನು 'ಪ್ಲೇಗ್ಯೂ' ಎಂದು ಬಳಸುತ್ತಿದ್ದುದಲ್ಲದೆ, 'It will be ends' ಎಂಬಂತಹ ಪ್ರಯೋಗಗಳನ್ನು ಧಾರಾಳವಾಗಿ ಬಳಕೆ ಮಾಡುತ್ತಿದ್ದರು! ಅವರ ಇಂಗ್ಲಿಷ್‌ನಿಂದ ಸೋಶಿಯಲ್ಸ್‌ಗೆ ಹೆದರಿಕೊಳ್ಳುವಂತಾಯಿತು. ಮುಂದೆ ಮತ್ತೆ ಆಸಕ್ತಿ ಬೆಳೆಸಿಕೊಳ್ಳುವಂತೆ ನನಗೆ ನಾನೇ ಶ್ರಮಪಟ್ಟು ಓದಬೇಕಾಯಿತು. ಈ ಮೇಷ್ಟ್ರು ಮಾರವಾಡಿ ಹುಡುಗಿಯರಿಗೆಲ್ಲ, 'You chapati stand up' ಎಂದೂ, ಶೆಟ್ಟಿ ಹುಡುಗಿಯರಿಗೆ, 'You Kodubale answer this' ಎಂದೂ ಮಾತನಾಡಿಸುತ್ತಿದ್ದರು. ಮತ್ತು ಇದೇ ಅವರು ಮಾಡುತ್ತಿದ್ದ ದೊಡ್ಡ ಜೋಕ್ ಆಗಿತ್ತು. ಹುಡುಗಿಯರು ಅತೀ ಅಲಂಕಾರ ಮಾಡಿಕೊಂಡು ಬಂದರೆ ಅವರಿಗೆ ಆಗುತ್ತಿರಲಿಲ್ಲ, 'ದೇವರೊಂದು ರೂಪ ಕೊಟ್ಟರೆ, ನೀವೊಂದು ಮಾಡ್ಕೊಂಡು ಬರ್ತೀರ' ಎಂದು ಬೈಯುತ್ತಿದ್ದರು.

ಕನ್ನಡದ ಮೇಷ್ಟ್ರಾಗಿದ್ದವರು ನನ್ನ ತಂದೆ ರಾಧಾಕೃಷ್ಣ ಅವರು. ಕನ್ನಡದ ಬಗ್ಗೆ, ಸಾಹಿತ್ಯದ ಬಗ್ಗೆ ಅಭಿಮಾನ ಹುಟ್ಟಿಸುವಂತೆ ಪಾಠ ಮಾಡುತ್ತಿದ್ದರು. ಕಾವ್ಯವನ್ನು ತುಂಬಾ ಚೆನ್ನಾಗಿ ಕಲಿಸುತ್ತಿದ್ದರು. 'ನನ್ನ ನೆಲೆ' (ಕೆಎಸ್‌ನ), 'ಸ್ತ್ರೀ' (ಜಿಎಸ್‌ಎಸ್), 'ಸುಖಜೀವನ', 'ಪ್ರಾಣಗಳು'– ಈ ಮುಂತಾದ ಕವಿತೆಗಳ ವಿಶ್ಲೇಷಣೆ ಇನ್ನೂ ನನ್ನ ಮನಸ್ಸಿನಲ್ಲಿ ಆಳವಾಗಿ ಉಳಿದಿದೆ. ಹೋಂವರ್ಕ್‌ನಲ್ಲಿ ಯಾರು ಸೃಜನಾತ್ಮಕವಾಗಿ ಬರೆಯುತ್ತಾರೋ ಅವರಿಗೆ ತುಂಬಾ ಪ್ರೋತ್ಸಾಹ ನೀಡುತ್ತಿದ್ದುದು ನೆನಪಿನಲ್ಲಿದೆ. ತಂದೆ ಮನೆಯಲ್ಲಾದರೂ ಕ್ಲಾಸಿನೊಳಕ್ಕೆ ಬಂದೊಡನೆ ನನಗೂ ರಾಧಾಕೃಷ್ಣ ಮೇಷ್ಟ್ರಾಗಿ ಬಿಡುತ್ತಿದ್ದರು. ನಮ್ಮ ಕ್ಲಾಸಿನ ಹುಡುಗಿಯರಿಗೆಲ್ಲ ತಂದೆ ಮಗಳು ಇಲ್ಲಿ ಹೇಗೆ ಗುರು ಶಿಷ್ಯರಂತೆ ಇರುತ್ತಾರೆ ಎಂದು ಒಂಥರಾ ಕುತೂಹಲ,

ಒಂಥರಾ ತಮಾಷೆ ಇರುತ್ತಿತ್ತು. ಒಮ್ಮೆ ಕ್ಲಾಸಿನಲ್ಲಿ ತಪ್ಪಿ, 'ಅಣ್ಣಾ, ಇಲ್ಲಿ ನೀವು ರುಜು ಹಾಕಬೇಕಿತ್ತು' ಎಂದುಬಿಟ್ಟೆ. ಆಗ ಅವರು, 'ಯಾರಮ್ಮಾ ಹುಡುಗಿ ನಿಮ್ಮಪ್ಪ, ಇಲ್ಯಾರಾದರೂ ಬಂದೀದಾರಾ?' ಎಂದು ನಾಟಕೀಯವಾಗಿ ತಿರುಗಿ ನೋಡಿ ನಗಿಸಿದ್ದರು. ತಮಿಳುನಾಡಿನ ದೇವಸ್ಥಾನಗಳ ಬಗ್ಗೆ ಇದ್ದ ಪಾಠವೊಂದನ್ನು ಮಾಡುವಾಗ, 'ಇಲ್ಲಿ ಯಾರಾದರೂ ತಮಿಳರಿದ್ದೀರೇನಮ್ಮ ಇದರ ಬಗ್ಗೆ ಹೆಚ್ಚು ವಿವರಣೆ ನೀಡಲು' ಎಂದು ಕೇಳಿದರು. ಕುಚೇಷ್ಟೆಗಾಗಿ ನಾನು ಸಣ್ಣಗೆ ಕೈಯೆತ್ತಿದೆ. ಅದನ್ನು ನೋಡಿ ಅವರು, 'ನೀನು ತಮಿಳಿ ಅಲ್ಲಮ್ಮ, ನಿನಗೆ ತಮಿಳು ಬಣ್ಣ ಇದೆ ಅಷ್ಟೆ ಕೂತ್ಕೋ' ಎಂದು ಹೇಳುವುದೇ? ಬಹಳ ಸಾರಿ ತಮಿಳರ ನಾಟಕೀಯತೆ, ಅತಿರೇಕ, ಅಭಿಮಾನದ ಗುಣಗಳನ್ನು ನೋಡಿದಾಗ ಬಿಜಿಎಲ್ ಸ್ವಾಮಿಯವರಂತೆ ಇವರೂ ಈ ಗುಣಗಳನ್ನು ಖಂಡಿಸುತ್ತಿದ್ದರು. ಒಮ್ಮೆ 'ತಮಿಳರು ಬಟ್ಟೇನೇ ಹಾಕ್ಕೊಳಲ್ಲ ಕಣ್ರಮ್ಮ, ಮೈಮೇಲೊಂದು ತುಂಡು ಪಂಚೆಯಲ್ಲೇ ಜೀವನ ಸಾಗಿಸಿಬಿಡ್ತಾರೆ' ಎಂದು ತಮಾಷೆಯಾಗಿ ಹೇಳುತ್ತಿದ್ದರು. ಮಾಹೇಶ್ವರಿ ಎಂಬ ಹುಡುಗಿ ಎದ್ದುನಿಂತು 'ಸಾರ್, ನಾವೂ ತಮಿಳರೇ, ಕೊಯಿಮತ್ತೂರು ಕಡೆಯವರು. ನಮ್ಮ ಕಡೆ ಬಟ್ಟೆ ಹಾಕ್ಕೊಳ್ತಾರೆ ಸಾರ್?' ಎಂದು ಮುಗ್ಧವಾಗಿ ಹೇಳಿದಾಗ, ನನ್ನ ತಂದೆ ಪಶ್ಚಾತ್ತಾಪದಿಂದ, 'ಇಲ್ಲಮ್ಮ ನಾನು ತಮಾಷೆ ಮಾಡಿದೆ ಅಷ್ಟೇ' ಎಂದು ತಮ್ಮನ್ನು ತಿದ್ದಿಕೊಂಡರು. ಸ್ಕೂಲಿನಲ್ಲಿ ನಾಟಕಗಳನ್ನು ಮಾಡಿಸುತ್ತಿದ್ದರು. ಸ್ವಂತ ಕೆಲವು ನಾಟಕಗಳನ್ನು ಬರೆದು ಕೂಡ ನಾಟಕ ಆಡಿಸುತ್ತಿದ್ದರು. ಹುಡುಗಿಯರಿಗೆ ಸಾಕಷ್ಟು ಉತ್ತೇಜನ ಕೊಡುತ್ತಿದ್ದರು.

ಇನ್ನು ನಮ್ಮ ಹೆಡ್‌ಮಿಸ್ ಬಗ್ಗೆ ಹೇಳಬೇಕು. ಎಲ್ಲಾ ರೀತಿಯಲ್ಲೂ ಸ್ಟ್ರಿಕ್ಟ್ ಆಗಿದ್ದ ವಿಕ್ಟರೀನ್ ಸಿಸ್ಟರ್ ಮೇಲೆ ನೋಡಲು ಶಾಂತಮೂರ್ತಿ, ಆದರೆ ಒಳಗೆ ಭಯಂಕರ ಕೋಪಿಷ್ಠೆ. ಕಣ್ಣಿನಿಂದಲೇ ಚುಚ್ಚಿಬಿಡುತ್ತಿದ್ದರು. ವಿದ್ಯಾರ್ಥಿನಿಯರು ಹೇಗಿದ್ದರೂ ಕಷ್ಟ. ವಿನಯದಿಂದ ವರ್ತಿಸಿದರೆ 'You are hypocrite' ಎನ್ನುತ್ತಿದ್ದರು. ಚೆನ್ನಾಗಿ ಓಡಾಡಿಕೊಂಡು ಇದ್ದರೆ, 'ನೀನೊಂದು butterfly' ಎನ್ನುತ್ತಿದ್ದರು. ಒಬ್ಬಳು ಹುಡುಗಿಗೆ 'You are vulgar, ಹೋಗಿ ಆ ಪದವನ್ನು ಡಿಕ್ಷನರಿಯಲ್ಲಿ ನೋಡಿಕೊಂಡು ಬಂದು ನನಗೆ ಅರ್ಥ ಹೇಳು' ಎಂದು ಬೈದಿದ್ದು ನೆನಪಿದೆ. ಬೇರೆ ಟೀಚರುಗಳೆಲ್ಲ ಹೊರಗಡೆ ನಿಲ್ಲಿಸುವ ಶಿಕ್ಷೆ ಕೊಡುವುದನ್ನು ಇವರು ಟೀಕಿಸುತ್ತಿದ್ದರು. 'ನಿಮ್ಮಲ್ಲಿ ಬ್ರಾಹ್ಮಣರು ಸತ್ತ ಹೆಣವನ್ನು ಮೈಲಿಗೆ ಎಂದು ಹೊರಹಾಕುತ್ತಾರೆ ಅಲ್ವ, ಹಾಗೇ ಇದು, I don't want to give such punishments' ಎಂದು ಹೇಳ್ತಿದ್ರು. ಆದರೆ ಅವರ Silent killers ಥರದ ಪನಿಶ್‌ಮೆಂಟುಗಳು ಯಾರಿಗೂ ಬೇಡ.

ಹೀಗೆ ಹಲವಾರು ಟೀಚರುಗಳು ನಮ್ಮನ್ನ ನೇರವಾಗಿ ಪರೋಕ್ಷವಾಗಿ ತಿದ್ದಿದ್ದಾರೆ. ಹಲವರು ಪಾಠ ಮಾಡಿ ಶ್ರದ್ಧೆ ಆಸಕ್ತಿಗಳನ್ನು ನಮ್ಮಲ್ಲಿ ಬೆಳೆಸಿದ್ದರೆ, ಇನ್ನು ಕೆಲವರು ಪಾಠ ಮಾಡದೆ ನಾವು ಸ್ವಯಂಜ್ಞಾನಿಗಳಾಗಲು ಸ್ಫೂರ್ತಿಯಾಗಿದ್ದಾರೆ. ಆದರೆ ಎಲ್ಲ ಗುರುಗಳು ಒಂದಲ್ಲ ಒಂದು ರೀತಿ ನಮ್ಮ ಜೀವನದಲ್ಲಿ ಪ್ರಭಾವ ಬೀರಿರುತ್ತಾರೆ ಎಂದೇ ನನ್ನ ನಂಬಿಕೆ.

■ **ಆರ್. ತಾರಿಣಿ ಶುಭದಾಯಿನಿ :**

ಇಂಗ್ಲಿಷ್ ಉಪನ್ಯಾಸಕಿ, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ-೫೭೭ ೫೦೧ ■

ನನ್ನ ಪಪ್ಪ, ನನ್ನ ಅಮ್ಮ

— ಕೆ. ಉಷಾ ಪಿ. ರೈ

ನನ್ನ ಪಪ್ಪ ಇದ್ದಿದ್ದರೆ ೨೦೦೬ ರ ಮೇ ೧೮ ಕ್ಕೆ ಅವರಿಗೆ ನೂರಾಒಂದು ವರುಷಗಳಾಗುತ್ತಿದ್ದವು. ಜೂನ್ ೬ ಕ್ಕೆ ನನ್ನ ಅಮ್ಮನಿಗೆ ೮೧. ಪಪ್ಪನ ಶತಮಾನೋತ್ಸವವನ್ನು ಅದ್ದೂರಿಯಿಂದ ಆಚರಿಸದಿದ್ದರೂ ಇವತ್ತಿಗೂ ಅವರನ್ನು ನೆನಪಿಸಿಕೊಳ್ಳುವವರು ಇದ್ದಾರೆ ಎನ್ನುವುದೇ ನಮಗೆ ಬಹಳ ಖುಷಿ ಕೊಡುವ ಸಂಗತಿ. ಯಾರಾದರೂ ನೀವು 'ನವಯುಗ'ದ ಹೊನ್ನಯ್ಯ ಶೆಟ್ಟರ ಮಗಳಾ? ಎಂದು ಅಚ್ಚರಿಯಿಂದ ಕೇಳುವಾಗ ಅವರ ಕಣ್ಣಲ್ಲಿ ಇಣುಕುವ ಅಭಿಮಾನದ ಹೊಳಪು ನನ್ನ ಕಣ್ಣನ್ನು ಮಂಜಾಗಿಸುತ್ತದೆ. ನನಗೆ ಯಾವಾಗಲೂ ಅತ್ಯಂತ ಹೆಮ್ಮೆಯೆನಿಸುವ ಕ್ಷಣ ನಾನು 'ನವಯುಗ'ದ ಹೊನ್ನಯ್ಯ ಶೆಟ್ಟರ ಮತ್ತು ಕೆದಂಬಾಡಿ ಪದ್ಮಾವತಿ ಶೆಟ್ಟರ ಮಗಳೆಂದು ಹೇಳಿಕೊಳ್ಳುವಾಗ. ಇವತ್ತಿಗೂ ಆ ಒಂದು ಸಂತಸವನ್ನು ನಾನು ಅನುಭವಿಸುತ್ತೇನೆ. ಹೆತ್ತವರು ಮಕ್ಕಳಿಗೆ ಬಿಟ್ಟು ಹೋಗುವ ದೊಡ್ಡ ಬಳುವಳಿ ಅವರು ಬಿಟ್ಟು ಹೋಗುವ ಆಸ್ತಿಯಲ್ಲ, ಬ್ಯಾಂಕ್ ಬ್ಯಾಲೆನ್ಸ್ ಅಲ್ಲ. ಅವರು ಕೊಟ್ಟ ವಿದ್ಯೆ ಮತ್ತು ಅವರು ಬಿಟ್ಟುಹೋಗುವ ಹೆಸರು. ವಿದ್ಯೆ ಅಂದರೆ ಡಿಗ್ರಿಗಳೆಂದು ನಾನು ಹೇಳುವುದಿಲ್ಲ. ಆತ್ಮಸಮ್ಮಾನದಿಂದ ಜೀವಿಸಲು ಬೇಕಾದ ಜೀವನಮೌಲ್ಯಗಳನ್ನು, ಸತ್ಯನಿಷ್ಠರಾಗಿ ಜೀವಿಸುವ ಛಲವನ್ನು, ಯಾವುದೇ ಕಷ್ಟ ಬಂದರೂ ವಿಚಲಿತರಾಗದೇ ಜೀವಿಸಬೇಕೆನ್ನುವ ಆತ್ಮವಿಶ್ವಾಸವನ್ನು, ಎಷ್ಟೇ ಹೆಸರು ಬಂದರೂ ಬೀಗದೆ ಜೀವಿಸುವ ಸರಳತೆಯನ್ನು, ಜಾತಿ ಮತ ಮೇಲು ಕೀಳು ಎನ್ನುವ ಭೇದವನ್ನು ಮರೆತು ಎಲ್ಲರೂ ಒಂದೇ ಎನ್ನುವ ಮಾನವೀಯತೆಯನ್ನು ಕಲಿಸಿಕೊಡುವ ವಿದ್ಯೆ ನಿಜವಾದ ವಿದ್ಯೆ. ಅದನ್ನು ಕಲಿಸುವ ಗುರುಗಳು ಬೇರಾರೂ ಅಲ್ಲ. ಹೆತ್ತವರು. ನಮ್ಮ ಹೆತ್ತವರು ನಮಗೆ ಕಲಿಸಿದ್ದು ಮತ್ತು ಬಿಟ್ಟುಹೋದದ್ದು ಅದನ್ನೇ.

ಪತ್ರಿಕೋದ್ಯಮ, ಪುಸ್ತಕೋದ್ಯಮ, ಪ್ರಕಾಶನ ಅಂದ ಕೂಡಲೇ ನನಗೆ ನೆನಪಾಗುವುದು ನನ್ನ ಪಪ್ಪ ಕೆ. ಹೊನ್ನಯ್ಯ ಶೆಟ್ಟಿಯವರು; ಅವರು ಜೀವವನ್ನೇ ಮುಡಿಪಾಗಿಟ್ಟು ನಡೆಸಿದ 'ನವಯುಗ' ವಾರಪತ್ರಿಕೆ; ಉಡುಪಿಯ ಹಾಗೂ ಸುತ್ತುಮುತ್ತಲಿನ ಜನರಿಗೆ ಒಳ್ಳೆಯ ಪುಸ್ತಕಗಳು ಓದಲು ಸಿಗಬೇಕೆಂದು ಕಟ್ಟಿ ಬೆಳೆಸಿದ 'ನವಭಾರತ ಪುಸ್ತಕ ಭಂಡಾರ'; ಪುಸ್ತಕ ಪ್ರೀತಿಯಿಂದ ಅವರು ಪ್ರಾರಂಭಿಸಿದ 'ಕಿರಿಯರ ಪ್ರಪಂಚ', 'ನವಯುಗ ಎಂಟರ್‌ಪ್ರೈಸಸ್' ಎನ್ನುವ ಪುಸ್ತಕ ಪ್ರಕಾಶನ ಸಂಸ್ಥೆಗಳು. ದಕ್ಷಿಣ ಕನ್ನಡದ ಮೊದಲ ಪುಸ್ತಕ ಭಂಡಾರವೆಂದೆನಿಸಿದ್ದ ನವಭಾರತ ಪುಸ್ತಕ ಭಂಡಾರ ಅವರ ನೆನಪುಗಳನ್ನು ಹೊತ್ತು ಇಂದಿಗೂ ಉಡುಪಿಯ ಸಂತೆಕಟ್ಟೆಯಲ್ಲಿ ಅಂಚೆ ಕಚೇರಿಯ ಸಮೀಪದ ಪೇಜಾವರಮಠದ ಹಳೆಯ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಉಡುಪಿಯ ಮತ್ತು ಸುತ್ತುಮುತ್ತಲಿನ ಪ್ರದೇಶಗಳ ಸಾಹಿತ್ಯಿಕ ಹಸಿವನ್ನು ತಣಿಸುತ್ತಿದ್ದ ಪುಸ್ತಕ ಮಾರಾಟ ಮಳಿಗೆ ಇತ್ತೀಚೆಗಿನ ವರೆಗೆ ಅದೊಂದೇ ಆಗಿತ್ತು.

'ನವಭಾರತ ಪುಸ್ತಕ ಭಂಡಾರ' ದಕ್ಷಿಣ ಕನ್ನಡದ ಎಲ್ಲ ಬುದ್ಧಿಜೀವಿಗಳಿಗೆ ಒಂದು ಆಕರ್ಷಣೆಯ ಕೇಂದ್ರವಾಗಿತ್ತು. ಸಾಹಿತಿಗಳು, ಕಲಾವಿದರು, ಶಾಲಾ ಉಪಾಧ್ಯಾಯರುಗಳು,

ಕಾಲೇಜಿನ ಉಪನ್ಯಾಸಕರು ಎಲ್ಲರೂ ಅಲ್ಲಿಗೆ ಭೇಟಿಕೊಡುತ್ತಿದ್ದರು. ಇವರಲ್ಲದೆ ಕರ್ನಾಟಕದ ಬೇರೆ ಬೇರೆ ಕಡೆಯಿಂದ ಯಾರಾದರೂ ಲೇಖಕರು ಉಡುಪಿಗೆ ಬಂದರೆ ಅವರು ನವಭಾರತ ಪುಸ್ತಕ ಭಂಡಾರಕ್ಕೆ ಭೇಟಿ ನೀಡದೆ ಹೋಗುತ್ತಿರಲಿಲ್ಲ. ಅದೊಂದು ಪುಸ್ತಕ ಭಂಡಾರ ಮಾತ್ರ ಆಗಿರದೆ ಸಾಹಿತಿಗಳ ನಡುವಿನ ಸ್ನೇಹ ಸೇತುವೆಯಂತೆ ಕೆಲಸ ಮಾಡುತ್ತಿತ್ತು.

ನನ್ನ ಪಪ್ಪನದ್ದು ಬಹಳ ವಿಶಿಷ್ಟವಾದ ವ್ಯಕ್ತಿತ್ವ. ಮಹಾಸ್ವಾಭಿಮಾನಿ; ಸತ್ಯವೇ ದೇವರು, ಮರ್ಯಾದೆಯೇ ಜೀವನ, ಕಾಯಕವೇ ಕೈಲಾಸ ಎಂದು ಬದುಕಿನೊಡನೆ ಹೋರಾಡುತ್ತಲೇ ಜೀವಿಸಿದರು. ಪತ್ರಿಕಾ ಪ್ರಪಂಚದಲ್ಲಂತೂ ಅವರದ್ದು ಮರೆಯಲಾಗದ ಹೆಸರು. ಮದ್ರಾಸು ಸರಕಾರದಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಸ್ವಾತಂತ್ರ್ಯ ಹೋರಾಟಗಾರ ಎ. ಬಿ. ಶೆಟ್ಟರಿಂದ ೧೯೨೧ ರಲ್ಲಿ ಮಂಗಳೂರಿನಲ್ಲಿ ಕಾಂಗ್ರೆಸ್‌ನ ಮುಖವಾಣಿಯಾಗಿ ಪ್ರಾರಂಭಿಸಲ್ಪಟ್ಟ 'ನವಯುಗ' ವಾರಪತ್ರಿಕೆ ಕೆಲವು ವರುಷ ಅವರ ಮುತುವರ್ಜಿಯಲ್ಲೇ ನಡೆದರೂ, ಮುಂದೆ ಎ. ಬಿ. ಶೆಟ್ಟಿ ಯವರು ಸ್ವಾತಂತ್ರ್ಯ ಹೋರಾಟದ ಚಳುವಳಿಯಲ್ಲಿ ಹೆಚ್ಚು ಹೆಚ್ಚು ತನ್ನನ್ನು ತೊಡಗಿಸಿಕೊಂಡಾಗ ಅದರ ಸಂಪಾದಕತ್ವದ ಜವಾಬ್ದಾರಿಯನ್ನು ಅನುಕ್ರಮವಾಗಿ ಡಾ. ಅನಂತ್ರಾಮ ಅಡ್ಯಂತಾಯ, ಕಡೆಂಗೋಡ್ಲು ಶಂಕರ ಭಟ್ ಮತ್ತು ಕೆ. ಕೆ. ಶೆಟ್ಟರು ವಹಿಸಿಕೊಂಡು ಮುಂದುವರಿಸಿದ್ದರು. ೧೯೩೬ ರಲ್ಲಿ 'ನವಯುಗ'ದ ಪ್ರಕಟಣೆಯನ್ನು ಉಡುಪಿಗೆ ವರ್ಗಾಯಿಸಿದಾಗ ಅದರ ಸಂಪಾದಕತ್ವದ ಜವಾಬ್ದಾರಿಯನ್ನು ಸ್ವಾತಂತ್ರ್ಯ ಹೋರಾಟಗಾರ ತೀವ್ರಗಾಮಿ ಕೆ. ಕೆ. ಶೆಟ್ಟರು ವಹಿಸಿಕೊಂಡಿದ್ದರೂ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ ಅವರನ್ನು ಬ್ರಿಟಿಷ್ ಸರಕಾರ ಹಿಡಿದು ಜೈಲಿಗೆ ಹಾಕಿದಾಗ ಅದನ್ನು ನಡೆಸುವ ಜವಾಬ್ದಾರಿಯನ್ನು ನನ್ನ ಪಪ್ಪ ವಹಿಸಿಕೊಂಡು, "ನವಯುಗದ ನವಜೀವನವು ಎಲ್ಲಾ ಪರಿಸ್ಥಿತಿಯಲ್ಲೂ ಜಯಪ್ರದವಾಗಲಿ" ಎನ್ನುವ ಸನ್ಮಾನ್ಯ ಜವಾಹರಲಾಲ್ ನೆಹರುರವರ ಶುಭಹಾರೈಕೆಯೊಂದಿಗೆ, ನಾವೀನ್ಯದೊಂದಿಗೆ ಪುನರ್‌ಪ್ರಾರಂಭಿಸಿ ದಾಗ ಎಲ್ಲ ಕಡೆಯಿಂದಲೂ ಪ್ರೋತ್ಸಾಹದ ಹಾರೈಕೆಗಳು ಹರಿದು ಬಂದಿದ್ದವಂತೆ.

ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಮಣಿ ಬೆನ್ ಕಾರಾ, ಮುಂಬಯಿಯ ಕಾಂಗ್ರೆಸ್ ಹೌಸ್‌ನ ಕೆ. ಎಫ್. ನರಿಮನ್, ಬೊಂಬಾಯಿ ಕ್ರೋನಿಕಲ್ಸ್‌ನ ಸಂಪಾದಕ ಎಸ್. ಎ. ಬ್ರೆಲ್ವಿ, ಡಾ. ವಿ. ಕೃ. ಗೋಕಾಕ ಮುಂತಾದವರು ಹಾರೈಸಿದ್ದರು. ಈ ಎಲ್ಲ ಹಾರೈಕೆಗನುಗುಣ ವಾಗಿಯೇ ೧೯೩೬ ರಿಂದ ೧೯೭೪ ರ ವರೆಗೆ ಅಂದರೆ ಪಪ್ಪ ಬದುಕಿದ್ದ ಕೊನೆಯ ಕ್ಷಣದ ವರೆಗೆ ನಿಷ್ಠೆಯಿಂದ ಪತ್ರಿಕೆಯನ್ನು ನಡೆಸಿದ ಎಂಟೆದೆಯ ಬಂಟ, ದಕ್ಷ ಪತ್ರಿಕೋದ್ಯಮಿ ನನ್ನ ಪಪ್ಪ.

ಆಗಿನ ಕಾಲದಲ್ಲಿ ಪತ್ರಿಕೋದ್ಯಮವೆಂದರೆ ಒಂದು ಮಹಾಯಜ್ಞ ಮಾಡಿದಂತೆ. ವೃತ್ತಿಗೌರವ, ನಿಷ್ಠೆ, ಧೈರ್ಯ, ಅಭಿಮಾನ, ಸಹೃದಯತೆ, ತನು, ಮನ, ಧನ ಇವೇ ಈ ಯಜ್ಞಕ್ಕೆ ಹವಿಸ್ಸುಗಳು. ನನ್ನ ಪಪ್ಪ ಈ ಪತ್ರಿಕಾಯಜ್ಞವನ್ನು ದೀರ್ಘಕಾಲ ಬಹಳ ನಿಷ್ಠೆಯಿಂದ ನಡೆಸಿದ್ದರು.

ನನ್ನ ಪಪ್ಪ ಜೀವನ ಪ್ರಾರಂಭಿಸಿದ್ದು ಶಾಲಾಶಿಕ್ಷಕನಾಗಿ. ೧೯೨೪ ರಿಂದ ೧೯೨೬ ರ ವರೆಗೆ ದೂರದ ಸಾಂತ್ಯಾರು ಎನ್ನುವ ದಕ್ಷಿಣ ಕನ್ನಡದ ಹಳ್ಳಿಯ ರಾಷ್ಟ್ರೀಯ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ಮಂಗಳೂರಿನ ಶಿಕ್ಷಕ ತರಬೇತಿ ಶಾಲೆಯಲ್ಲಿ ತರಬೇತಿ ಪಡೆದ ನಂತರ ಉಡುಪಿಯ ಅನಂತೇಶ್ವರ ಶಾಲೆಯಲ್ಲಿ ಸೇವೆ ಸಲ್ಲಿಸಿ ಉತ್ತಮ ಶಿಕ್ಷಕನೆಂದು ಹೆಸರು

ಪಡೆದದ್ದು ಮಾತ್ರವಲ್ಲದೆ ತಮ್ಮ ಹೊಸ ಹೊಸ ಶಿಕ್ಷಣ ವಿಧಾನಗಳಿಂದ ಶಾಲಾ ಆಡಳಿತದವರ ಹಾಗೂ ಪರೀಕ್ಷಾ ಅಧಿಕಾರಿಗಳ ಮನ್ನಣೆ ಹಾಗೂ ಮೆಚ್ಚುಗೆಗೆ ಪಾತ್ರರಾಗಿದ್ದರು. ಪ್ರಯೋಗಾತ್ಮಕ ಶಿಕ್ಷಣ ವಿಧಾನಗಳಿಂದ, ನವನವೀನ ಯೋಜನೆಗಳಿಂದ ಉಡುಪಿಯ ಅತ್ಯಂತ ಪ್ರಾಚೀನ ಅನಂತೇಶ್ವರ ಶಾಲೆಯನ್ನು ಇಡೀ ಜಿಲ್ಲೆಯಲ್ಲಿಯೇ ಮಾದರಿ ಶಾಲೆಯನ್ನಾಗಿ ರೂಪಿಸಿದ ಕೀರ್ತಿ ನನ್ನ ಪಪ್ಪನದ್ದು.

ಶಿಕ್ಷಕ ತರಬೇತಿಯ ಕಾಲದಲ್ಲಿ ಅವರಿಗೆ ಉಳ್ಳಾಲ ಮಂಗೇಶರಾಯರ, ಪಂಜೆ ಮಂಗೇಶ ರಾಯರ, ಎಂ. ಎನ್. ಕಾಮತರ ಒಡನಾಟ ದೊರೆತು ಅವರಲ್ಲಿದ್ದ ಸಾಹಿತ್ಯದೊಲವಿಗೆ ಪ್ರೋತ್ಸಾಹ ದೊರಕಿತ್ತು. ಮಕ್ಕಳಿಗೆ ಕಲಿಸುತ್ತಲೇ ಕವನಗಳನ್ನು ಕಟ್ಟಿ ಹಾಡುತ್ತಿದ್ದ ಮಕ್ಕಳ ಕವನಗಳನ್ನು ಒಟ್ಟು ಸೇರಿಸಿ ೧೯೩೯ ರಲ್ಲಿ ತನ್ನ ೨೪ ನೇ ವಯಸ್ಸಿನಲ್ಲಿ 'ಮುಗುಳು' ಕವನಸಂಕಲನವನ್ನು ಪ್ರಕಟಿಸಿದ್ದರು. ಈ ಕವನಸಂಕಲನವನ್ನು ಮದರಾಸು, ಬೊಂಬಾಯಿ, ಮೈಸೂರು ರಾಜ್ಯಗಳ ಪಠ್ಯ ಪುಸ್ತಕ ಸಮಿತಿಗಳು ಶಾಲೆಗಳಿಗೆ ಪಠ್ಯ ಪುಸ್ತಕವನ್ನಾಗಿ ಆಯ್ಕೆ ಮಾಡಿದ್ದುವು. ೧೯೩೯ ರಿಂದ ೧೯೫೧ ರ ವರೆಗೆ ೧೧ ಬಾರಿ ಮರುಮುದ್ರಣ ಕಂಡ 'ಮುಗುಳು' ಅಂದಿನ ಹೆಸರಾಂತ ಮಕ್ಕಳ ಕವನಸಂಕಲನ. ಅದರಿಂದ ಆಯ್ದ ಎರಡು ಕವನಗಳು ಬೋಳುವಾರು ಮಹಮ್ಮದ್ ಕುಂಞ್ಞಿಯವರು ಹೊರತಂದಿರುವ 'ತಟ್ಟು ಚಪ್ಪಾಳೆ ಪುಟ್ಟ ಮಗು' ಸಂಕಲನದಲ್ಲಿ ಸೇರ್ಪಡೆ ಯಾಗಿವೆ ('ಬಾರೆ ಹೋಗುವ ಸಾಗುವ' ಮತ್ತು 'ಹಸಿದವರಿಗೆ ಇಲ್ಲವೆ' ಎನ್ನುವ ಕವನಗಳು). ಅವರ ಕವನಗಳಲ್ಲಿ ನನ್ನ ಹೃದಯಕ್ಕೆ ತಟ್ಟಿದ್ದು ಅವರಿಗಿದ್ದ ಸಾಮಾಜಿಕ ಕಳಕಳಿ. ಬಡವರ ಮೇಲಿನ ಕರುಣೆ, ಹಾಗೂ ಸಾಮಾಜಿಕ ನ್ಯಾಯದ ಕಡೆಗೆ ಅವರಿಗಿದ್ದ ಕಾಳಜಿ. ಅದನ್ನು ಮಕ್ಕಳಿಗೆ ತಿಳಿಯುವಂತೆ ಹೇಳುವ ಅವರ ಅಭಿವ್ಯಕ್ತಿ ಮತ್ತು ಶೈಲಿ. ಅವರ ಪ್ರತೀ ಕವನದ ಸಾಲುಗಳ ಹಿಂದೆ ಯಾವುದಾದರೂ ಒಂದು ಮೌಲ್ಯದ ಪ್ರತಿಪಾದನೆ ಇದ್ದೇ ಇರುತ್ತಿತ್ತು. ಮಕ್ಕಳಿಗೆ ಒಂದು ನೀತಿಯ ಬೋಧನೆ ಇರುತ್ತಿತ್ತು. ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಹೃದಯದಾಳದ ಕಳಕಳಿ ಎಲ್ಲ ಕವನಗಳ ಹಿಂದಿತ್ತು. ಈಗ ಮಕ್ಕಳು ಕಲಿಯುವ ಇಂಗ್ಲಿಷ್ ರೈಮ್‌ಗಳಲ್ಲಿ ಇಂತಹದೇನೂ ಕಾಣುವುದಿಲ್ಲ ಎನ್ನುವುದನ್ನು ವಿಷಾದದಿಂದಲೇ ಹೇಳಬೇಕಾಗುತ್ತದೆ.

ಸ್ವಾತಂತ್ರ್ಯ ಹೋರಾಟದ ಕಾವು ಜಾಸ್ತಿಯಾಗಿದ್ದಾಗ ಯೌವನಕ್ಕೆ ಕಾಲಿಟ್ಟಿದ್ದ ಆದರ್ಶವಾದಿ ಕವಿ, ಗಾಂಧೀ ಅನುಯಾಯಿ ಆದುದರಲ್ಲಿ ವಿಶೇಷವೇನೂ ಇರಲಿಲ್ಲ. ಆಗಿನ ಕಾಲದಲ್ಲಿ ಅದು ಆಗಲೇಬೇಕಾದದ್ದು. ಆದರ್ಶಗಳ ಕನಸು ಕಾಣುತ್ತಿದ್ದ ಎಲ್ಲ ಯುವಕರು ಯಾರ ಮಾತನ್ನೂ ಕೇಳದೇ ಸ್ವಾತಂತ್ರ್ಯ ಚಳುವಳಿಗಳಿಗೆ ಸ್ವಇಚ್ಛೆಯಿಂದ ಧುಮುಕುತ್ತಿದ್ದ ಕಾಲವದು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಖಾದಿ, ಚರಕ, ಪ್ರಚಾರ ಮುಂತಾದ ವಿಧಾಯಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಪಪ್ಪನ ಮೇಲೆ ಗಾಂಧೀ ತತ್ವಗಳು ಎಷ್ಟು ಪರಿಣಾಮ ಬೀರಿತ್ತೆಂದರೆ ಜೀವನವಿಡೀ ಆ ತತ್ವಗಳನ್ನು ನೆಚ್ಚಿಕೊಂಡೇ ಪಪ್ಪ ಜೀವಿಸಿದ್ದರು. ಅವರು ಯಾವತ್ತೂ ಖಾದಿಯನ್ನಲ್ಲದೆ ಬೇರೆ ಬಟ್ಟೆ ಧರಿಸಿರಲಿಲ್ಲ. ಸುಳ್ಳನ್ನು ಸಹಿಸುತ್ತಿರಲಿಲ್ಲ. ಕೆಲಸಗಳ್ಳತನವನ್ನು, ಆಲಸ್ಯವನ್ನು ದ್ವೇಷಿಸುತ್ತಿದ್ದರು. ಸ್ವಾತಂತ್ರ್ಯಕ್ಕಾಗಿ

ದಿನದಿನವೂ ಪರಿತಪಿಸುತ್ತಾ, ಬ್ರಿಟಿಷರ ದಬ್ಬಾಳಿಕೆಗಳನ್ನು ಎದುರಿಸುತ್ತಾ, ಎರಡನೇ ಮಹಾಯುದ್ಧದ ದುಷ್ಪರಿಣಾಮಗಳಿಗೆ ಸಾಕ್ಷಿಯಾಗಿ ಜೀವಿಸಿದ್ದ ಆ ಕಾಲದ ಅನುಭವಗಳು ಪಪ್ಪನಲ್ಲಿ ಅಷ್ಟೊಂದು ಛಲ, ಸ್ವಾಭಿಮಾನ, ಆತ್ಮವಿಶ್ವಾಸ, ಸತ್ಯ, ನೀತಿ, ಧರ್ಮ ಹಾಗೂ ನಮ್ಮ ದೇಶ, ನಮ್ಮ ಸಂಸ್ಕೃತಿಯ ಕಡೆಗೆ ಒಲವು ಮೂಡಿಸಿರಬೇಕು. ಅವರು ಒಗ್ಗಿಸಿಕೊಂಡು ಬಂದ ಗಟ್ಟಿ ಭಾವನೆಗಳು ಅವರ ಮುಂದಿನ ಸಾಹಸಮಯ ಜೀವನಕ್ಕೆ ನಾಂದಿ ಹಾಕಿರಬೇಕು.

ಕಾಂಗ್ರೆಸಿನ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದುದರಿಂದ ಅವರನ್ನು ಬೆಳಗಾಂ ಕಾಂಗ್ರೆಸ್ ಅಧಿವೇಶನಕ್ಕೆ ಸ್ವಯಂಸೇವಕನಾಗಿ ಆಯ್ಕೆ ಮಾಡಿದ್ದರು. ೧೯೩೮ ರಿಂದ ಸುಮಾರು ಹತ್ತು ಹನ್ನೆರಡು ವರುಷಗಳ ಕಾಲ ತಾಲೂಕು ಕಾಂಗ್ರೆಸ್ ಸಮಿತಿಯ ಸದಸ್ಯನಾಗಿ, ಮತ್ತೆ ಪದಾಧಿಕಾರಿಯಾಗಿ ಪಪ್ಪ ಕಾರ್ಯ ನಿರ್ವಹಿಸಿದ್ದರು. ೧೯೫೦ ರಿಂದ ೫-೬ ವರುಷಗಳ ಕಾಲ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿ, ಅನಂತರ ಬ್ಲಾಕ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಪಪ್ಪ ಕೊನೆಯ ತನಕ ಅಪ್ಪಟ ಕಾಂಗ್ರೆಸಿಗರಾಗಿಯೇ ಉಳಿದಿದ್ದರು.

ಅವರಲ್ಲಿ ತುಂಬಿದ್ದ ಸಾಮಾಜಿಕ ಕಳಕಳಿ, ಹರಿಜನೋದ್ಧಾರದ ಆದರ್ಶಗಳು ಸ್ವಾತಂತ್ರ್ಯ ನಂತರವೂ ಈ ಕಾರ್ಯಗಳಿಗೆ ಗಮನ ಹರಿಸುವಂತೆ ಮಾಡಿತ್ತು. ಉಡುಪಿಯ ಹರಿಜನ ವಿದ್ಯಾರ್ಥಿ ಭವನ ಸಮಿತಿಯ ಸದಸ್ಯನಾಗಿ, ಜಿಲ್ಲಾ ಹರಿಜನ ಸಮಿತಿಯ ಸದಸ್ಯನಾಗಿ ಹರಿಜನೋದ್ಧಾರಕ್ಕೆ ಸೇವೆ ಸಲ್ಲಿಸಿದ್ದರು. ಹರಿಜನರು ಅಸ್ಪೃಶ್ಯರಲ್ಲ ಎನ್ನುವುದನ್ನು ಅವರು ನಮ್ಮ ಮನೆಯಲ್ಲಿ ಕಾರ್ಯರೂಪಕ್ಕೆ ತಂದಿದ್ದರು. ದನಗಳಿಗೆ ಹುಲ್ಲು ತರುತ್ತಿದ್ದ 'ಬಿಡುಗು'ವಿನ ಮಡಿಲಲ್ಲಿ ಕುಳಿತು ನಾವೆಲ್ಲಾ ಕಥೆ ಕೇಳಿಸಿಕೊಂಡು ಅವಳು ತರುತ್ತಿದ್ದ ಗೇರು ಹಣ್ಣು, ಹಸಿ ಗೇರು ಬೀಜದ ಸವಿ ಸವಿದವರು. ನಾವು ಬಂಟರೆನ್ನುವ ಅಭಿಮಾನವಿದ್ದರೂ ನಮ್ಮ ಮನಸ್ಸಿನಲ್ಲೆಂದೂ ಜಾತಿ ಮತ ಭೇದಗಳ ಕಹಿ ಸೇರದಂತೆ ಪಪ್ಪ ಮುತುವರ್ಜಿ ವಹಿಸಿದ್ದರು. ಹಾಗಾಗಿ ನನಗಿವತ್ತಿಗೂ ಯಾರು ಯಾವ ಜಾತಿ ಎನ್ನುವುದು ತಲೆಗೆ ಹೋಗುವುದೇ ಇಲ್ಲ. ಚಿಕ್ಕವಳಿರುವಾಗ ನನ್ನ ಲೆಕ್ಕದಲ್ಲಿ ಇದ್ದದ್ದು ಮೂರೇ ಜಾತಿ– ಹಿಂದು, ಕ್ರಿಶ್ಚಿಯನ್ ಮತ್ತು ಮುಸ್ಲಿಮ್. ಆಗಿನ ಕಾಲದಲ್ಲಿ ದಕ್ಷಿಣ ಕನ್ನಡದಲ್ಲಿ ಈ ಮೂರೂ ಮತಗಳ ಜನರು ತುಂಬಾ ಒಗ್ಗಟ್ಟಾಗಿ ಜೀವಿಸುತ್ತಿದ್ದರು. ಯಾರ ಮಧ್ಯೆಯೂ ದ್ವೇಷದ ಹೊಗೆ ಇರಲೇ ಇಲ್ಲ. ಹೊರ ಜಗತ್ತಿಗೆ ನಾನು ತೆರೆದುಕೊಂಡಾಗ ನನಗೆ ಸ್ವಲ್ಪ ಸ್ವಲ್ಪವೇ ಮನದಟ್ಟಾದದ್ದು ಅದು ಜಾತಿಯಲ್ಲ ಮತಗಳು, ಈ ಮತಗಳ ಒಳಗೆ ಬೇಕಾದಷ್ಟು ಉಪಜಾತಿಗಳಿವೆಯೆಂದು. ಪಪ್ಪನ ಸ್ನೇಹಿತರ ಬಳಗದಲ್ಲಂತೂ ಎಲ್ಲಾ ಮತದವರೂ ಇದ್ದರು.

ಪಪ್ಪನಿಗೆ ಸರಿಯಾದ ಜೋಡಿ ನನ್ನಮ್ಮ ಪದ್ಮಾವತಿ ಶೆಟ್ಟಿ.

ಪಪ್ಪ ಅಮ್ಮನ ಮದುವೆಯಾದದ್ದು ೧೯೪೩ ರಲ್ಲಿ. ಪಪ್ಪ ಆಕರ್ಷಕ ವ್ಯಕ್ತಿತ್ವದ ಶ್ರೀಮಂತರ ಗುಂಪಿಗೆ ಸೇರಿದ್ದ, ಕವಿಯಾಗಿ, ಪತ್ರಿಕೋದ್ಯಮಿಯಾಗಿ ಸಾಕಷ್ಟು ಹೆಸರು ಮಾಡಿದ್ದ ವರ. ಮದುಮಗಳು ಸ್ವಲ್ಪ ಕುಳ್ಳಗೆ ಸ್ವಲ್ಪ ದಪ್ಪಗೆ, ನಸುಗೆಂಪಿನ, ನೀಳ ಕೇಶರಾಶಿಯ, ಉತ್ತಮ ಗೃಹಿಣಿಯಾಗುವ ಎಲ್ಲ ಲಕ್ಷಣಗಳಿದ್ದ ಸುಂದರ ಯುವತಿ.

ಅಮ್ಮನಿಗೂ ಪಪ್ಪನಿಗೂ ಇಪ್ಪತ್ತು ವರುಷಗಳ ಅಂತರವಿತ್ತು. ಅಮ್ಮನಿಗೆ ಮದುವೆಯಾಗುವಾಗ ೧೯ ವರುಷ. ಪಪ್ಪನಿಗೆ ನಲ್ವತ್ತು. ಅಮ್ಮ ಕಲಿಯುತ್ತಿದ್ದ ಬೆಳ್ಮಾರೆ ಶಾಲೆಗೆ ಯುವ

ಕವಿಯಾಗಿದ್ದ ಪಪ್ಪ ಅತಿಥಿಯಾಗಿ ಬಂದದ್ದು, ಆಗ ಎರಡು ಮೂರನೇ ಕ್ಲಾಸಿನಲ್ಲಿದ್ದ ಅಮ್ಮ ಪಪ್ಪನ 'ಕುರುಡಿ ಸುಬ್ಬಿ ಬಂದಳು' ಕವಿತೆಗೆ ಸರಿಯಾಗಿ ನಟಿಸಿದ್ದು, ಕವನ ಬರೆದ ಕವಿ ಚಿಕ್ಕ ಹುಡುಗಿಯ ನಟನೆಯನ್ನು ಮೆಚ್ಚಿಕೊಂಡದ್ದು ಅಮ್ಮನ ನೆನಪಿನ ಬುತ್ತಿಯಿಂದ ನಮಗೆ ತಿಳಿದ ವಿಚಾರ. ಮುಂದೆ ಇದೇ ಕವಿಯನ್ನು ತಾನು ಮದುವೆಯಾಗಲಿರುವೆನೆಂದು ಅಮ್ಮನಾಗಲೀ ತನ್ನ ಕವನಕ್ಕೆ ಹೆಜ್ಜೆಹಾಕಿದ ಪುಟ್ಟ ಹುಡುಗಿಯೇ ತನ್ನ ಬಾಳ ಸಂಗಾತಿಯಾಗಿ ಬರುವಳೆಂದು ಪಪ್ಪನಾಗಲೀ ಎಣಿಸಿರಲೇ ಇಲ್ಲ. ಆ ಘಟನೆ ನಡೆದು ಎಷ್ಟೋ ವರುಷಗಳ ನಂತರ ಹಿರಿಯರು ಮದುವೆ ನಿಶ್ಚಯಿಸಿದಾಗ ಅಮ್ಮ ತಾನು ವಿದ್ಯಾವಂತ ಕವಿಯೊಬ್ಬರ ಕೈಹಿಡಿಯುವೆನೆಂದು ಬೀಗಿದ್ದರಂತೆ. ಪಪ್ಪ ಆಗ ಮಕ್ಕಳ ಕವಿಯಾಗಿ, ಪತ್ರಿಕೋದ್ಯಮಿಯಾಗಿ ದಕ್ಷಿಣ ಕನ್ನಡದಲ್ಲಿ ಸಾಕಷ್ಟು ಹೆಸರು ಮಾಡಿದ್ದರು. ಸಮಾಜದಲ್ಲಿ ಅವರು ಪಡೆದಿದ್ದ ಸ್ಥಾನಮಾನ, ಜನಪ್ರಿಯತೆ ಅಮ್ಮನ ಹಿರಿಯರನ್ನು ಆಕರ್ಷಿಸಿತ್ತು. ನೋಡಲು ಗೌರವ ವರ್ಣದ ಆಕರ್ಷಕ ವ್ಯಕ್ತಿತ್ವದ ವ್ಯಕ್ತಿಯಾಗಿ ಅಮ್ಮನ ಕುಟುಂಬದವರೆಲ್ಲರಿಗೂ ಪಪ್ಪ ಬಹಳ ಮೆಚ್ಚಿಗೆಯಾಗಿದ್ದರಂತೆ.

ಅಮ್ಮ ತಾಯಿ ತಂದೆ ಇಬ್ಬರನ್ನೂ ಕಳಕೊಂಡಿದ್ದ ಹುಡುಗಿ. ಅಮ್ಮ ಎರಡು ವರುಷ ದವಳಿರುವಾಗ, ಚಿಕ್ಕಮ್ಮನಿಗೆ ೭ ದಿನವಾಗಿರುವಾಗ ಅಜ್ಜಿ ತೀರಿಕೊಂಡಿದ್ದರಂತೆ. ಅಜ್ಜ ಬೇರೆ ಮದುವೆಯಾಗಿದ್ದರಂತೆ. ಅಮ್ಮ ಮತ್ತು ಚಿಕ್ಕಮ್ಮ ಬೆಳೆದದ್ದು ತನ್ನ ತಾಯಿಯ ತವರುಮನೆ ಕೆದಂಬಾಡಿಯ ದೊಡ್ಡ ಕುಟುಂಬದಲ್ಲಿ. ಎಲ್ಲ ಚಿಕ್ಕಮ್ಮಂದಿರೂ ಅವರಿಗೆ ತಾಯಂದಿರು. ಎಲ್ಲ ಮಾವಂದಿರಿಗೂ ಈ ತಾಯಿ ಇಲ್ಲದ ಮಕ್ಕಳ ಮೇಲೆ ವಿಪರೀತ ಅಕ್ಕರೆ. ಅಮ್ಮನಂತೂ ಕುಟುಂಬದ ಎಲ್ಲ ಕಿರಿಯರಿಗೂ ಅಕ್ಕನಾಗಿದ್ದರಂತೆ. ಎಲ್ಲರಿಗೂ ತುಂಬಾ ಪ್ರೀತಿಯವರಾಗಿದ್ದ ರಂತೆ. ಅಮ್ಮ ಒಟ್ಟು ಕುಟುಂಬದಲ್ಲಿ ಬೆಳೆದಿದ್ದ ಕಾರಣ ತುಂಬ ಸಹನೆ ಉಳ್ಳವರಾಗಿ ಮನೆಕೆಲಸಗಳ ಒತ್ತಡವನ್ನು ನಿರ್ವಹಿಸಬಲ್ಲವರಾಗಿ ರೂಪುಗೊಂಡಿದ್ದರಿಂದ ಪಪ್ಪನ ಉದಾತ್ತ ಧ್ಯೇಯಗಳಿಗೆ ಸುಲಭದಲ್ಲಿ ಹೊಂದಿಕೊಳ್ಳುವುದು ಸಾಧ್ಯವಾಗಿತ್ತು. ಆಗಲೇ ಹೆಸರುವಾಸಿ ಯಾಗಿದ್ದ ಪಪ್ಪನ ಮದುವೆಗೆ ಉಡುಪಿಯ ಎಲ್ಲ ಸಮುದಾಯದವರೂ ಬಂದಿದ್ದರಂತೆ.

ಉಡುಪಿ ವಿದ್ಯಾಕೇಂದ್ರವಾಗಿದ್ದರಿಂದ ಪಪ್ಪನ ಕುಟುಂಬದ, ಅಮ್ಮನ ಕುಟುಂಬದ ಹಲವಾರು ಮಕ್ಕಳು ನಮ್ಮ ಮನೆಯಲ್ಲಿದ್ದುಕೊಂಡು ಶಾಲಾ ಕಾಲೇಜುಗಳಿಗೆ ಹೋಗುತ್ತಿದ್ದರು; ಕೆಲಸಕ್ಕೆ ಹೋಗುತ್ತಿದ್ದರು. ಹಾಗಾಗಿ ಉಡುಪಿಯ ನಮ್ಮ ಮನೆ ಒಂದು ರೀತಿಯಲ್ಲಿ ಹಾಸ್ಟೆಲ್ ನಂತಿತ್ತು. ಪಪ್ಪನ ಗೆಳೆಯರ ಮಕ್ಕಳೂ ಕೆಲವೊಮ್ಮೆ ಅಲ್ಲಿರುತ್ತಿದ್ದರು. ಅಮ್ಮನ ಸೇವಾ ಮನೋಭಾವ ಪಪ್ಪ ಮತ್ತು ಅಮ್ಮನ ಕಡೆಯ ಎಲ್ಲರಿಗೂ ಪರಿಚಿತವಾಗಿತ್ತು. ಹಾಗಾಗಿ ಯಾರಿಗೆ ಹುಶಾರಿಲ್ಲದಿದ್ದರೂ ಆಸ್ಪತ್ರೆಗೆ ಹೋಗಲು, ಶುಶ್ರೂಷೆಗಾಗಿ ನಮ್ಮ ಮನೆಗೆ ಬರುತ್ತಿದ್ದರು. ಉಡುಪಿಯಲ್ಲಿ ನೆಂಟರಿಷ್ಟರ, ಗೆಳೆಯರ ಮಕ್ಕಳ ಯಾರ ಮದುವೆಯಾದರೂ ದಿಬ್ಬಣ ಹೊರಡುವುದು ನಮ್ಮ ಮನೆಯಿಂದ. ಹುಡುಗಿ ನೋಡುವುದು ನಮ್ಮ ಮನೆಯಲ್ಲಿ. ಹಾಗಾಗಿ ಯಾವಾಗಲೂ ಮನೆ ತುಂಬಿರುತ್ತಿತ್ತು. ಪಪ್ಪನ ಪ್ರೀತಿ, ಅಮ್ಮನ ಆತಿಥ್ಯದಿಂದ ಇದು ಸಾಧ್ಯವಾಗಿತ್ತು. ಅಮ್ಮನ ಅಡುಗೆಯ ರುಚಿ, ಅವರು ಮಾಡುತ್ತಿದ್ದ ಕಸೂತಿ ಕೆಲಸಗಳು ಎಂದೂ ಮರೆಯಲಾಗದ್ದು. ಎಲ್ಲದರಲ್ಲೂ ಅಮ್ಮನಿಗೆ ಆಸಕ್ತಿಯಿತ್ತು. ಸಮಯ ಸಿಕ್ಕಿದಾಗ

ಏನಾದರೂ ಓದುವ ಹವ್ಯಾಸ. ನಾವು ಮೂರೂ ಜನ ಹೆಣ್ಣುಮಕ್ಕಳು ಜೀವನ ನಡೆಸಲು ಕಲಿತದ್ದು ಅಮ್ಮನಿಂದ. ಪಪ್ಪ ಅಮ್ಮ ಇಬ್ಬರಿಗೂ ಮಕ್ಕಳ ಮೇಲೆ ಅಪಾರ ಪ್ರೀತಿ. ನಾವ್ಯಾರೂ ಅವರ ಕಣ್ಣೆದುರಿನಿಂದ ಒಂದು ದಿನವೂ ಮರೆಯಾಗಬಾರದು. ಹಾಗಾಗಿ ನಾವು ೭ ಮಕ್ಕಳೂ ಬೆಳೆದದ್ದು ಪಪ್ಪ ಅಮ್ಮನ ಪ್ರೀತಿಯ ನೆರಳಲ್ಲಿ, ಪಪ್ಪನ ಶಿಸ್ತಿನ ಗರಡಿಯಲ್ಲಿ; ಹೆಣ್ಣು ಗಂಡು ಎನ್ನುವ ಭೇದವಿಲ್ಲದೆ.

ಪಪ್ಪನ ನೆನಪುಗಳೊಡನೆ ನುಗ್ಗಿ ಬರುವ ನೆನಪು ಅವರ ಶಿಸ್ತು, ಡಿಸಿಪ್ಲಿನ್. ಎಲ್ಲದರಲ್ಲೂ ಶಿಸ್ತು ಇರಲೇಬೇಕು. ಸುಳ್ಳು ಹೇಳಲೇಬಾರದು. ಹಾಗಾಗಿ ಇವತ್ತಿಗೂ ನಮಗೆ ತಮಾಶೆಗಾಗಿ ಯಾದರೂ ಸುಳ್ಳು ಹೇಳಲು ಸಾಧ್ಯವಾಗುವದಿಲ್ಲ. ಒಂದು ಸುಳ್ಳು ಹೇಳಿದರೆ ಅದರಿಂದ ಸಾವಿರ ಸುಳ್ಳು ಹುಟ್ಟುತ್ತದೆ ಎಂದು ಅವರು ಯಾವಾಗಲೂ ಹೇಳುತ್ತಿದ್ದರು. ಚಿಕ್ಕವರಿರುವಾಗ ನಮಗೆ ಅವರ ಶಿಸ್ತು ಬಹಳ ಹೆಚ್ಚಾಯಿತೆಂದು ಅನಿಸುತ್ತಿತ್ತು. ಅವರು ಅದನ್ನು ನಮ್ಮಿಂದ ಮಾತ್ರ ನಿರೀಕ್ಷಿಸುತ್ತಿರಲಿಲ್ಲ. ಎಲ್ಲರಿಂದರೂ ನಿರೀಕ್ಷಿಸುತ್ತಿದ್ದರು. ಅದರಿಂದಾಗಿ ಅವರಿಂದ ದೂರವಾಗು ತ್ತಿದ್ದವರೂ ಇದ್ದರು. ಅಶಿಸ್ತು ಕಂಡಾಗ ಅವರ ಕೋಪ ಭುಗಿಲೆನ್ನುತ್ತಿತ್ತು. ಅವರ ಕೋಪಕ್ಕೆ ನಾವೆಲ್ಲ ಹೆದರಿ ಸಾಯುತ್ತಿದ್ದೆವು. ಮನೆ ಮನಸ್ಸು ಎರಡೂ ಸ್ವಚ್ಛವಾಗಿರಬೇಕು ಅವರಿಗೆ. ಹಾಗಾಗಿ ನಮ್ಮ ಮನೆ ಯಾವಾಗ ನೋಡಿದರೂ ಬಹಳ ಸ್ವಚ್ಛವಾಗಿರುತ್ತಿತ್ತು. ಎಲ್ಲಿ ನೋಡಿದರೂ ಒಂದು ಕಸವಿಲ್ಲ. ಪೀಠೋಪಕರಣಗಳು ಅದರ ಜಾಗ ಬಿಟ್ಟು ಕದಲುತ್ತಿರಲಿಲ್ಲ. ಮನೆಯ ಒಪ್ಪ ಓರಣ ಕಾಪಾಡುವ ಕಾರ್ಯದಿಂದಾಗಿ ಅಮ್ಮನಿಗೆ ದಿನವಿಡೀ ಕೆಲಸ. ಪಪ್ಪ ಶಿಸ್ತಿನ ಸಿಪಾಯಿ. ಮಹಾ ಕೋಪಿಷ್ಠ. ಅಮ್ಮ ಸಹನಾಮೂರ್ತಿ. ಪ್ರೀತಿಯ ಸಾಕಾರ ಸ್ವರೂಪ. ಪಪ್ಪನ ಯಾವ ಮಾತಿಗೂ ಎದುರಾಡದ ವಿಧೇಯ ಪತ್ನಿ. ಪಪ್ಪನ ಉದಾತ್ತ ಧ್ಯೇಯಗಳನ್ನು ಅರಿತುಕೊಂಡು ಅದಕ್ಕೆ ಸರಿಯಾಗಿ ಸ್ಪಂದಿಸಿದ ಅಮ್ಮ ಆದರ್ಶ ಗೃಹಿಣಿ.

ನನ್ನ ಪಪ್ಪ ಅಮ್ಮನನ್ನು ನೆನಪಿಸಿಕೊಳ್ಳುವಾಗ ನನ್ನ ನೆನಪಿಗೆ ಬರುವುದು ಉಡುಪಿಯ ಮನೆ. ಎಷ್ಟೊಂದು ಮರೆಯಲಾಗದ ನೆನಪುಗಳಿವೆ ಅಲ್ಲಿ! ಆಗಾಗ ಕಾಡುವ ಬಾಲ್ಯದ ನೆನಪುಗಳು. ನನ್ನ ಜೀವನವನ್ನು ರೂಪಿಸಲು ನೆರವಾದ ನೆನಪುಗಳು. ಹಲವಾರು ಸಂತಸದ ನೆನಪುಗಳು; ನೋವಿನ ನೆನಪುಗಳು. ಎಲ್ಲವೂ ಹಸಿಹಸಿಯಾಗಿ ಮನದ ಮೂಲೆಯಲ್ಲಿ ಗೂಡು ಕಟ್ಟಿವೆ. ಜೀವಂತವಾಗಿವೆ. ಈಗ ಮನೆಯ ಸ್ವರೂಪ ಬದಲಾಗಿದೆ. ಆದರೆ ನನ್ನ ನೆನಪುಗಳಲ್ಲಿ ಅದೇ ಹಳೆಮನೆ, ಅಲ್ಲಿ ಕಳೆದ ನಮ್ಮ ಬಾಲ್ಯದ ನೆನಪುಗಳು ಅಚ್ಚೊತ್ತಿ ನಿಂತಿವೆ.

ಪಪ್ಪ ಎಲ್ಲ ರೀತಿಯಲ್ಲೂ ವಿಶಿಷ್ಟರಾಗಿದ್ದರು. ಯಾವುದೇ ಗುಂಪಿನಲ್ಲಿದ್ದರೂ ಎದ್ದು ತೋರುವ, ಪ್ರತ್ಯೇಕವಾಗಿ ನಿಲ್ಲುವ, ಗೌರವ ಉಕ್ಕಿಸುವ ವ್ಯಕ್ತಿತ್ವದವರು. ಅದು ಶ್ರೀಮಂತಿಕೆಯ ಗತ್ತಲ್ಲ. ಕಿಸೆ ಖಾಲಿಯಿದ್ದರೂ ವ್ಯಕ್ತಿತ್ವದ ವರ್ಚಸ್ಸಿನ ಗತ್ತು. ಅವರ ಉಡುಪಿನಲ್ಲೂ ಅದೇ ವಿಶಿಷ್ಟತೆ. ಯಾವಾಗಲೂ ಗರಿಗರಿಯಾಗಿ ಇಸ್ತ್ರಿ ಮಾಡಿದ್ದ ಬೆಳ್ಳಗಿನ ಖಾದಿ ಉಡುಪು. ಖಾದಿ ಕಚ್ಚೆ, ಅದರ ಮೇಲೆ ಉದ್ದನೆಯ ಖಾದಿ ಶರ್ಟು. ಶರ್ಟೆಂದರೆ ಶರ್ಟಲ್ಲ, ಈಗಿನ ಕುರ್ತಾ ಮತ್ತು ಶರ್ಟಿನ ಸಮೀಕರಣ ಅಲ್ಲಿತ್ತು. ಮೇಲೊಂದು ಬಾರ್ಡರ್ ಮೇಲೆ ಬರುವಂತೆ ಒಪ್ಪವಾಗಿ ಮಡಚಿರುವ ಖಾದಿ ಶಾಲು. ಒಳ ಉಡುಪುಗಳೂ ಖಾದಿಯವೇ. ಅವರ ಉಡುಪಿನ ಶೈಲಿ

ಯಾವತ್ತೂ ಬದಲಾಗಲಿಲ್ಲ. ಉಡುಗೆ ತೊಡುಗೆಯಲ್ಲಿ ತುಂಬಾ ಅಚ್ಚುಕಟ್ಟು. ಅವರಷ್ಟು ನೀಟಾಗಿ ಡ್ರೆಸ್ ಮಾಡಲು ನಮಗಾರಿಗೂ ಬರುವುದಿಲ್ಲ ಎಂದೇ ಹೇಳಬೇಕು. ಅವರು ಧರಿಸುತ್ತಿದ್ದ ಬಿಳಿ ಬಟ್ಟೆಯಷ್ಟೇ ನಿರ್ಮಲ ಪ್ರಾಮಾಣಿಕ ಅವರ ಮನಸ್ಸು. ಮೇಧಾವಿತನವನ್ನು ಬಿಂಬಿಸುವ ಅಗಲವಾದ ಹಣೆ, ಅಲ್ಲಿ ಮೂಡುತ್ತಿದ್ದ ಪ್ರತಿ ನೆರಿಗೆಯಲ್ಲೂ ಜೀವನವನ್ನೆದುರಿಸುವ ಛಲ. ದಪ್ಪ ಕನ್ನಡಕದ ಮರೆಯಲ್ಲಿ ಅಡಗಿರುವ ಕಣ್ಣಿನ ದೃಷ್ಟಿಯ ತೀಕ್ಷ್ಣತೆಯಲ್ಲಿ ಜೀವನದ ಸತ್ವಪರೀಕ್ಷೆಗಳನ್ನು ಎದುರಿಸುವ ದಿಟ್ಟತನ ಘಟಮಾರಿತನವನ್ನು ಸೂಚಿಸುವ ಚೂಪು ಮೂಗು. ಮುಖದ ತುಂಬಾ ಏನೇ ಕಷ್ಟ ಎದುರಾದರೂ ತಾನು ನಂಬಿರುವ ಮೌಲ್ಯಗಳನ್ನು ಬಿಡಲಾರೆನೆನ್ನುವ ಆತ್ಮವಿಶ್ವಾಸ. ನನ್ನ ಪಪ್ಪ ಇದ್ದದ್ದು ಹೀಗೆ.

ಪಪ್ಪನಿಗೆ ಹೋಲಿಸಿದರೆ ಅಮ್ಮನದ್ದು ಬಹಳ ಸರಳವಾದ ವ್ಯಕ್ತಿತ್ವ. ಗಂಡ, ಮನೆ, ಏಳು ಮಕ್ಕಳು, ಪಪ್ಪನ ಅನಾರೋಗ್ಯ, ಮನೆಗೆ ಬರುವ ಅತಿಥಿಗಳು, ಕೊಟ್ಟಿಗೆ ತುಂಬಾ ಹಸುಗಳು, ಇದನ್ನೆಲ್ಲ ಸುಧಾರಿಸುವಷ್ಟರಲ್ಲಿ ಅಮ್ಮನಿಗೆ ಅವರಿಗಾಗಿ ಸಮಯ ಸಿಗುತ್ತಿದ್ದುದೇ ಕಡಿಮೆ. ಬೆಳಗ್ಗೆ ಐದು ಗಂಟೆಗೆ ಎದ್ದರೆ ರಾತ್ರಿ ಹೇಗೆ ಬಂತೆಂದು ಅರಿವಿಗೆ ಬಾರದಷ್ಟು ಕೆಲಸ. ದಿನನಿತ್ಯದ ಬಿಡುವಿಲ್ಲದ ಕೆಲಸಗಳ ಮಧ್ಯೆ ಅವರ ಜೀವನ ಸುತ್ತುತ್ತಿತ್ತು. ಅವರ ಮುಖದಲ್ಲಿ ಸದಾ ಮಿಂಚುತ್ತಿದ್ದ ನಗುವೇ ಅವರ ಆಭರಣ. ಎಲ್ಲಿಯಾದರೂ ಮದುವೆಗೆ ಹೊರಡುವಾಗ ಅಮ್ಮ ಇಷ್ಟೊಂದು ಚೆನ್ನಾಗಿದ್ದಾರಾ ಎಂದು ಅನಿಸುತ್ತಿತ್ತು. ಮದುವೆಯಾದ ಸುರುವಿನಲ್ಲಿ ಲೀಲಾಬಾಯಿ ಕಾಮತರಿಂದ ಪ್ರೇರಿತರಾಗಿ ಪಪ್ಪನ ಒತ್ತಾಸೆಯಲ್ಲಿ ಹಿಂದೀ ಕಲಿತದ್ದೂ ಇದೆ. ಸುತ್ತುಮುತ್ತಲ ಗೆಳತಿಯರ ಜೊತೆಗೆ ಸಿನೀಮಾಗಳನ್ನು ನೋಡಿದ್ದೂ ಇದೆಯಂತೆ.

ಅಮ್ಮ ಪಪ್ಪನದ್ದು ಬಹಳ ಹೊಂದಿಕೊಂಡಿದ್ದ ಜೋಡಿ. ಅವರಿಬ್ಬರೂ ಒಬ್ಬರನ್ನೊಬ್ಬರು ಬಿಟ್ಟಿದ್ದುದೇ ಇಲ್ಲ. ವಯಸ್ಸಿನ ಅಂತರವಿದ್ದುದರಿಂದ ಅಮ್ಮನಿಗೆ ಪಪ್ಪನೆಂದರೆ ಭಯ ಭಕ್ತಿ ಜಾಸ್ತಿ. ಒಮ್ಮೊಮ್ಮೆ ಪಪ್ಪನ ಮುಂಗೋಪ ಅವರನ್ನು ಕಂಗೆಡಿಸಿದ್ದರೂ ಸಹನಶೀಲತೆಯಿಂದ ಎಲ್ಲವನ್ನೂ ಜಯಿಸಿಕೊಂಡು ಪಪ್ಪನ ಎಲ್ಲ ಕಷ್ಟಸುಖಗಳಲ್ಲಿ ನಗುನಗುತ್ತ ಭಾಗಿಯಾಗಿ ಜೀವಿಸಿದ್ದ ಅಮ್ಮನೇ ನಮ್ಮ ಆದರ್ಶ. ಆದರೆ ನಮಗೆ ಅಮ್ಮನಷ್ಟು ಸಹನೆ ಇಲ್ಲ. ಅನಾರೋಗ್ಯದಿಂದ ಹಲವಾರು ಬಾರಿ ಮೃತ್ಯುವಿನ ದವಡೆಗೆ ಹೋಗಿದ್ದ ಪಪ್ಪನನ್ನು ಸಾವಿತ್ರಿಯ ಛಲದಂತೆ ಶುಶ್ರೂಷೆ ಮಾಡಿ ಉಳಿಸಿಕೊಂಡಿದ್ದವರು ಅಮ್ಮ. ಮದುವೆಯಾಗುವಾಗ ಪಪ್ಪನಲ್ಲಿ 'ಶ್ರೀಮಂತ' ಎನ್ನುವಷ್ಟು ಹಣ ಇದ್ದರೂ ಹಲವಾರು ಕಾಯಿಲೆಗಳು, ದೊಡ್ಡ ಸಂಸಾರದ ಹೊಣೆಗಾರಿಕೆ, ಪತ್ರಿಕೆ ನಡೆಸುವ ಸಾಹಸ, ಪಪ್ಪನ ಕಾಯಿಲೆಯ ಸಮಯದಲ್ಲಿ ಹತ್ತಿರದವರಿಂದಲೇ ಅವರಿಗಾದ ಮೋಸ ಪಪ್ಪನ ಖಜಾನೆಯನ್ನು ಬರಿದಾಗಿಸಿತ್ತು. ೧೯೫೩-೫೪ ರಲ್ಲಿ ಅವರು ತೀವ್ರ ಅನಾರೋಗ್ಯದಿಂದ ನರಳಿ ೫-೬ ತಿಂಗಳು ಮದ್ರಾಸಿನಲ್ಲಿ ಚಿಕಿತ್ಸೆ ಪಡೆಯಬೇಕಾಯಿತು. ಅಲ್ಲಿಂದ ಹಿಂದೆ ಬರುವಾಗ 'ನವಯುಗ'ಕ್ಕೆ ಹಾಗೂ ಪಪ್ಪನ ಖಜಾನೆಗೆ ರಾಹು ಬಡಿದಿತ್ತು. ನವಯುಗ ಪ್ರೆಸ್ಸಿನಲ್ಲಿ ಕುಳಿತ ಪಪ್ಪನ ಸಂಬಂಧಿಕರೇ ಎಲ್ಲವನ್ನೂ ಬರಿದಾಗಿಸಿದ್ದರು. ಪಪ್ಪನ ಉಸ್ತುವಾರಿಯಿಲ್ಲದೆ ಹೊರಬರುತ್ತಿದ್ದ 'ನವಯುಗ' ತನ್ನ ಸತ್ವವನ್ನೆಲ್ಲ ಕಳಕೊಂಡು ಜನಪ್ರಿಯತೆಯನ್ನು ಕಳಕೊಂಡಿತ್ತು. ಪಪ್ಪನ ಉತ್ಸಾಹವೂ ಕಳೆಗುಂದಿತ್ತು. ಅಲ್ಲಿಂದ ಮುಂದೆ

ಅವರಿಗೆ ಜೀವನ ನಿರಂತರ ಹೋರಾಟವಾಗಿತ್ತು. ಅವರು ಪುನಃ ಪ್ರೆಸ್ಸಿಗೆ ಹೋಗಲು ಪ್ರಾರಂಭಿಸಿದಾಗ 'ನವಯುಗ'ಕ್ಕೆ ಪುನಶ್ಚೇತನವಾಯಿತಾದರೂ ಪಪ್ಪನಿಂದ ಹಿಂದಿನ ಹಾಗೆ ದುಡಿಯಲು ಸಾಧ್ಯವಾಗಲಿಲ್ಲ. ಹಿಂದೆ ಕೈಯಿಂದ ಹಣ ಹಾಕಿ ಪತ್ರಿಕೆ ನಡೆಸುತ್ತಿದ್ದರು. ಈಗ ಸಾಲ ಮಾಡಿ ಪತ್ರಿಕೆ ನಡೆಸಬೇಕಾದ ಪರಿಸ್ಥಿತಿ. ಆದರೆ ಅವರ ಛಲ ಅವರ ಪರಿಸ್ಥಿತಿಯನ್ನು ಎಲ್ಲರಿಂದರೂ ಮುಚ್ಚಿಟ್ಟಿತ್ತು. 'ನವಯುಗ'ದ ಮೇಲಿನ ಅವರ ಪ್ರೀತಿ ಅವರನ್ನು ಪತ್ರಿಕೆ ನಿಲ್ಲಿಸದಂತೆ ಮುಂದುವರಿಸಿತ್ತು.

ನಾವು ದೊಡ್ಡವರಾಗುವಾಗ ನೋಡಿದ್ದು ಅವರ ಅನಾರೋಗ್ಯದ ಒದ್ದಾಟವನ್ನು. ಅವರಿಗೆ ಒಂದು ವಿಚಿತ್ರವಾದ ಬಲಕೆನ್ನೆಯ ನೋವು ಪ್ರಾರಂಭವಾಗಿತ್ತು. ಯಾವ ಮಾತ್ರೆಗೂ ಜಗ್ಗದ ನೋವದು. ಅವರು ಬಲಕೆನ್ನೆಯನ್ನು ಒತ್ತಿಹಿಡಿದು ನೋವು ಅನುಭವಿಸುತ್ತಿದ್ದ ಚಿತ್ರ ಕಣ್ಣ ಮುಂದೆ ಬಂದಾಗಲೆಲ್ಲ ಈಗಲೂ ಹೃದಯ ನಡುಗುತ್ತದೆ. ಆ ನೋವನ್ನು ಹಿಡಿದುಕೊಂಡು 'ನವಯುಗ' ಉಳಿಸಲು ಅವರು ಪಡುತ್ತಿದ್ದ ಪಾಡು ದೇವರಿಗೇ ಪ್ರೀತಿ. ಮೊದಲೇ ಕೃಶ ಶರೀರ, ಅನಾರೋಗ್ಯದ ನಂತರವಂತೂ ಎಲುಬಿನ ಹಂದರವಾಗಿತ್ತು. ಕೆಲವು ವರುಷಗಳ ಕಾಲ ಆ ನೋವು ಪಪ್ಪನನ್ನು ಹಿಂಡಿ ಹಿಪ್ಪೆ ಮಾಡಿತ್ತು. ನೋವು ತಡೆಯಲಾಗದೆ ಪಪ್ಪನ ಸಿಟ್ಟೂ ಇಮ್ಮಡಿಸಿತ್ತು. ಆಗ ಪಪ್ಪನೊಡನೆ ಮಾತಾಡಲೂ ನಾವು ಹೆದರುತ್ತಿದ್ದೆವು. ಈಗ ಯೋಚಿಸಿದರೆ ಆಶ್ಚರ್ಯವಾಗುತ್ತದೆ. ಅನಾರೋಗ್ಯ, ಇಳಿದ ಆದಾಯ, ಬರಿದಾದ ಖಜಾನೆ, ನಮ್ಮೆಲ್ಲರ ವಿದ್ಯಾಭ್ಯಾಸ, ಮನೆಯಲ್ಲಿ ಬಂದುಹೋಗುವವರನ್ನು ಸುಧಾರಿಸುವುದು, 'ನವಯುಗ'ದ ಪ್ರಕಟಣೆಯನ್ನು ಒಂದು ವಾರವೂ ನಿಲ್ಲಿಸಬಾರದೆನ್ನುವ ಛಲ, ಸಂಸಾರದ ಹಲವಾರು ಕಷ್ಟನಷ್ಟಗಳು, ಇವುಗಳ ಮಧ್ಯೆ ಪಪ್ಪ ಮತ್ತು ಅಮ್ಮ ಎಲ್ಲವನ್ನೂ ಹೇಗೆ ಸರಿತೂಗಿಸಿಕೊಂಡು ಹೋಗುತ್ತಿದ್ದರೋ? ಅಮ್ಮನಿಲ್ಲದೆ ಪಪ್ಪ ಅಷ್ಟೆಲ್ಲ ಕಷ್ಟಗಳನ್ನು ಎದುರಿಸಿ ನಿಲ್ಲುವುದು ಸಾಧ್ಯವೇ ಇರಲಿಲ್ಲವೆಂದು ನಮಗೀಗ ಅರ್ಥವಾಗುತ್ತಿದೆ. ಅಮ್ಮ ಪಪ್ಪನಿಗೆ ಹೊಂದಿಕೊಂಡಿದ್ದ ರೀತಿ ಅದ್ಭುತ. ಪಪ್ಪನ ಸಿಟ್ಟಿಗೆ ಸಾಟಿಯಾದ ಅಮ್ಮನ ಶಾಂತ ಸ್ವಭಾವ, ಪಪ್ಪನ ಹಲವಾರು ಅನಾರೋಗ್ಯಗಳ ಸಂದರ್ಭದಲ್ಲಿ ಅವರು ತೋರಿಸಿರುವ ಸೇವಾಭಾವ ಎಲ್ಲವೂ ಅನನ್ಯ. ನಮ್ಮನ್ನು ರೂಪಿಸುವಲ್ಲಿ ಇಬ್ಬರದ್ದೂ ಸಮಪಾಲು. ಆದರೆ ಅವರು ರೂಪಿಸಿರುವ ಮಕ್ಕಳ ಏಳಿಗೆಯನ್ನು ನೋಡುವ ಭಾಗ್ಯ ಅವರಿಗಿರಲಿಲ್ಲ. ಅದು ಬಹಳ ನೋವಿನ ಸಂಗತಿ. ಕಾಯಕವೇ ಕೈಲಾಸವೆಂದು ಅವರು ಜೀವಿಸಿದ್ದರೂ ಅವರಿಗೆ ದೊರೆತದ್ದು ಕಾಯಕದ ಕಷ್ಟ ಮಾತ್ರ. ಕೈಲಾಸದ ಸುಖ ಅವರಿಗೆ ದೊರೆಯಲೇ ಇಲ್ಲ.

೧೯೫೮ ರಲ್ಲಿ ಮಂಗಳೂರಿನ ಡಾ. ವೇಣುಗೋಪಾಲ ಶೆಟ್ಟರು ಇಂಗ್ಲೆಂಡ್‌ನಲ್ಲಿ ಹೆಚ್ಚಿನ ಶಸ್ತ್ರಚಿಕಿತ್ಸೆಯ ತರಬೇತಿ ಪಡೆದು ಬಂದಾಗ ಆ ನೋವಿಗೆ ಕೊನೆ ಕಾಣಿಸಬೇಕೆಂದು ಜೀವದ ಹಂಗು ತೊರೆದು ಶಸ್ತ್ರಚಿಕಿತ್ಸೆಗೆ ತಲೆ ಒಪ್ಪಿಸಿದರು ಪಪ್ಪ. ಆ ನೋವು ಹೋದರೆ ಮಾತ್ರ ಜೀವವೆನ್ನುವುದು ಅವರ ನಿರ್ಧಾರವಾಗಿತ್ತು. ಡಾಕ್ಟರರಿಗೆ ಆಪರೇಶನ್ ಮಾಡಲು ಭಯ. ಜೀವಕ್ಕೇ ಅಪಾಯ. ಜೀವ ಉಳಿದರೆ ಮುಖದಲ್ಲಿ ಅರೆಪಕ್ಷಪಾತವಾಗುವ ಭಯವಿತ್ತು. ಪಪ್ಪ ಆಪರೇಶನ್‌ಗೆ ಒಳಹೋದಾಗ ಅವರು ಜೀವಂತವಾಗಿ ಹೊರಬರುವರೆನ್ನುವ ಧೈರ್ಯ

ನಮಗಾರಿಗೂ ಇರಲಿಲ್ಲ. ಆದರೆ ನಮ್ಮೆಲ್ಲರ ಪುಣ್ಯದಿಂದಲೋ 'ನವಯುಗ'ಕ್ಕೆ ಇನ್ನೂ ಆಯುಷ್ಯವಿದ್ದಿದ್ದರಿಂದಲೋ ಪಪ್ಪ ಏನೂ ಆಗದೇ ಯಾವ ನ್ಯೂನತೆಗೂ ಒಳಗಾಗದೇ ಮೃತ್ಯುವಿನ ದವಡೆಯಿಂದ ತಪ್ಪಿಸಿಕೊಂಡು ಹೊರಬಂದಿದ್ದರು. ಜೀವನ ಇನ್ನೂ ಹಲವಾರು ಕಷ್ಟ ಕಾರ್ಪಣ್ಯಗಳನ್ನು ಅನುಭವಿಸುವ ಯೋಗವನ್ನು ಅವರಿಗೆ ಕಾಯ್ದಿರಿಸಿತ್ತು. ಯಾಕೆಂದರೆ ಅದರ ನಂತರ ಅವರು ಅನುಭವಿಸಿದ್ದು ನೋವುಗಳನ್ನೇ, ಕಷ್ಟಗಳನ್ನೇ.

ಆಸ್ಪತ್ರೆಯಿಂದ ಬಂದು ಎರಡು ತಿಂಗಳ ನಂತರ ಅವರು ಪುನಃ ಪ್ರೆಸ್ಸಿಗೆ ಹೋಗಲು ಪ್ರಾರಂಭಿಸಿ 'ನವಯುಗ'ದ ವೈಭವವನ್ನು ಪುನರ್‌ಪ್ರತಿಷ್ಠಾಪಿಸಲು ಮಾಡಿದ ಪ್ರಯತ್ನಗಳೆಲ್ಲಾ ನೀರುಪಾಲು. ಏರುತ್ತಿದ್ದ ಪೇಪರಿನ ಬೆಲೆ, ಹೊಸ ಪತ್ರಿಕೆಗಳಿಂದ ಸ್ಪರ್ಧೆ, ಇವೆಲ್ಲಾ ಕಾರಣಕ್ಕೆ 'ನವಯುಗ'ಕ್ಕೆ ಬಿದ್ದಲ್ಲಿಂದ ಏಳುವುದೇ ಸಾಧ್ಯವಾಗಲಿಲ್ಲ. ಒಂದು ತತ್ವಕ್ಕೆ ಬದ್ಧವಾಗಿದ್ದ ಪತ್ರಿಕೆ ಎಲ್ಲ ರಸಗಳನ್ನು ಹೊತ್ತುಬರುತ್ತಿದ್ದ ಪತ್ರಿಕೆಗಳೊಡನೆ ಹೋರಾಡುವುದೂ ಸಾಧ್ಯವಿರಲಿಲ್ಲ. ಆರ್ಥಿಕ ಮುಗ್ಗಟ್ಟಿನಿಂದ ಹೆಚ್ಚಿನ ಸುಧಾರಣೆಗಳಿಗೆ ಕೈಹಾಕುವುದೂ ಸಾಧ್ಯವಿರಲಿಲ್ಲ. ಈ ಕಷ್ಟ ಕೋಟಲೆಗಳ ನಡುವೆಯೇ 'ನವಯುಗ' ಸ್ವರ್ಣಮಹೋತ್ಸವವನ್ನು ಆಚರಿಸಿದ್ದು ಒಂದು ಸಂತಸದ ಸಂಗತಿ. ಆಗ ದಕ್ಷಿಣ ಕನ್ನಡದಲ್ಲಿ ೫೦ ವರುಷಗಳನ್ನು ದಾಟಿದ ಪತ್ರಿಕೆ ಅದೊಂದೇ ಆಗಿತ್ತು. ಅದನ್ನು ಅಲ್ಲಿಯ ವರೆಗೆ ಕೊಂಡೊಯ್ದ ಪಪ್ಪನ ಶ್ರಮ ಅಸಾಧಾರಣವಾದದ್ದು.

ತಮ್ಮ ತನು ಮನ ಧನ ಎಲ್ಲವನ್ನೂ ಧಾರೆ ಎರೆದು 'ನವಯುಗ'ವನ್ನು ಉಳಿಸಲು ಹೋರಾಡಿದ್ದರು. ಕೊನೆಯ ೩-೪ ವರ್ಷಗಳಲ್ಲಿ ಒಂದೊಂದು ಸಂಚಿಕೆಯನ್ನು ಹೊರತರುವುದೂ ಹರ ಸಾಹಸವಾಗಿತ್ತು. ಚಂದಾದಾರರಿಂದ ಹಣ ಬರುತ್ತಿರಲಿಲ್ಲ. ಹಣ ಕಳುಹಿಸಲು ಕೋರಿ ಬರೆದ ಪತ್ರಗಳು ಹಿಂದೆ ಬರುತ್ತಿದ್ದವು. ಹೇಗೂ ಒಂದೆರಡು ಜಾಹೀರಾತು ಸಂಗ್ರಹಿಸಿ ಪತ್ರಿಕೆಯನ್ನು ಹೊರತರುವ ಸಾಹಸ ಮಾಡುತ್ತಿದ್ದರೂ ಅದರಿಂದ ಸಂಪಾದನೆ ಏನೂ ಇರಲಿಲ್ಲ. ಪುಸ್ತಕ ಭಂಡಾರ ಹಾಗೂ ಬೇರೆ ಪ್ರಿಂಟಿಂಗ್‌ನಿಂದ ಬಂದ ಹಣದಲ್ಲಿ ಕೆಲಸದವರಿಗೆ ಸಂಬಳ ಕೊಡಬೇಕಿತ್ತು. ಮನೆಯ ಖರ್ಚು ತೂಗಿಸಬೇಕಿತ್ತು. ಮಕ್ಕಳಿಗೆ ಮದುವೆಯಾಗಬೇಕಿತ್ತು. ತಾನು ಸಾಯುವ ವರೆಗೆ 'ನವಯುಗ'ವನ್ನು ನಿಲ್ಲಿಸಲಾರೆ ಎನ್ನುವ ಛಲವೇ ಗುರುವಾರ ತಪ್ಪದೇ ಪತ್ರಿಕೆ ಹೊರಬರಲು ಕಾರಣವಾಗಿತ್ತು. 'ನವಯುಗ'ವನ್ನು ಉಳಿಸಲೆಂದು, ಚಂದಾದಾರರನ್ನು ಮಾಡಲೆಂದು, ಜಾಹೀರಾತು ಸಂಗ್ರಹಿಸಲೆಂದು ಪಪ್ಪ ತನ್ನ ಅನಾರೋಗ್ಯದ ನಡುವೆಯೂ ಊರೂರು ಅಲೆಯುತ್ತಿದ್ದುದನ್ನು ನೆನೆಯುವಾಗ ಹೃದಯ ಹಿಂಡಿದಂತಾಗುತ್ತದೆ. ಪಪ್ಪ ನಮಗೆ ಹೇಳುತ್ತಿದ್ದರು– ಈ ಪತ್ರಿಕೆ ನಡೆಸುವ ಕೆಲಸ ನಿಮಗಾರಿಗೂ ಬೇಡ, ಅದೊಂದು ಆನೆ ಸಾಕುವ ಕೆಲಸ, ನನ್ನೊಂದಿಗೇ ಅದು ನಿಲ್ಲಲಿ ಎಂದು. ಪಪ್ಪ ಹಟಮಾರಿಯಾಗಿಂದಿದ್ದರೆ 'ನವಯುಗ' ಯಾವಾಗಲೋ ನಿಂತುಹೋಗುತ್ತಿತ್ತು. ೧೯೭೪ ರ ಜೂನ್ ೧ ರಂದು ಪ್ರೆಸ್ಸಿನಿಂದ ಸಂಜೆ ಹಿಂತಿರುಗಿದ ಪಪ್ಪ ಯಾವುದೇ ಮುನ್ಸೂಚನೆಯಿಲ್ಲದೆ ಕೊನೆಯುಸಿರೆಳೆದಾಗ ಮರುದಿನ ಹೊರಬರಬೇಕಿದ್ದ ಪತ್ರಿಕೆಯ ಎಲ್ಲ ಸಿದ್ಧತೆಯಾಗಿತ್ತು. ಆದರೆ ಆ ಕೊನೆಯ ಸಂಚಿಕೆ ಪ್ರಕಟವಾದದ್ದು ಪಪ್ಪನ ಸಾವಿನ ಸುದ್ದಿಯೊಂದಿಗೆ.

ಪಪ್ಪನ ಹೆಚ್ಚಿನ ಸಾಧನೆಗಳು ಅವರ ೨೪ ರಿಂದ ೩೦ ವರುಷಗಳ ಕಾಲದಲ್ಲಿ ನಡೆದಿದ್ದುವು. ಅವರ ಜೀವನದ ಸ್ವರ್ಣಯುಗವೂ ಅದಾಗಿತ್ತು. 'ನವಯುಗ' ಉಡುಪಿಗೆ ಬಂದಾಗ ಅದು ಪ್ರಕಟವಾಗುತ್ತಿದ್ದುದು ತುಳುಸೇನಾನಿ ಎಸ್. ಯು. ಪಣಿಯಾಡಿಯವರ ಪ್ರೆಸ್ಸಿನಲ್ಲಿ. ಪಪ್ಪ ಪತ್ರಿಕೋದ್ಯಮಿಯಾಗಿ ಬೆಳೆದದ್ದು ಇವರ ಗರಡಿಯಲ್ಲಿಯೇ. ಅದು ಮುಚ್ಚಿದ ಮೇಲೆ ೧೯೩೪ ರಲ್ಲಿ ಕೆಲವು ಹಿತೈಷಿಗಳ ಸಹಕಾರದಿಂದ ಸ್ವಂತ ನವಯುಗ ಮುದ್ರಣಾಲಯವನ್ನು ಪ್ರಾರಂಭಿಸಿದರು. ಅವರಿಗೆ ಸ್ಥಳಾವಕಾಶ ಮಾಡಿಕೊಟ್ಟವರು ಕೃಷ್ಣಾಪುರ ಮಠದವರು. ಜೊತೆಗೆ 'ನವಭಾರತ ಪುಸ್ತಕ ಭಂಡಾರ'ವೆಂಬ ಪುಸ್ತಕ ಮಾರಾಟದ ಅಂಗಡಿಯನ್ನು ನವಯುಗ ಎಂಟರ್ಪ್ರೈಸಸ್ ಎನ್ನುವ ಮಿತ ಬಂಡವಾಳದ ಸಂಸ್ಥೆಯ ಮೂಲಕ ಪ್ರಾರಂಭಿಸಿದರು.

ಪಪ್ಪನ ಚಟುವಟಿಕೆಗಳು ನವಯುಗ ಪತ್ರಿಕೆಗೇ ಸೀಮಿತವಾಗಿರಲಿಲ್ಲ. ಪಣಿಯಾಡಿಯವರು ನಡೆಸುತ್ತಿದ್ದ 'ಅಂತರಂಗ' ಪತ್ರಿಕೆ ನಿಂತುಹೋದಾಗ ಅದನ್ನು ಮತ್ತೊಮ್ಮೆ ಹೊಸ ರೂಪದಲ್ಲಿ ಪ್ರಾರಂಭಿಸಿದ್ದು ಅವರ ಸಾಹಸೀ ಪ್ರವೃತ್ತಿಗೆ ಒಂದು ಉದಾಹರಣೆ. 'ಅಂತರಂಗ' ಒಂದು ಸಾಹಿತ್ಯಿಕ ಪತ್ರಿಕೆಯಾಗಿ ಪತ್ರಿಕಾರಂಗದಲ್ಲಿಯೇ ಒಂದು ಹೊಸ ಮೈಲಿಗಲ್ಲಾಗಿತ್ತು ಎಂದು ಅನೇಕ ಹಿರಿಯರು ಸ್ಮರಿಸುವುದನ್ನು ನಾನು ಕೇಳಿದ್ದೇನೆ. ಆ ಕಾಲದಲ್ಲಿ ಅಖಿಲ ಕರ್ನಾಟಕ ವ್ಯಾಪ್ತಿಯನ್ನು ಹೊಂದಿದ್ದ ಏಕೈಕ ಪತ್ರಿಕೆ ಅದಾಗಿತ್ತಂತೆ. ಎರಡನೇ ಮಹಾಯುದ್ಧದ ಕಾಲದಲ್ಲಿ ಮುದ್ರಣ ವೆಚ್ಚ ದುಬಾರಿಯಾಗಿ 'ಅಂತರಂಗ' ಸೊರಗಿ ಸೋತರೂ ಅದನ್ನು ಉಳಿಸುವ ಸಾಹಸದಲ್ಲಿ ಪಪ್ಪ ಅದನ್ನು ಪುಸ್ತಕ ಪತ್ರಿಕೆಯಾಗಿ ಬದಲಾಯಿಸಿ ೧೯೩೦ ರಿಂದ ೨ ವರುಷಗಳ ಕಾಲ ಪ್ರತಿವಾರವೂ ನಾಡಿನ ಹಿರಿಯರ ಕಿರಿಯರ ಕಿರು ಕೃತಿಗಳನ್ನು ಅಂತರಂಗದ ಪುಟಗಳಲ್ಲಿ ಪ್ರಕಟಿಸಲು ಪ್ರಾರಂಭಿಸಿದರು. ಕೆಲವು ವರುಷಗಳ ಕಾಲ 'ನವಯುಗ'ದ ಉಪಸಂಪಾದಕರಾಗಿ ಕೆಲಸ ಮಾಡಿದ್ದ ಕುಮಾರಸ್ವಾಮಿಯವರು ಹೇಳುವಂತೆ ನೂರಕ್ಕಿಂತಲೂ ಹೆಚ್ಚು ಪುಸ್ತಕಗಳು ಅಂತರಂಗದ ಸಂಚಿಕೆಯ ರೂಪದಲ್ಲಿ ಹೊರಬಂದಿವೆ. ಆದರೆ ಅದರ ಪ್ರತಿಗಳು ಸಿಗುತ್ತಿಲ್ಲ.

'ನವಯುಗ' ಪ್ರತಿ ತಿಂಗಳಲ್ಲಿ ಒಂದು ತಿಂಗಳ ಕಾಣಿಕೆಯನ್ನು ಕೊಡುತ್ತಿತ್ತಲ್ಲದೆ, ತಿಂಗಳಿಗೊಂದು ತುಳು ಸಂಚಿಕೆಯನ್ನೂ ಕೊಡುತ್ತಿತ್ತು. ಉಪಾಧ್ಯಾಯರಿಗೆಂದೇ ಅವರು ಪ್ರಕಟಿಸಿದ ಮತ್ತೊಂದು ಶೈಕ್ಷಣಿಕ ಪತ್ರಿಕೆ 'ಬಾಲಚಂದ್ರ'. ಸ್ವತಃ ಉಪಾಧ್ಯಾಯರಾಗಿದ್ದ ಅವರಿಗೆ ಈ ರೀತಿಯ ಶೈಕ್ಷಣಿಕ ಪತ್ರಿಕೆಯ ಆವಶ್ಯಕತೆ ಕಂಡುಬಂದದ್ದು ಸಹಜ. ಕೆ. ಆರ್. ಶೆಣೈ ಮತ್ತು ಪಪ್ಪ ಜತೆಯಾಗಿ ಕೆಲವು ಕಾಲ ಈ ಪತ್ರಿಕೆಯನ್ನು ನಡೆಸಿ ಶಾಲಾ ವ್ಯವಸ್ಥಾಪಕರಿಗೂ ಶಿಕ್ಷಕರಿಗೂ ಮಾರ್ಗದರ್ಶನ ನೀಡಿದ್ದರು. ಮೂರು ಪತ್ರಿಕೆಗಳನ್ನು ಒಟ್ಟಾಗಿ ಪ್ರಕಟಿಸುವ ಸಾಹಸ ಮಾಡಿದ ಪತ್ರಿಕೋದ್ಯಮಿ ಆಗಿನ ಕಾಲದಲ್ಲಿ ದಕ್ಷಿಣ ಕನ್ನಡದಲ್ಲಿ ಬೇರೆ ಯಾರೂ ಇರಲಿಲ್ಲ. ಈಗಲೂ ಇಲ್ಲ. ಪತ್ರಿಕಾ ರಂಗದಲ್ಲಿ ಪಪ್ಪನಂಥಾ ದಿಟ್ಟ ಹೆಜ್ಜೆಗಳನ್ನು ಇಟ್ಟವರು ಅತಿ ವಿರಳ. ತ್ರಿವಿಕ್ರಮನಂಥ ಛಲ, ಅವಿರತ ಶ್ರಮ, ಬಿಡುವಿಲ್ಲದ ದುಡಿಮೆಯಿಂದ ತಮ್ಮ ಪ್ರಕಟಣೆಗಳ ಮೂಲಕ ಜನರ ಮನದ ಮೇಲೆ ತೀವ್ರ ಪರಿಣಾಮ ಬೀರಿ ಜನರಲ್ಲಿ ಸಾಹಿತ್ಯಾಸಕ್ತಿ ಕೆರಳಿಸಿದ ಅದ್ಭುತ ಕೆಲಸವನ್ನು ಪಪ್ಪ ಮಾಡಿದ್ದಾರೆ. ಯಾವುದೇ ಪ್ರಚಾರಕ್ಕೆ ಸಿಗದ, ಹೊಗಳಿಕೆಗೆ ಆಶಿಸದ ಸರಳ ನಿರಾಡಂಬರ ವ್ಯಕ್ತಿಯಾಗಿಯೇ ದುಡಿದು ಎಲೆಯ ಮರೆಯ ಕಾಯಿಯಾಗಿಯೇ ಬಾಳಿ ಮರೆಯಾಗಿದ್ದಾರೆ.

'ಕಿರಿಯರ ಪ್ರಪಂಚ' ಪ್ರಕಾಶನದ ಮೂಲಕ ಅವರು ತುಳು ಕನ್ನಡ ಎರಡೂ ಭಾಷೆಗಳ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಗೆಳೆಯ ಪಣಿಯಾಡಿಯವರು ಹಾಕಿದ ಹಾದಿಯಲ್ಲಿ ಹೆಜ್ಜೆಯಿಟ್ಟ ಶೆಟ್ಟರು ೬ ದಶಕಗಳ ಹಿಂದೆಯೇ ತುಳು ಸಾಹಿತ್ಯದ ಬೆಳವಣಿಗೆಗಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ. ಹಲವಾರು ತುಳು ಪುಸ್ತಕಗಳನ್ನು ಪ್ರಕಟಿಸಿದ್ದಲ್ಲದೆ ನವಯುಗ ವಾರಪತ್ರಿಕೆಯ ಜತೆಗೆ ತಿಂಗಳಿಗೊಂದು ತುಳು ಪುರವಣಿಯನ್ನೂ ಕೊಟ್ಟಿದ್ದಾರೆ.

ಕನ್ನಡದಲ್ಲಿ ಅವರು ಪ್ರಕಟಿಸಿದ್ದ 'ಕಾವ್ಯಸಾಮ್ರಾಜ್ಯ' ಹಾಗೂ 'ಮಧುವನ' ಅಖಿಲ ಕರ್ನಾಟಕ ಕವಿಗಳ ಹಾಗೂ ಕಥೆಗಾರರ ಎರಡು ಉತ್ತಮ ಪ್ರಾತಿನಿಧಿಕ ಸಂಗ್ರಹಗಳು. ಕನ್ನಡದಲ್ಲೇ ಮೊದಲಿನವು ಎಂದರೆ ತಪ್ಪಾಗದು. ಸನ್ಮಾನ್ಯ ಕಯ್ಯಾರ ಕಿಞ್ಞಣ್ಣ ರೈಗಳು ಹೇಳುವಂತೆ "ಅಂತಹ ಪ್ರಾತಿನಿಧಿಕ ಸಂಗ್ರಹಗಳು ಅಖಿಲ ಕರ್ನಾಟಕದಲ್ಲೇ ಆ ಕಾಲಕ್ಕೆ ಬಂದಿರಲಿಲ್ಲ." ದಕ್ಷಿಣ ಕನ್ನಡದ ಮಟ್ಟಿಗೆ ಅದೇ ಪ್ರಥಮ ಹಾಗೂ ಯಶಸ್ವೀ ಪ್ರಯೋಗ ವೆನ್ನುವ ಪ್ರಶಂಸೆಗೆ ಇವೆರಡೂ ಪುಸ್ತಕಗಳು ಪಾತ್ರವಾಗಿದ್ದವು. ಪಂಜೆ ಮಂಗೇಶರಾಯ, ಬಿ. ಯಂ. ಶ್ರೀಕಂಠಯ್ಯ, ಗೋವಿಂದ ಪೈ, ದಿನಕರ ದೇಸಾಯಿ, ಅ.ನ.ಕೃ., ಮಾಸ್ತಿ, ಆನಂದಕಂದ, ಶಿವರಾಮ ಕಾರಂತ ಹೀಗೆ ಎಲ್ಲ ಗಣ್ಯರ ಬರಹಗಳು ಆ ಪ್ರಾತಿನಿಧಿಕ ಕೃತಿಗಳಲ್ಲಿ ಇದ್ದುವು ಎನ್ನುವುದೇ ಒಂದು ವೈಶಿಷ್ಟ್ಯ. 'ಖ್ಯಾತನಾಮರೆನಿಸಿದ ಇವರೆಲ್ಲರ ಜೊತೆಗೆ ಉದಯೋನ್ಮುಖ ರಿಗೂ ಈ ಸಂಕಲನಗಳಲ್ಲಿ ಅವಕಾಶ ಕೊಟ್ಟು ಇಡಿಯ ಕರ್ನಾಟಕಕ್ಕೆ ಅವರನ್ನು ಪರಿಚಯಿಸಿದ ಶ್ರೇಯಸ್ಸು ಶ್ರೀ ಹೊನ್ನಯ್ಯ ಶೆಟ್ಟರಿಗೆ ಸಲ್ಲುತ್ತದೆ' ಎನ್ನುವ ಮಾತು ಅತಿಶಯೋಕ್ತಿಯಲ್ಲ.

'ಮಧುವನ' ಕಥಾಸಂಕಲನದಲ್ಲಿ ಒಟ್ಟು ೨೫ ಕಥೆಗಳಿವೆ. ಪಾ. ವೆಂ. ಎಂದು ಪ್ರಖ್ಯಾತರಾದ ಪಾಡಿಗಾರು ವೆಂಕಟ್ರಮಣ ಆಚಾರ್ಯರು ಈ ಕಥಾಸಂಕಲನ ಸಂಪಾದಿಸಲು ಶ್ರೀ ಶೆಟ್ಟರೊಡನೆ ಕೈಗೂಡಿಸಿದ್ದರು. ಈ ಕೃತಿಗೆ ಮುನ್ನುಡಿ ಬರೆದು ಪ್ರಶಂಸಿದವರು ಅ. ನ. ಕೃಷ್ಣರಾಯರು. ನೋವಿನ ಸಂಗತಿಯೆಂದರೆ ಈಗ ಅದರ ಪ್ರತಿಗಳು ಲಭ್ಯವಿಲ್ಲ.

ಜನಪ್ರಿಯ ಪ್ರಕಾಶಕರೂ ಪ್ರಕಟಿಸಲು ಹಿಂಜರಿಯುತ್ತಿದ್ದ ಆದರೆ ಜನರಿಗೆ ಉಪಯೋಗವಾಗುವಂತಹ ಹಲವಾರು ಕೃತಿಗಳನ್ನು 'ಕಿರಿಯರ ಪ್ರಪಂಚ' ಮಾಲಿಕೆಯ ಮೂಲಕ ಅವರು ಪ್ರಕಟಿಸಿದ್ದರು. ಆಗಿನ ಕಾಲದಲ್ಲಿಯೇ ಮಹಿಳಾ ಸಾಹಿತ್ಯದ ಪ್ರಕಟಣೆಗೆ ಪ್ರಾಮುಖ್ಯತೆ ಕೊಟ್ಟಿದ್ದರು ಎನ್ನುವುದು ಉಲ್ಲೇಖನೀಯ ಸಂಗತಿ. ಕಿರಿಯರ ಪ್ರಪಂಚ ಮಾಲಿಕೆಯಲ್ಲಿ ಸರಸ್ವತಿಬಾಯಿ ರಾಜವಾಡೆಯವರ 'ಆಹುತಿ', ಯಶೋದಾ ಜೆನ್ನಿಯವರ 'ಬಾಳಿನ ಬೆಳೆ', ದೇವಕಿ ಶೆಟ್ಟರ 'ನಕ್ಕರೂ ನಗಬಹುದು' ಹೀಗೆ ಹಲವಾರು ಬರಹಗಾರ್ತಿಯರ ಪುಸ್ತಕಗಳನ್ನು ಪ್ರಕಟಿಸಿ ಪ್ರೋತ್ಸಾಹಿಸಿದ್ದರು. ತಪ್ಪಿಲ್ಲದ ಅಚ್ಚು, ಸರಳವಾದರೂ ಸುಂದರವಾದ ಮುಖಪುಟ, ಕಡಿಮೆ ಬೆಲೆ ಕಿರಿಯರ ಪ್ರಪಂಚ ಮಾಲಿಕೆಯಲ್ಲಿ ಪ್ರಕಟವಾದ ಪುಸ್ತಕಗಳ ವಿಶಿಷ್ಟತೆ. ಹೊಸಬರು ಹಳಬರು ಎನ್ನುವ ಮಡಿವಂತಿಕೆ ಇಲ್ಲದೆ ಆಗಿನ ಕಾಲದ ಎಲ್ಲ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಡ್ಯುಯಿಯವರ 'ಸ್ವಾತಂತ್ರ್ಯ ಮತ್ತು ಸಂಸ್ಕೃತಿ', ಕೇಮ್ಸ್ ಬಿ. ಕೊನಾಂಟೆರ್ ಅವರ 'ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ', ಕೊಸ್ಲರ್ ಅವರ

‘ನಡುಹಗಲಿನ ಕಗ್ಗತ್ತಲೆ’ ಇಂತಹ ಅನುವಾದ ಕೃತಿಗಳನ್ನೂ ಪ್ರೊ. ಕು. ಶಿ. ಹರಿದಾಸ ಭಟ್ಟರ ಸಹಕಾರದೊಂದಿಗೆ ಪ್ರಕಟಿಸಿರುವುದು ಒಂದು ಹೆಗ್ಗಳಿಕೆ.

ಪ್ರಕಟಣೆ ಮಾತ್ರವಲ್ಲದೆ ಜನರಲ್ಲಿ ಪುಸ್ತಕ ಪ್ರೀತಿ ಹುಟ್ಟಿಸಲು ಹೊನ್ನಯ್ಯ ಶೆಟ್ಟರು ಮಾಡಿರುವ ಕೆಲಸಗಳು ಹಲವಾರು. ಪ್ರಶಂಸನೀಯ ಪುಸ್ತಕ ಪ್ರಚಾರದ ಕೆಲಸ. ವರಕವಿ ಬೇಂದ್ರೆಯವರಿಂದ ಉದ್ಘಾಟಿಸಲ್ಪಟ್ಟ ಈ ‘ಪುಸ್ತಕಮಾಸ’ ಸಮಾರಂಭವೇ ಬಹಳ ವಿಶಿಷ್ಟತೆಯಿಂದ ಕೂಡಿತ್ತು. ಅಂದಿನ ಕಾರ್ಯಕ್ರಮದಲ್ಲಿ ಇಡೀ ವೇದಿಕೆಗೆ ಪುಸ್ತಕದ್ದೇ ಅಲಂಕಾರ. ಎಲ್ಲೆಲ್ಲೂ ಪುಸ್ತಕಗಳೇ. ಅವರ ಪುಸ್ತಕ ಪ್ರೀತಿ ಹಾಗೂ ಅದಕ್ಕಾಗಿ ಅವರು ಮಾಡುತ್ತಿದ್ದ ಕೆಲಸಗಳನ್ನು ನೋಡಿ ಬೇಂದ್ರೆಯವರು ಬಹಳ ಖುಷಿಪಟ್ಟಿದ್ದರು. ಈ ಕಾರ್ಯಕ್ರಮಕ್ಕೆ ಸಿಕ್ಕಿದ ಪ್ರೋತ್ಸಾಹದಿಂದ ಪ್ರೇರಿತರಾಗಿ ವಾರಕ್ಕೊಮ್ಮೆ ಇಂತಹ ಕಾರ್ಯಕ್ರಮಗಳನ್ನು ನಡೆಸಿ ಬೇರೆ ಬೇರೆ ಊರುಗಳಿಂದ ಹಿರಿಯ ಬರಹಗಾರರನ್ನು ಕರೆಸಿ ಉಪನ್ಯಾಸಗಳನ್ನು ಏರ್ಪಡಿಸಿದ ಕೀರ್ತಿಯೂ ಪಪ್ಪನಿಗೆ ಸಲ್ಲುತ್ತದೆ. ಈ ಕಾರ್ಯಕ್ರಮದಲ್ಲಿ ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಎಂ. ವಿ. ಸೀತಾರಾಮಯ್ಯ, ಶಿವರಾಮ ಕಾರಂತರಂತಹ ಹಿರಿಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರಕಿಸಿಕೊಟ್ಟಿದ್ದರು.

ಪತ್ರಿಕೆ, ಪುಸ್ತಕ ಮಾರಾಟ, ಪುಸ್ತಕ ಪ್ರಕಟಣೆ ಇವೆಲ್ಲವನ್ನೂ ‘ನವಯುಗ ಎಂಟರ್ ಪ್ರೈಸಸ್’ ಮೂಲಕ ಅವರು ಮಾಡುತ್ತಿದ್ದರು. ‘ಕಿರಿಯರ ಪ್ರಪಂಚ’ದ ಜತೆಗೆ ‘ಭಾರತೀ ಗ್ರಂಥಮಾಲೆ ಪ್ರಕಾಶನ’ ಸಂಸ್ಥೆಯ ಮೂಲಕವೂ ಪುಸ್ತಕಗಳನ್ನು ಪ್ರಕಟಿಸುತ್ತಿದ್ದರು. ಆಗ ಪ್ರಕಾಶನ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುವುದು ಹಣ ಮಾಡುವ ಲಾಭದಾಯಕ ಉದ್ಯಮವಾಗಿರಲಿಲ್ಲ. ಅದನ್ನೊಂದು ಪೂಜೆಯ ಹಾಗೆ ಅವರು ಮಾಡುತ್ತಿದ್ದರು. ನನ್ನ ಪಪ್ಪ ಪತ್ರಿಕೋದ್ಯಮಕ್ಕೆ ಹಾಗೂ ಪುಸ್ತಕೋದ್ಯಮಕ್ಕೆ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಅವರನ್ನು ೧೯೭೦ ರಲ್ಲಿ ಕಾರ್ಕಳದಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಿದ್ದಾರೆ. ಮಂಗಳೂರು ಬಂಟರ ಸಂಘದವರು ಹಾಗೂ ಮಣಿಪಾಲ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಮತ್ತು ರೋಟರಿ ಕ್ಲಬ್‌ನವರೂ ಅಭಿಮಾನದಿಂದ ಸನ್ಮಾನಿಸಿದ್ದಾರೆ.

ಕೆ. ಹೊನ್ನಯ್ಯ ಶೆಟ್ಟರ ಮಗಳಾಗಿ ನಾನು ಬೆಳೆದದ್ದು ಪುಸ್ತಕಗಳ ರಾಶಿಯ ಮಧ್ಯೆ. ಅವರು ಮಾಡುತ್ತಿದ್ದ ಕಾರ್ಯಕ್ರಮಗಳಲ್ಲಿ ಅದೇನೆಂದು ಅರ್ಥವಾಗದ ಕಾಲದಿಂದಲೂ ನಾನು ಭಾಗವಹಿಸುತ್ತಿದ್ದೆ. ನನ್ನ ತಂದೆಯವರ ಮತ್ತು ಅಂದು ನಾನು ನೋಡಿದ ಹಿರಿಯ ಲೇಖಕರ ಪ್ರಭಾವ, ಮುಖ್ಯವಾಗಿ ಡಾ. ಶಿವರಾಮ ಕಾರಂತರ ಪ್ರಭಾವ ನನ್ನ ಮೇಲೆ ಅಗೋಚರವಾಗಿ ಆಗಿತ್ತೇನೋ ಎಂದು ನನಗೀಗ ಅನಿಸುತ್ತಿದೆ. ನನ್ನಲ್ಲಿ ಓದುವ ಹವ್ಯಾಸವನ್ನು ಬೆಳೆಸಿದ ನನ್ನ ಪಪ್ಪ ಅಮ್ಮನಿಗೆ ನಾನು ಎಷ್ಟು ಕೃತಜ್ಞತೆಗಳನ್ನು ಸಲ್ಲಿಸಿದರೂ ಕಡಿಮೆಯೇ. ಆಗ ನಾನು ಓದದ ಪುಸ್ತಕಗಳಿರಲಿಲ್ಲ. ಯಾವ ಹೊಸ ಪುಸ್ತಕ ಬಂದರೂ ನನಗೆ ಮೊದಲು ತಂದುಕೊಡುತ್ತಿದ್ದರು. ಸ್ವಲ್ಪ ದೊಡ್ಡವಳಾದ ಮೇಲೆ ಓದಿದ ಮೇಲೆ ಹೇಗಿದೆ ಎಂದು ಕೇಳುತ್ತಿದ್ದರು. ಅವರ ಅನಾರೋಗ್ಯದ ಕಾಲದಲ್ಲಿ ಅವರು ಬರೆಯಬೇಕಿದ್ದನ್ನು ನನಗೆ ಹೇಳಿ

ಡಿಕ್ಟೇಟ್ ಮಾಡಿ ನನ್ನಿಂದ ಬರೆಸುತ್ತಿದ್ದರು. ಪೇಪರ್‌ನ ಪ್ರೂಫ್ ರೀಡಿಂಗ್ ಮಾಡಿಸುತ್ತಿದ್ದರು. ಅಂದಿನ ಆ ತರಬೇತಿ ಈಗ ನನ್ನ ಬರವಣಿಗೆಗೆ ಸಹಕಾರಿಯಾಗಿದೆ. ನನಗೆ ಮದುವೆಯಾಗಿ ಹೋಗುವಾಗ ನನ್ನ ಬಲಕೈ ಹೋಯಿತು ಎಂದು ಅವರು ಕಣ್ಣು ತುಂಬಿ ಹೇಳಿದ್ದು ಇಂದೂ ನನ್ನ ಕಿವಿಯಲ್ಲಿ ಗುಯ್ಗುಟ್ಟುತ್ತಿದೆ. ಅವರಂತೆ ನನಗೂ ಪುಸ್ತಕ ಪ್ರೀತಿಯಿದೆ. ಆದರೆ ನನ್ನ ಪುಸ್ತಕ ಪ್ರೀತಿ ನನ್ನದೇ ಪರಿಧಿಯೊಳಗಿದೆ. ಅದನ್ನೊಂದು ಉದ್ಯಮವನ್ನಾಗಿಸುವ ಧೈರ್ಯ ನನಗಿಲ್ಲ. ಪುಸ್ತಕೋದ್ಯಮದಲ್ಲಿ ಅವರ ಮಟ್ಟಕ್ಕೆ ಏರುವ ಶಕ್ತಿ ಯಾರಿಗೂ ಇಲ್ಲವೆಂದೆನಿಸುತ್ತದೆ. ಅವರು ನಡೆಸುತ್ತಿದ್ದುದು ಪರಿಶುದ್ಧ ಪುಸ್ತಕೋದ್ಯಮ. ಈಗ ಹಾಗೆ ಮಾಡುವುದು ಸಾಧ್ಯವಿಲ್ಲ. ಅವರು ಕೊನೆಯ ತನಕವೂ ಹೇಳುತ್ತಿದ್ದುದು ಒಂದೇ. ನನ್ನ ಮಕ್ಕಳಿಗೆ ನನ್ನ ಉದ್ಯಮ ಬೇಡ ಎಂದು. ಅವರಿಗೆ ಆಗಲೇ ತಿಳಿದಿತ್ತು ಅವರು ನಡೆಸಿದ ಪುಸ್ತಕೋದ್ಯಮ ಅವರ ಜತೆಗೇ ಸತ್ತುಹೋಗುವುದೆಂದು. ಆದರೆ ಅವರು ಪ್ರಾರಂಭಿಸಿದ ಪ್ರೆಸ್ ಮತ್ತು ನವಭಾರತ ಪುಸ್ತಕ ಭಂಡಾರ ಇವತ್ತಿಗೂ ಹಾಗೇ ಇದೆ. ನನ್ನ ಕೊನೆಯ ತಮ್ಮ ಒದ್ದಾಡುತ್ತಾ ಅದನ್ನು ನಡೆಸುತ್ತಿದ್ದಾನೆ. ಆಗೀಗ ಒಂದೊಂದು ಪುಸ್ತಕಗಳನ್ನು ಪ್ರಕಟಿಸುತ್ತಲೂ ಇದ್ದಾನೆ. ನನ್ನದೇ ಮೂರು ಪುಸ್ತಕಗಳು ಅಲ್ಲಿಂದಲೇ ಪ್ರಕಟವಾಗಿವೆ. ಅವನಿಗೂ ಈಗ ಈ ಭಾರ ಬಹಳ 'ಭಾರಿ'ಯಾಗುತ್ತಿದೆ.

ನನ್ನ ಪತಿ ಬಿ. ಎ. ಪ್ರಭಾಕರ ರೈ ಯವರೂ ಅವರಿಗೆ ಅಳಿಯನಲ್ಲ ಮಗ ಎನ್ನುವಂತೆ ಇದ್ದರು. ಅವರ ಕೆಲವು ಕಥೆಗಳನ್ನು ಮೊದಲು 'ನವಯುಗ'ದಲ್ಲಿ ಪ್ರಕಟಿಸಿ ಹೊಸ ಬರಹಗಾರನನ್ನು ಪ್ರೋತ್ಸಾಹಿಸಿದ್ದರು. ಆಗ ನಾನು ಬರೆಯಲು ಸುರು ಮಾಡಿರಲಿಲ್ಲ. ಪಪ್ಪನ ಸಾವಿನ ನಂತರ ನನ್ನ ಮೊದಲ ಕಾದಂಬರಿ 'ಪ್ರಜಾಮತ'ದಲ್ಲಿ ಪ್ರಕಟವಾದದ್ದು. ಸಾಹಿತ್ಯರಂಗದಲ್ಲಿ ನಮ್ಮ ಬೆಳವಣಿಗೆಯನ್ನು ಪಪ್ಪ ಅಮ್ಮ ನೋಡಲಿಲ್ಲವಲ್ಲ ಎನ್ನುವ ನೋವು ನಮಗಿಬ್ಬರಿಗೂ ಇದೆ.

೨೦೦೬ ರ ಜೂನ್ ೧ ಕ್ಕೆ ನನ್ನ ಪಪ್ಪ ದೈಹಿಕವಾಗಿ ನಮ್ಮನ್ನು ಬಿಟ್ಟುಹೋಗಿ ೩೨ ವರುಷಗಳಾದವು. ಅಮ್ಮ ಬಿಟ್ಟುಹೋಗಿ ಇದು ೨೬ ನೇ ವರುಷ. ಆದರೆ ಅವರೆಲ್ಲಿ ನಮ್ಮನ್ನು ಬಿಟ್ಟುಹೋಗಿದ್ದಾರೆ? ನಮ್ಮೆಲ್ಲರ ಪ್ರತಿಯೊಂದು ನೋವು ನಲಿವು, ಏಳು ಬೀಳುಗಳಲ್ಲೂ ನಮ್ಮ ಅಮ್ಮ ನಮ್ಮ ಹಿಂದೆ ನಿಂತು ಮಾರ್ಗದರ್ಶನ ನೀಡುತ್ತಿದ್ದಾರೆ. ಜೀವನದ ಎಲ್ಲ ಸೋಲು ಗೆಲುವುಗಳ ಹಿಂದೆ ಪಪ್ಪನ ಎಚ್ಚರಿಕೆಯ ದನಿ ಇದೆ. ನಿಮಿಷ ನಿಮಿಷಕ್ಕೂ ಅವರಿಬ್ಬರೂ ನಮ್ಮೊಡನೆಯೇ ಇದ್ದಾರೆ.

■ **ಕೆ. ಉಷಾ ಪಿ. ರೈ :**
#೩೪೫, 'ಸಮೃದ್ಧ', ಲಕ್ಷ್ಮಿರಸ್ತೆ, ೭ನೇ ಅಡ್ಡರಸ್ತೆ
ಶಾಂತಿನಗರ, ಬೆಂಗಳೂರು-೫೬೦ ೦೨೭

■

ಪುಸ್ತಕ ಪರಿಶೀಲನೆ

೧. *ಕನ್ನಡ ಉಳಿಸಿ, ಬೆಳೆಸುವ ಬಗೆ : ಶಿಕಾರಿಪುರ ಕೆ. ಹರಿಹರೇಶ್ವರ*

ಸಂವಹನ ಪ್ರಕಾಶನ, ಶಿವರಾಮಪೇಟೆ, ಮೈಸೂರು-೧, ಪ್ರಮು. ೨೦೦೫, ಪು. ೧೮೮, ರೂ. ೧೦೦/-

ಕನ್ನಡದ ನೆಲದಲ್ಲಿದ್ದುಕೊಂಡೇ ಭಾಷೆಯ ಸೊಗಡು, ಅರ್ಥವಂತಿಕೆ, ಪರಿಶುದ್ಧತೆಯನ್ನು ಕಡೆಗಣಿಸಿದ 'ಕನ್ನಡಿಗರು' ಲಕ್ಷಾವಧಿ ಸಂಖ್ಯೆಯಲ್ಲಿದ್ದಾರೆ. ನಿರಭಿಮಾನ, ನಿರ್ಲಕ್ಷ್ಯ, ಸಿನಿಕತನ ಕಾಲೇಜ ಕನ್ನಡ ಉಪನ್ಯಾಸಕರ 'ಸದ್ಗುಣ'ವೇ ಆಗಿದೆ. ಅತಿ ಪರಿಚಯ ಅವಜ್ಞೆಗೆ ನೆಪ. ಇದೂ ಒಂದು ಕಾರಣ. ಒಟ್ಟಿನಲ್ಲಿ. ಕನ್ನಡದ ಭವಿಷ್ಯದ ಬಗ್ಗೆ ಚಿಂತೆ, ಆತಂಕಗಳೇ ತುಂಬಿರುವ ಸಂದರ್ಭದಲ್ಲಿ, ಅಮೆರಿಕಾ ನಿವಾಸಿ, ಕನ್ನಡಿಗ ಶಿಕಾರಿಪುರ ಹರಿಹರೇಶ್ವರರು 'ಕನ್ನಡ ಉಳಿಸಿ, ಬೆಳೆಸುವ ಬಗೆ'ಗೆ ಕಾಳಜಿ ತೋರಿಸುತ್ತ, ಅಮೆರಿಕನ್ನಡಿಗರಲ್ಲಿ ಜಾಗೃತಿಯನ್ನೂ, ಸದಭಿಮಾನವನ್ನು ತಮ್ಮ ಬರಹ, ಸಂಘಟನೆಗಳ ಮೂಲಕ ಮಾಡುತ್ತ ಬಂದಿದ್ದಾರೆ.

ಈ ಪುಸ್ತಕದಲ್ಲಿ ಮೂವತ್ತೈದು ಅಂಕಣ ಬರಹಗಳಿವೆ. ಅಮೆರಿಕದ ಕನ್ನಡಿಗರಿಗೆ ಪರದೇಶೀ ಪ್ರಜ್ಞೆ ಅಥವಾ ಕನ್ನಡದ ಬಗ್ಗೆ ಅನಾಥ ಪ್ರಜ್ಞೆ ಬರದಂತೆ ಹರಿಹರೇಶ್ವರರು, 'ಅಮೆರಿಕನ್ನಡ' ಪತ್ರಿಕೆಯನ್ನು ೧೯೮೪ ರಲ್ಲಿ ಸಂಪಾದಿಸಿ, ಪ್ರಕಟಿಸಿದರು. ಈ ಪತ್ರಿಕೆಯನ್ನು 'ಕೊಂಡು ಓದಿ' ಎಂದು ಮನವಿ ಮಾಡಿಕೊಂಡ ಹರಿಯವರು, ಪುಸ್ತಕದ ಓದಿನ ಬಗ್ಗೆ, ಸಾಹಿತ್ಯದ ರಚನೆಯ ಬಗ್ಗೆ ಕನ್ನಡ ನಿವಾಸಿಗಳನ್ನು ಬೇರೆ ಬೇರೆ ರೀತಿಯಿಂದ ಪ್ರಚೋದಿಸುತ್ತಾರೆ. ಕನ್ನಡ ಮಾತು-ಸಂಭಾಷಣೆ, ಭಾಷಣ, ಚರ್ಚೆ, ಸಂವಾದಗಳಿಂದ ಉಳಿಸಿಕೊಳ್ಳುವ ಕಾರ್ಯಕ್ರಮಗಳನ್ನೂ ಅವರು ಯೋಜಿಸಿ ನಿರ್ವಹಿಸುತ್ತಾರೆ. ಅಮೆರಿಕದಲ್ಲಿಯೇ ಹುಟ್ಟಿದ ಕನ್ನಡ ಮಕ್ಕಳಿಗೆ ತಾಯ್ನುಡಿಯ ಪ್ರೀತಿಯ ಸ್ಪರ್ಶ, ಆಲಿಂಗನ ಆಗಬೇಕಾದುದರ ವಿಧಾನಗಳನ್ನು ಹರಿ ಪ್ರಯೋಗಿಸುತ್ತಾರೆ. ಅಮೆರಿಕೆಗೆ ಪ್ರವಾಸಿಗರಾಗಿ ಬಂದ ಲೇಖಕರಿಂದ, ಗಾಯಕರಿಂದ ಕನ್ನಡ ಸಾಹಿತ್ಯದ, ಗೀತೆಯ ಪ್ರಸಾರ-ಪ್ರಚಾರ ಮಾಡಿಸುತ್ತಾರೆ. ಸ್ವಂತ ನೆಲದಲ್ಲಿ ಕಾವಲು ಸಮಿತಿಯ ಕಣ್ಣರಿಕೆಯಲ್ಲಿ ಕನ್ನಡ ಉಳಿಯಬೇಕಾಗಿದೆ; ಬೆಳೆಯಬೇಕಾಗಿದೆ– ಎಂಬ ನಿಷ್ಠುರ ವಾಸ್ತವವನ್ನು ಗಮನಿಸಿಯೂ, ಅಮೆರಿಕನ್ನಡಿಗರು, ಸ್ವಪ್ರೇರಣೆಯಿಂದ, ಪ್ರೀತಿಯಿಂದ ಅದನ್ನು ಪೋಷಿಸಬೇಕೆಂದು ಹರಿಹರೇಶ್ವರ ಉತ್ಕಟವಾಗಿ ಹಂಬಲಿಸುತ್ತಾರೆ. ಅವರ ಹಂಬಲ ಸಫಲವಾಗಿದೆ.

– ಡಾ. ಶ್ಯಾಮಸುಂದರ ಬಿದರಕುಂದಿ, ೧೫೧, ೫ನೇ ಮುಖ್ಯರಸ್ತೆ, ನವನಗರ, ಹುಬ್ಬಳ್ಳಿ-೫೮೦ ೦೨೫

೨. *ಛಲದಂಕಮಲ್ಲ ಲೋಕಾಯುಕ್ತ ಎನ್.ವೆಂಕಟಾ'ಛಲ' : ಸಂ.ವೆಂಕಟೇಶ ಕುಲಕರಣಿ*

ಜಾಗೃತ ಭಾರತ, ೧ನೇ ಕ್ರಾಸ್, ಸಪ್ತಾಪುರ, ಧಾರವಾಡ-೫೮೦ ೦೦೮, ಪ್ರಮು. ೨೦೦೫, ಪು. ೨೮, ರೂ. ೧೫/-

ನಿಷ್ಠುರ, ತತ್ತ್ವನಿಷ್ಠ ನ್ಯಾಯವಾದಿ ವೆಂಕಟೇಶ ಕುಲಕರಣಿಯವರ ಕಿರುಗ್ರಂಥವಿದು; ಗಾತ್ರದಲ್ಲಿ ಕಿರಿದಾದರೂ ವಿಷಯ ಸಮಗ್ರತೆಯ ದೃಷ್ಟಿಯಿಂದ ಹಿರಿದಾದುದು. ಸಮಾಜದ ಎಲ್ಲ ಸ್ತರಗಳಲ್ಲಿ ತನ್ನೆಲ್ಲ ಕಬಂಧಬಾಹುಗಳನ್ನು ವಿಸ್ತರಿಸಿರುವ ಸಾಮಾಜಿಕ, ಆರ್ಥಿಕ ಪಿಡುಗಾದ ಲಂಚಗುಳಿತನ ಸಮಾಜ ಸ್ವಾಸ್ಥ್ಯವನ್ನು ಹಾಳುಗೆಡವಿದೆ, ಪ್ರಗತಿದಾಯಕ ಯೋಜನೆಗಳನ್ನು ನುಂಗುಹಾಕಿದೆ ಹಾಗೂ ಜನಸಾಮಾನ್ಯರ ರಕ್ತವನ್ನು ಜಿಗಣೆಯಂತೆ ಹೀರಿದೆ. ಅದನ್ನು ನಿಯಂತ್ರಿಸುವಲ್ಲಿ ಆಸೆ-ಭರವಸೆಯ ಹೊಂಬೆಳಕಾಗಿ ಕಂಡುಬಂದವರು ಲೋಕಾಯುಕ್ತ ಜಸ್ಟಿಸ್ ಎನ್. ವೆಂಕಟಾಚಲ ಅವರು. ತಮ್ಮ ಹೆಸರಿಗೆ ತಕ್ಕಂತೆ ಅವರು ಲಂಚ ಸ್ವೀಕರಣೆಯನ್ನು ಬುಡಸಮೇತ ಕಿತ್ತೊಗೆಯುವ ದಿಟ್ಟ ಪ್ರಯತ್ನದಲ್ಲಿ ಅಚಲವಾಗಿ ನಿಂತು ನಿಶ್ಚಲ ಮನಸ್ಸಿನಿಂದ ಛಲ ಸಾಧಿಸಿ ತುಸುಮಟ್ಟಿಗೆ ಯಶಸ್ವಿಯಾದರು ಕೂಡಾ. ವೆಂಕಟಾಚಲ ಅವರು ತೆಗೆದುಕೊಂಡ 'ರಿಸ್ಕ್' ಸಾಮಾನ್ಯವಾದುದಲ್ಲ. ಅಂತೆಯೇ 'ಛಲದಂಕಮಲ್ಲ' ಅವರ ಕ್ರಿಯಾಶೀಲ ನಿಸ್ಪೃಹ ಸಾಧನೆಯ ಒಂದು ಸ್ಥೂಲ ನೋಟದ ದಾಖಲೆಯೇ ಪ್ರಸ್ತುತ ಗ್ರಂಥ.

ಭ್ರಷ್ಟಾಚಾರದ ಮೂಲೋತ್ಪಾಟನೆ ಎಣಿಸಿದಷ್ಟು ಸುಲಭಸಾಧ್ಯವಲ್ಲ. ವೆಂಕುರವರು ವೆಂಕಟಾಚಲರ ಪ್ರಾಮಾಣಿಕ ನಿಲುವು ಗೆಲುವುಗಳನ್ನು ಗುರುತಿಸಿ ಗೌರವಿಸಿದ್ದಾರೆ.

ಕೇವಲ ಬಾಹ್ಯ ಕಾಯ್ದೆ, ಕಾನೂನು, ಕಟ್ಟಳೆಯಿಂದಲೇ ಇದರ ಪರಿಣಾಮಕಾರಿ ನಿಯಂತ್ರಣ ಸಾಧ್ಯವಿಲ್ಲವೆಂಬುದನ್ನು ಕೃತಿಯು ಮನವರಿಕೆ ಮಾಡಿಕೊಡುತ್ತದೆ. ವೆಂಕಟಾಚಲ ಅವರು ತಮ್ಮ ಅಧಿಕಾರಾವಧಿಯ ಐದು ವರ್ಷಗಳಲ್ಲಿ(೨-೭-೨೦೦೧ ರಿಂದ ೩೦-೭-೨೦೦೬) 'ಪಂಚವಾರ್ಷಿಕ ಯೋಜನೆ' ಯಂತೆ ತಮ್ಮ ಅಮೂಲ್ಯ ವೇಳೆಯನ್ನು ಕಿಂಚಿತ್ತೂ ವ್ಯಯ ಮಾಡದೆ ಸೇವೆ/ಕರ್ತವ್ಯ ನಿರ್ವಹಿಸಿದ್ದಾರೆ. ಭ್ರಷ್ಟಾಚಾರದ ಬಹುಮುಖಗಳನ್ನು ಬಹಿರಂಗಗೊಳಿಸಿದ್ದಾರೆ.

ವೆಂಕುರವರು ಹೊತ್ತಗೆಯ ಪ್ರಾರಂಭದಲ್ಲಿಯೇ ವೆಂಕಟಾಚಲರ ಸಂಕ್ಷಿಪ್ತ ವೃತ್ತಿಪರ ಜೀವನವನ್ನು ಪರಿಚಯಿಸಿದ್ದಾರೆ. ಅವರು ತಮ್ಮ ವಕೀಲಿ ವೃತ್ತಿಯಿಂದ ಮೊದಲ್ಗೊಂಡು ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿ ನಿವೃತ್ತಿಯ ನಂತರ ಲೋಕಾಯುಕ್ತರಾಗಿ ನೇಮಕಗೊಂಡುದು, ಲೋಕಾಯುಕ್ತದ ಉಗಮ, ರೂಪಗೊಂಡ ಕಾನೂನುಗಳು, ಕಾರ್ಯವೈಖರಿ, ಅಧಿಕಾರವ್ಯಾಪ್ತಿ, ಅದರ ಇತಿಮಿತಿ, ವಿಚಾರಣೆ, ಸಾರ್ವಜನಿಕ ಸಂಪರ್ಕವಿಧಾನ, ಲೋಕಾಯುಕ್ತರ ಆಯ್ಕೆಯ ವಿಧಾನ, ಮತ್ತದರ ಒಳ ಹೂರಣ ಇತ್ಯಾದಿ ತಿಳಿಸಿದ್ದಾರೆ. ನ್ಯಾಯವಾದಿಗಳು ತಮ್ಮ ಅಧಿಕಾರವನ್ನು ಅನುಭವಿಸುವುದರೊಂದಿಗೆ ನಿರ್ವಹಿಸಬೇಕಾದ ಕರ್ತವ್ಯಗಳತ್ತಲೂ ಗಮನ ಸೆಳೆದು ಎಚ್ಚರಿಸಿದ್ದಾರೆ. ಈ ನಡುವೆ ಲೋಕಾಯುಕ್ತರಿಗಿದ್ದ ಸೇವಾವಿಮುಖ ಭ್ರಷ್ಟ ಅಧಿಕಾರಿಗಳ ವಿರುದ್ಧದ ದಂಡನೆಯ ಅಧಿಕಾರವನ್ನು ಸರಕಾರ ಹಿಂದೆಗೆದುಕೊಂಡುದರ ಇಲ್ಲವೇ ರದ್ದುಪಡಿಸಿದುದರ ವಿವರ ಇಲ್ಲಿ ಲಭ್ಯ.

ವೆಂಕಟಾಚಲರ ಕಾರ್ಯವೈಖರಿ ಅಮೋಘ, ಅದ್ಭುತ, ಅದ್ವಿತೀಯ. ಸಾರ್ವಜನಿಕರ ನೂರಾರು ದೂರುಗಳನ್ನು ಅನುಲಕ್ಷಿಸಿ, ವಿಮರ್ಶಿಸಿ, ಪರಾಮರ್ಶಿಸಿ ದಿಢೀರ್ ಭೇಟಿ ನೀಡಿ ಕಾರ್ಯೋನ್ಮುಖರಾಗಿ ತಾವು ತೆಗೆದುಕೊಂಡ ನಿರ್ಭಿಡೆಯ ಹಾಗೂ ಪ್ರಾಮಾಣಿಕ ಕ್ರಮಗಳನ್ನು ಸಾದ್ಯಂತ ಇಲ್ಲಿ ನಮೂದಿಸಲಾಗಿದೆ. ಸಮಕ್ಷಮ ದಾಳಿ ಮಾಡಿ ಲಂಚಾಧಿಪತಿಗಳನ್ನು ಟ್ರ್ಯಾಪ್ ಮಾಡಿ ನಡುಕ ಹುಟ್ಟಿಸಿ ಕರ್ತವ್ಯಪರತೆಯನ್ನು ಮೆರೆದುದು, (ಅ)ವ್ಯವಸ್ಥೆಯ ವಿರುದ್ಧ ಅಧಿಕೃತವಾಗಿ ಸೆಣಸಾಟವನ್ನು ಮುಂದುವರಿಸಿದುದು, ಸತ್ತಂತಿರುವ ಜನರನ್ನು ಬಡಿದೆಬ್ಬಿಸಿದುದು, ಮತ್ತವರ ವಿಪರೀತ ಜಡಮನೋಭಾವ ಅಲ್ಲದೆ ಹೌಹಾರಿದ ಅಧಿಕಾರಸ್ಥರು ಹಾಗೂ ರಾಜಕಾರಣಿಗಳ ಪಾತ್ರವೆಲ್ಲವನ್ನೂ ನಿರೂಪಿಸಲಾಗಿದೆ. ಸಂದಿಗ್ಧ ಸಂದರ್ಭಗಳು ನಿರ್ವಹಿಸಿದ ಜವಾಬ್ದಾರಿಯುತ ಪಾತ್ರ ಹಾಗೂ ಜನಜಾಗೃತಿಯನ್ನು ಉಂಟುಮಾಡುವಲ್ಲಿ ನೀಡಿದ ಸಹಕಾರವನ್ನು ಶ್ಲಾಘಿಸಲಾಗಿದೆ. ಎಲ್ಲ ಕರಾರುವಾಕ್ಕು ಅಂಕಿಅಂಶಗಳನ್ನು ವೆಂ ಕು ಅವರು ತಮ್ಮ ಕ್ರಿಯಾಶೀಲ ಪ್ರವೃತ್ತಿಯಿಂದಾಗಿ ಒಂದೆಡೆ ಅಡಕಗೊಳಿಸಿದ್ದಾರೆ. ನಿವೃತ್ತ ನ್ಯಾಯಾಧೀಶರಾದ ಕೋ. ಚೆನ್ನಬಸಪ್ಪ ಮತ್ತು ಡಾ. ಅನಂತ ಹುಬಿಲಗೋಳರ ಕಳಕಳಿಯ ಲೇಖನಗಳು ಇಲ್ಲಿವೆ; ಕೆಲವು ಕುತೂಹಲಕಾರಿ ಪ್ರಕರಣ-ಹಗರಣಗಳು ಉಲ್ಲೇಖಗೊಂಡಿವೆ. ಲಂಚಕೋರರು ತಿಂದುದನ್ನು ಜೀರ್ಣಿಸಿಕೊಳ್ಳಲಾಗದಂತೆ ಕಕ್ಕುವಂತೆ ಮೂಡುವಲ್ಲಿನ ಪ್ರಸಂಗಗಳಿವೆ.

ರಾಷ್ಟ್ರಪತಿ ಡಾ. ಎ. ಪಿ. ಜೆ. ಅಬ್ದುಲ್ ಕಲಾಂ ಅವರು ೨೭-೯-೨೦೦೪ ರಂದು ಡೆಹರಾಡೂನಿನಲ್ಲಿ ನಡೆದ ಲೋಕಾಯುಕ್ತ/ಲೋಕಪಾಲ/ಉಪಲೋಕಾಯುಕ್ತರ ಅಧಿವೇಶನದಲ್ಲಿ ವೆಂಕಟಾಚಲ ಅವರ ಕುರಿತು ಆಡಿದ ಪ್ರಾಂಜಲ ನುಡಿಮುತ್ತುಗಳನ್ನು ಮತ್ತು ಅವರ ಭ್ರಷ್ಟಾಚಾರ ನಿರ್ಮೂಲನ ಸಾಮರ್ಥ್ಯದ ಬಗ್ಗೆ ವ್ಯಕ್ತಪಡಿಸಲಾದ ಅಭಿಪ್ರಾಯಗಳನ್ನು ಈ ಹೊತ್ತಿಗೆಯಲ್ಲಿ ಉಲ್ಲೇಖಿಸಲಾಗಿದೆ. ಇಂದಿನ ವಾಸ್ತವ ಬದುಕಿನ ಚಿತ್ರಣದತ್ತ ಬೆಳಕು ಹಿಡಿದ ಕೃತಿಯಿದು. ಸತ್ವರಹಿತ, ನೀರಸ, ಕಾಲ್ಪನಿಕ, ಒಣವೇದಾಂತದ ಬೃಹತ್ ಗ್ರಂಥಗಳನ್ನು ನಿರ್ಮಿಸುವುದರ ಬದಲು ಸತ್ಯ, ಸತ್ವಶಾಲಿ ವಸ್ತು ಹಾಗೂ ಶೈಲಿಯ ಇಂತಹ ಕಿರುಹೊತ್ತಿಗೆಗಳು ಹೆಚ್ಚು ಪರಿಣಾಮಕಾರಿ ಪ್ರಭಾವ ಬೀರಬಲ್ಲವು. ವೆಂಕು ಅವರದು ಮೊದಲಿನಿಂದಲೂ

ನಿರ್ಭಿಡೆ, ನಿಸ್ಸಂಕೋಚ, ನಿರಾತಂಕ, ನಿರಾಡಂಬರ ಹಾಗೂ ನಿರ್ವಂಚಕ ವ್ಯಕ್ತಿತ್ವ; ಸತ್ಯ-ಧರ್ಮ-ನ್ಯಾಯ-ನೀತಿಗಾಗಿ ಹಗಲಿರುಳೆನ್ನದೆ ಎಡೆಬಿಡದೆ ದುಡಿಯುವ ವ್ಯಕ್ತಿತ್ವ. ಅವುಗಳನ್ನು ಜಸ್ಟಿಸ್ ವೆಂಕಟಾಚಲ ಅವರಲ್ಲಿಯೂ ತಮ್ಮಲ್ಲಿಯೂ ಕಂಡುಕೊಂಡಿದ್ದಾರೆ, ಅವು ಈ ಕೃತಿಯಲ್ಲಿ ವ್ಯಕ್ತಗೊಂಡಿವೆ.

– ಡಾ. ಹೆಚ್. ಎ. ಪಾರ್ಶ್ವನಾಥ್, ಎಸ್.ಡಿ.ಎಂ. ಮೆಡಿಕಲ್ ಕಾಲೇಜು, ಸತ್ತೂರು, ಧಾರವಾಡ-೯

೩. *ದೇಹ ದೇಗುಲಕ್ಕೊಂದು ಪ್ರಣಾಮ : ಡಾ. ವಸಂತ ಅ. ಕುಲಕರ್ಣಿ*

ಐ.ಬಿ.ಎಚ್. ಪ್ರಕಾಶನ, ನಂ. ೭೭, ರಾಮರಾವ್ ಲೇಔಟ್, ಬನಶಂಕರಿ ೩ನೇ ಹಂತ, ಬೆಂಗಳೂರು-೫

ಪ್ರಮು. ೨೦೦೫, ಪು. ೮೫, ರೂ. ೫೦/-

ನೀತಿಯ ನೆಲಗಟ್ಟಿನ ಮೇಲೆ ಹಾಗೂ ತಾತ್ವಿಕ ತಳಹದಿಯ ಮೇಲೆ ನವಿರಾದ ಹಾಸ್ಯ ರಸಾಯನ ಮಿಶ್ರಿತ ಪ್ರಬಂಧವೇ ಲಲಿತಪ್ರಬಂಧ. ಹೀಗೆಂದು ವ್ಯಾಖ್ಯಾನಿಸಿರುವ ಪ್ರಬಂಧಕಾರ ಡಾ. ವಸಂತ ಅ. ಕುಲಕರ್ಣಿಯವರು ದೇಹದೇಗುಲಕ್ಕೊಂದು ಪ್ರಣಾಮ ಹೇಳುತ್ತ ಹನ್ನೊಂದು ಲಲಿತಪ್ರಬಂಧಗಳನ್ನು ವೈದ್ಯಕೀಯ ಸಾಹಿತ್ಯಕ್ಕೆ ಕೊಡಮಾಡಿದ್ದಾರೆ. ಇಲ್ಲಿ ತಮ್ಮ ವೃತ್ತಿಜೀವನದ ರಸಾನುಭವಗಳನ್ನು ಸೊಗಸಾಗಿ ನಿರೂಪಿಸಿದ್ದಾರೆ. ಪೇಶಂಟ್‌ಗಳು ಒತ್ತಾಯಪೂರ್ವಕವಾಗಿ ನಮ್ಮಿಂದ ಸುಳ್ಳು ಹೇಳಿಸಲು ವಾತಾವರಣ ಸೃಷ್ಟಿಸುತ್ತಾರೆ. ಸುಳ್ಳಿನ ಉಪಚಾರ ಅಪಚಾರವಾಗದೆ ಸುಖಾಂತವಾಗಿ ‘ಈ ಡಾಕ್ಟರ ಕೈಗುಣಾ ಚಲೋ ಐತಿ’ ಪ್ರಶಂಸೆಯ ಪ್ರಶಸ್ತಿಯೊಂದಿಗೆ ಪ್ರಚಾರವೂ ಪೇಶಂಟ್‌ಗಳಿಂದಲೇ ಪ್ರಾಪ್ತ! ಎಂಥದು!

ದೇಹವೇ ದೇವಾಲಯ ಶಿರವೇ ಹೊನ್ನ ಕಳಸವೆಂದರಲ್ಲ ಶರಣರು. ಹೌದು ಈ ದೇಹದಲ್ಲಿ ದೇವರ ಸಾಮ್ರಾಜ್ಯವುಂಟು. ನಾಮ ಹಲವು; ಬಲು ಮಧುರ ಮಿದುಳು, ದುರಹಂಕಾರದಿಂದ ಬಲುದೂರ, ಮುಂತಾದ ಸ್ವಾರಸ್ಯಕರ ಅಂಶಗಳನ್ನು ದೇಹದೇಗುಲದಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಲಲಿತವಹ ಕನ್ನಡದ ನುಡಿಯಲಿ ವಸಂತ ಅ. ಕುಲಕರ್ಣಿಯವರ ಬರಹ ಸಫಲವಾಗಿದೆ.

– ಈಶ್ವರಚಂದ್ರ ಚಿಂತಾಮಣಿ, ಭಾವಸಾರ ನಗರ, ವಿಜಾಪುರ-೫೮೬ ೧೦೩

೪. *ಭ್ರಮೆಗಳ ಮೇಲೆ ಬೆಳಕು : ಪ್ರೊ. ಜ್ಯೋತಿ ಹೊಸೂರ*

ಕಾಲಗತಿ ಪ್ರಕಾಶನ, ಪ್ಲಾಟ್ ೩೩, ಸೆಕ್ಟರ್ ೧೦, ಮಾಳಮಾರುತಿಗುಡಿ ರಸ್ತೆ, ಆಂಜನೇಯನಗರ, ಬೆಳಗಾವಿ-೫೯೦ ೦೧೬,

ಪ್ರಮು. ೨೦೦೫, ಪು. ೬೪, ರೂ. ೪೫/-

ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯದಲ್ಲಿ ವಿಚಾರಸಾಹಿತ್ಯ ತುಂಬಾ ಕಡಿಮೆ. ಜೈನ, ಬ್ರಾಹ್ಮಣ, ವೀರಶೈವ ಮತ್ತಿತರ ಧರ್ಮಗಳ ನೆರಳಿನಲ್ಲಿಯೇ ಬಂದ ಸಾಹಿತ್ಯ ಹೆಚ್ಚು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಈ ಧರ್ಮಗಳ ನೆರಳಿನಲ್ಲಿ ನೇರವಾಗಿ ಸಾಹಿತ್ಯ ರಚನೆ ಆಗಿರದಿದ್ದರೂ ವೈಚಾರಿಕ ಸಾಹಿತ್ಯ ಎಂಬುದು ತೀರಾ ಕಡಿಮೆ ಪ್ರಮಾಣದಲ್ಲಿದೆ. ಕುವೆಂಪು, ಕಾರಂತ, ಎ. ಎನ್. ಮೂರ್ತಿರಾವ್, ಗೌರೀಶ ಕಾಯ್ಕಿಣಿಯವರಂಥ ಸಾಕಷ್ಟು ಲೇಖಕರು ಈ ಪ್ರಕಾರದಲ್ಲಿ ಬರೆದಿದ್ದಾರೆ. ಇಂಥ ವಿಚಾರಕೃತಿಗಳ ಸಾಲಿಗೆ ಹೊಸ ಸೇರ್ಪಡೆ ಈ ಮೇಲಿನ ಕಿರುಪುಸ್ತಕ. ಪ್ರೊ. ಜ್ಯೋತಿ ಹೊಸೂರರ ‘ಭ್ರಮೆಗಳ ಮೇಲೆ ಬೆಳಕು’ ಕೃತಿಯ ಹೆಸರೇ ಸೂಚಿಸುವಂತೆ ಇದು ನಮ್ಮ ಸಮಾಜದಲ್ಲಿರುವ ಅಜ್ಞಾನ, ಮೌಢ್ಯತೆ, ಧರ್ಮ ದೇವರು ಸ್ವಾಮಿಗಳ ಹೆಸರಿನಲ್ಲಿ ನಡೆಯುವ ಅಂಥ ಆಚರಣೆಗಳ ಬಗ್ಗೆ ಹೊಸ ಬೆಳಕು ಚೆಲ್ಲುತ್ತದೆ. ಸಂಪ್ರದಾಯ, ಮೌಢ್ಯತೆ, ಭಯ ಭಕ್ತಿಯ ಹೆಸರಿನಲ್ಲಿ ವಿಚಾರ ತರ್ಕ ಮಾಡದೆ ಕೇವಲ ವಿಧಿಗಳಂತೆ ಆಚರಿಸುತ್ತಿರುವ ಇಂಥವುಗಳನ್ನು ಲೇಖಕರು ಭ್ರಮೆಗಳು ಎಂದು ಕರೆಯುತ್ತಾರೆ. ಕೃತಿಯಲ್ಲಿ ಏಳು ಒಳ್ಳೆಯ ವೈಚಾರಿಕ ಲೇಖನಗಳಿವೆ.

ಜ್ಯೋತಿ ಹೊಸೂರರ ವಿಚಾರಗಳ ಮುಖ್ಯಾಂಶಗಳು : ವೇದಕಾಲದಿಂದ ಇಲ್ಲಿಯ ವರೆಗೂ ಗುರುವಿಗೆ ಮಾತ್ರ ಪ್ರಾಶಸ್ತ್ಯ ನೀಡಲಾಗಿದೆ, ಶಿಷ್ಯನಿಗೆ ನೀಡಿಲ್ಲ. ಗುರು ಮತ್ತು ಶಿಷ್ಯರಿಬ್ಬರಿಗೂ ಸಮಾನ ಸ್ಥಾನಗಳಿರ

ಬೇಕು. (ಈ ಗುರುಮಹಿಮೆ....?). ಮಾನವ ಶರೀರ ಮತ್ತು ಜೀವ(ಆತ್ಮ)ಗಳಿಂದ ಕೂಡಿದ ಒಂದು ವಿಚಾರಶೀಲ ಪ್ರಾಣಿ. ಈ ಮಾನವನಿಗೆ ಅವನ ಶರೀರ ಮತ್ತು ಮನಸ್ಸುಗಳು ಸ್ವಸ್ಥ ಸ್ಥಿತಿಯಲ್ಲಿ ಉಳಿಯುವಂತೆ ಮಾಡುವುದು ಅವನ ವಿಚಾರಶಕ್ತಿ. (ಮಾನವ : ಒಂದು ಜಿಜ್ಞಾಸೆ); ಭಾರತೀಯರ ಭ್ರಷ್ಟಾಚಾರಕ್ಕೆ ಮೂಲ ಪ್ರೇರಣೆಗಳೆಂದರೆ ದೇವರು, ಧರ್ಮ ಇತ್ಯಾದಿ ನಮ್ಮ ಸಂಪ್ರದಾಯಗಳು. (ಭಾರತೀಯ ಭ್ರಷ್ಟಾಚಾರ, ...); ಭಾರತದಲ್ಲಿನ ಚತುರ್ವರ್ಣಗಳು ವಿವಿಧ ಕಾರಣಗಳಿಂದ ಜಾತಿ-ಉಪಜಾತಿಗಳಾಗಿವೆ. (ಮತ ಧರ್ಮಗಳೆಲ್ಲ ಈಗ ಜಾತಿಗಳಾಗಿಲ್ಲವೆ?); ಮತ ದೀಕ್ಷೆಗೆ ವಯಸ್ಸಿನ ನಿರ್ಬಂಧ ಇರದಿರುವುದು ವ್ಯಕ್ತಿಯ ಮೂಲಭೂತ ಹಕ್ಕಿನ ಅಪಹರಣವಾಗಿದೆ. (ಬಾಲ್ಯ ಮತದೀಕ್ಷೆ ಮತ್ತು... ಅಪಹರಣ); ಪಾದಪೂಜೆ, ಪಾದೋದಕ ಸೇವನೆ, ಅಡ್ಡಪಲ್ಲಕ್ಕಿ ಉತ್ಸವಗಳಂಥ ಆಚರಣೆಗಳು ಅರ್ಥವಿಲ್ಲದವು. (ಪಾದಪೂಜೆ, ... ಗುಲಾಮಗಿರಿ). ಇಂಥ ಪ್ರಗತಿಪರ ವಿಚಾರಗಳಿಂದ ಕೂಡಿದ ಈ ಕೃತಿ, ಚಿಂತನಶೀಲರಿಗೆ ಪ್ರಿಯವಾಗುವುದರಲ್ಲಿ ಸಂಶಯವಿಲ್ಲ.

– ಬಿ. ಜಿ. ಚನ್ನೇಶ್ ಹೊನ್ನಾಳಿ, ಕನ್ನಡ ವಿಭಾಗ, ಸ.ಪ್ರ.ದ.ಕಾಲೇಜು, ಹಿರೇಕೆರೂರ-೫೮೧ ೧೧೧

೫. ಕನ್ನಡಿಯ ಮುಂದೆ : ಸಿ. ಎಂ. ಮುನಿಸ್ವಾಮಿ

ಸುಷ್ಮಾ ಪ್ರಕಾಶನ, ೪೪/ಡಿ, ಎಂ.ಟಿ.ಎಸ್. ಕಾಲೊನಿ, ಕಾರವಾರ ರಸ್ತೆ, ಹುಬ್ಬಳ್ಳಿ-೨೪, ಪ್ರಮು.೨೦೦೪, ಪು.೮೪, ರೂ.೫೦/-

ಕವನ ಬರೆಯುವಾಗ ಕವಿಗೆ ಆಂತರಿಕ ತುಡಿದ ಅತಿ ಮುಖ್ಯ. ಇಲ್ಲಿ ಸಿ. ಎಂ. ಮುನಿಸ್ವಾಮಿಯವರ ಮನದ ತೀವ್ರ ತೊಳಲಾಟಗಳು ಕವನಗಳಾಗಿ ಹೊರಹೊಮ್ಮಿವೆ. "ಮೂಕ ವೇದನೆಯು ತಿದಿ / ನೆಲಕ್ಕೊತ್ತಿ ಮಲಗಿದ್ದಾಗ / ದುಃಖದ ಬುಗ್ಗೆಯೊಂದು ಅಂತರಾಳದಿಂದೊಗೆದ / ನೀರ ಹನಿ ಕಣ್ಣಾಲಿಗಳಿಂದ ಚಿಮ್ಮಿ / ... ನನ್ನ ಕವಿತೆ ಜಿಮ್ಮುತ್ತದೆ I" (ನನ್ನ ಕವಿತೆ) ಹೀಗೆ ಕವಿಯ ದುಃಖ ಕವನವಾಗುವ ರೀತಿಯನ್ನು ಮುನಿಸ್ವಾಮಿಯವರೇ ಹೇಳಿಕೊಂಡಿದ್ದಾರೆ. "ಕಂಡಿದ್ದೆ ಎದೆಯೊಳಗೆ / ನೂರಾರು ಮುಖವಾಡ / ಮನೆಯೊಳಗೊಂದು. / ಮಡದಿಯ ಮುಂದೊಂದು; / ...ನನ್ನ ನಿಜದ ಮುಖ / ನನಗೆ ಕಾಣಲೇ ಇಲ್ಲ." (ಕನ್ನಡಿಯ ಮುಂದೆ) ಸುಂದರ ಸ್ನಿಗ್ಧ ನಗುವನ್ನು ಹೊತ್ತ, ಕಪಟವರಿಯದ, ಮುಗ್ಧ ಮನದ, ಎದೆಯಲ್ಲಿ ಸಂತಸ ಕಣ್ಣುಗಳಲ್ಲಿ ಕನಸುಗಳ ಮಿಂಚು ತುಂಬಿಕೊಂಡು, ತುಂಟ ಕನವರಿಕೆಗಳನ್ನು ತುಟಿಗಳಲ್ಲಿ ಹೊತ್ತು ತಿರುಗುತ್ತಿದ್ದ ಆ ಬಾಲ್ಯದ ಸುಂದರ ಮುಖ ನೋಡಲು ಕಾತರಿಸಿದ ಕವಿ ಕನ್ನಡಿಯ ಮುಂದೆ ನಿಂತಾಗ ತನ್ನ ಮುಖ ಕಂಡು ಹೃದಯ ದಿಗಿಲುಗೊಳ್ಳುತ್ತದೆ. ನಾವು ನಾವೇ ಆಗಿರದೆ ನಮ್ಮನ್ನು ಕಳೆದುಕೊಂಡು ಅಪರಿಚಿತರಾಗಿಬಿಡುವ ಕಳವಳವನ್ನು ತಮ್ಮ ಪ್ರತಿಬಿಂಬದ ಮೂಲಕ ಮನ ತಟ್ಟುವಂತೆ ಚಿತ್ರಿಸಿದ್ದಾರೆ. ತಮ್ಮ ಮೊದಲ ಕೃತಿಯಲ್ಲಿಯೇ ಓದುಗರ ಮನ ಹಿಡಿದಿಡುವ ಪರಿಗಾಗಿ ಸಿ. ಎಂ. ಮುನಿಸ್ವಾಮಿ ಅಭಿನಂದನೆಗೆ ಅರ್ಹರು.

– ಸುಮಿತ್ರಾ ಹಲವಾಯಿ, 'ವಿಶಾಲ', ಶಕ್ತಿನಗರ, ೨ ನೆಯ ಮುಖ್ಯರಸ್ತೆ, ಧಾರವಾಡ-೫೮೦ ೦೦೪

ಸಂಕಲನ : ಅನಿಸಿಕೆ

೧. ನಿಮ್ಮ 'ಕಡೀಪುಟ' ಮೊದಲಿಗೇ ಓದಿ ಬಿಡ್ತೀನಿ, ಪುರಸತ್ತಾದಾದ್ಯಾಂಗ ಕತಿ, ಕವನ, ವಿಚಾರ, ವಿಮರ್ಶೆ ನೋಡೂದು.

ಸಂಗ : ಸಂಘ ಅಕ್ಷರ (ದನಿ) ವ್ಯತ್ಯಾಸದಿಂದ ಅರ್ಥವ್ಯತ್ಯಾಸನೂ ಆಗ್ತದನ್ನೂ ನಿಂ ಹರಟಿ ಓದಿದ ಮ್ಯಾಲೆ, ನನಗೂ ಸೊಲ್ಪ ಹರಟೀ ಬರೆಯೂ ಹವ್ಯಾಸ ಹುಟ್ಟಿ, ಈ ಕಾರ್ಡು ಬರೀತ್ತೀನಿ. ಅಲ್ಪಪ್ರಾಣ, ಮಹಾಪ್ರಾಣ; ದೇಸೀ ಕನ್ನಡ, ಸಂಸ್ಕೃತ ಕನ್ನಡ: ತತ್ಸಮ, ತದ್ಭವ– ಇಂಥಾವನ್ನ ಕನ್ನಡ ಸಾಲೀ ಮಾಸ್ತ್ರು ಹುಡುಗರಿಗೆ ಕೀವೀಹಿಂಡಿ ಕಲಿಸಬೇಕು. ಇಲ್ಲಾ, 'ಹಸೀ ಗ್ವಾಡ್ಯಾಗ ಹಳ್ಳ

ನಟ್ಟಂಗ' ಕ್ಲಾಸಿನ್ಯಾಗ ತಿಳಿಸಿ ಹೇಳಬೇಕು. ಹಂಗ ಕಲಸೂ-ತಿಳಿಸೂ ಮಾಸ್ತರ್ ಆಗಲೀ ಪ್ರೊಫೆಶರ್ ಆಗಲೀ ಈಗೆಲ್ಲಿ ಸಿಗ್ತಾರ! ಹಗಲ ಹೊತ್ನ್ಯಾಗs ದೀಪಾ ಹಚಿಕೊಂಡು 'ವಿಶ್ವ'ದ 'ವಿದ್ಯಾ'ನೇ 'ಲಯ'ವಾದಂಥ ಮಠ ಪೀಠದಾಗನೇ ಸಿಗಾಂಗಿಲ್ಲ.

ಇರಲಿ. ಸಂಗಮ್ಮನಂಥಾವರು ಕನ್ನಡ ನಾಡ ತುಂಬ ನಡಸೋ ಉಚ್ಚಾರ-ಲಿಪಿ ಹಾವಳಿ ಎಷ್ಟೇ ಮೂದಲಿಸಿದರೂ ಮುಗಿಯೂದಲ್ಲ. ಒಂದೇ ಮಾತಿನ್ಯಾಗ ಹೇಳೂದಾದ್ರ– ಬಹಿರಂಗದಾಗ ಎಲ್ಲಾರೂ ಕೂಡಿಕೊಂಡರ ಸಂಘ : ಮಹಾಪ್ರಾಣ. ಅರ್ಥಾತ್ ಭಾಳ ಪ್ರಾಣ. ಅಂತರಂಗದಾಗ ಸೊಲ್ಪೇ ಸೊಲ್ಪ ಮಂದಿ ಕೂಡಿದರ ಸಂಗ. ಅದರಾಗೂ ಸತ್ಸಂಗ, ದುರ್ಜನರ ಸಂಗ (ಸರ್ವಜ್ಞ ಹೇಳಿದ್ಹಂಗ) : ಇದು ಅಲ್ಪಪ್ರಾಣ. ಅರ್ಥಾತ್ ಪ್ರಾಣವನ್ನು 'ಅಲ್ಪ' (ಕ್ಷುಲ್ಲಕ) ಮಾಡುವಂಥಾದ್ದು. ಈ ಅಲ್ಪಪ್ರಾಣ, ಮಹಾಪ್ರಾಣ ಒಮ್ಮೊಮ್ಮೆ ಜೀವಾ ತಗೋತಾವ; ಹಂಗs ಕೆಲವು ಸಲ ನಗದವರನ್ನೂ ನಗಸ್ತಾವ. ಹಿಂಗೊಂದು ನಗೀ ಪ್ರಸಂಗ ನೆನಪಾತು ಹೇಳ್ತೀನಿ :

ಧಾರವಾಡದಾಗ ಒಬ್ಬ ಪಿಎಚ್.ಡಿ. ಗೈಡು ಮನಿಗೆ ಹೋದಾಗ ತಂ ಮಗಳ ಲಗ್ನಪತ್ರಿಕಾ ತೋರಿಸಿದ್ರು. ಅದರಾಗ ಹೇಣ್ತಿ ಹೆಸರನ್ನ 'ಯಶೋಧಮ್ಮ' ಅಂತ ಪ್ರಿಂಟ್ ಮಾಡಿದ್ರು. 'ಅದು ಯಶೋದಮ್ಮ ಆಗಬೇಕರಿ' ಅಂದೆ. 'ಅದ್ಯಾಕ?' ಕೇಳಿದರವರು. ನಾ ವ್ಯಾಕರಣ ಪಾಠ ಸುರು ಹಚ್ಚಿದೆ : "ಯಶೋ+ದಾ=ಯಶೋದಾ : ಇಲ್ಲೆ 'ದಾ' ಅಂದರೆ ಕೊಡುವವಳು. ಹೀಂಗs ವರದಾ, ಶುಭದಾ, ನರ್ಮದಾ... ಅಂತೇನವ, ಅದೆಲ್ಲಾ ಅಲ್ಪಪ್ರಾಣದ 'ದಾ'..." ಅದಕ್ಕವರು ಸರಕ್ಕನೇ ಉತ್ರಾ ಕೊಟ್ರು : 'ವ್ಯಾಕರಣ-ಪಾಕರಣಾ ಬೆನ್ನ ಹತ್ತಿದಾಗ ನೀವನ್ನೂದು ಬರೋಬರಿ. ಆದರ ನಾ ಬೆನ್ನ ಹತ್ತಿದ್ದೇ ಬ್ಯಾರೇ. ಹಿಂಗಾಗಿ 'ಯಶೋಧಮ್ಮ' ಅಂತ ಬರೆದೆ. ತಿದ್ದೂ ಜರೂರತ್ ಇಲ್ಲ. ಚಾ ಕುಡೀತೀರೇನು' ಕೇಳಿದರು. 'ಹ್ಞೂ' ಅನಬೇಕೋ ಬ್ಯಾಡೋ ಅನ್ನೂದರಾಗ ಅವರು ಕೂತಲ್ಲಿಂದ ಅಡಗಿಮನೀಗೆ ಕೇಳೂಹಂಗ ಕೂಗಿದರು : "ಏ ಯಶೋಧಮ್ಮಾ, ಚಾ ತಗೊಂಬಾ. ನಂ ಪ್ರೊಫೇಶರ್ ಬಂದಾರ ಭಾಳ ದಿನದ ಮ್ಯಾಲೆ– ಪರಿಚಯ ಮಾಡಿಸ್ತೀನಿ".

ಗೃಹದೇವತೆ ಚಾ ತಂದರು. ಮೊದಲ ಸಲ ನಾ ಅವರನ್ನ ನೋಡಿದ್ದು. ನಮಸ್ಕಾರ ಹೇಳಿ 'ಚಾ ಕುಡೀರಿ' ಅಂತ ಉಪಚಾರ ಮಾಡಿ ದಾಂಡಿಗ್ಯಾ ದೇಹ ಹೊರಲಾರದ ಹೊತ್ತಗೊಂಡು ಗಜಗಮನೆ ಯಾದರು ಅಡಿಗಿಮನೀ ಕಡಿಗೆ.

ಎಂದೂ ನಗದ ಪಿಎಚ್.ಡಿ ಗೈಡರು ನಗತಾ ಕೇಳಿದರು : 'ನೋಡಿದಿರಲ್ಲಾ! ನಮ್ಮ ಮಿಸೆಸ್‌ಗ ಯಶೋ'ಧಮ್ಮ' ಅಂತ ಬರೀತೀರೋ, ನಿಮ್ಮ ಭಾಷಾಜ್ಞಾನದ ಪ್ರಕಾರ 'ಯಶೋದಮ್ಮ' ಅಂತ ಅಂತೀರೋ!'

ಧಮ್ಮ ಅನ್ವರ್ಥಕ ಗೌರವನಾಮದ ಮಹಿಮಾ ಕಂಡ ನಾನೂ ಮನಸಾರೆ ನಕ್ಕೆ ಮತ್ತು ನಾ ಆವಾಗಿನಿಂದ ಮಹಾಪ್ರಾಣ, ಅಲ್ಪಪ್ರಾಣ ವ್ಯತ್ಯಾಸ ಗಿತ್ಯಾಸದ ಉಸಾಬರಿ ತಲ್ಯಾಗಿಂದ ಪಣಮ ಹಾಕೀನಿ.

– **'ಸರ್ವಜಿತ', ನವನಗರ**

೨. ಸಂಕಲನ-೨೯ ರ 'ಕಡೀಪುಟ' ಓದಿದೆ. ಗುಂಗು ಹಿಡಿಸಿದೆ. ಈ ಸಲದ ಡಾ. ಎಸ್. ಶೆಟ್ಟರ್ ಅವರ ಲೇಖನದ ವ್ಯಾಪ್ತಿ, ಗಾಢತೆ ಅಚ್ಚರಿ ತರಿಸುವಂತಿದೆ.

– **ಪ್ರಸನ್ನ, ಹೆಗ್ಗೋಡು**

೩. ಕರ್ನಾಟಕದ ಅಸಲೀ ಗಂಡ ಭಾಷಾ ಅಂದ್ರ ನಮ್ದುs(ಅ). ಅದರ ಜಾನಪದ ಸೊಗಡು, ಮನೀಬಳಕೆ ಮಾತು, ನಾವು ಸಾಲೀ ಕಲ್ಯುಮುಂದ ಬರೀತಿದ್ದ ಬರವಣಿಗಿ ರೂಪಾ(?) ಇವೆಲ್ಲಾ ಕೂಡಿಸಿ ಮಿಸಳ ಮಾಡಿ (ಭಡಂಗ) (ಗಿರಮಿಟ್) ಭಾಳ ರುಚಿಯಾಗಿ ಮಾಡಿ ಹೊಟಿತುಂಬ ಬಾಸಾ ನೀಡಿಧಂಗ. ಸರಳ (ಸರ್‌ಅಳ) ಭಾಷಾದಾಗ ಒನ್ನೇಪುಟ-ಕಡೀಪುಟ ಭಾಳ(ಭಯಂಕರ) ಖುಸಿ ಕೊಟ್ಟಾವ. ನನಗೂ ಕಲೀಲಿಕ್ಕ ಸಿಕ್ತು. – **ವಿದ್ಯಾಧರ ಮುತಾಲಿಕ ದೇಸಾಯಿ, ಠಾಕುರ್ಲಿ**

೪. **ಸಂಕಲನ-೨೯** ಸರ್ವಾಂಗಸುಂದರವಾಗಿ ಮೈದುಂಬಿಕೊಂಡು ಬಂದಿದೆ. 'ಕಡೀಪುಟ' ಮೊದಲ ಓದಿದೆ. ಅದರ ಚೇತೋಹಾರಿ ಗುಣ/ಅಪ್ಪಟ ತಾಜಾತನ ಗಪ್ಪು ಅಂತ ಹಿಡಿದು ನೇರವಾಗಿ ಎದೆಗೆ ತಟ್ಟುತ್ತದೆ. ಓದಿದಾಗೊಮ್ಮೆ ಹೊಸಾ ಹೊಸಾ ಅರ್ಥಾ ಕೊಡಾಕ ಹತ್ತತೈತಿ. ಇನ್ನು -ಕವಿರಾಜಮಾರ್ಗಮಂಥನ- ಲೇಖನಮಾಲೆ-೧೦ ತುಂಬ ಮೌಲಿಕವಾಗಿದೆ. ಯೋಚಿಸುವಂತೆ ಮಾಡಿದೆ. ಹೊಸ ಅರ್ಥ/ಖಚಿತ ಮಾಹಿತಿ ನೀಡಿದೆ. ಬಸವರಾಜ ವಕ್ಕುಂದರ ನಾಲ್ಕೂ ಕವಿತೆಗಳು ಹೃದ್ಯ! ಶಂಕರಗೌಡ ಸಾತ್ಮಾರ ಅವರ ಕವನ ಕೂಡ ಚೆನ್ನಾಗಿದೆ. ಸದ್ದುಗದ್ದಲವಿಲ್ಲದೆ ಅದ್ಭುತವಾದ ಸಾಹಿತ್ಯಸೃಷ್ಟಿ ಹಾಗೂ ಪ್ರಕಟನೆ ಮಾಡುತ್ತಿದ್ದೀರಿ. ಧಾರವಾಡ ಹಾಗೂ ಉತ್ತರ ಕರ್ನಾಟಕದ ಪರಿಸರವನ್ನು **ಸಂಕಲನ** ಬೆಚ್ಚಗೆ ಇಟ್ಟಿದೆ ಎಂದರೆ ಅತಿಶಯೋಕ್ತಿಯಾಗದು.

— **ಡಾ. ಅಶೋಕ ನರೋಡೆ,** ಮಹಾಲಿಂಗಪುರ

೫. **ಸಂಕಲನ-೨೮** ವಿಶಿಷ್ಟ ಲೇಖನಗಳಿಂದ ಮತ್ತು ಕವನಗಳಿಂದ ತುಂಬಾ ಗಮನ ಸೆಳೆಯಿತು. **ಸಂಕಲನ** ಸಂಚಿಕೆಯಿಂದ ಸಂಚಿಕೆಗೆ ತುಂಬಾ ಪ್ರಬುದ್ಧವಾಗಿ ಬೆಳೆಯುತ್ತಿದೆ. 'ಒನ್ನೇಪುಟ', 'ಕಡೀಪುಟ'ದಲ್ಲಿ ತಾವು ಬಳಸಿದ ಧಾರವಾಡದ ಜವಾರಿ ಭಾಷೆ ಹಿಡಿಸಿತು. 'ಒನ್ನೇಪುಟ'ದಲ್ಲಿ ಭಾವುಕ ಹಿಂದೀ ಫಾರಸೀ ಕವಿ ರಹೀಮರ ಕುರಿತು ಬರೆದ ಪರಿಚಯಾತ್ಮಕ ಲೇಖನ ಚೆನ್ನಾಗಿದೆ. ಕಡೀಪುಟ 'ಮಿತಿಯೊಳಗೆ ಮತಿ'ಯಿಟ್ಟುಕೊಂಡು ಓದುವ ಹಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಮೂರು ಚಿಂತನೆಗಳು ಅದ್ಭುತವಾಗಿವೆ. ರೂಪಕ, ಪ್ರತಿಮಾನಿಷ್ಠ ಭಾಷೆಯಿಂದ ಚಿಂತನೆಗಳು ಕಲಾತ್ಮಕವಾಗಿ ಕಾವ್ಯಾತ್ಮಕವಾಗಿ ಮೂಡಿಬಂದಿವೆ. ಚಿಂತನೆಗಳಲ್ಲಿ ತಮ್ಮ ಅದ್ಭುತ ಕಾವ್ಯಶಕ್ತಿಯ ಪರಿಚಯವಾಗುತ್ತದೆ.

— **ಜಂಬಣ್ಣ ಅಮರಚಿಂತ,** ರಾಯಚೂರು

೬. **ಸಂಕಲನ-೨೯** ಬಂತು. ಇಲ್ಲಿಯ ಕ್ರಿಶ್ಚಿಯನ್ ಹುಡುಗರಿಗೆ ಕನ್ನಡ ಸಂವಹನ ಹೇಳಿಕೊಡುತ್ತಿದ್ದೇನೆ. ವಾರಕ್ಕೆ ೨ ದಿನ ಮಾತ್ರ. ಇವತ್ತಿನ ಸಂಚಿಕೆಯಲ್ಲಿ ಬಂದ ನಾ. ಡಿಸೋಜರ 'ನನ್ನ ಅವ್ವ ಅಪ್ಪ' ಓದಿ ವಿವರಿಸಿ ಪಾಠ ಮಾಡಿದೆ. ಅವರಿಗೆ ಖುಶಿಯಾಯಿತು.

— **ಡಾ. ಶ್ರೀನಿವಾಸ ಹಾವನೂರ,** ಮಂಗಳೂರು

೭. **ಸಂಕಲನ** ಪತ್ರಿಕೆ ಸಾಹಿತ್ಯದಲ್ಲಿ ಅಭಿರುಚಿ ಇರುವವರಿಗೆ ಒಂದು ರಸದೌತಣವೇ ಆಗಿದೆ. 'ಒನ್ನೇಪುಟ' ಬಹಳ ಹಿಡಿಸಿತು. ಇತಿಹಾಸದ ಪುಟಗಳಲ್ಲಿ ಅಡಗಿಹೋಗಿದ್ದ ಅನೇಕ ಸತ್ಯಗಳು ಪ್ರಸಂಗಗಳು ಕವಿಗಳು ನಮಗೆ ಇಲ್ಲಿ ತಿಳಿಯುತ್ತಿದ್ದಾರೆ. 'ಒನ್ನೇಪುಟ' ಕಾವ್ಯರಚನಾಕಾರರ ಶ್ರೀಮಂತ ಸಂಸ್ಕೃತಿ, ಅವರ ಬದುಕಿನ ಬಗ್ಗೆ ಬೆಳಕು ಚೆಲ್ಲುತ್ತದೆ. ಇದನ್ನು ಹೀಗೆಯೇ ಮುಂದುವರಿಸಿರಿ.

— **ರಾಜೇಶ್ವರಿ ಪ್ರವೀಣ ಶಿಂಧೆ,** ಶಿರಸಿ

೮. ಸಂಕಲನ-೨೯ ರಲ್ಲಿ ಬಂದ ಬಸವರಾಜ ವಕ್ಕುಂದರ ನಾಲ್ಕು ಕವಿತೆಗಳನ್ನು ಓದಿದೆ. ಕಟ್ಟುವ ಕೆಲಸ ಎಷ್ಟೊಂದು ವ್ಯಾಪಕವಾಗಿದೆ ಎಂದು ತೋರಿಸಿಕೊಟ್ಟಿದ್ದಾರೆ. ಕಲ್ಲುಮೂರ್ತಿ ಒಡೆಯಬಲ್ಲುದು— ಅದೇ ಸ್ಥಾವರಕ್ಕಳಿವುಂಟು ಎಂಬುದು. ಜಂಗಮಕ್ಕೆ ಅಂದರೆ ಬುದ್ಧತತ್ತ್ವಕ್ಕೆ ಅಳಿವಿಲ್ಲ. ಕವಿತೆಯ ಶಕ್ತಿಯೇ ವಿಲಕ್ಷಣವಲ್ಲವೆ. ಅದರಲ್ಲಿ ವೈಚಿತ್ರ್ಯವೂ ಇಲ್ಲದಿಲ್ಲ.

— **ಡಾ. ಗುರುಲಿಂಗ ಕಾಪಸೆ,** ಧಾರವಾಡ

೯. ಬಸವರಾಜ ವಕ್ಕುಂದರ ಕವಿತೆಗಳು ಇಷ್ಟವಾದುವು. 'ಕಟ್ಟಬೇಕು' ಕವಿತೆ ಗರ್ಭದಿಂದ ಹಿಡಿದು ಚಟ್ಟದ ವರೆಗೆ ವಿಧವಿಧ ಕಟ್ಟುವಿಕೆಯ ಕ್ರಿಯೆಗಳ ಪಟ್ಟಿ ನೀಡಿದೆ. ಗಾಂಭೀರ್ಯ ಮಿಶ್ರಿತ ವಿನೋದ ಇಲ್ಲಿದೆ. ಬಾಯಿ ತೆರೆದು ಬಾಲಕೃಷ್ಣ ತಾಯಿಗೆ ವಿಶ್ವದರ್ಶನ ನೀಡಿದ ಪೌರಾಣಿಕ ಪ್ರಸಂಗ ನೆನಪಾಯಿತು. ಆಫಘಾನಿಸ್ತಾನದಲ್ಲಿ ಬುದ್ಧನ ಮೂರ್ತಿ ಒಡೆದು ನಾಶ ಮಾಡಿದ ಹಿನ್ನೆಲೆಯಲ್ಲಿ ಬರೆದ 'ಒಡೆಯಲಾರದ ಪ್ರತಿಮೆ'ಯು ಸುಂದರವಾಗಿದೆ. ಮೂರ್ತಿಗಳನ್ನು ಒಡೆಯಬಹುದು, ಅಮೂರ್ತವಾದ ಪ್ರತಿಮೆಗಳನ್ನಲ್ಲ ಎಂದು ಚೆನ್ನಾಗಿ ತಿಳಿಸಿದ್ದಾರೆ.

— **ಹಾಲಾಡಿ ಮಾರುತಿರಾವ್,** ಬೆಂಗಳೂರು

೧೦. ಸಂಕಲನ-೨೯ ಕೈಸೇರಿತು. ಓದಿ ಖುಷಿಪಟ್ಟೆ. ಆದರೆ, ಕೆಲವೇ ಗಂಟೆಗಳಲ್ಲಿ ಮುಗಿದೇ ಹೋಗುವುದಲ್ಲ ಎಂಬ ಬೇಸರ ಬಿಟ್ಟರೆ ಉಳಿದುದೆಲ್ಲ ಸಂತಸ ಕೊಡುವ ವಿಷಯವೇ.

ಜಿ. ಬಿ. ಹರೀಶರ ಸಿವಿಎನ್‌ಆರ್‌ರ 'ಬಯಲು-ರೂಪ'ದ ಅನಾವರಣ ಚೆನ್ನಾಗಿ ಮೂಡಿಬಂದಿದೆ. ಡಾ. ಸುಮತೀಂದ್ರ ನಾಡಿಗರ 'ಬೇಂದ್ರೆ ಕಾವ್ಯಪದ್ಧತಿ'ಯಲ್ಲಿ 'ನಮ್ಮಲ್ಲಿ ಬಹಳ ಕವಿಗಳಿಗೆ ಶಬ್ದಗಳು ಗೊತ್ತಿರುತ್ತವೆಯೇ ಹೊರತು ಭಾಷೆ ಗೊತ್ತಿರುವುದಿಲ್ಲ'– ಎಂದು ಹೇಳಿರುವುದು ನನಗೆ ಸಂತಸ ತಂದಿತು. ವಾಗರ್ಥ-ಶಬ್ದಾರ್ಥದ ವ್ಯತ್ಯಾಸ ತಿಳಿಸಿ ಉಪಕರಿಸಿದ್ದಾರೆ. ಸಿ.ಪಿ.ಕೆ. ಅವರ ಟಿಪ್ಪಣಿಗಳು ಅನೇಕ ಕವಿಗಳ ಉದ್ಗ್ರಂಥಗಳನ್ನು ಪುನರವಲೋಕನ ಮಾಡಿಸುವಂತಿವೆ. ನಾ. ಡಿಸೋಜರ 'ಅಪ್ಪ ಅಮ್ಮ' ಬಹುವಾಗಿ ಹಿಡಿಸಿತು.

• ನನಗಂತೂ ನಿಮ್ಮ 'ಕಡೀಪುಟ' ಬ್ಯಾಡಪ ಅನ್ನುಮಟ್ಟಿಗೆ ಚಿಂತನಿಗಿ ಹಚ್ಚ್ತದ. ನಿಮ್ಮ ಕಾಲ್ಪನಿಕ ಲೇಖಕಿಯೋ ಅಥವಾ ನಿಜ ಲೇಖಕಿಯೋ. ಆದರೆ ಅಲ್ಪಪ್ರಾಣ ಮಹಾಪ್ರಾಣ ಹ್ರಸ್ವ ದೀರ್ಘ ಒತ್ತಕ್ಷರಗಳ ಬಗೆಗೆ ಉದಾಹರಣೆ ಸಹಿತ ವಿವರಿಸಿದ್ದೀರಲ್ಲ, ನೂರಕ್ಕೆ ಅದರ ದುಪ್ಪಟ್ಟಿನಷ್ಟು ನಿಜ. ಹಗಲಿರುಳು ಮಲಗಿರಲಿ ನಡೆದಾಡಲಿ, ಮೈಕ್ ಮುಂದಿರಲಿ ರಾಜಕಾರಣಿಗಳು 'ಒರಾ(ಲಾ)ಡು'ವುದರ ಪರಿಚಯ ನಿಮಗಿರಬಹುದು. ಡಾಕ್ಟರ್(?)ರಾದ ನಿಮಗೆ ಕವಿಗೋಷ್ಠಿಗಳಿಗೆ ಶ್ರೋತೃಗಳಾಗಿ ಹೋಗುವ ಭಾಗ್ಯ ಇಲ್ಲ. ಕಾಂಪೌಂಡರಾದ ನನಗಿದು ಇನ್ನೂ ಇದೆ. ನಾನೇ ಜಾದು 'ಅರಳೆ' ತಯಾರಿಸಿ ಇಟ್ಟುಕೊಂಡೇ ಹೋಗುವೆ. ಅಪಭ್ರಂಶ ಶಬ್ದಗಳು ಕೇಳೋದೇ ಇಲ್ಲ! ಇನ್ನು 'ವಿಜ್ಞಾನ'ದ ಶ್ರೋತೃಗಳಿಗೆ, ಅತಿಥಿಗಳಿಗೆ ತಾವು 'ಕೃತಘ್ನ'ರಾದ ಬಗ್ಗೆ ಹೊಗಳಿಕೊಳ್ಳುವುದಿದೆ. ಒಂದು ಪ್ರಸಿದ್ಧ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪಡೆದ ಮಹಾನುಭಾವರ ಸಂದರ್ಶನವನ್ನು ಟೀವಿಯಲ್ಲಿ ನೋಡಿ(ಕೇಳಿ) ದಂಗಾದೆ. ಒಟ್ಟಾರೆ ನಿಮ್ಮ ಕಡೀಪುಟದ ಚಾಟಿಏಟು ಪ್ರಬಲವಾಗಿದೆ. ಆದರೆ ಕುದುರೆ ಟಾಂಗಾಗಳಿಲ್ಲದೆ ಆಟೋಗಳಲ್ಲಿ ತಿರುಗಾಡುವುದರಿಂದ ಆ ಏಟಿನ ರುಚಿ ಗೊತ್ತಾಗುವುದು ಮಾತ್ರ ಅನುಮಾನ.

– ಶರಣಗೌಡ ಎರಡೆತ್ತಿನ, ಚಿತ್ರದುರ್ಗ

೧೧. ಎರಡು ತಿಂಗಳಲ್ಲಿ ಒಂದು ವಾರ ಚೇತೋಹಾರಿಯಾಗಿ ಕಳೆಯಲು ಸಂಕಲನ ಆಧಾರವಾಗಿದೆ.

– ಎಂ. ಡಿ. ಗೋಗೇರಿ, ಹುಬ್ಬಳ್ಳಿ

೧೨. ಸಂಕಲನ ತುಂಬ ಉಪಯುಕ್ತ ದ್ವೈಮಾಸಿಕ ಪತ್ರಿಕೆ. ವಿನ್ಯಾಸ ಮುದ್ರಣ ವಿಷಯ ಆಯ್ಕೆ ಎಲ್ಲವೂ ಚೆನ್ನಾಗಿದ್ದು ಸಂಗ್ರಾಹ್ಯವೆನಿಸುತ್ತದೆ. ಇಂಥ ಸಾಹಿತ್ಯಕ ಪತ್ರಿಕೆಯ ಆವಶ್ಯಕತೆ ತುಂಬಾ ಇತ್ತು. ಆ ಕೊರತೆಯನ್ನು ನೀವು ತುಂಬಿದ್ದೀರಿ.

– ಕೃಷ್ಣಮೂರ್ತಿ ಕಲುಮುಂಗಿ, ನವದೆಹಲಿ

೧೩. ಸಂಕಲನದ ಲೇಖನಗಳನ್ನು ಓದುವ ಕುತೂಹಲ, ಆತುರತೆಯನ್ನು ಕಣ್ಣಿನ ಪೊರೆಯ ಆಪರೇಷನ್ ಆಗಿದ್ದರೂ ತಡೆದುಕೊಳ್ಳದೆ ಓದಿದೆ. ಷ. ಶೆಟ್ಟರ್‌ರ ಕವಿರಾಜಮಾರ್ಗದ ಲೇಖನ ಕ್ರಿ.ಶ. ೧, ೨ ಹಾಗೂ ೩ ನೆಯ ಶತಮಾನದ ಕನ್ನಡದ ಸ್ಥಿತಿಗತಿಯ ವರೆಗೆ ಹೋಗಿರುವುದು. ತಮಿಳು ಸಾಹಿತ್ಯದ ಮೇಲಾಗಿರುವ ಪ್ರಭಾವ ಮತ್ತಿತರ ತಲಸ್ಪರ್ಶಿ ಸಂಗತಿಗಳನ್ನು ಓದಿ ಸಮಾಧಾನವಾಗಿದೆ. 'ನನ್ನ ಶಾಲಾ ಗುರುಗಳು', 'ಅವ್ವ ಅಪ್ಪ' ಲೇಖನಮಾಲೆ ಇನ್ನೂ ಕುತೂಹಲ, ತಾಜಾತನ ಉಳಿಸಿಕೊಂಡಿವೆ.

– ಎಚ್. ಎಸ್. ಪಾಟೀಲ, ಕೊಪ್ಪಳ

೧೪. ಬೆಂಗಳೂರಿನ 'ನಾರಾಯಣ ಹೃದಯಾಲಯ'ದಲ್ಲಿ ಆದ ಯಶಸ್ವಿ ಚಿಕಿತ್ಸೆಯ ನಂತರ ಮನೆಗೆ ಬಂದ ತಕ್ಷಣ ಕಣ್ಣಿಗೆ ಬಿದ್ದ ಸಂಕಲನ ತೆಗೆದು ಕಡೀಪುಟ ಓದಿದರೆ ಸಂಗಮ್ಮ ನಿಮಗೆ ಬರೆದ ಪತ್ರ! ಆಕೀ ಕನಡಾ ಎಮ್ಮೆ ಧಾರವಾಡದ್ದೋ? ಮೈಸೂರು ಕಡೇದೋ? ಗೊತ್ತಾಗಲಿಲ್ಲ. ಓದಿ ಬೇಸರವಾದರೂ ನಗು ಬಂತು. ಷ. ಶೆಟ್ಟರ್ ಅವರ 'ದ್ರಾವಿಡ ಸಂಬಂಧ' ತುಂಬಾ ಇಷ್ಟವಾದ ಲೇಖನ. ನಾ. ಡಿಸೋಜ ಅವರ 'ನನ್ನ ಅಪ್ಪ ಅಮ್ಮ' ಓದಿ ಕಣ್ಣು ಹನಿಗೂಡಿದವು.

– ಸಿ. ಸೋಮಶೇಖರಯ್ಯ, ಚಿತ್ರದುರ್ಗ

೨೦೦೫ ರಲ್ಲಿ ಪ್ರಕಟಿತ
ಸಂಕಲನ ೧೯ ರಿಂದ ೨೪ ರ
ಸಮಗ್ರ ಸಾಮಗ್ರಿ ದರ್ಶನ

I. 'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ : ಕೃತಜ್ಞತಾ ಲೇಖನಗಳು

೧. ನನ್ನ ಅಪ್ಪ ನನ್ನ ಅವ್ವ : ಎಂ. ರಾಮಚಂದ್ರಗೌಡ : ಸಂಕಲನ-೧೯ : ಪು. ೧೫-೨೧
೨. ನನ್ನ ಅಪ್ಪ ಅಮ್ಮ : **ಜಿ. ಟಿ. ಶ್ರೀಧರ ಶರ್ಮ** : ಸಂ-೨೦ : ಪು. ೧೫-೨೧
೩. ನನ್ನ ಅಪ್ಪಯ್ಯ ಮತ್ತು ಅಮ್ಮ : **ಪ್ರೇಮಾ ಭಟ್** : ಸಂ-೨೦ : ಪು. ೨೨-೨೬
೪. ನನ್ನ ಅಪ್ಪ - ಅವ್ವ : **ಎನ್ಕೆ ಕುಲಕರ್ಣಿ** : ಸಂ-೨೧ : ಪು. ೫-೧೨
೫. ನನ್ನ ಅಪ್ಪ ನನ್ನ ಅಮ್ಮ : **ಮೋಹನ ಹಬ್ಬು** : ಸಂ-೨೨ : ಪು. ೧೨-೧೭
೬. ನಮ್ಮಮ್ಮಪ್ಪ : **ರಾಗಿಣಿ ಆರ್.** : ಸಂ-೨೩ : ಪು. ೨೪-೩೧
೭. ನನ್ನ ಅಪ್ಪ ನನ್ನ ಅಮ್ಮ : **ಕೆ. ವಿ. ಉಭಯಭಾರತಿ** : ಸಂ-೨೪ : ಪು. ೧೪-೧೯
೮. ನನ್ನ ಅವ್ವ ನನ್ನ ಅಪ್ಪ : **ಪಾಂಡುರಂಗ ಕೋಟಿ** : ಸಂ-೨೪ : ಪು. ೨೩-೨೬

II. 'ನನ್ನ ಶಾಲಾ ಗುರುಗಳು' ಮಾಲಿಕೆ : ಗೌರವ ಲೇಖನಗಳು

೧. ನನ್ನ ಶಾಲಾ ಗುರುಗಳು : **ಶಿವಶಂಕರ ಹಿರೇಮಠ** : ಸಂಕಲನ-೧೯ : ಪು. ೫-೧೨
೨. ನನ್ನ ಶಾಲಾ ಗುರುಗಳು : **ಟಿ. ಆರ್. ರಾಧಾಕೃಷ್ಣ** : ಸಂ-೨೦ : ಪು. ೫-೧೪
೩. ನನ್ನ ಗುರುಗಳು : **ಶ್ಯಾಮಲಾ ಮಾಧವ** : ಸಂ-೨೧ : ಪು. ೧೪-೨೨
೪. ಗುರು ಗುನ ಲಿಖಾ ನ ಜಾಯ್ : **ಶೈಲಾ ಛಬ್ಬಿ** : ಸಂ-೨೨ : ಪು. ೫-೧೦
೫. ನನ್ನ ಶಾಲಾ ಗುರುಗಳು : **ಬಸವರಾಜ ಚಿಕ್ಕನರಗುಂದ** : ಸಂ-೨೩ : ಪು. ೫-೯
೬. ನನ್ನ ಗುರುಗಳು : **ಎಂ. ಡಿ. ಗೋಗೇರಿ** : ಸಂ-೨೩ : ಪು. ೧೦-೧೯
೭. ನನ್ನ (ಶಾಲಾ!) ಗುರುಗಳು : **ಅಮೃತ ರಾ. ಯಾರ್ದಿ** : ಸಂ-೨೪ : ಪು. ೫-೧೩

III. ಕವಿರಾಜಮಾರ್ಗ ಮಂಥನ : ಷ. ಶೆಟ್ಟರ್ ಅವರಿಂದ ವಿಶೇಷ ಲೇಖನಗಳು

೧. ಭೂಮಿ ಮತ್ತು ಭೂಪತಿ : ಪೆಱನಾವಂ ಧರಾಚಕ್ರಕ್ಕೆಱೆಯಂ ಕೆಳೆಯಪ್ಪವಂ? : ಸಂಕಲನ-೧೯ : ಪು. ೩೪-೫೩
೨. ದ್ರಾವಿಡ ಸಂಬಂಧ -೧ : ತೊಲ್ಕಾಪ್ಪಿಯಾಣಾರ್ ಮತ್ತು ಮಾರ್ಗಕಾರನ ಸಂವೇದನಾ ಸ್ವರೂಪ : ಸಂ-೨೦ : ಪು. ೨೮-೪೪
೩. ದ್ರಾವಿಡ ಸಂಬಂಧ -೨ : ಆರಂಭ ಕಾಲದ ದ್ರಾವಿಡ ಭಾಷಾ ನಕಾಶೆ : ಸಂ-೨೧ : ಪು. ೨೬-೪೦
೪. ದ್ರಾವಿಡ ಸಂಬಂಧ -೩ : ಕಡಲು ಕುಡಿದ ಭೂಮಿಯ ನಕಾಶೆ : ಸಂ-೨೨ : ಪು. ೩೧-೪೧
೫. ದ್ರಾವಿಡ ಸಂಬಂಧ -೩ : ಕಡಲು ಕುಡಿದ ಭೂಮಿಯ ನಕಾಶೆ : ಸಂ-೨೩ : ಪು. ೪೫-೫೬

IV. ಲೇಖನಗಳು

೧. ಸಮಕಾಲೀನ ಮಹಿಳಾ ಸಾಹಿತ್ಯ : ಎಸ್. ವಿ. ಪ್ರಭಾವತಿ : ಸಂಕಲನ-೧೯ : ಪು. ೨೪-೩೩
೨. ಕನ್ನಡದಲ್ಲಿ ಕಲ್ಲಚ್ಚು ಅರ್ಥಾತ್ ಶಿಲಾಬರಹದ ಮುದ್ರಣ : ಶ್ರೀನಿವಾಸ ಹಾವನೂರ : ಸಂ-೧೯ : ಪು. ೫೪-೬೦
೩. ಅಭಿವೃದ್ಧಿಯ ಅನ್ವೇಷಣೆ : ಅರವಿಂದ ಚೊಕ್ಕಾಡಿ : ಸಂ-೧೯ : ಪು. ೬೧-೭೨

•

೪. ಕನ್ನಡದಲ್ಲಿ ಈಚಿನ ಸಂಶೋಧನ ಪ್ರಬಂಧಗಳು : *ಹರಿಕೃಷ್ಣ ಭರಣ್ಯ* : ಸಂ-೨೦ : ಪು. ೪೬-೫೨
೫. ಕುವೆಂಪು ಸಾಹಿತ್ಯದಲ್ಲಿ ಶೂದ್ರ ಸಂಸ್ಕೃತಿ-ದರ್ಶನ : *ಮನು ಬಳಿಗಾರ್* : ಸಂ-೨೦ : ಪು. ೫೫-೬೩

•

೬. ಕೀರ್ತಿನಾಥ ಕುರ್ತಕೋಟಿ : ಅಭಿಜಾತ ಪ್ರತಿಭೆ ಮತ್ತು ಸ್ವಂತಿಕೆಯ ಚಡಪಡಿಕೆ : **ಸಿ. ಎನ್. ರಾಮಚಂದ್ರನ್** : ಸಂ-೨೧ : ಪು. ೪೪-೫೪
೭. ೨೦ನೆ ಶತಮಾನದ ಕನ್ನಡ ಸಾಹಿತ್ಯ... : **ಟಿ. ಸಿ. ಪೂರ್ಣಿಮಾ** : ಸಂ-೨೧ : ಪು. ೬೩-೬೮

•

೮. ಶಾಸನೋಕ್ತ ತುಳಿಲಸಂದಕುಲದವರು : *ಎಸ್. ಬಿ. ಹಿರೇಮಠ* : ಸಂ-೨೨ : ಪು. ೧೮-೨೬
೯. ಎಚ್.ಎಸ್.ವಿ. ಅವರ 'ಮೂವತ್ತು ಮಳೆಗಾಲ' : *ಸ. ರಘುನಾಥ* : ಸಂ-೨೨ : ಪು. ೪೩-೪೮

•

೧೦. ಆದ್ಯ ಮರಾಠೀ ನಾಟಕಕಾರ ಮತ್ತು ಯಕ್ಷಗಾನ : **ಶ್ರೀನಿವಾಸ ಹಾವನೂರ** : ಸಂ-೨೩:ಪು.೩೪-೩೯
೧೧. ಜನಾನುರಾಗವೂ ರಂಗಭೂಮಿಯೂ : **ಪ್ರಸನ್ನ** : ಸಂ-೨೩ : ಪು. ೫೭-೫೯

•

೧೨. ಸಾಂಸ್ಕೃತಿಕ ಪಠ್ಯವಾಗಿ ಯಶೋಧರ ಚರಿತೆ : **ಎಚ್. ಎಸ್. ರಾಘವೇಂದ್ರ ರಾವ್** : ಸಂ-೨೪ : ಪು. ೨೭-೪೦
೧೩. ಕುವೆಂಪು ಮತ್ತು ದಲಿತ ಪ್ರಜ್ಞೆ : **ಸಿ. ಪಿ. ಕೃಷ್ಣಕುಮಾರ್** : ಸಂ-೨೪ : ಪು. ೪೨-೪೫
೧೪. ಮಹಾನವಮಿ ಮಹೋತ್ಸವ : **ಷ. ಶೆಟ್ಟರ್** : ಸಂ-೨೪ : ಪು. ೪೬-೬೦
೧೫. ಮೊದಲನೇ ಮರಾಠೀ ನಾಟಕ ಮತ್ತು ಕರ್ನಾಟಕದ ಭಾಗವತ ಮಂಡಳಿ : **ಚಂದೂಲಾಲ್ ದುಬೆ** : ಸಂ-೨೪ : ಪು. ೬೩-೬೮

V. ಲಲಿತ ಪ್ರಬಂಧ, ವ್ಯಕ್ತಿಚಿತ್ರ, ನೆನಪುಗಳು ಇತ್ಯಾದಿ

೧. ಸಾವೆಂಬ ಅನಿವಾರ್ಯತೆ : ಯು. ಎನ್. ಸಂಗನಾಳಮಠ : ಸಂಕಲನ-೨೦ : ಪು. ೬೪-೬೯
೨. ಚಿತ್ರಬ್ರಹ್ಮ ಎಚ್‌ಎಲ್‌ಎನ್‌ಸಿಂಹ : **ಹೆಚ್. ಎ. ಪಾರ್ಶ್ವನಾಥ್** : ಸಂ-೨೧ : ಪು. ೫೫-೬೩
೩. ಕನ್ನಡ ಒಲುಮೆಯ ಮರಾಠೀ ಪ್ರಾಧ್ಯಾಪಕ : **ಕೃ. ಶಿ. ಹೆಗಡೆ** : ಸಂ-೨೨ : ಪು. ೬೬-೭೧
೪. ಸಿಡಿಎನ್ : ಒಂದು ಮಧುರ ನೆನಪು : **ಶ್ರೀನಿವಾಸ್ ವಿ. ಸುತ್ರಾವೆ** : ಸಂ-೨೩ : ಪು. ೬೨-೬೫
೫. ಅನನ್ಯ ಭಾಷೋಪಾಸಕ, ಅನುವಾದಕ ಬಿ. ಆರ್. ನಾರಾಯಣ್ : **ತಿಪ್ಪೇಸ್ವಾಮಿ** : ಸಂ-೨೪ : ಪು. ೬೧-೬೩

VI. ಏಕಾಂಕ, ಮಕ್ಕಳ ನಾಟಕ ಇತ್ಯಾದಿ

೧. ಅಮೇರಿಕಾ... ಅಮೇರಿಕಾ!! : *ದಮಯಂತಿ ನರೇಗಲ್ಲ* : ಸಂಕಲನ-೨೨ : ಪು. ೪೯-೬೫

VII. ಕವಿತೆಗಳು

೧. ಗುಬ್ಬಿ ಬಂದಿತ್ತು : *ವಿಜಯಾ ಶ್ರೀಧರ್* : ಸಂಕಲನ-೧೯ : ಪು. ೧೨-೧೪
೨. ಅಯ್ಯು ಕವಿತೆಗಳು : *ಸುನಂದಾ ಪ್ರಕಾಶ ಕಡಮೆ* : ಸಂ-೧೯ : ಪು. ೨೨-೨೪

•

೩. ಐದು ಕವಿತೆಗಳು : *ಜ್ಯೋತಿ ಗುರುಪ್ರಸಾದ್* : ಸಂ-೨೦ : ಪು. ೨೬-೨೭
೪. ಹನ್ನೆರಡು ಹನಿಗಳು : *ಸಿ. ಪಿ. ಕೃಷ್ಣಕುಮಾರ್* : ಸಂ-೨೦ : ಪು. ೪೫-೪೬
೫. ಮೂರು ಕವಿತೆಗಳು : *ಎಲ್. ಸಿ. ಸುಮಿತ್ರಾ* : ಸಂ-೨೦ : ಪು. ೫೩-೫೪

•

೬. ಮೂರು ಕವಿತೆಗಳು : *ಜಿ. ಮಲ್ಲಿಕಾ ಬಸವರಾಜು* : ಸಂ-೨೧ : ಪು. ೧೨-೧೩

೭. ಕೈಫೀ ಆಜ್‌ಮಿಯವರ ನಾಲ್ಕು ಕವಿತೆಗಳು : *ವಿಭಾ* : ಸಂ-೨೧ : ಪು. ೨೩-೨೫

೮. ಬನ್ನಿ ಕನಸುಗಳೆ ಬನ್ನಿ : *ಮಾಧವಿ ಭಂಡಾರಿ* : ಸಂ-೨೧ : ಪು. ೨೫

೯. ಎರಡು ಕವಿತೆಗಳು : *ವೈ. ಬಿ. ಹಾಲಬಾವಿ* : ಸಂ-೨೧ : ಪು. ೪೧-೪೨

೧೦. ದೇವತೆಗಳ ಪುಟ್ಟ ಗಂಟೊಳಗೆ : *ಆರ್. ಪವಿತ್ರ ಪ್ರಿಯಭಾಷಿಣಿ* : ಸಂ-೨೧ : ಪು. ೪೨-೪೩

•

೧೧. ಸಖಿಗಾಥಾ : *ಲಲಿತಾ ಸಿದ್ದಬಸವಯ್ಯ* : ಸಂ-೨೨ : ಪು. ೧೧-೧೨

೧೨. ಒಂದು ಭ್ರೂಣದ ಆತ್ಮಕತೆ... : *ಸಂಕುಲಜೀವ* : ಸಂ-೨೨ : ಪು. ೨೬-೨೭

೧೩. ಮೂರು ಕವಿತೆಗಳು : *ಎಲ್. ವಿ. ಶಾಂತಕುಮಾರಿ* : ಸಂ-೨೨ : ಪು. ೨೭-೩೦

೧೪. ಬಿಂದುದಶಕ : *ಸಿ. ಪಿ. ಕೆ.* : ಸಂ-೨೨ : ಪು. ೪೧-೪೨

•

೧೫. ಮೂರು ಕವಿತೆಗಳು : *ಜಿ. ಕೆ. ರವೀಂದ್ರಕುಮಾರ್* : ಸಂ-೨೩ : ಪು. ೧೯-೨೧

೧೬. ಎಲ್ಲರೂ ಯಾರೂ : *ರೇಣುಕಾ ಕೋಡಗುಂಟಿ* : ಸಂ-೨೩ : ಪು. ೨೧

೧೭. ಆರು ಕವಿತೆಗಳು : *ಮಮತಾ ಜಿ. ಸಾಗರ* : ಸಂ-೨೩ : ಪು. ೨೨-೨೩

೧೮. ಹೊಗೆವಿಮಾನ : *ಎಂ. ಡಿ. ಒಕ್ಕುಂದ* : ಸಂ-೨೩ : ಪು. ೩೧-೩೨

೧೯. ಎಲ್ಲ ಮರೆತು, ಮತ್ತೆ ಅನ್ನಕ್ಕೆ... : *ವಿನಯಾ* : ಸಂ-೨೩ : ಪು. ೩೨-೩೩

೨೦. ಏಳು ಹಿಂದೀ ಕವಿತೆಗಳು : *ಜಿ. ಭಾಸ್ಕರ ಮಯ್ಯ* : ಸಂ-೨೩ : ಪು. ೩೯-೪೪

೨೧. ಅಯ್ದು ಖಿತಾಗಳು : *ಜಂಬಣ್ಣ ಅಮರಚಿಂತ* : ಸಂ-೨೩ : ಪು. ೪೪

೨೨. ಎರಡು ಕವಿತೆಗಳು : *ಲಕ್ಕೂರು ಸಿ. ಆನಂದ* : ಸಂ-೨೩ : ಪು. ೫೯-೬೧

•

೨೩. ನವ ಶಾಯರಿಗಳು : *ಎಸ್. ಸೀತಾರಾಮು* : ಸಂ-೨೪ : ಪು. ೧೩

೨೪. ಮೂರು ಕವಿತೆಗಳು : *ವಿಜಯ ಧಾರವಾಡ* : ಸಂ-೨೪ : ಪು. ೧೯-೨೩

೨೫. ನೀ ನನಗೆ ಬೇಡ, ಕಣೆ ! : *ಶ್ರೀವತ್ಸ ದೇಸಾಯಿ* : ಸಂ-೨೪ : ಪು. ೨೬

೨೬. ನಾಲ್ಕು ಕವಿತೆಗಳು : *ಬಸವರಾಜ ವಕ್ಕುಂದ* : ಸಂ-೨೪ : ಪು. ೪೦-೪೨

VIII. ಪುಸ್ತಕ ಪರಿಶೀಲನೆ

• *ಸಂಕಲನ-೧೯* : ಪು. ೭೩-೮೦

೧. ಸಮಗ್ರ ದಿಗಂಬರ ಕಾವ್ಯ : ಅನು. : ಗುರುಮೂರ್ತಿ ಪೆಂಡಕೂರು – *ದೇಶಪಾಂಡೆ ಸುಬ್ಬರಾಯ*

೨. ಮಧ್ಯಂತರದ ಒಂದು ಗದ್ಯಗೀತೆ : ಶಶಿಕಲಾ ವೀರಯ್ಯಸ್ವಾಮಿ –*ಬಸವರಾಜ ವಕ್ಕುಂದ*

೩. ಮೂರು ಕಿರುನಾಟಕಗಳು : ಶ್ರೀನಿವಾಸ್ ವಿ. ಸುತ್ರಾವೆ –*ಬಸವರಾಜ ವಕ್ಕುಂದ*

೪. ನಿಶಾ ನಿಮಂತ್ರಣ : ಅನು. : ಪಾಂಡುರಂಗ ಕೋಟಿ —*ಅಂಕದ ಮುರಿಗೆಪ್ಪ*

೫. ಸಲಸಲದ ಪಾಡು : ವಿಜಯಕಾಂತ ಪಾಟೀಲ —*ಅಂಕದ ಮುರಿಗೆಪ್ಪ*

೬. ಕಳಕಳಿ : ಡಾ. ಪ್ರಹ್ಲಾದ ಅಗಸನಕಟ್ಟೆ –*ಆರ್. ಜಿ. ಮಠಪತಿ*

೭. ತೇಲ್‌ನೋಟ : ಕು. ಗೋ. –*ಆರ್. ಜಿ. ಮಠಪತಿ*

೮. ರಿಹರ್ಸಲ್ : ಚಂದ್ರಕಾಂತ ಕುಸನೂರ –*ಬಾಳಣ್ಣ ಸೀಗಿಹಳ್ಳಿ*

೯. ಮಿಂಚು : ಶಿರೀಷ್ ಜೋಶಿ –*ಬಾಳಣ್ಣ ಸೀಗಿಹಳ್ಳಿ*

೧೦. ಪಾಶುಪತ ದರ್ಶನ : ಎಸ್. ಎಸ್. ಹಿರೇಮಠ – *ಚಂದ್ರಶೇಖರ ವಸ್ತ್ರದ*

- **ಸಂಕಲನ-೨೦ : ಪು. ೭೦-೭೮**

೧೧. ಗತಿ-ಚಿತ್ರ : ಪ್ರಮೀಳಾ ಚೊಕ್ಕಾಡಿ –*ದುಷ್ಯಂತ ನಾಡಗೌಡ*

೧೨. ಹೊಸ್ತಿಲು ಹಿಮಾಲಯದ ಮಧ್ಯೆ : ವಾಸುದೇವ ನಾಡಿಗ್ –*ದುಷ್ಯಂತ ನಾಡಗೌಡ*

೧೩. ಕಣ್ಣಳತೆ : ಟಿ. ಸಿ. ಪೂರ್ಣಿಮಾ –*ಬಂದಗದ್ದೆ ರಾಧಾಕೃಷ್ಣ*

೧೪. ಇಬ್ಬನಿ : ಅಪ್ಪಾಸಾಹೇಬ ಅಲಿಬಾದಿ –*ದೇಶಪಾಂಡೆ ಸುಬ್ಬರಾಯ*

೧೫. ಸುತ್ತಮುತ್ತ : ಎಚ್. ಎ. ಪಾರ್ಶ್ವನಾಥ್ –*ಮೋತಿಲಾಲ ಹಲವಾಯಿ*

೧೬. ತೇಜಸ್ವಿ ಕಥನ : ಟಿ. ಪಿ. ಅಶೋಕ –*ನಾ. ದಾಮೋದರ ಶೆಟ್ಟಿ*

೧೭. ನಮ್ಮೊಳಗಿನ ನಾವು : ವನಮಾಲಾ ಕಟ್ಟೇಗೌಡರ –*ಜಿ. ಟಿ. ಶ್ರೀಧರ ಶರ್ಮ*

೧೮. ಬಡಜನರು : ಅನು. ಶ್ರೀನಿವಾಸ ವಿ. ಸುತ್ರಾವೆ –*ಶಿವಶಂಕರ ಹಿರೇಮಠ*

೧೯. ಹೊನ್ನ ಬೆಳಕೆ ಬಾ : ಪಾರ್ವತಿ ಜಿ. ಐತಾಳ್ –*ಎಲ್. ವಿ. ಶಾಂತಕುಮಾರಿ*

೨೦. ಆಳು ಕೂಗಿನ ಹಕ್ಕಿ : ಬಸವರಾಜ ವಕ್ಕುಂದ –*ಸುಮಿತ್ರಾ ಹಲವಾಯಿ*

೨೧. ಅಪ್ಪ ಮತ್ತು ಮಣ್ಣು : ಶಶಿಕಲಾ ವೀರಯ್ಯಸ್ವಾಮಿ –*ಬಸವರಾಜ ವಕ್ಕುಂದ*

- **ಸಂಕಲನ-೨೧ : ಪು. ೬೯-೭೮**

೨೨. ಉತ್ತರದ ಸಂತ ಪರಂಪರೆ : ಮ. ಸು. ಕೃಷ್ಣಮೂರ್ತಿ –**ಪ್ರಸನ್ನ**

೨೩. ಜಡ ಮತ್ತು ಚೇತನ : ಸುಮತೀಂದ್ರ ನಾಡಿಗ – **ಬಸವರಾಜ ವಕ್ಕುಂದ**

೨೪. ಮುಗಿಲಿಲ್ಲದ ಜಗದಲ್ಲಿ : ದ್ವಾರಕಾನಾಥ ಹೆಚ್.ಕಬಾಡಿ – **ಸುಮಿತ್ರಾ ಹಲವಾಯಿ**

೨೫. ಅನ್ವಯ : ಅರವಿಂದ ಚೊಕ್ಕಾಡಿ – **ಪಿ. ಕೆ. ರಾಠೋಡ**

೨೬. ಆಯ್ದ ಕೀರ್ತನೆಗಳು : ಸಂ. ಬಸವರಾಜ ಸಬರದ, ಸಿ. ನಾಗಭೂಷಣ– **ಶಶಿಧರ ತೋಡಕರ**

೨೭. ಆಯ್ದ ವಚನಗಳು : ಸಂ. ಸಂಗಮೇಶ ಸವದತ್ತಿಮಠ, ಎಸ್. ಎಂ. ಹಿರೇಮಠ– **ಶ. ತೋ.**

೨೮. ಆಯ್ದ ಸ್ವರವಚನಗಳು : ಸಂ. ವ್ಹಿ. ಜಿ. ಪೂಜಾರ, ಈಶ್ವರಯ್ಯ ಮಠ– **ಶಶಿಧರ ತೋಡಕರ**

೨೯. ಆಯ್ದ ಸಣ್ಣ ಕತೆಗಳು :ಸಂ. ನಾಗಾಬಾಯಿ ಬುಳ್ಳಾ, ಗೀತಾ ನಾಗಭೂಷಣ– **ಶಶಿಧರ ತೋಡಕರ**

೩೦. ಆಯ್ದ ವೈಚಾರಿಕ ಪ್ರಬಂಧಗಳು : ಸಂ. ಎಂ. ಎಸ್. ಪಾಟೀಲ, ಸ್ವಾಮಿರಾವ್ ಕುಲಕರ್ಣಿ
– ಶಶಿಧರ ತೋಡಕರ

೩೧. ಪೂರ್ಣಿಮಾ : ಸಂ. ಪೂರ್ಣಿಮಾಭಿವಂದನ ಸಮಿತಿ– **ಶಶಿಧರ ತೋಡಕರ**

೩೨. ನನ್ನ ಮಗುವಿಗೆ ನಾ ಕಲಿಸಿದ್ದು ಹೀಗೆ : ಎಸ್. ಪಿ. ಪದ್ಮಪ್ರಸಾದ್ – **ಮೋತಿಲಾಲ ಹಲವಾಯಿ**

೩೩. ಸಂವಹನ ಕಲೆ :ಎಚ್. ಜಿ. ಸೋಮಶೇಖರ ರಾವ್ – **ಶಿವಶಂಕರ ಹಿರೇಮಠ**

- **ಸಂಕಲನ-೨೨ : ಪು. ೭೧-೭೮**

೩೪. ಕೆಬ್ಬೆನೆಲ : ಲಲಿತಾ ಸಿದ್ದಬಸವಯ್ಯ –*ಬಸವರಾಜ ವಕ್ಕುಂದ*

೩೫. ಕುಮಾರ ಗಂಧರ್ವ : ಶಿರೀಷ್ ಜೋಶಿ –*ಪ್ರಸನ್ನ*

೩೬. ಬಿದ್ದುದು ಗರಿಯಲ್ಲ; ಹಕ್ಕಿಯೇ! : ಎಚ್. ಎಂ. ಮರುಳಸಿದ್ದಯ್ಯ, ಬಿ. ಎಂ. ಮರಕಿಣಿ
–*ಅಶೋಕ ಶೆಟ್ಟರ್*

೩೭. ನಾಟಕತ್ರಯ : ಕೆ. ಎಸ್. ರತ್ನಮ್ಮ –*ನಾ. ದಾಮೋದರ ಶೆಟ್ಟಿ*

- **ಸಂಕಲನ-೨೩ : ಪು. ೬೬-೭೬**

೩೮. ಮಾಗಿಯ ಕೋಗಿಲೆ : ಸುಬ್ರಾಯ ಚೊಕ್ಕಾಡಿ –*ಚಂದ್ರಶೇಖರ ವಸ್ತ್ರದ*

೩೯. ಬಕುಲದ ದಾರಿ : ಎಲ್. ಸಿ. ಸುಮಿತ್ರಾ –*ಬಸವರಾಜ ವಕ್ಕುಂದ*

೪೦. ದೊಡ್ಡ ಬೆಟ್ಟದ ನೋಟ, ೪. ದೊಡ್ಡ ಬೆಟ್ಟದಿಂದ ಇನ್ನಷ್ಟು ನೋಟಗಳು : ಎಚ್. ವಿ. ನಾಗೇಶ್
–*ಶಿವಾನಂದ ಶೆಟ್ಟರ*

೪೧. ತೆರೆಮರೆ : ರಾಮಕೃಷ್ಣ ಮರಾಠೆ –*ನಾ. ದಾಮೋದರ ಶೆಟ್ಟಿ*

೪೨. ಸೋಮಣ್ಣನ ಸ್ಟಾರ್‌ನಿಂದ : ಎಚ್.ಜಿ.ಸೋಮಶೇಖರ ರಾವ್ –*ಅಶೋಕ ಶೆಟ್ಟರ್*

೪೩. ಜನಪದ ಕಥನ ಗೀತೆಗಳು : ಸಂ. ಪಿ. ಕೆ. ಖಂ., ಟಿ. ಎಂ. ಭಾ., –*ಶಶಿಧರ ತೋಡಕರ*

೪೪. ವಿರಾಟಪರ್ವಸಂಗ್ರಹ : ಸಂ. ಎಚ್. ಡಿ. ಪೋತೆ, ಚನ್ನಬಸವ –*ಶಶಿಧರ ತೋಡಕರ*

೪೫. ರಾಮಚಂದ್ರಚರಿತ ಪುರಾಣ ಸಂಗ್ರಹ : ಸಂ. ಶಾಂತಿನಾಥ ದಿಬ್ಬದ, ಎಸ್. ಶಿವಾನಂದ ಹಿರೇಮಠ –*ಶಶಿಧರ ತೋಡಕರ*

- **ಸಂಕಲನ-೨೪ : ಪು. ೬೯-೮೦**

೪೬. ಕುಲುಮೆಯೊಳಗಿನ ಚಿಲುಮೆ : ಅನು. ಸಿ. ನಾಗಣ್ಣ –*ದೇಶಪಾಂಡೆ ಸುಬ್ಬರಾಯ*

೪೭. ಅರಹಂತ : ಎಸ್. ರಾಮನಾಥ –*ದುಷ್ಯಂತ ನಾಡಗೌಡ*

೪೮. ಮಗು ಮಲಗಿದೆ ಎದೆಯ ಮೇಲೆ : ಎಂ. ಡಿ. ವಕ್ಕುಂದ –*ಗುಂಡಣ್ಣ ಕಲಬುರ್ಗಿ*

೪೯. ಬಯಲ ಬೆರಗು : ಬಸವರಾಜ ಡೋಣೂರ –*ವಿಜಯಕುಮಾರಿ ಎಸ್. ಕರಿಕಲ್*

೫೦. ಬೆಳಗು : ಚಂದ್ರಶೇಖರ ವಸ್ತ್ರದ –*ನಾ. ದಾಮೋದರ ಶೆಟ್ಟಿ*

೫೧. ಸ್ವರ್ಗಾದಪಿ ಗರೀಯಸಿ : ಜಿ. ಜೆ. ಹರಿಜಿತ್ –*ಎ. ಮುರಿಗೆಪ್ಪ*

೫೨. ಗಾಳಿಯ ಉಡುಗೊರೆ : ಜಿ. ಜೆ. ಹರಿಜಿತ್ –*ಎ. ಮುರಿಗೆಪ್ಪ*

೫೩. ಮಾಯವಾದ ಮೊಲ : ಜಿ. ಜೆ. ಹರಿಜಿತ್ –*ಎ. ಮುರಿಗೆಪ್ಪ*

೫೪. ಭಂಗಸ್ವನೆ : ಮಧುಸೂದನ ಜೆ. ಘಾಟೆ –*ಮೋತಿಲಾಲ ಹಲವಾಯಿ*

೫೫. ನಾನು ಮೋಸಗಾರನೇ? : ಟಿ. ವಿ. ಶ್ರೀನಾಥಶಾಸ್ತ್ರೀ –*ಹೆಚ್. ಎ. ಪಾರ್ಶ್ವನಾಥ್*

೫೬. ಆಗ್ನೇಯದಂಗಳದಲ್ಲಿ : ವೆಂಕಟೇಶ ಮಾಚಕನೂರ –*ಎಲ್. ವಿ. ಶಾಂತಕುಮಾರಿ*

IX. ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

೧. ನಮ್ಮಮ್ಮ ದಿನಾ ಕಸಬರಗಿ ಹಿಡಕೊಂಡು...	: ಸಂಕಲನ-೧೯	: ಪು. ೮೮
೨. ನಾ ಸಣ್ಣಾವ್ನ ಇದ್ದಾಗ ಒಮ್ಮೊಮ್ಮೆ ಸಂಜೀ ವ್ಯಾಳ್ಯೇಕ...	: ಸಂಕಲನ-೨೦	: ಪು. ೮೦
೩. ಸಿಕ್ಕ ಸಿಕ್ಕ ಮಣ್ಣಿನಿಂದ ಮೂರ್ತಿ ಮಾಡಾಕ ಬರೂದುಲ್ಲ...	: ಸಂಕಲನ-೨೧	: ಪು. ೮೦
೪. ಕಳೆಯೂದು, ಕಳೆದುಹೋಗೂದು, ಕಳಕೊಳ್ಳೂದು...	: ಸಂಕಲನ-೨೨	: ಆವರಣ ಪು. ೩
೫. ಒಬ್ಬ ಯಶಸ್ವೀ ಶಿಕ್ಷಕ ಒಬ್ಬ ಯಶಸ್ವೀ ಕವಿ ಆಗಿರತಾನ...	: ಸಂಕಲನ-೨೩	: ಪು. ೭೯-೮೦
೬. ನಮ್ಮ ಮನಿಗೆ ಪೇಪರ್ ಕೊಡಾಕ ಒಬ್ಬ ಹುಡುಗ ಬರ್ತಾನ...	: ಸಂಕಲನ-೨೪	: ಪು. ೮೩

ಕೈಮಗ್ಗದ ಬಟ್ಟೆಗಳನ್ನೇ ತೊಡಿರಿ

ದೇಸಿ ನಿಮ್ಮ ಹವ್ಯಾಸವಾಗಲಿ

ಸಂಕಲನಕ್ಕೆ ಶುಭಾಶಯಗಳು

ದೇಸಿ ಧರ್ಮದರ್ಶಿ ಸಂಸ್ಥೆ

೨೭, ಪಟಾಲಮ್ಮಗುಡಿ ಬೀದಿ, ಬಸವನಗುಡಿ, ಬೆಂಗಳೂರು-೫[illegible] ೦೦೪

✆ ೦೮೦-೨೬೫೭ ೬೬೬೯

೨೦೦೬ ರಲ್ಲಿ ಪ್ರಕಟಿತ
ಸಂಕಲನ ೨೫ ರಿಂದ ೩೦ ರ
ಸಮಗ್ರ ಸಾಮಗ್ರಿ ದರ್ಶನ

I. ಒನ್ನೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

೧. ಮಧ್ಯಕಾಲದ ೧೫ ನೇ ಶತಮಾನದ ಭಕ್ತಿ ಚಳವಳಿ... : ಸಂಕಲನ-೨೫ : ಪು. ೫
೨. ಭಾರತೀಯ ಸಾಂಸ್ಕೃತಿಕ ಮತ್ತು ಸಾಮಾಜಿಕ... : ಸಂಕಲನ-೨೬ : ಪು. ೫
೩. ಮಧ್ಯಕಾಲದ ಹಿಂದೀ ಸಾಹಿತ್ಯಾಕಾಶದ ಸೂರ್ಯ... : ಸಂಕಲನ-೨೭ : ಪು. ೫
೪. ಬೀರಬಲ್, ತಾನಸೇನ, ಗಂಗಕವಿ, ಟೋಡರಮಲ್... : ಸಂಕಲನ-೨೮ : ಪು. ೫
೫. ಯಾವಾಗಲೂ ಯುದ್ಧ, ಅಂತಃಕಲಹ, ಪರಕೀಯರ ದಾಳಿ... : ಸಂಕಲನ-೨೯ : ಪು. ೫
೬. ಭಾರತದ ರಾಜನೈತಿಕ ಇತಿಹಾಸದಲ್ಲಿ ೧೮ ನೆಯ... : ಸಂಕಲನ-೩೦ : ಪು. ೫

II. 'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ : ಕೃತಜ್ಞತಾ ಲೇಖನಗಳು

೧. ನನ್ನ ಅವ್ವ ನನ್ನ ಅಪ್ಪ : **ಶರಣಗೌಡ ಎರಡೆತ್ತಿನ** : ಸಂಕಲನ-೨೫ : ಪು. ೪೧-೪೬
೨. ನನ್ನ ತೀರ್ಥರೂಪರು : **ಈರಪ್ಪ ಎಂ. ಕಂಬಳಿ** : ಸಂ-೨೬ : ಪು. ೫೦-೬೧
೩. ನನ್ನ ಅಪ್ಪ ನನ್ನ ಅಮ್ಮ : **ಮಿರ್ಜಾ ಬಷೀರ್** : ಸಂ-೨೭ : ಪು. ೪೭-೫೪
೪. ನನ್ನ ಅವ್ವ ನನ್ನ ಅಪ್ಪ : **ಆರ್. ಮೋಹನ್ ಕುಮಾರ್** : ಸಂ-೨೮ : ಪು. ೫೫-೫೯
೫. ನನ್ನ ಅವ್ವ ನನ್ನ ಅಪ್ಪ : **ನಾ. ಡಿಸೋಜ** : ಸಂ-೨೯ : ಪು. ೪೨-೫೦
೬. ನನ್ನ ಪಪ್ಪ, ನನ್ನ ಅಮ್ಮ : **ಕೆ. ಉಷಾ ಪಿ. ರೈ** : ಸಂ-೩೦ : ಪು. ೫೧-೬೩

III. 'ನನ್ನ ಶಾಲಾ ಗುರುಗಳು' ಮಾಲಿಕೆ : ಗೌರವ ಲೇಖನಗಳು

೧. ನನ್ನ ಶಾಲಾ ಗುರುಗಳು : **ನರಸಿಂಹ ಪರಾಂಜಪೆ** : ಸಂಕಲನ-೨೫ : ಪು. ೩೮-೪೦
೨. ನನ್ನ ಶಾಲಾ ಗುರುಗಳು : **ಶ್ರೀನಿವಾಸ್ ವಿ. ಸುತ್ರಾವೆ** : ಸಂ-೨೬ : ಪು. ೪೫-೪೯
೩. ನನ್ನ ಶಾಲಾ ಗುರುಗಳು : **ಬಿ. ಎಂ. ರೋಹಿಣಿ** : ಸಂ-೨೭ : ಪು. ೩೮-೪೪
೪. ನನ್ನ ಶಾಲಾ ಗುರುಗಳು : **ಎಲ್. ವಿ. ಶಾಂತಕುಮಾರಿ** : ಸಂ-೨೮ : ಪು. ೪೫-೫೩
೫. ನನ್ನ ಶಾಲಾ ಗುರುಗಳು : **ಮಂದಾಕಿನಿ ಪುರೋಹಿತ** : ಸಂ-೨೯ : ಪು. ೩೪-೪೧
೬. ನನ್ನ ಶಾಲಾ ಗುರುಗಳು : **ಆರ್. ತಾರಿಣಿ ಶುಭದಾಯಿನಿ** : ಸಂ-೩೦ : ಪು. ೪೩-೫೦

IV. ಕವಿರಾಜಮಾರ್ಗ ಮಂಥನ : ಷ. ಶೆಟ್ಟರ್ ಅವರಿಂದ ವಿಶೇಷ ಲೇಖನಗಳು

೧. ದ್ರಾವಿಡ ಸಂಬಂಧ -೪ : ಕಾವೇರಿಯಿಂದಮಾ... : ಮಾರ್ಗಕಾರನು ಕನ್ನಡದೊಳ್ ಭಾವಿಸಿದ ಜನಪದದ ದಕ್ಷಿಣದಂಚಿನ ಚಾರಿತ್ರಿಕ ಹಿನ್ನೆಲೆ : ಸಂಕಲನ-೨೫ : ಪು. ೪೮-೬೧
೨. ದ್ರಾವಿಡ ಸಂಬಂಧ -೪ : ಕಾವೇರಿಯಿಂದಮಾ... : ಮಾರ್ಗಕಾರನು ಕನ್ನಡದೊಳ್ ಭಾವಿಸಿದ ಜನಪದದ ದಕ್ಷಿಣದಂಚಿನ ಚಾರಿತ್ರಿಕ ಹಿನ್ನೆಲೆ : ಸಂ-೨೬ : ಪು. ೬೨-೭೫
೩. ದ್ರಾವಿಡ ಸಂಬಂಧ -೫ : ಶಂಗಂ ಕಾಲದ ಕನ್ನಡ ನಾಡು : ಎರುಮೈಊರವರ್ : ಕ್ರಿಸ್ತಪೂರ್ವ ಕಾಲದ ಕನ್ನಡ ನಾಡಿನ ಅರಸರು : ಸಂ-೨೭ : ಪು. ೫೬-೭೮
೪. ದ್ರಾವಿಡ ಸಂಬಂಧ -೬ : ಕ್ರಿಸ್ತಪೂರ್ವದ ದಕ್ಷಿಣ ಭಾರತವನ್ನು ಬೆಸೆದ ಬ್ರಾಹ್ಮೀ ಲಿಪಿ : ಸಂ-೨೯ : ಪು. ೫೧-೬೯

V. ಲೇಖನಗಳು

೧. ಚಳವಳಿ : ಒಂದು ತಾತ್ವಿಕ ವಿವೇಚನೆ : ಎಚ್. ವಿ. ನಾಗೇಶ್ : ಸಂಕಲನ-೨೫ : ಪು. ೬-೧೩
೨. ರಾಮಚಂದ್ರದೇವ ಅವರ 'ಮಾತಾಡುವಮರ' : ಬಂದಗದ್ದೆ ರಾಧಾಕೃಷ್ಣ : ಸಂ-೨೫ : ಪು. ೧೭-೨೨
೩. ಭೈರಪ್ಪನವರ 'ಜಲಪಾತ' + ಮೊಗಸಾಲೆಯವರ 'ದೃಷ್ಟಿ' :
ಹಾಲಾಡಿ ಮಾರುತಿ ರಾವ್ : ಸಂ-೨೫ : ಪು. ೨೨-೨೪
೪. ಬಿಆರ್‌ಲಕ್ಷ್ಮಣರಾವ್ ಅವರ 'ಕ್ಯಾಮೆರಾ ಕಣ್ಣು' : ಸ.ರಘುನಾಥ : ಸಂ-೨೫ : ಪು. ೨೫-೨೮
೫. ನೇಪಾಳ ಮತ್ತು ಆರನೆಯ ವಿಕ್ರಮಾದಿತ್ಯ : ಜೆ. ಎಂ. ನಾಗಯ್ಯ : ಸಂ-೨೫ : ಪು. ೩೨-೩೭
೬. ಧರ್ಮಾಧಿಕಾರಿಗಳಿಗೆ ಬ್ರಹ್ಮಚರ್ಯ? : **ಶಿವನಕೆರೆ ಬಸವಲಿಂಗಪ್ಪ** : ಸಂ-೨೫ : ಪು. ೬೯-೭೪

●

೭. ಬಡತನವನ್ನು ಭೇದಿಸಲು ಶಿಕ್ಷಣ : **ಅರವಿಂದ ಚೊಕ್ಕಾಡಿ** : ಸಂ-೨೬ : ಪು. ೬-೧೯
೮. ಹಿಂಸೆ ಅಹಿಂಸೆ ಅಧಿಕಾರಗಳ ಸುತ್ತ : **ಸಿ. ಸೋಮಶೇಖರಯ್ಯ** : ಸಂ-೨೬ : ಪು. ೨೦-೨೪
೯. ಅಕ್ಷೋಭ್ಯ-ವಿದ್ಯಾರಣ್ಯ ವಾಕ್ಯಾರ್ಥ ನಿಜವೆ? : **ಶ್ರೀನಿವಾಸ ಹಾವನೂರ** : ಸಂ-೨೬ : ಪು. ೨೫-೩೨
೧೦. ಕರ್ನಾಟಕದ ಸ್ವಾತಂತ್ರ್ಯ ಚಳುವಳಿಗಳು ಮತ್ತು ಹೋರಾಟಗಾರರು :
ಎಚ್.ಆಯ್.ತಿಮ್ಮಾಪೂರ : ಸಂ-೨೬ : ಪು. ೩೩-೪೦
೧೧. ಪ್ರಸನ್ನರ 'ಹದ್ದು ಮೀರಿದ ಹಾದಿ' : **ಗಿರಿಜಾ ಶಾಸ್ತ್ರಿ** : ಸಂ-೨೬ : ಪು. ೪೧-೪೪

●

೧೨. ಪರಿಸರವಾದ ಮತ್ತು ಔದ್ಯೋಗೀಕರಣ : **ಯು. ವೆಂಕಟ್ರಾಜ ರಾವ್** : ಸಂ-೨೭ : ಪು. ೬-೨೧
೧೩. ರಾಘವೇಂದ್ರ ಪಾಟೀಲರ 'ತೇರು' : **ಹೊರೆಯಾಲ ದೊರೆಸ್ವಾಮಿ** : ಸಂ-೨೭ : ಪು. ೨೯-೩೪

●

೧೪. ಸಮಾಜವಾದಿಯ ಕನಸು : **ರಾಮಚಂದ್ರ ದೇವ** : ಸಂ-೨೮ : ಪು. ೬-೧೨
೧೫. ತೀ.ನಂ.ಶ್ರೀಕಂಠಯ್ಯನವರ ವಿಮರ್ಶಾಕೃತಿಗಳು : ಜಿ. ಆರ್. ತಿಪ್ಪೇಸ್ವಾಮಿ
: ಸಂ-೨೮ : ಪು. ೧೪-೨೧
೧೬. ಗುರುರಾಜ ಮಾರ್ಪಳ್ಳಿಯವರ 'ಅತಂತ್ರ' : **ಮಾಧವಿ ಭಂಡಾರಿ** : ಸಂ-೨೮ : ಪು. ೨೨-೨೭
೧೭. ಸತ್ಯ ಮತ್ತು ಸೌಂದರ್ಯ : ಕೆಲವು ಟಿಪ್ಪಣಿಗಳು : **ಪ್ರಕಾಶ ಹಲಗೇರಿ** : ಸಂ-೨೮ : ಪು. ೨೮-೩೪
೧೮. ಹೇಮಾ ಪಟ್ಟಣಶೆಟ್ಟಿಯವರ 'ಕನ್ನಡ ನಾಟಕಗಳಲ್ಲಿ ಸ್ತ್ರೀಲೋಕ' :
ಸಿ. ಎನ್. ರಾಮಚಂದ್ರನ್ : ಸಂ-೨೮ : ಪು. ೩೬-೩೯
೧೯. ಮೂರು ಚಿಂತನ : **ಸಿದ್ಧಲಿಂಗ ಪಟ್ಟಣಶೆಟ್ಟಿ** : ಸಂ-೨೮ : ಪು. ೫೯-೬೩

●

೨೦. ಸಿ.ಎನ್.ರಾಮಚಂದ್ರನ್ ಅವರ 'ಬಯಲು-ರೂಪ' : **ಜಿ.ಬಿ.ಹರೀಶ** : ಸಂ-೨೯: ಪು. ೬-೧೨
೨೧. ಬೇಂದ್ರೆ ಕಾವ್ಯಪದ್ಧತಿ : **ಸುಮತೀಂದ್ರ ನಾಡಿಗ** : ಸಂ-೨೯ : ಪು. ೧೫-೧೭
೨೨. ಕೆಲವು ಟಿಪ್ಪಣಿಗಳು : **ಪಿ.ಪಿ.ಕೆ.** : ಸಂ-೨೯ : ಪು. ೨೬-೩೩

●

೨೩. ಮಹಾನಾಟಕ ರಂಗಸಂಗೀತ : **ವಸಂತ ಕವಲಿ** : ಸಂ-೩೦: ಪು. ೬-೧೩
೨೪. ಹವಿಗನ್ನಡದ ಆರಂಭದ ೨ ಕಾದಂಬರಿಗಳು : **ಹರಿಕೃಷ್ಣ ಭರಣ್ಯ** : ಸಂ-೩೦: ಪು. ೧೫-೨೦
೨೫. ಜಯಂತ ಕಾಯ್ಕಿಣಿಯವರ 'ಇದ್ದಾಗ ಇದ್ದಾಂಗ' : **ಅನಂತ ಹುದೆಂಗಜೆ** : ಸಂ-೩೦: ಪು. ೨೧-೨೪

೨೬. 'ಗೀತೆ'ಯಲ್ಲಿ ಪುನರ್ಜನ್ಮ : ಒಂದು ತಾತ್ವಿಕ ಜಿಜ್ಞಾಸೆ :
ಸಿ. ಸೋಮಶೇಖರಯ್ಯ : ಸಂ-೩೦: ಪು. ೨೫-೩೩
೨೭. ಕುಂ. ವೀ. ಅವರ 'ಅರಮನೆ' : ಪ್ರಹ್ಲಾದ ಅಗಸನಕಟ್ಟೆ : ಸಂ-೩೦: ಪು. ೩೬-೪೨

VI. ಲಲಿತ ಪ್ರಬಂಧ, ವ್ಯಕ್ತಿಚಿತ್ರ, ನೆನಪುಗಳು ಇತ್ಯಾದಿ

೧. ಮಹಾನ್ ಸಾಧಕ ಕಾವ್ಯಾನಂದ : ಹೆಚ್. ಎ. ಪಾರ್ಶ್ವನಾಥ್ : ಸಂ-೨೫ : ಪು. ೬೨-೬೮
೨. ಬರೀ ಬಸ್ಸಲ್ಲೋ ಅಣ್ಣಾ, ಇದು ಬ್ರಹ್ಮಾಂಡ ! : ಚಿದಾನಂದ ಸಾಲಿ : ಸಂ-೨೭ : ಪು. ೨೨-೨೫

VII. ಕತೆ, ಮಕ್ಕಳ ಕತೆ, ಆತ್ಮಕತೆ, ಕಾದಂಬರಿ ಇತ್ಯಾದಿ

೧. ಕಥಾನಗರ -೧ : ಜೋಗಿಂದರ್ ಪಾಲ್ / ಅಬ್ದುಲ್ ಮಜೀದ್ ಖಾನ್ : ಸಂ-೨೮:ಪು. ೪೨-೪೪

VIII. ಕವಿತೆಗಳು

೧. ಅಯ್ದು ಕವಿತೆಗಳು : ಅರವಿಂದ ನಾಡಕರ್ಣಿ : ಸಂಕಲನ-೨೫ : ಪು. ೧೩-೧೬
೨. ಎದುರಿಗೆ ಹೆಣ ಬಂದ ಪ್ರಸಂಗ : ದೇಶಪಾಂಡೆ ಸುಬ್ಬರಾಯ : ಸಂ-೨೫ : ಪು. ೨೯-೩೧
೩. ಪಾಪದ ಕೊಳಗ : ದ್ವಾರಕಾನಾಥ್ ಹೆಚ್. ಕಬಾಡಿ : ಸಂ-೨೫ : ಪು. ೩೧
೪. ಕರಿ ನೆಲ : ಆನಂದ ಈ. ಕುಂಚನೂರ : ಸಂ-೨೫ : ಪು. ೪೬-೪೭

●

೫. ನಾಲ್ಕು ಹನಿಗವಿತೆ : ಟಿ. ಎಸ್. ರಾಜೇಂದ್ರ ಪ್ರಸಾದ್ : ಸಂ-೨೬ : ಪು. ೧೯
೬. ಸಾಲ ಬೋಧನೆ ಕೊಡಿ : ಅರುಣಕುಮಾರ ರಾಜಮಾನೆ : ಸಂ-೨೬ : ಪು. ೩೨

●

೭. ನೀವೇ ಪ್ರಮಾಣು : ಎಂ. ಡಿ. ಗೋಗೇರಿ : ಸಂ-೨೭ : ಪು. ೨೧
೮. ಎರಡು ಕನಸುಗಳು : ನಾ. ಮೊಗಸಾಲೆ : ಸಂ-೨೭ : ಪು. ೨೬
೯. ಒಂದು ಹೂ ಹೆಚ್ಚಿಗೆ ಇಡುತೀನಿ : ಲಲಿತಾ ಸಿದ್ದಬಸವಯ್ಯ : ಸಂ-೨೭ : ಪು. ೨೬-೨೮
೧೦. ವೋಲ್ಕರ್ ವರದಿ : ಎಂ. ಸುದರ್ಶನ ರಾಜ್ : ಸಂ-೨೭ : ಪು. ೨೮
೧೧. ನೆಲತಾಯಿ ವಟ್ಟ್ಯಾಗಿನ ಮಾತು : ಬಸವರಾಜ ಕೋಡಗುಂಟಿ : ಸಂ-೨೭ : ಪು. ೨೮
೧೨. ನಾಲ್ಕು ಕವಿತೆಗಳು : ಸುಮತೀಂದ್ರ ನಾಡಿಗ : ಸಂ-೨೭ : ಪು. ೩೫-೩೭
೧೩. ಮೂರು ಕವಿತೆಗಳು : ಸತೀಶ ಕುಲಕರ್ಣಿ : ಸಂ-೨೭ : ಪು. ೪೫-೪೬
೧೪. ವಿಂದಾ ಕರಂದೀಕರ್‌ರ ೫ ವಿರೂಪಿಕಾ ಪದ್ಯಗಳು : ಬಿ. ಎ. ಸನದಿ : ಸಂ-೨೭ : ಪು. ೫೪-೫೫

●

೧೫. ಎರಡು ಕವಿತೆಗಳು : ರೋಹಿತ ಚಕ್ರತೀರ್ಥ : ಸಂ-೨೮ : ಪು. ೧೨-೧೩
೧೬. ತೆರೆಯಲು ತೋರಣದ ಬಾಗಿಲು : ಮಹಾಂತಪ್ಪ ನಂದೂರ : ಸಂ-೨೮ : ಪು. ೨೧
೧೭. ಮೀನುಗಾರಿಕೆ ಕವನಗಳು : ಎಸ್. ಎಂ. ಶಿವಪ್ರಕಾಶ್ : ಸಂ-೨೮ : ಪು. ೩೪-೩೫
೧೮. ಎರಡು ಕವಿತೆಗಳು : ಸುಶೀಲಾ ಆರ್. ರಾವ್ : ಸಂ-೨೮ : ಪು. ೩೯-೪೦
೧೯. ಬದ್ಧತೆ : ಅಶೋಕ ನರೋಡೆ : ಸಂ-೨೮ : ಪು. ೪೦
೨೦. ರಾಮನವಮಿಯ ದಿನ : ರಾಮಗಿರಿ ರವೀಂದ್ರ : ಸಂ-೨೮ : ಪು. ೪೧
೨೧. ಜೇಬು+ಕೊಸರೊಂದು : ಆರ್. ನಿರ್ಮಲ : ಸಂ-೨೮ : ಪು. ೪೧-೪೨
೨೨. ಅಯ್ದು ಕವಿತೆಗಳು : ವಸುಂಧರಾ ದೇಸಾಯಿ : ಸಂ-೨೮ : ಪು. ೫೪

●

೨೩. ಎರಡು ಕವಿತೆಗಳು : ಆರ್. ಪವಿತ್ರ ಪ್ರಿಯಭಾಷಿಣಿ : ಸಂ-೨೯ : ಪು. ೧೩-೧೪
೨೪. ದೇಸಿ ದಿಬ್ಬ : ಎಸ್. ಜಿ. ಸಿದ್ಧರಾಮಯ್ಯ : ಸಂ-೨೯ : ಪು. ೧೮-೨೦
೨೫. ಅದಲು-ಬದಲು : ಎಸ್. ಆರ್. ಕುವಾರಕರ : ಸಂ-೨೯ : ಪು. ೨೦
೨೬. ನಾಲ್ಕು ಕವಿತೆಗಳು : ಬಸವರಾಜ ವಕ್ಕುಂದ : ಸಂ-೨೯ : ಪು. ೨೧-೨೫
೨೭. ಎರಡು ಕವಿತೆಗಳು : ರಾಜೇಶ್ವರಿ ಪ್ರವೀಣ ಶಿಂಧೆ : ಸಂ-೨೯ : ಪು. ೨೫
೨೮. ಪತ್ರ : ಜಯಶ್ರೀ ಕೆ. ಸಿ. : ಸಂ-೨೯ : ಪು. ೩೩
೨೯. ಎರಡು ಕವಿತೆಗಳು : ರಜಿಯಾ ಡಿ. ಬಿ. : ಸಂ-೨೯ : ಪು. ೪೧
೩೦. ಎರಡು ಕವಿತೆಗಳು : ಶಂಕರಗೌಡ ಸಾತ್ಮಾರ : ಸಂ-೨೯ : ಪು. ೫೦

•

೩೧. ಅಲೀ ಸರ್‌ದಾರ್ ಜಾಫ್‌ರೀಯವರ ಆರು ಕವಿತೆಗಳು : ವಿಭಾ : ಸಂ-೩೦ : ಪು. ೧೩-೧೫
೩೨. ಹಣ್ಣೆಲೆ ಚಿಗುರಿದಾಗ : *ಎಸ್. ಸೀತಾರಾಮು* : ಸಂ-೩೦ : ಪು. ೩೩-೩೫

IX. ಪುಸ್ತಕ ಪರಿಶೀಲನೆ

• **ಸಂಕಲನ-೨೫ : ಪು. ೭೫-೭೭**

೧. ಉಪವಾಸ ಪ್ರಹಸನ : ಉಮಾ ಹೆಗಡೆ ಚವತ್ತಿ –**ದುಷ್ಯಂತ ನಾಡಗೌಡ**
೨. ಕರ್ನಾಟಕ ಏಕೀಕರಣ ಮತ್ತು ಮಹಿಳೆ : ರತ್ನಶೀಲಾ ಶಿವಲಿಂಗಪ್ಪ ಗುರಡ್ಡಿ –**ಪಿ. ಕೆ. ರಾಠೋಡ**
೩. ಬೆಳಗಾವಿ ಜಿಲ್ಲೆಯ ಸಾಹಿತ್ಯ ದರ್ಶನ : ಸಂ. ಪಿ. ಜಿ. ಕೆಂಪಣ್ಣವರ –**ದೇ. ಸುಬ್ಬರಾಯ**
೪. ವಚನ ವಲ್ಲರಿ : ಅಪ್ಪಾಸಾಹೇಬ ಅಲಿಬಾದಿ –**ಬಸವರಾಜ ವಕ್ಕುಂದ**
೫. ಮುಸ್ಸಂಜೆಯಲ್ಲೊಂದು ಗ್ರಹಣ : ಸುಶೀಲಾ ಆರ್. ರಾವ್ –**ನಾ. ದಾಮೋದರ ಶೆಟ್ಟಿ**

• **ಸಂಕಲನ-೨೬ : ಪು. ೭೬-೭೯**

೬. ಮಂಚ : ವ್ಯಾಸರಾವ್ ನಿಂಜೂರ್ – **ಮಣಿಮಾಲಿನಿ ವಿ. ಕೆ.**
೭. *ಕನ್ನಡ ಹಾಯಿಕುಗಳು* : ಕೆ. ಬಿ. ಬ್ಯಾಳಿ – **ಸುಮಿತ್ರಾ ಹಲವಾಯಿ**
೮. *ವಚನ ವಿಹಾರ* : ಗುರುಲಿಂಗಯ್ಯ ಹಿರೇಮಠ – **ಸುಮಿತ್ರಾ ಹಲವಾಯಿ**
೯. *ನೀಹಾರಿಕಾ* : ಶ್ರೀನಿವಾಸ ಕಾರ್ಕಳ – **ಬಿ. ಎಂ. ರೋಹಿಣಿ**

• **ಸಂಕಲನ-೨೭ : ಪು. ೬೯-೭೮**

೧೦. ಸಮಚಿತ್ತ : ವಿಶ್ವನಾಥ ಕಾರ್ನಾಡ – **ವಿ. ಎಸ್. ಶ್ಯಾನಭಾಗ್**
೧೧. ಬಿ.ಎ.ಸನದಿ ಬದುಕು-ಬರಹ : ಜಿ.ಎನ್.ಉಪಾಧ್ಯ – **ಶ್ರೀನಿವಾಸ ಜೋಕಟ್ಟೆ**
೧೨. ಕುಲಕ್ಕೆ ತಿಲಕ ಮಾದಾರ ಚೆನ್ನಯ್ಯ : ಚಂದ್ರಶೇಖರ ವಸ್ತ್ರದ – **ಎ. ಮುರಿಗೆಪ್ಪ**
೧೩. ಹೆಣ್ಣು-ಹಕ್ಕು-ಹೋರಾಟ : ವೆಂ. ವನಜ – **ದೇಶಪಾಂಡೆ ಸುಬ್ಬರಾಯ**
೧೪. ಇತಿಹಾಸ ಮರೆತವರು : ಮರಿಯಪ್ಪ ನಾಟೇಕರ್ – **ಬಸವರಾಜ ವಕ್ಕುಂದ**
೧೫. ನದಿಗೊಂದು ಕನಸು ಮತ್ತು ಅವಳು : ಸತ್ಯಾನಂದ ಪಾತ್ರೋಟ – **ವಿನಯಾ**
೧೬. ಹೈಬ್ರಿಡ್ ಕತೆಗಳು : ಆರ್ಯ – **ಪ್ರಹ್ಲಾದ ಅಗಸನಕಟ್ಟೆ**
೧೭. ಸಾಹಿತ್ಯ ರೂಪ ಜಿಜ್ಞಾಸೆ : ಎಚ್. ವಿ. ನಾಗೇಶ್ –**ಶ್ಯಾಮಸುಂದರ ಬಿದರಕುಂದಿ**
೧೮. ದಲಿತ ಚಳುವಳಿಯ ನಾಳೆಗಳು : ಆರ್. ಟಿ. ವಿಠ್ಠಲಮೂರ್ತಿ –**ಶ್ಯಾ. ಬಿದರಕುಂದಿ**

• **ಸಂಕಲನ-೨೮ : ಪು. ೬೪-೭೫**

೧೯. ಕಲ್ಲಚ್ಚಿನ ಕನ್ನಡ ಹೊತ್ತಗೆಗಳ ವಿವರಣ ಸೂಚಿ : ಸಂ.ಗೌ.ಮ.ಉಮಾಪತಿ ಶಾಸ್ತ್ರಿ – **ಷ. ಶೆಟ್ಟರ್**
೨೦. ಡೊಳ್ಳಿನ ಹಾಡುಗಳು : ಜ್ಯೋತಿ ಹೊಸೂರ – **ಎ. ಮುರಿಗೆಪ್ಪ**

೨೧. ಹೊಚ್ಚ ಹೊಸತು ಹವೆ : ಎಂ. ಎಸ್. ವೆಂಕಟರಾಮಯ್ಯ – **ಪ್ರಹ್ಲಾದ ಅಗಸನಕಟ್ಟೆ**
೨೨. ಅಮ್ಮಣಗಿ : ಒಂದು ಅಧ್ಯಯನ : ಸಂ.ಎಲ್.ವ್ಹಿ.ಪಾಟೀಲ, ಗುರುಪಾದ ಮರಿಗುದ್ದಿ
– **ಎಂ. ಡಿ. ವಕ್ಕುಂದ**
೨೩. ಕನಸು ನನಸಾಯಿತು : ಅನು. ಕೃ. ಶಿ. ಹೆಗಡೆ – **ವಿಜಯಲಕ್ಷ್ಮಿ ರೇವಣಕರ**
೨೪. ಮನುಷ್ಯರನ್ನು ನಂಬಬಹುದು : ಸುಹಾಸಂ – **ಪರಮೇಶ್ವರಿ ಲೋಕೇಶ್ವರ್**
೨೫. ವಲಸೆ ಹೋದ ಕನ್ನಡಿಗನ ಕತೆ : ಹಿರೇಮಲ್ಲೂರ ಈಶ್ವರನ್ – **ಮೋತಿಲಾಲ ಹಲವಾಯಿ**
೨೬. ದೇಹವೀಣೆಯ ಸಪ್ತಸ್ವರ : ವಸಂತ. ಅ. ಕುಲಕರ್ಣಿ – **ಈಶ್ವರಚಂದ್ರ ಚಿಂತಾಮಣಿ**
೨೭. ಜುಮುರು ಮಳೆ : ಸುಮಂಗಲಾ – **ಸುನಂದಾ ಪ್ರಕಾಶ ಕಡಮೆ**
೨೮. ನೆರಳು ಚೆಲ್ಲಿದ ಮಾಮರ : ಸಂ. ಶಿವರಾಂ ಪೈಲೂರು – **ದೇಶಪಾಂಡೆ ಸುಬ್ಬರಾಯ**
೨೯. ಕಾಳಾಮುಖ ದರ್ಶನ : ಎಸ್. ಎಸ್. ಹಿರೇಮಠ – **ಕಿಕ್ಕೇರಿ ನಾರಾಯಣ್**
೩೦. ಹರಿಯುವ ನದಿಗೆ ಮೈಯೆಲ್ಲ ಕಾಲು : ಜಂಬಣ್ಣ ಅಮರಚಿಂತ – **ದುಷ್ಯಂತ ನಾಡಗೌಡ**

- **ಸಂಕಲನ-೨೯ : ಪು. ೭೦-೭೭**

೩೧. ಹೀಗೊಂದು ವೃತ್ತಾಂತ : ವ್ಹಿ. ಬಿ. ಅರ್ತಿಕಜೆ – **ಅಶೋಕ ಶೆಟ್ಟರ್**
೩೨. ಜಾಗತೀಕರಣ ಮತ್ತು ಸಂಸ್ಕೃತಿ : ಸಂ. ದಸ್ತಗೀರಸಾಬ್ ದಿನ್ನಿ – **ಚಿದಾನಂದ ಸಾಲಿ**
೩೩. ಒಂದು ಪಯಣದ ಕಥೆ : ಬ್ರೆಕ್ಟ್, ಅನು : ಎಸ್. ಮಾಲತಿ – **ಬಂದಗದ್ದೆ ರಾಧಾಕೃಷ್ಣ**
೩೪. ಕನ್ನಡ ಕಲಾ ಸಂವಹನ : ಸ್ವಾಮಿರಾವ ಕುಲಕರ್ಣಿ – **ಬಿ. ಜಿ. ಚನ್ನೇಶ್ ಹೊನ್ನಾಳಿ**
೩೫. ಓ! ಕೆನಡಾ : ಗುರುಮೂರ್ತಿ ಪೆಂಡಕೂರು – **ಹೆಚ್. ಎ. ಪಾರ್ಶ್ವನಾಥ್**
೩೬. ಕಪ್ಪು ನದಿ ಮತ್ತು ಅರಣ್ಯ : ಅಮರೇಶ ಕುಂಬಾರ – **ದೇಶಪಾಂಡೆ ಸುಬ್ಬರಾಯ**
೩೭. ಚಿತ್ರದುರ್ಗ ಜಿಲ್ಲಾ ಇತಿಹಾಸ .... : ಲಕ್ಷ್ಮಣ ತೆಲಗಾವಿ – **ಕಿಕ್ಕೇರಿ ನಾರಾಯಣ್**

- **ಸಂಕಲನ-೩೦ : ಪು. ೬೪-೬೭**

೩೮. ಕನ್ನಡ ಉಳಿಸಿ, ಬೆಳೆಸುವ ಬಗೆ : ಶಿಕಾರಿಪುರ ಕೆ. ಹರಿಹರೇಶ್ವರ
– **ಶ್ಯಾಮಸುಂದರ ಬಿದರಕುಂದಿ**
೩೯. ಛಲದಂಕಮಲ್ಲ ಲೋಕಾಯುಕ್ತ ಎನ್. ವೆಂಕಟಾ'ಛಲ' : ಸಂ.ವೆಂಕಟೇಶ ಕುಲಕರಣಿ
– **ಹೆಚ್. ಎ. ಪಾರ್ಶ್ವನಾಥ್**
೪೦. ದೇಹ ದೇಗುಲಕ್ಕೊಂದು ಪ್ರಣಾಮ : ವಸಂತ ಅ. ಕುಲಕರ್ಣಿ – **ಈಶ್ವರಚಂದ್ರ ಚಿಂತಾಮಣಿ**
೪೧. ಭ್ರಮೆಗಳ ಮೇಲೆ ಬೆಳಕು : ಜ್ಯೋತಿ ಹೊಸೂರ – **ಬಿ. ಜಿ. ಚನ್ನೇಶ್ ಹೊನ್ನಾಳಿ**
೪೨. ಕನ್ನಡಿಯ ಮುಂದೆ : ಸಿ. ಎಂ. ಮುನಿಸ್ವಾಮಿ – **ಸುಮಿತ್ರಾ ಹಲವಾಯಿ**

X. ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

೧. ಸ್ವಲ್ಪ ದಿವಸದ ಹಿಂದ ಬಿಹಾರದ ಕೆಲವು ಕವಿಗಳ ಕವಿತಾ... : ಸಂಕಲನ-೨೫ : ಪು. ೭೯
೨. ಇಷ್ಟ ವರ್ಷ ಆದಮ್ಯಾಲೆ ಈ ಪ್ರಶಸ್ತಿ, ಸನ್ಮಾನ ಈಗ... : ಸಂ-೨೬ : ಪು. ೮೦+ಆ.ಪು. ೩
೩. ನಾನು ರೆಗ್ಯುಲರ್ ಆಗಿ ವಾಕಿಂಗ್ ಹೋಗುದುಲ್ಲ... : ಸಂ-೨೭ : ಪು. ೮೦+ಆ.ಪು. ೩
೪. ಅಪಹ್ನುತಿ, ಭ್ರಮ, ಸಂದೇಹ ಮುಂತಾದವುಗಳನ್ನು... : ಸಂ-೨೮ : ಪು. ೮೦+ಆ.ಪು. ೩
೫. ಧಾರವಾಡ ಸೀಮಿಯೊಳಗ ಇತ್ತಿತ್ತಲಾಗಿ ಭಯಂಕರ... : ಸಂ-೨೯ : ಪು. ೮೦+ಆ.ಪು. ೩
೬. ನಿನ್ನೆ ಏನೇನೋ ಮಾತಾಡ್ತ ಮಾತಾಡ್ತ ನಾನು... : ಸಂ-೩೦ : ಆವರಣ ಪು. ೩

XI. ಸಂಕಲನ ೧೯ ರಿಂದ ೨೪ ರಲ್ಲಿ ಪ್ರಕಟಿತ ಸಮಗ್ರ ಸಾಮಗ್ರಿ ದರ್ಶನ : ಸಂಕಲನ-೩೦ : ಪುಟ ೭೧-೭೫

XII. ಸಂಕಲನ ೨೫ ರಿಂದ ೩೦ ರಲ್ಲಿ ಪ್ರಕಟಿತ ಸಮಗ್ರ ಸಾಮಗ್ರಿ ದರ್ಶನ : ಸಂಕಲನ-೩೦ : ಪುಟ ೭೬-೮೦

ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ನಿನ್ನೆ ಏನೇನೋ ಮಾತಾಡ್ತ ಮಾತಾಡ್ತ ನಾನು, ನಿನ್ನ ತಲಿ ಕೆಟ್ಟಯಿತ್ತ ಅಂದಬಿಟ್ಟೆ. ನನ್ನ ತಲಿ ಬರೊಬ್ಬರ ಇಲ್ಲಂತಿಯೋ ಅಥವಾ ಕೆಟ್ಟಯಿತ್ತ ಅಂತನ್‌ಅ ಹೇಳತೀಯೋ ಅಂತ ನೀ ಕೇಳಿದಿ. ನನ್ನ ಮಾತಿನೊಳಗ ಒಂದು ನಿಷೇಧಾರ್ಥಕ ನಿರ್ಣಯ ಇತ್ತು. ನಿನ್ನ ಮಾತಿನೊಳಗ ಅದರ ಖಂಡನೆಯೂ ಇರಲಿಲ್ಲ, ಸ್ವೀಕೃತಿನೂ ಇರಲಿಲ್ಲ. ಬದಲಾಗಿ ಸಕಾರಾತ್ಮಕವಾದ ಸಜ್ಜನ ತಿದ್ದುಪಡಿ, ಸೂಚನೆ, ಸಲಹೆ, ಉಪದೇಶ ಮತ್ತು ಒಂದು ಥರದ ಕಳಕಳಿ ತುಂಬಿತ್ತು. ನಿನ್ನ ದನಿಯೊಳಗ ಸಮಾಧಾನ ಇತ್ತು, ನಿನ್ನನ್ನ ನೀನು ಸಮರ್ಥನೆ ಮಾಡಿಕೊಳ್ಳದಿದ್ದರೂ, ನಿನ್ನ ನಿಲವಿನ ಬಗ್ಗೆ ನಾನು ಇನ್ನೊಮ್ಮೆ ವಿಚಾರ ಮಾಡಬೇಕು ಅನ್ನುವ ಅನಾಗ್ರಹಿತ ಅಪೇಕ್ಷೆ ನಿನ್ನ ಮಾತಿನೊಳಗ ಇತ್ತು. ನನ್ನ ಅಜ್ಞಾನದ ಬಗ್ಗೆ, ಒಮ್ಮೊಮ್ಮೆ ಥಟ್ಟನ ಮಾತಾಡಿಬಿಡುವ ಸ್ವಭಾವದ ಬಗ್ಗೆ ನಿನಗ ಚಿಂತಿ ಆಗಿತ್ತು. ನಾನು 'ಕೆಟ್ಟ' ಶಬ್ದಾ ಬಳಸಿದ್ದೆ, ನೀನು ಭಾಳ ಸಮಾಧಾನದಿಂದ 'ಬರೊಬ್ಬರ' ಪದಾ ಕೊಟ್ಟದ್ದಿ.

ನಿನ್ನೆ ಅಷ್ಟಾದ ಮ್ಯಾಲ ನಾವಿಬ್ಬರೂ ಮಾತು ಮುಂದುವರಿಸಿರಲಿಲ್ಲ. ನಿನ್ನ ಬಗ್ಗೆ ಆಗೂದಕಿಂತ ಹೆಚ್ಚಿನ ಬ್ಯಾಸರ ನನಗ ನನ್ನ ಮ್ಯಾಲ್‌ಅ ಆಗಿತ್ತು. ಆದರ ನನ್ನ ಮ್ಯಾಲಂತೂ ನಿನಗ ಬ್ಯಾಸರ ಆಗಿದ್ದಿಲ್ಲ ಖರೆ, ಆದರ ನನ್ನ ದುಡುಕಿನ ಮಾತಿನ ಬಗ್ಗೆ, ನನ್ನೊಳಗ ಏನೋ ನೀ ಅಪೇಕ್ಷಿಸಿದ್ದು, ಆದರಿಸಿದ್ದು ಒಂದೀಟು ಕಡಿಮಿ ಆಗೇತಿ ಅನ್ನುವ ಚಿಂತಿ ಮಾತ್ರ ನಿನ್ನ ಮಾತಿನೊಳಗ ಹಣಿಕಿ ಹಾಕತಿತ್ತು.

ಮನಿಗೆ ಬಂದ ಮ್ಯಾಲ ರಾತ್ರೆಲ್ಲ ವಿಚಾರ ಮಾಡಿದೆ. ಇವತ್ತು ಮುಂಜೇಲೆ ತಲ್ಯಾಗ ಮತ್ತ ಅದ್‌ಅ ತುಂಬಿತ್ತು. ಹೌದಲ್ಲ, ಒಬ್ಬರ ತಲಿ ಕೆಟ್ಟಯಿತ್ತ ಅನ್ನಬೇಕಾದರ, ಹಂಗಅಂತ ನಿರ್ಣಯಿಸ ಬೇಕಾದರ ಮೊದಲ ನನ್ನ ತಲಿಯೊಳಗ ಕೆಟ್ಟದ್ದನ್ನೂದು, ಹಂಗನಬೇಕು ಅನ್ನುವಂಥಾದ್ದು ಏನಾದರೂ ಕೆಟ್ಟದ್ದು ಆಗಿರಬೇಕಲ್ಲ. ವಯಸ್ಸು ಆದ್ಹಂಗ ಮನಸ್ಸು ಮಾಗಬೇಕು; ವಯಸ್ಸು+ಮನಸ್ಸು ತಮಗ ತಿಳಿತಿಳಿದ್ಹಂಗ ಇರತಾವು, ನಾವು ಬರೇ ಅವುಗಳಿಗೆ ಅಧೀನ ಆಗಿರತೇವು ಅಂತಲ್ಲಾ ಅಂತೆಲ್ಲಾ ಹೇಳುವ ನಾನ್‌ಅ ನನ್ನ ಸ್ತಿಮಿತ ಕಳಕೊಂಡು ಹೆಂಗ ಮಾತಾಡಿಬಿಟ್ಟೆನಲ್ಲ ಅಂತ ಈಗ ಕೆಟ್ಟ ಅನಸಾಕ್ಹತ್ತೇತಿ. ನನ್ನ ಸಹಜ ಸಮಾಧಾನವನ್ನ, ನೆಮ್ಮದಿಯನ್ನ ನಾನ್‌ಅ ಕಲಕಿಕೊಂಡಿದ್ದೆ. 'ತಿನ್ನೂ' ವಿಷಯಕ್ಕ ನಾಲಿಗೀ ಮ್ಯಾಲ ಸಾಕಷ್ಟು ಸಂಯಮ, ಹತೋಟಿ ಇಟಗೊಂಡಿದ್ದ ನಾನು 'ಅನ್ನೂ' ವಿಷಯಕ್ಕ ಅದನ್ನ ಸಾಧಿಸಲಿಲ್ಲವಲ್ಲ ಅಂತ ಬ್ಯಾಸರಾತು. ಕೆಲವು ಅಗ್ಗದ ಮಂದಿ ಸಿಕ್ಕಸಿಕ್ಹಂಗ ಅನ್ಯರಿಗೆ ಅಂದು, ಉಪದೇಶ ಹೇಳೂದುನ್ನ ಕೇಳಿದ್ದ ನಾನೂ ಈಗ ಅಂಥಾದ್ದ್‌ಅ ತಪ್ಪ ಮಾಡಿದ್ಹಂಗಾತಲ್ಲ ಅಂತ ಬ್ಯಾಸರಾತು. ಉಪದೇಶ ಹೇಳೂದು ಬಲು ಹಗುರ ಕೆಲಸ. ಹಂಗ ನೋಡಿದರ ಉಪದೇಶ ಕೊಡೂದು, ಪಡೆಯೂದು, ಆ ಥಾಟಿನೊಳಗ ನಡೆಯೂದು ಅನಗತ್ಯ. ಮನಶ್ಯಾ ತನ್ನ ಮನಸ್ಸನ್ನ ಸ್ವಚ್ಛ ಇಟಗೊಂಡರ, ಪ್ರಾಮಾಣಿಕವಾಗಿ ತನ್ನ ಕರ್ತವ್ಯ ನೆರವೇರಿಸಿದರ ಉಪದೇಶದ ಸಂಕ ಬೇಕಾಗೂದ್‌ಅ ಇಲ್ಲ. ಇದನ್ನ ತಿಳಿದೂತಿಳಿದು ನಿನ್ನೆ ತಪ್ಪ ಮಾಡಿದೆನಲ್ಲ...

ಉಪದೇಶ ಅನ್ನೂದು ಅವರವರ ಅನುಭವದ ಒಟ್ಟು ಮೊತ್ತ. ಅದನ್ನ ಎಷ್ಟು ಅನುಭೋಗಿಸಿದರೂ, ಭುಂಜಿಸಿದರೂ ಅದು ಬೀರುವ ಪರಿಣಾಮ ಒಂದು ರೀತೀಲೆ ಶೂನ್ಯ, ಖಾಲಿ. ಅದು ಇನ್ನೊಬ್ಬರಿಗೆ ಹೇಳಬಹುದಾದ ಉಪದೇಶ ಆಗೂದಕಿಂತ, ತನ್ನ ದಾರಿಯನ್ನ ತಾನ್‌ಅ ಇನ್ನಷ್ಟು ಹೆಚ್ಚು ಪ್ರಶಸ್ತಗೊಳಿಸಿಕೊಳ್ಳಬೇಕಾದ ಆತ್ಮಚಿಂತನೆ ಆಕೃತಿ, ಆಗಬೇಕು; ಉಪದೇಶ ಆತ್ಮಚಿಂತನೆ ಆಗಿ ಅರ್ಥ ಮೂಡಿಸದಿದ್ದರ ಮಾತ್ರ ಆತ್ಮವಂಚನೆಯಾಗಿ ಅನರ್ಥಗಳನ್ನ ಖಂಡಿತ ಕೂಡಿಸತಯಿತ್ತ ಅಂತ ಈಗ ಅರ್ಥ ಆಗಾಕ್ಹತ್ತೇತಿ. ಖರೆ ಅಯಿತ್ತ, ನಿನ್ನೆ ನಿನ್ನ ತಲಿ ಬರೊಬ್ಬರ ಇತ್ತು. ಆದರ ನಂದು ಯಾಕ ಹಂಗ ಆಗಿತ್ತು? ಏನಂದಿ? ಈಗ ಅದೂ ಬರೊಬ್ಬರ...

SANKALANA: RNI No. KARKAN 14160/10/1/2002-TC

ಸಂಕಲನ : ನವಂಬರ್ + ಡಿಸೆಂಬರ್ ೨೦೦೬

ಸಂಪುಟ ೫, ಸಂಚಿಕೆ ೬

ಸಂಪಾದಕರು : **ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ**

•

ವಸಂತ ಕವಲಿ

ವಿಭಾ

ಹರಿಕೃಷ್ಣ ಭರಣ್ಯ

ಅನಂತ ಹುದೆಂಗಜೆ

ಸಿ. ಸೋಮಶೇಖರಯ್ಯ

ಎಸ್. ಸೀತಾರಾಮು

ಪ್ರಹ್ಲಾದ ಅಗಸನಕಟ್ಟೆ

ಆರ್. ತಾರಿಣಿ ಶುಭದಾಯಿನಿ

ಕೆ. ಉಷಾ ಪಿ. ರೈ

•

ಶ್ಯಾಮಸುಂದರ ಬಿದರಕುಂದಿ

ಹೆಚ್. ಎ. ಪಾರ್ಶ್ವನಾಥ್

ಈಶ್ವರಚಂದ್ರ ಚಿಂತಾಮಣಿ

ಬಿ. ಜಿ. ಚನ್ನೇಶ್ ಹೊನ್ನಾಳಿ

ಸುಮಿತ್ರಾ ಹಲವಾಯಿ

•

ಪರಾಜಿತ	ಪ್ರಸನ್ನ
ವಿದ್ಯಾಧರ ಮುತಾಲಿಕ ದೇಸಾಯಿ	ಅಶೋಕ ನರೋಡೆ
ಜಂಬಣ್ಣ ಅಮರಚಿಂತ	ಶ್ರೀನಿವಾಸ ಹಾವನೂರ
ರಾಜೇಶ್ವರಿ ಪ್ರವೀಣ ಶಿಂಧೆ	ಗುರುಲಿಂಗ ಕಾಪಸೆ
ಹಾಲಾಡಿ ಮಾರುತಿರಾವ್	ಶರಣಗೌಡ ಇರಡೆತ್ತಿನ
ಎಂ. ಡಿ. ಗೋಗೇರಿ	ಕೃಷ್ಣಮೂರ್ತಿ ಕಲುಮುಂಗಿ
ಎಚ್. ಎಸ್. ಪಾಟೀಲ	ಸಿ. ಸೋಮಶೇಖರಯ್ಯ

•

ಸಿದ್ಧಲಿಂಗ ಪಟ್ಟಣಶೆಟ್ಟಿ

•

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪